Visit Dwarkadheeshvastu.com For

FREE Vastu Consultancy, Music, Epics, Devotional Videos
Educational Books, Educational Videos, Wallpapers

****

All Music is also available in CD format. CD Cover can also be print with your Firm Name

****

We also provide this whole Music and Data in PENDRIVE and EXTERNAL HARD DISK.

Contact : Ankit Mishra (+91-8010381364, dwarkadheeshvastu@gmail.com)

Shiv-Puran-Kannad

॥ ಶ್ರೀಹರಿ॥

ವಿಷಯ ಸೂಚಿ

	ವಿಷಯ	ಪುಟ ಸಂಖ್ಯೆ
	ಶ್ರೀಶಿವಪುರಾಣ ಮಾಹಾತ್ಮ್ಯ	
1.	ಶೌನಕರು ಪ್ರಶ್ನಿಸಿದಾಗ ಸೂತಪುರಾಣಿಕರು ಶಿವಪುರಾಣದ ಅತ್ಯುತ್ತಮ ಮಹಿಮೆಯನ್ನು ಹೇಳಿದುದು	1
2.	ಶಿವಪುರಾಣದ ಶ್ರವಣದಿಂದ ದೇವರಾಜನಿಗೆ ಶಿವಲೋಕ ಪ್ರಾಪ್ತಿ ಹಾಗೂ ಚಂಚುಲೆಗೆ ಪಾಪದಿಂದ ಭಯ ಹಾಗೂ ಸಂಸಾರದಿಂದ ವೈರಾಗ್ಯ	2
3.	ಬ್ರಾಹ್ಮಣನು ಚಂಚುಲೆಗೆ ಆದ್ಯಂತವಾಗಿ ಶಿವಪುರಾಣವನ್ನು ಹೇಳುವುದು ಹಾಗೂ ಕಾಲಾಂತರದಲ್ಲಿ ಶರೀರವನ್ನು ತ್ಯಜಿಸಿ ಶಿವಲೋಕಕ್ಕೆ ಹೋಗಿ ಚಂಚುಲೆಯು ಪಾರ್ವತಿ ದೇವಿಯ ಸಖಿಯಾಗುವುದು.	5
4.	ಪಾರ್ವತಿದೇವಿಯ ಆಜ್ಞೆಯಂತೆ ತುಂಬುರು ವಿಂಧ್ಯಪರ್ವತದಲ್ಲಿ ಶಿವಪುರಾಣದ ಕಥೆಯನ್ನು ಬಿಂದುಗನಿಗೆ ಹೇಳಿ ಪಿಶಾಚ ಯೋನಿಯಿಂದ ಉದ್ಧಾರಮಾಡಿದುದು	7
5.	ಶಿವಪುರಾಣದ ಶ್ರವಣದ ವಿಧಿ ಹಾಗೂ ಶ್ರೋತೃಗಳು ಪಾಲಿಸುವ ಯೋಗ್ಯ ನಿಯಮಗಳ ವರ್ಣನೆ	9
	ಶ್ರೀಶಿವಪುರಾಣ (ವಿದ್ಯೇಶ್ವರ ಸಂಹಿತೆ)	
6	ಪ್ರಯಾಗದಲ್ಲಿ ಸೂತರಬಳಿ ತತ್‌ಕ್ಷಣ ಪಾಪನಾಶಮಾಡುವ ಸಾಧನೆಯ ವಿಷಯದಲ್ಲಿ ಮುನಿಗಳ ಪ್ರಶ್ನೆ	13
7	ಶಿವಪುರಾಣದ ಪರಿಚಯ	14
8	ಸಾಧ್ಯ-ಸಾಧನಾದಿಗಳ ವಿಚಾರ ಹಾಗೂ ಶ್ರವಣ - ಕೀರ್ತನ - ಮನನ ಈ ಸಾಧನೆಗಳ ಶ್ರೇಷ್ಠತೆಯ ಪ್ರತಿಪಾದನೆ	16
9	ಭಗವಾನ್ ಶಂಕರನ ಲಿಂಗ ಹಾಗೂ ಸಾಕಾರ ವಿಗ್ರಹದ ಪೂಜೆಯ ರಹಸ್ಯ ಮತ್ತು ಮಹತ್ತ್ವದ ವರ್ಣನೆ	18
10	ಮಹೇಶ್ವರನು ಬ್ರಹ್ಮಾ ಮತ್ತು ವಿಷ್ಣು ಇವರಿಗೆ ತನ್ನ ನಿಷ್ಕಲ ಹಾಗೂ ಸಕಲ ಸ್ವರೂಪದ ಪರಿಚಯ ಮಾಡಿಸಿ ಲಿಂಗಪೂಜೆಯ ಮಹತ್ತ್ವವನ್ನು ಹೇಳುವುದು	19
11	ಪಂಚಕಾರ್ಯಗಳ ಪ್ರತಿಪಾದನೆ, ಪ್ರಣವ ಹಾಗೂ ಪಂಚಾಕ್ಷರ ಮಂತ್ರದ ಮಹತ್ತ್ವ, ಬ್ರಹ್ಮಾ-ವಿಷ್ಣು ಇವರಿಂದ ಭಗವಾನ್ ಶಿವನ ಸ್ತುತಿ ಹಾಗೂ ಶಿವನ ಅಂತರ್ಧಾನ	21
12	ಶಿವಲಿಂಗದ ಸ್ಥಾಪನೆ, ಅದರ ಲಕ್ಷಣಗಳು, ಪೂಜೆಯ ವಿಧಿಯ ವರ್ಣನೆ ಹಾಗೂ ಶಿವಪದದ ಪ್ರಾಪ್ತಿಯಾಗಿಸುವ ಸತ್ಕರ್ಮಗಳ ವಿವೇಚನೆ	23
13	ಮೋಕ್ಷದಾಯಕ ಪುಣ್ಯಕ್ಷೇತ್ರಗಳ ವರ್ಣನೆ, ತೀರ್ಥಸ್ನಾನದ ಉತ್ತಮ ಫಲದ ನಿರ್ದೇಶ ಹಾಗೂ ತೀರ್ಥಗಳಲ್ಲಿ ಪಾಪಗಳಿಂದ ದೂರವುಳಿಯಲು ಎಚ್ಚರಿಕೆ	27
14	ಸದಾಚಾರ, ಶೌಚಾಚಾರ, ಸ್ನಾನ, ಭಸ್ಮಧಾರಣೆ, ಸಂಧ್ಯಾವಂದನೆ, ಪ್ರಣವಜಪ, ಗಾಯತ್ರೀಜಪ, ದಾನ, ನ್ಯಾಯವಾದ ಧನೋಪಾರ್ಜನೆ, ಅಗ್ನಿಹೋತ್ರ ಮುಂತಾದವುಗಳ ವಿಧಿ ಹಾಗೂ ಮಹಿಮೆಯ ವರ್ಣನೆ	29
15	ಅಗ್ನಿಯಜ್ಞ, ದೇವಯಜ್ಞ, ಬ್ರಹ್ಮಯಜ್ಞ ಇವುಗಳ ವರ್ಣನೆ, ಭಗವಾನ್ ಶಿವನಿಂದ ಏಳುವಾರಗಳ ನಿರ್ಮಾಣ,	34
16	ದೇಶ, ಕಾಲ, ಪಾತ್ರ ಮತ್ತು ದಾನ ಮುಂತಾದವುಗಳ ವಿಚಾರ	36
17	ಪೃಥಿವೀ ಇತ್ಯಾದಿಗಳಿಂದ ನಿರ್ಮಿತ ದೇವಪ್ರತಿಮೆಗಳ ಪೂಜೆಯ ವಿಧಿ ಹಾಗೂ ಲಿಂಗದ ವೈಜ್ಞಾನಿಕ ಸ್ವರೂಪದ ವಿವೇಚನೆ	39
18	ಷಡ್‌ಲಿಂಗ ಸ್ವರೂಪೀ ಪ್ರಣವದ ಮಾಹಾತ್ಮ್ಯ, ಅದರ ಸೂಕ್ಷ್ಮ-ಸ್ಥೂಲ ರೂಪಗಳ ವಿವೇಚನೆ, ಕಾರ್ಯಬ್ರಹ್ಮನಿಂದ ಹಿಡಿದು ಕಾರಣರುದ್ರನ ಲೋಕಗಳವರೆಗಿನ ವಿವೇಚನೆ ಮಾಡಿ ಕಾಲಾತೀತ, ಪಂಚಾವರಣವಿಶಿಷ್ಟ ಶಿವಲೋಕದ ನಿರೂಪಣೆ ಹಾಗೂ ಶಿವಭಕ್ತರ ಸತ್ಕಾರದ ಮಹಿಮೆ	44
19	ಬಂಧನ ಮತ್ತು ಮೋಕ್ಷದ ವಿವೇಚನೆ, ಶಿವಪೂಜೆಯ ಉಪದೇಶ, ಲಿಂಗರೂಪೀ ಶಿವಪೂಜೆಯ ವಿಧಾನ, ಭಸ್ಮದ ಸ್ವರೂಪ ಮತ್ತು ಮಹತ್ತ್ವ, ಶಿವ ಹಾಗೂ ಗುರು ಶಬ್ದದ ವ್ಯುತ್ಪತ್ತಿ, ಶಿವನ ಭಸ್ಮಧಾರಣೆಯ ರಹಸ್ಯ	51
20	ಪಾರ್ಥಿವಲಿಂಗದ ನಿರ್ಮಾಣದ ರೀತಿ ಹಾಗೂ ವೇದ-ಮಂತ್ರಗಳ ಮೂಲಕ ಅದರ ಪೂಜೆಯ ವಿಸ್ತೃತ ಮತ್ತು ಸಂಕ್ಷಿಪ್ತ ವಿಧಿಯ ವರ್ಣನೆ	55
21	ಪಾರ್ಥಿವಪೂಜೆಯ ಮಹಿಮೆ, ಶಿವನೈವೇದ್ಯಭಕ್ಷಣದ ವಿಷಯದಲ್ಲಿ ನಿರ್ಣಯ ಹಾಗೂ ಬಿಲ್ವಪತ್ರೆಯ ಮಾಹಾತ್ಮ್ಯ	59
22	ಶಿವನಾಮ-ಜಪ ಹಾಗೂ ಭಸ್ಮಧಾರಣೆಯ ಮಹಿಮೆ, ತ್ರಿಪುಂಡ್ರದ ದೇವತೆಗಳು ಮತ್ತು ಸ್ಥಾನಗಳ ಪ್ರತಿಪಾದನೆ	63
23	ರುದ್ರಾಕ್ಷ ಧಾರಣದ ಮಹಿಮೆ ಹಾಗೂ ಅದರ ವಿವಿಧ ಭೇದಗಳ ವರ್ಣನೆ	66
	ರುದ್ರಸಂಹಿತೆ, ಪ್ರಥಮ (ಸೃಷ್ಟಿ) ಖಂಡ	
24	ನಾರದ-ಬ್ರಹ್ಮಸಂವಾದವನ್ನು ಉದಾಹರಿಸಿ ಸೂತಪುರಾಣಿಕರು ಋಷಿಗಳಿಗೆ ನಾರದರ ಮೋಹ ಪ್ರಸಂಗವನ್ನು ಹೇಳುವುದು, ಕಾಮವಿಜಯದ ಗರ್ವದಿಂದ ಕೂಡಿದ ನಾರದರು ಶಿವ, ಬ್ರಹ್ಮಾ, ವಿಷ್ಣು ಇವರ ಬಳಿಗೆ ಹೋಗಿ ತಮ್ಮ ತಪಸ್ಸಿನ ಪ್ರಭಾವವನ್ನು ತಿಳಿಸುವುದು	70
25	ಶೀಲನಿಧಿಯ ಕನ್ಯೆಯಲ್ಲಿ ಮೋಹಿತರಾದ ನಾರದರು ಭಗವಾನ್ ವಿಷ್ಣುವಿನಲ್ಲಿ ಅವನ ರೂಪವನ್ನು ಬೇಡುವುದು, ಭಗವಂತನು ಅವರಿಗೆ ಕೋತಿಯ ಮುಖವನ್ನು ಕೊಡುವುದು, ವಂಚಿತರಾದ ನಾರದರು ಶಿವಗಣಗಳಿಗೆ ಶಾಪವನ್ನು ಕೊಡುವುದು	74

	ವಿಷಯ	ಪುಟ ಸಂಖ್ಯೆ
26	ನಾರದರು ಸಿಟ್ಟಿನಿಂದ ವಿಷ್ಣುವಿಗೆ ಶಾಪವನ್ನು ಕೊಡುವುದು ಮತ್ತೆ ಪಶ್ಚಾತ್ತಾಪದಿಂದ ಭಗವಂತನಲ್ಲಿ ಶುದ್ಧಿಯ ಉಪಾಯವನ್ನು ಕೇಳುವುದು. ಭಗವಾನ್ ವಿಷ್ಣು ಶಿವನ ಮಾಹಾತ್ಮ್ಯವನ್ನು ತಿಳಿಯಲಿಕ್ಕಾಗಿ ಬ್ರಹ್ಮದೇವರ ಬಳಿಗೆ ಹೋಗಲು ಆದೇಶಿಸಿ, ಶಿವನ ಭಜನೆಯನ್ನು ಉಪದೇಶಿಸುವುದು	77
27	ನಾರದರು ಶಿವನ ತೀರ್ಥಕ್ಷೇತ್ರಗಳಲ್ಲಿ ಸಂಚರಿಸಿದುದು, ಶಿವಗಣಗಳಿಗೆ ಶಾಪೋದ್ಧಾರದ ಮಾತು ತಿಳಿಸುವುದು ಹಾಗೂ ಬ್ರಹ್ಮಲೋಕಕ್ಕೆ ಹೋಗಿ ಬ್ರಹ್ಮದೇವರಲ್ಲಿ ಶಿವ ತತ್ತ್ವದ ಕುರಿತು ಪ್ರಶ್ನಿಸುವುದು	79
28	ಆ ನಿರ್ಗುಣ ನಿರಾಕಾರ ಬ್ರಹ್ಮನಿಂದ ಈಶ್ವರ ಮೂರ್ತಿಯ ಪ್ರಾಕಟ್ಯ, ಸದಾಶಿವನಿಂದ ಅಂಬಿಕೆಯ ಪ್ರಕಟೀಕರಣ, ಉತ್ತಮ ಕಾಶೀ ಕ್ಷೇತ್ರದ ಪ್ರಾದುರ್ಭಾವ, ಶಿವನ ವಾಮಾಂಗದಿಂದ ಪರಮ ಪುರುಷ ವಿಷ್ಣುವಿನ ಆವಿರ್ಭಾವ	81
29	ಭಗವಾನ್ ವಿಷ್ಣುವಿನ ನಾಭಿ ಕಮಲದಿಂದ ಬ್ರಹ್ಮದೇವರ ಪ್ರಾಕಟ್ಯ, ಬ್ರಹ್ಮನು ತಪಸ್ಸು ಮಾಡುವುದು, ಶ್ರೀಹರಿಯು ಅವನಿಗೆ ದರ್ಶನವೀಯುವುದು, ಬ್ರಹ್ಮಾ ವಿಷ್ಣುವಿನ ನಡುವೆ ಅಗ್ನಿ-ಸ್ತಂಭವು ಪ್ರಕಟವಾಗುವುದು ಹಾಗೂ ಅದರ ಶುದಿ ಬುಡಗಳನ್ನು ತಿಳಿಯದೆ ಅವರಿಬ್ಬರು ಅದನ್ನು ವಂದಿಸುವುದು	84
30	ಬ್ರಹ್ಮಾ ಮತ್ತು ವಿಷ್ಣುವಿಗೆ ಭಗವಾನ್ ಶಿವನ ಶಬ್ದಮಯ ಶರೀರದ ದರ್ಶನ	84
31	ಉಮೆಯಸಹಿತ ಭಗವಾನ್ ಶಿವನ ಪ್ರಾಕಟ್ಯ, ಅವನಿಂದ ತನ್ನ ಸ್ವರೂಪದ ವಿವೇಚನೆ ಹಾಗೂ ಬ್ರಹ್ಮಾದಿ ಮೂರು ದೇವತೆಗಳ ಏಕತೆಯ ಪ್ರತಿಪಾದನೆ	88
32	ಶ್ರೀಹರಿಗೆ ಸೃಷ್ಟಿಯ ರಕ್ಷಣೆಯ ಭಾರವನ್ನು ಹಾಗೂ ಭೋಗ-ಮೋಕ್ಷ ದಾನದ ಅಧಿಕಾರವನ್ನು ಕೊಟ್ಟು ಭಗವಾನ್ ಶಿವನು ಅಂತರ್ಧಾನನಾಗುವುದು	90
33	ಶಿವಪೂಜೆಯ ವಿಧಿ ಹಾಗೂ ಅದರ ಫಲ	92
34	ಭಗವಾನ್ ಶಿವನ ಶ್ರೇಷ್ಠತೆ ಹಾಗೂ ಅವನ ಪೂಜೆಯ ಅನಿವಾರ್ಯ ಆವಶ್ಯಕತೆಯ ಪ್ರತಿಪಾದನೆ	96
35	ಶಿವನ ಪೂಜೆಯ ಸರ್ವೋತ್ತಮ ವಿಧಿಯ ವರ್ಣನೆ	98
36	ಬೇರೆ-ಬೇರೆ ಪುಷ್ಪಗಳಿಂದ, ಅನ್ನದಿಂದ ಹಾಗೂ ಜಲ ಧಾರೆಯಿಂದ ಶಿವನ ಪೂಜೆಯ ಮಾಹಾತ್ಮ್ಯ	102
37	ಸೃಷ್ಟಿಯ ವರ್ಣನೆ	104
38	ಸ್ವಾಯಂಭುವ ಮನು ಮತ್ತು ಶತರೂಪೆಯ, ಋಷಿಗಳ ಹಾಗೂ ದಕ್ಷಕನ್ಯೆಯರ ಸಂತಾನಗಳ ವರ್ಣನೆ ಹಾಗೂ ಸತೀ ಮತ್ತು ಶಿವನ ಮಹಿಮೆಯ ಪ್ರತಿಪಾದನೆ	106
39	ಯಜ್ಞದತ್ತ-ಕುಮಾರನಿಗೆ ಭಗವಾನ್ ಶಿವನ ಕೃಪೆಯಿಂದ ಕುಬೇರಪದದ ಪ್ರಾಪ್ತಿ ಹಾಗೂ ಅವನಿಗೆ ಭಗವಾನ್ ಶಿವನೊಂದಿಗೆ ಮಿತ್ರತೆ	108
40	ಭಗವಾನ್ ಶಿವನು ಕೈಲಾಸ ಪರ್ವತಕ್ಕೆ ಹೋದುದು ಹಾಗೂ ಸೃಷ್ಟಿಖಂಡದ ಉಪಸಂಹಾರ	111
	ರುದ್ರಸಂಹಿತಾ, ದ್ವಿತೀಯ (ಸತೀ)ಖಂಡ	
41	ಸದಾಶಿವನಿಂದ ಮೂರು ದೇವತೆಗಳ ಉತ್ಪತ್ತಿ ಹಾಗೂ ಬ್ರಹ್ಮದೇವರಿಂದ ದೇವತಾದಿಗಳ ಸೃಷ್ಟಿಯ ಬಳಿಕ ಒಂದು ನಾರಿ ಮತ್ತು ಒಂದು ಪುರುಷನ ಪ್ರಾಕಟ್ಯ	113
42	ಕಾಮದೇವನ ರತಿಯ ಜೊತೆಗೆ ವಿವಾಹ, ಕುಮಾರಿ ಸಂಧ್ಯೆಯ ಚರಿತ್ರೆ, ಮೇಧ್ಯ ಮುನಿಗಳು ಚಂದ್ರಭಾಗ ಪರ್ವತದಲ್ಲಿ ಸಂಧ್ಯೆಗೆ ತಪಸ್ಸಿನ ವಿಧಿಯನ್ನು ಹೇಳುವುದು	114
43	ಸಂಧ್ಯೆಯ ತಪಸ್ಸು, ಸ್ತುತಿಯಿಂದ ಸಂತುಷ್ಟನಾದ ಶಿವನು ಆಕೆಗೆ ಅಭೀಷ್ಟ ವರವನ್ನು ಕೊಟ್ಟು, ಮೇಧಾತಿಥಿಯ ಯಜ್ಞಕ್ಕಾಗಿ ಕಳಿಸುವುದು	117
44	ಸಂಧ್ಯೆಯು ಅರುಂಧತಿಯಾಗಿ ಅವತರಿಸಿ ಮುನಿವರ ಮೇಧ್ಯರೊಂದಿಗೆ ವಿವಾಹವಾಗುವುದು, ಬ್ರಹ್ಮದೇವರು ರುದ್ರನ ವಿವಾಹಕ್ಕಾಗಿ ಪ್ರಯತ್ನಿಸುವುದು, ಭಗವಾನ್ ವಿಷ್ಣು ಅವರಿಗೆ ಶಿವೆಯ ಆರಾಧನೆಗಾಗಿ ಉಪದೇಶಿಸುವುದು	121
45	ದಕ್ಷನ ತಪಸ್ಸು ಮತ್ತು ದೇವೀ ಶಿವೆಯು ಅವನಿಗೆ ವರದಾನ ಕೊಡುವುದು	124
46	ಬ್ರಹ್ಮದೇವರ ಆಜ್ಞೆಯಿಂದ ದಕ್ಷನ ಮೂಲಕ ಮೈಥುನ ಸೃಷ್ಟಿಯ ಪ್ರಾರಂಭ, ತನ್ನ ಪುತ್ರರಾದ ಹರ್ಯಶ್ವರನ್ನು ಮತ್ತು ಶಬಲಾಶ್ವರನ್ನು ನಿವೃತ್ತಿಮಾರ್ಗಕ್ಕೆ ಹಚ್ಚಿದ ಕಾರಣ ದಕ್ಷನು ನಾರದರನ್ನು ಶಪಿಸಿದುದು	126
47	ದಕ್ಷನ ಅರವತ್ತು ಕನ್ಯೆಯರ ವಿವಾಹ, ದಕ್ಷ ಮತ್ತು ವೀರಣಿಯಲ್ಲಿ ದೇವೀ ಶಿವೆಯ ಅವತಾರ, ದಕ್ಷನ ಮೂಲಕ ಆಕೆಯ ಸ್ತುತಿ ಹಾಗೂ ಸತಿಯ ಸದ್ಗುಣಗಳಿಂದ ತಂದೆ-ತಾಯಿಯರ ಪ್ರಸನ್ನತೆ	128
48	ಸತೀಯ ತಪಸ್ಸಿನಿಂದ ಸಂತುಷ್ಟರಾದ ದೇವತೆಗಳು ಕೈಲಾಸಕ್ಕೆ ಹೋಗಿ ಭಗವಾನ್ ಶಿವನನ್ನು ಸ್ತುತಿಸುವುದು	130
49	ರುದ್ರನಲ್ಲಿ ಸತಿಯೊಂದಿಗೆ ವಿವಾಹವಾಗಲು ಬ್ರಹ್ಮದೇವರ ಒತ್ತಾಯ, ಶ್ರೀವಿಷ್ಣುವಿನ ಮೂಲಕ ಅನುಮೋದನೆ ಮತ್ತು ಇದಕ್ಕಾಗಿ ಶ್ರೀರುದ್ರನ ಸ್ವೀಕೃತಿ	132
50	ಸತಿಗೆ ಶಿವನಿಂದ ವರಪ್ರಾಪ್ತಿ, ಭಗವಾನ್ ಶಿವನು ಬ್ರಹ್ಮನನ್ನು ದಕ್ಷನ ಬಳಿಗೆ ಕಳಿಸಿ, ಸತಿಯನ್ನು ವರಣಮಾಡುವುದು	135
51	ಬ್ರಹ್ಮನಿಂದ ದಕ್ಷನ ಅನುಮತಿಯನ್ನು ಪಡೆದು ದೇವತೆಗಳು ಮತ್ತು ಮುನಿಗಳೊಂದಿಗೆ ಭಗವಾನ್ ಶಿವನು ದಕ್ಷನ ಮನೆಗೆ ಹೋಗುವುದು, ದಕ್ಷನಿಂದ ಎಲ್ಲರ ಸತ್ಕಾರ ಹಾಗೂ ಸತೀ ಮತ್ತು ಶಿವನ ವಿವಾಹ	138

	ವಿಷಯ	ಪುಟ ಸಂಖ್ಯೆ
52	ಸತಿ ಮತ್ತು ಶಿವನ ಮೂಲಕ ಅಗ್ನಿಯ ಪ್ರದಕ್ಷಿಣೆ, ಶ್ರೀಹರಿಯಿಂದ ಶಿವತತ್ತ್ವದ ವರ್ಣನೆ, ಬ್ರಹ್ಮದೇವರಿಗೆ ಕೊಟ್ಟ ವರಕ್ಕನುಸಾರ ವೇದಿಯ ಮೇಲೆ ಶಿವನು ಎಂದೆಂದಿಗೂ ವಾಸಿಸುವುದು, ಶಿವ ಮತ್ತು ಸತಿಯು ಬೀಳ್ಕೊಂಡು ಕೈಲಾಸಕ್ಕೆ ಹೋಗುವುದು	139
53	ಸತಿಯ ಪ್ರಶ್ನೆಯ ಉತ್ತರವಾಗಿ ಭಗವಾನ್ ಶಿವನಿಂದ ಜ್ಞಾನ ಹಾಗೂ ನವಧಾ ಭಕ್ತಿಯ ಸ್ವರೂಪದ ವಿವೇಚನೆ	141
54	ದಂಡಕಾರಣ್ಯದಲ್ಲಿ ಶಿವನು ಶ್ರೀರಾಮನಿಗೆ ತಲೆಬಾಗಿರುವುದನ್ನು ನೋಡಿ ಸತಿಯ ಮೋಹ ಹಾಗೂ ಶಿವನ ಆಜ್ಞೆಯಿಂದ ಆಕೆಯು ಶ್ರೀರಾಮನನ್ನು ಪರೀಕ್ಷಿಸಿದುದು	144
55	ಶ್ರೀಶಿವನ ಮೂಲಕ ಗೋಲೋಕಧಾಮದಲ್ಲಿ ಶ್ರೀವಿಷ್ಣುವಿನ ಗೋಪೇಶ ಪದವಿಯಲ್ಲಿ ಪಟ್ಟಾಭಿಷೇಕ, ಅವನಿಗೆ ನಮಸ್ಕರಿಸಿದ ಪ್ರಸಂಗವನ್ನು ಹೇಳಿ ಶ್ರೀರಾಮನು ಸತಿಯ ಮನಸ್ಸಿನ ಸಂದೇಹವನ್ನು ದೂರಗೊಳಿಸಿದುದು, ಶಿವನು ಸತಿಯನ್ನು ಮಾನಸಿಕವಾಗಿ ತ್ಯಜಿಸಿದುದು	147
56	ಪ್ರಯಾಗದಲ್ಲಿ ಸಮಸ್ತ ಮಾಹಾತ್ಮಾ ಮುನಿಗಳು ಮಾಡಿದ ಯಜ್ಞದಲ್ಲಿ ದಕ್ಷನು ಭಗವಾನ್ ಶಿವನಿಗೆ ಶಾಪ ಕೊಡುವುದು ಹಾಗೂ ಬ್ರಾಹ್ಮಣ ಕುಲಕ್ಕೆ ನಂದಿಯ ಶಾಪ, ಭಗವಾನ್ ಶಿವನು ನಂದಿಯನ್ನು ಶಾಂತಗೊಳಿಸಿದುದು	150
57	ದಕ್ಷನ ಮಹಾಯಜ್ಞದಲ್ಲಿ ಬ್ರಹ್ಮಾ, ವಿಷ್ಣು ದೇವತೆಗಳು ಹಾಗೂ ಋಷಿಗಳ ಆಗಮನ, ದಕ್ಷನಿಂದ ಎಲ್ಲರ ಸತ್ಕಾರ, ಯಜ್ಞದಲ್ಲಿ ಭಗವಾನ್ ಶಿವನನ್ನು ಕರೆಯಲು ದಧೀಚಿಯ ಒತ್ತಾಯ, ದಕ್ಷನು ವಿರೋಧಿಸಿದಾಗ ಶಿವಭಕ್ತರು ಅಲ್ಲಿಂದ ಹೊರಟುಹೋಗುವುದು	153
58	ದಕ್ಷಯಜ್ಞದ ಸಮಾಚಾರ ತಿಳಿದು ಸತಿಯು ಅಲ್ಲಿಗೆ ಹೋಗಲು ಶಿವನಲ್ಲಿ ಒತ್ತಾಯಿಸುವುದು, ಸತೀದೇವಿಯು ತಂದೆಯ ಯಜ್ಞಮಂಟಪಕ್ಕೆ ಶಿವಗಣಗಳೊಂದಿಗೆ ಪ್ರಸ್ಥಾನ	155
59	ಯಜ್ಞಶಾಲೆಯಲ್ಲಿ ಶಿವನ ಭಾಗವನ್ನು ಕಾಣದೆ ಸತಿಯ ರೋಷಪೂರ್ಣ ವಚನ, ದಕ್ಷನು ಮಾಡಿದ ಶಿವನ ನಿಂದೆಯನ್ನು ಕೇಳಿ, ದಕ್ಷನನ್ನು ಮತ್ತು ದೇವತೆಗಳನ್ನು ಧಿಕ್ಕರಿಸಿ, ಗದರಿಸುತ್ತಾ ಸತಿಯು ತನ್ನ ಪ್ರಾಣತ್ಯಾಗದ ನಿಶ್ಚಯ ಮಾಡಿದುದು	157
60	ಸತಿಯು ಯೋಗಾಗ್ನಿಯಿಂದ ತನ್ನ ಶರೀರವನ್ನು ಭಸ್ಮವಾಗಿಸಿಕೊಳ್ಳುವುದು, ದರ್ಶಕರ ಹಾಹಾಕಾರ, ಶಿವಪಾರ್ಷದರ ಪ್ರಾಣತ್ಯಾಗ ಹಾಗೂ ದಕ್ಷನ ಮೇಲೆ ಆಕ್ರಮಣ, ಋಭುಗಳಿಂದ ಅವರನ್ನು ಓಡಿಸುವುದು ಮತ್ತು ದೇವತೆಗಳ ದುಃಖ	160
61	ಅಶರೀರವಾಣಿಯ ಮೂಲಕ ದಕ್ಷನ ನಿಂದನೆ, ಅವನ ವಿನಾಶದ ಸೂಚನೆ ಹಾಗೂ ಸಮಸ್ತ ದೇವತೆಗಳಿಗೆ ಯಜ್ಞಮಂಟಪದಿಂದ ಹೊರಟುಹೋಗಲು ಪ್ರೇರಣೆ	161
62	ಗಣಗಳಿಂದ ಮತ್ತು ನಾರದರಿಂದಲೂ ಸತಿಯು ದಗ್ಧವಾದ ಮಾತನ್ನು ಕೇಳಿ ದಕ್ಷನ ಮೇಲೆ ಕುಪಿತನಾದ ಶಿವನು ತನ್ನ ಜಟೆಯಿಂದ ವೀರಭದ್ರ ಮತ್ತು ಮಹಾಕಾಲಿಯನ್ನು ಪ್ರಕಟಗೊಳಿಸಿ, ಅವರಿಗೆ ಯಜ್ಞ-ವಿಧ್ವಂಸ ಮಾಡಲು ಹಾಗೂ ವಿರೋಧಿಗಳನ್ನು ಸುಟ್ಟು ಹಾಕಲು ಆಜ್ಞಾಪಿಸಿದುದು	163
63	ಪ್ರಮಥಗಣಗಳೊಂದಿಗೆ ವೀರಭದ್ರನು ಮತ್ತು ಮಹಾಕಾಲಿಕೆಯು ದಕ್ಷಯಜ್ಞದ ವಿಧ್ವಂಸಕ್ಕಾಗಿ ಪ್ರಸ್ಥಾನ, ದಕ್ಷ ಹಾಗೂ ದೇವತೆಗಳಿಗೆ ಆದ ಅಪಶಕುನಗಳನ್ನು ಮತ್ತು ಉತ್ಪಾತಸೂಚಕ ಲಕ್ಷಣಗಳನ್ನು ನೋಡಿ ಭಯಪಡುವುದು	165
64	ದಕ್ಷನು ಯಜ್ಞದ ರಕ್ಷಣೆಗಾಗಿ ಭಗವಾನ್ ವಿಷ್ಣುವಿನಲ್ಲಿ ಪ್ರಾರ್ಥಿಸಿದುದು, ಭಗವಂತನು ದಕ್ಷನನ್ನು ಸಮಜಾಯಿಸುವುದು ಹಾಗೂ ಸೇನಾಸಹಿತ ವೀರಭದ್ರನ ಆಗಮನ	166
65	ಇಂದ್ರಾದಿಗಳಿಗೆ ಬೃಹಸ್ಪತಿಯು ರುದ್ರದೇವರ ಅಜೇಯತ್ವವನ್ನು ತಿಳಿಸುವುದು, ಶ್ರೀವಿಷ್ಣು ಮತ್ತು ವೀರಭದ್ರರ ಮಾತುಕತೆ, ದಕ್ಷ ಮತ್ತು ಯಜ್ಞದ ವಿನಾಶಮಾಡಿ ವೀರಭದ್ರನು ಕೈಲಾಸಕ್ಕೆ ಮರಳುವುದು	168
66	ಶ್ರೀವಿಷ್ಣುವಿನ ಪರಾಜಯದಲ್ಲಿ ದಧೀಚ ಮುನಿಯ ಶಾಪವೇ ಕಾರಣವೆಂದು ತಿಳಿಸುವುದು, ದಧೀಚ ಮತ್ತು ಕುಷವನ ವಿವಾದದ ಇತಿಹಾಸ	171
67	ಶ್ರೀವಿಷ್ಣು ಮತ್ತು ದೇವತೆಗಳಿಗೆ ಅಪರಾಜಿತ ದಧೀಚನ ಶಾಪ ಮತ್ತು ಕುಷವನ ಮೇಲೆ ಅನುಗ್ರಹ	174
68	ದೇವತೆಗಳಿಂದೊಡಗೂಡಿ ಬ್ರಹ್ಮನು ವಿಷ್ಣುಲೋಕಕ್ಕೆ ಹೋಗಿ ತನ್ನ ದುಃಖವನ್ನು ನಿವೇದಿಸಿಕೊಳ್ಳುವುದು. ಶ್ರೀವಿಷ್ಣುವು ಅವನಿಗೆ ಶಿವನಲ್ಲಿ ಕ್ಷಮೆಯನ್ನು ಬೇಡಲು ಅನುಮತಿ ಕೊಟ್ಟು, ಅವನನ್ನು ಕರೆದುಕೊಂಡು ಕೈಲಾಸಕ್ಕೆ ಹೋಗುವುದು ಹಾಗೂ ಭಗವಾನ್ ಶಿವನನ್ನು ದರ್ಶಿಸುವುದು	176
69	ದೇವತೆಗಳಿಂದ ಭಗವಾನ್ ಶಿವನ ಸ್ತುತಿ, ಭಗವಾನ್ ಶಿವನು ದೇವತೆಗಳ ಅಂಗಗಳನ್ನು ಸರಿಪಡಿಸಿದುದು, ದಕ್ಷನು ಜೀವಿತನಾಗಲೆಂಬ ವರದಾನ, ಶ್ರೀಹರಿಯೇ ಮುಂತಾದವರೊಂದಿಗೆ ಯಜ್ಞಮಂಟಪಕ್ಕೆ ಹೋಗಿ ಶಿವನು ದಕ್ಷನನ್ನು ಜೀವಿತಗೊಳಿಸುವುದು, ದಕ್ಷ ಮತ್ತು ವಿಷ್ಣುವೇ ಮುಂತಾದವರಿಂದ ಶಿವನ ಸ್ತುತಿ	178
70	ಭಗವಾನ್ ಶಿವನು ದಕ್ಷನಿಗೆ ತನ್ನ ಭಕ್ತವತ್ಸಲತೆಯನ್ನು, ಜ್ಞಾನೀ ಭಕ್ತನ ಶ್ರೇಷ್ಠತೆಯನ್ನು ಹಾಗೂ ಮೂರು ದೇವತೆಗಳ ಏಕತೆಯನ್ನು ತಿಳಿಸುವುದು, ದಕ್ಷನು ತನ್ನ ಯಜ್ಞವನ್ನು ಪೂರ್ಣಗೊಳಿಸುವುದು, ಸತೀ ಖಂಡದ ಉಪಸಂಹಾರ ಹಾಗೂ ಮಾಹಾತ್ಮ್ಯ	180

	ವಿಷಯ	ಪುಟ ಸಂಖ್ಯೆ
	ರುದ್ರಸಂಹಿತಾ ತೃತೀಯ (ಪಾರ್ವತಿ)ಖಂಡ	
71	ಮೇನೆಯ ಜೊತೆಗೆ ಹಿಮವಂತನ ವಿವಾಹ, ಪೂರ್ವಜನ್ಮ ವೃತ್ತಾಂತ	183
72	ದೇವತೆಗಳು ಹಿಮಾಲಯನ ಬಳಿಗೆ ಹೋಗುವುದು, ಉಮಾರಾಧನೆಯ ವಿಧಿಯನ್ನು ತಿಳಿಸುವುದು	185
73	ಉಮಾದೇವಿಯು ದಿವ್ಯರೂಪದಿಂದ ದೇವತೆಗಳಿಗೆ ದರ್ಶನ ಕೊಡುವುದು, ಮತ್ತು ದೇವಿಯು ಅವತರಿಸುವಂತೆ ದೇವತೆಗಳಿಗೆ ಆಶ್ವಾಸನೆ ಕೊಡುವುದು	186
74	ಮೇನೆಗೆ ಪ್ರತ್ಯಕ್ಷ ದರ್ಶನವಿತ್ತು ಶಿವಾದೇವಿಯು ಆಕೆಗೆ ಅಭೀಷ್ಟವರದಾನ ಕೊಡುವುದು ಹಾಗೂ ಮೇನೆಯಿಂದ ಮೈನಾಕನ ಜನ್ಮ	188
75	ಉಮಾದೇವಿಯು ಹಿಮವಂತನ ಹೃದಯದಲ್ಲಿ ಹಾಗೂ ಮೇನೆಯ ಗರ್ಭದಲ್ಲಿ ಪ್ರವೇಶ, ಗರ್ಭಸ್ಥಾ ದೇವಿಯನ್ನು ದೇವತೆಗಳು ಸ್ತುತಿಸುವುದು, ಆಕೆಯು ದಿವ್ಯರೂಪದಿಂದ ಪ್ರಾದುರ್ಭವಿಸುವುದು, ತಾಯಿ ಮೇನೆಯೊಡನೆ ಮಾತುಕತೆ ಹಾಗೂ ನವಜಾತ ಕನ್ಯೆಯ ರೂಪದಲ್ಲಿ ಪರಿವರ್ತಿತವಾಗುವುದು	190
76	ಪಾರ್ವತಿಯ ನಾಮಕರಣ, ವಿದ್ಯಾಧ್ಯಯನ, ನಾರದರು ಹಿಮವಂತನಲ್ಲಿಗೆ ಹೋಗಿ ಪಾರ್ವತಿಯ ಮುಂದಿನ ಭವಿಷ್ಯವನ್ನು ಹೇಳುವುದು, ಪಾರ್ವತಿಯ ವಿವಾಹವನ್ನು ಶಿವನೊಂದಿಗೆ ತಿಳಿಸುವುದು	191
77	ಮೇನಾ ಮತ್ತು ಹಿಮವಂತನ ಮಾತುಕತೆ, ಪಾರ್ವತಿ ಹಾಗೂ ಹಿಮವಂತನಿಗೆ ಸ್ವಪ್ನ, ಭಗವಾನ್ ಶಂಕರನಿಂದ 'ಮಂಗಳ' ಗ್ರಹದ ಉತ್ಪತ್ತಿಯ ಪ್ರಸಂಗ	194
78	ಭಗವಾನ್ ಶಿವನು ಗಂಗಾವತರಣ ತೀರ್ಥದಲ್ಲಿ ತಪಸ್ಸಿಗಾಗಿ ಬರುವುದು, ಹಿಮವಂತನು ಅವನನ್ನು ಸ್ವಾಗತಿಸಿ ಪೂಜಿಸಿ ಹಾಗೂ ಸ್ತುತಿಸಿದುದು	196
79	ಹಿಮವಂತನು ಪಾರ್ವತಿಯನ್ನು ಶಿವನ ಸೇವೆಯಲ್ಲಿ ನೇಮಿಸಲು ಅವನಲ್ಲಿ ಅಪ್ಪಣೆ ಕೇಳುವುದು, ಶಿವನು ಸಕಾರಣವಾಗಿ ಈ ಪ್ರಸ್ತಾಪವನ್ನು ಒಪ್ಪದಿರುವುದು	198
80	ಶಿವ, ಪಾರ್ವತಿಯರ ದಾರ್ಶನಿಕ ಸಂವಾದ, ಶಿವನು ಪಾರ್ವತಿಗೆ ತನ್ನ ಸೇವೆಗಾಗಿ ಅಪ್ಪಣೆ ಕೊಡುವುದು ಹಾಗೂ ಪಾರ್ವತಿಯಿಂದ ಪ್ರತಿದಿನ ಭಗವಂತನ ಸೇವೆ	199
81	ತಾರಕಾಸುರನಿಂದ ಕಷ್ಟಕ್ಕೊಳಗಾದ ದೇವತೆಗಳು ಬ್ರಹ್ಮದೇವರಲ್ಲಿ ಮೊರೆ ಹೋದುದು, ಬ್ರಹ್ಮದೇವರು ಅವರಿಗೆ ಪಾರ್ವತಿಯೊಂದಿಗೆ ಶಿವನ ವಿವಾಹಮಾಡಲು ಪ್ರಯತ್ನಿಸುವಂತೆ ಆದೇಶ ಕೊಡುವುದು	201
82	ಶಿವನನ್ನು ಮೋಹಗೊಳಿಸಲು ಇಂದ್ರನ ಅಪ್ಪಣೆಯಂತೆ ಮನ್ಮಥನು ಹೊರಡುವುದು	203
83	ರುದ್ರನ ನೇತ್ರಾಗ್ನಿಯಿಂದ ಕಾಮನು ಭಸ್ಮವಾಗುವುದು, ಶಿವನು ರತಿಗೆ ವರ ಕೊಡುವುದು	204
84	ಬ್ರಹ್ಮದೇವರು ಶಿವನ ಕ್ರೋಧಾಗ್ನಿಗೆ ವಡವಾನಲ ಎಂಬ ಸಂಜ್ಞೆಯನ್ನು ಕೊಟ್ಟು ಸಮುದ್ರದಲ್ಲಿ ಸ್ಥಾಪಿಸುವುದು ಶಿವನ ವಿರಹದಿಂದ ಶೋಕಿಸುತ್ತಿರುವ ಪಾರ್ವತಿಗೆ ನಾರದರಿಂದ ಪಂಚಾಕ್ಷರ ಮಂತ್ರದ ಉಪದೇಶ	206
85	ಶ್ರೀಶಿವನ ಆರಾಧನೆಗಾಗಿ ಪಾರ್ವತಿಯ ದುಷ್ಕರ ತಪಸ್ಸು	209
86	ಪಾರ್ವತಿಯ ತಪಸ್ಸಿನ ಕುರಿತು ದೃಢತೆ, ಮೊದಲಿಗಿಂತಲೂ ಆಕೆಯ ಉಗ್ರ ತಪಸ್ಸು, ಆದರಿಂದ ಮೂರು ಲೋಕಗಳು ಸಂತಪ್ತವಾಗುವುದು, ಸಮಸ್ತ ದೇವತೆಗಳೊಂದಿಗೆ ಬ್ರಹ್ಮಾ ಮತ್ತು ವಿಷ್ಣು ಭಗವಾನ್ ಶಿವನ ಬಳಿಗೆ ಹೋಗುವುದು	211
87	ದೇವತೆಗಳು ಭಗವಾನ್ ಶಿವನಲ್ಲಿ ಪಾರ್ವತಿಯೊಂದಿಗೆ ವಿವಾಹವಾಗಲು ಒತ್ತಾಯಿಸಿದುದು, ಭಗವಂತನು ವಿವಾಹದ ದೋಷಗಳನ್ನು ತಿಳಿಸಿ ಸ್ವೀಕರಿಸದಿರುವುದು ಹಾಗೂ ಅವರು ಪುನಃ ಪ್ರಾರ್ಥಿಸಿದಾಗ ಸ್ವೀಕರಿಸುವುದು	213
88	ಭಗವಾನ್ ಶಿವನ ಅಪ್ಪಣೆಯಂತೆ ಸಪ್ತರ್ಷಿಗಳು ಪಾರ್ವತಿಯ ಆಶ್ರಮಕ್ಕೆ ಹೋಗಿ ಅವಳಲ್ಲಿರುವ ಶಿವವಿಷಯಕವಾದ ಅನುರಾಗವನ್ನು ಪರೀಕ್ಷಿಸುವುದು	216
89	ಭಗವಾನ್ ಶಂಕರನು ಜಟಾಧಾರೀ ತಪಸ್ವೀ ಬ್ರಾಹ್ಮಣನ ರೂಪದಿಂದ ಪಾರ್ವತಿಯ ಆಶ್ರಮಕ್ಕೆ ಹೋಗುವುದು, ಅವಳಿಂದ ಸತ್ಕೃತನಾಗಿ ಆಕೆಯ ತಪಸ್ಸಿನ ಕಾರಣವನ್ನು ಕೇಳುವುದು ಹಾಗೂ ಪಾರ್ವತಿಯು ತನ್ನ ಸಖಿ ವಿಜಯಾಳಿಂದ ಎಲ್ಲವನ್ನು ಹೇಳಿಸುವುದು	219
90	ಪಾರ್ವತಿಯ ಮಾತನ್ನು ಕೇಳಿದ ಜಟಾಧಾರೀ ಬ್ರಾಹ್ಮಣನು ಶಿವನನ್ನು ನಿಂದಿಸುತ್ತಾ ಪಾರ್ವತಿಗೆ ಅವನಿಂದ ಮನಸ್ಸನ್ನು ತೊರೆಯಲು ಆದೇಶಿಸುವುದು	220
91	ಪಾರ್ವತಿಯು ಪರಮೇಶ್ವರ ಶಿವನ ಮಹಿಮೆಯನ್ನು ಪ್ರತಿಪಾದಿಸುವುದು, ಸಿಟ್ಟಿನಿಂದ ಜಟಿಲ ಬ್ರಾಹ್ಮಣನನ್ನು ಗದರಿಸುವುದು, ಸಖಿಯ ಮೂಲಕ ಪುನಃ ಮಾತನಾಡಲು ತಡೆಯುವುದು ಹಾಗೂ ಭಗವಾನ್ ಶಿವನು ಆಕೆಗೆ ಪ್ರತ್ಯಕ್ಷದರ್ಶನ ಕೊಟ್ಟು ತನ್ನೊಂದಿಗೆ ಹೊರಡಲು ಹೇಳುವುದು	222
92	ಶಿವ-ಪಾರ್ವತಿಯರ ಮಾತುಕತೆ, ಶಿವನ ಒತ್ತಾಯವನ್ನು ಪಾರ್ವತಿಯು ಸ್ವೀಕರಿಸುವುದು	225
93	ತಂದೆಯ ಮನೆಯಲ್ಲಿ ಪಾರ್ವತಿಯ ಸತ್ಕಾರ, ಮಹಾದೇವನ ಅದ್ಭುತ ನಟನ ಲೀಲೆ ಅವನು ಮೇನಾದೇವಿಯಲ್ಲಿ ಪಾರ್ವತಿಯನ್ನು ಯಾಚಿಸುವುದು, ತಂದೆ-ತಾಯಂದಿರು ತಿರಸ್ಕರಿಸಿದಾಗ ಅಂತರ್ಧಾನನಾಗುವುದು	226
94	ದೇವತೆಗಳ ಒತ್ತಾಯದಂತೆ ಶಿವನು ವೈಷ್ಣವ ಬ್ರಾಹ್ಮಣನ ವೇಷದಲ್ಲಿ ಹಿಮವಂತನ ಮನೆಗೆ ಹೋಗುವುದು, ಶಿವನನ್ನು ನಿಂದಿಸಿ ಪಾರ್ವತಿಯ ವಿವಾಹವನ್ನು ಅತನೊಂದಿಗೆ ಮಾಡದಿರುವಂತೆ ಹೇಳುವುದು	227

	ವಿಷಯ	ಪುಟ ಸಂಖ್ಯೆ
95	ಭಗವಾನ್ ಶಿವನು ಸಪ್ತರ್ಷಿಗಳನ್ನು ಹಿಮವಂತನ ಬಳಿಗೆ ಕಳಿಸುವುದು, ಅರುಂಧತಿ ಮತ್ತು ಮಹರ್ಷಿ ವಸಿಷ್ಠರು ಮೇನಾದೇವಿ ಮತ್ತು ಹಿಮವಂತನನ್ನು, ಸಮಜಾಯಿಸಿ ಪಾರ್ವತಿಯ ವಿವಾಹವನ್ನು ಶಿವನೊಂದಿಗೆ ಮಾಡಲು ಹೇಳುವುದು	230
96	ಸಪ್ತರ್ಷಿಗಳು ಸಮಜಾಯಿಸುವುದರಿಂದ, ಹಿಮವಂತನು ಶಿವನೊಂದಿಗೆ ತನ್ನ ಪುತ್ರಿಯ ವಿವಾಹವನ್ನು ನಿಶ್ಚಯಿಸುವುದು	234
97	ಹಿಮವಂತನು ಭಗವಾನ್ ಶಿವನ ಬಳಿಗೆ ಲಗ್ನಪತ್ರಿಕೆ ಕಳಿಸುವುದು, ಮಂಗಲಾಚಾರವನ್ನು ಪ್ರಾರಂಭಿಸಿ ವಿವಾಹದ ಸಿದ್ಧತೆ ಮಾಡುವುದು	236
98	ಭಗವಾನ್ ಶಿವನು ನಾರದನ ಮೂಲಕ ಎಲ್ಲ ದೇವತೆಗಳಿಗೆ ಆಮಂತ್ರಣ ಕಳಿಸುವುದು, ಶಿವನು ಕೈಲಾಸದಿಂದ ದಿಬ್ಬಣ ಸಹಿತ ಹೊರಡುವುದು	239
99	ಭಗವಾನ್ ಶಿವನು ದಿಬ್ಬಣದೊಂದಿಗೆ ಹಿಮಾಲಯ ಪುರಿಯ ಕಡೆಗೆ ಹೊರಟಿದ್ದು	241
100	ಹಿಮವಂತನಿಂದ ಶಿವನ ದಿಬ್ಬಣವನ್ನು ಇದಿರ್ಗೊಳ್ಳುವುದು, ಎಲ್ಲರನ್ನು ಅಭಿನಂದಿಸುತ್ತಾ, ವಂದಿಸುವುದು, ಮೇನಾದೇವಿಯು ನಾರದರನ್ನು ಕರೆಸಿ ಅವರಲ್ಲಿ ದಿಬ್ಬಣಿಗರ ಪರಿಚಯ ಪಡೆಯುವುದು ಹಾಗೂ ಶಿವ ಮತ್ತು ಅವನ ಗಣಗಳನ್ನು ನೋಡಿ ಭಯದಿಂದ ಮೂರ್ಛಿತಳಾಗುವುದು	243
101	ಮೇನಾದೇವಿಯ ವಿಲಾಪ, ಶ್ರೀವಿಷ್ಣುವು ಆಕೆಯನ್ನು ಸಮಜಾಯಿಸುವುದು, ಶಿವನ ಜೊತೆ ವಿವಾಹಕ್ಕಾಗಿ ಸಮ್ಮತಿ	246
102	ಭಗವಾನ್ ಶಿವನು ತನ್ನ ಪರಮ ಸುಂದರ ರೂಪವನ್ನು ಪ್ರಕಟಿಸುವುದು, ಮೇನೆಯ ಪ್ರಸನ್ನತೆ ಮತ್ತು ಕ್ಷಮಾ-ಪ್ರಾರ್ಥನೆ, ಪುರವಾಸೀ ಸ್ತ್ರೀಯರು ಶಿವನ ರೂಪವನ್ನು ದರ್ಶನಮಾಡಿ ಜನ್ಮ-ಜೀವನವನ್ನು ಸಫಲವೆಂದು ತಿಳಿಯುವುದು	249
103	ದ್ವಾರದಲ್ಲಿ ಮೇನಾಳು ಭಗವಾನ್ ಶಿವನ ಕಾಲು ತೊಳೆದುದು, ಅವನ ರೂಪವನ್ನು ನೋಡಿ ಸಂತೋಷಗೊಳ್ಳುವುದು, ಪಾರ್ವತಿಯು ಅಂಬಿಕಾ ಪೂಜೆಗಾಗಿ ಹೊರಡುವುದು, ದೇವತೆಗಳು ಮತ್ತು ಭಗವಾನ್ ಶಿವನು ಆಕೆಯ ಸುಂದರ ರೂಪವನ್ನು ನೋಡಿ ಪ್ರಸನ್ನರಾಗುವುದು	251
104	ಆಭೂಷಣಗಳಿಂದ ವಿಭೂಷಿತ ಶಿವನ ಆರತಿ, ಕನ್ಯಾದಾನದ ಸಮಯ ವರನೊಂದಿಗೆ ದೇವತೆಗಳೆಲ್ಲರೂ ವಿವಾಹ ಮಂಟಪದಲ್ಲಿ ವಿರಾಜಿಸುವುದು ವಧೂ-ವರರಿಂದ ಪರಸ್ಪರ ಪೂಜೆ	253
105	ಶಿವ-ಪಾರ್ವತಿಯರ ವಿವಾಹದ ಪ್ರಾರಂಭ, ಹಿಮಾಲಯನಿಂದ ಶಿವನ ಗೋತ್ರದ ಕುರಿತು ಪ್ರಶ್ನೆ, ನಾರದರಿಂದ ಉತ್ತರ, ಹಿಮಾಲಯನು ಕನ್ಯಾದಾನ ಮಾಡಿ ಶಿವನಿಗೆ ಬಳುವಳಿಯನ್ನು ಕೊಡುವುದು ಹಾಗೂ ಶಿವೆಯ ಅಭಿಷೇಕ	254
106	ವಧೂ-ವರರಿಂದ ಕುಲದೇವತಾಪೂಜೆ, ಅವರಿಂದ ಲೋಕಾಚಾರದ ಪಾಲನೆ	256
107	ಸುಂದರವಾಗಿ ಅಲಂಕರಿಸಿದ ಸಜ್ಜಿಮನೆಯಲ್ಲಿ ರಾತ್ರಿಯನ್ನು ಕಳೆದು ಪ್ರಾತಃಕಾಲ ಶಿವನು ತನ್ನ ಬಿಡದಿಗೆ ಆಗಮನ	259
108	ದಿಬ್ಬಣವು ಕೆಲವು ದಿನ ಉಳಿಯುವುದು, ಸಪ್ತರ್ಷಿಗಳು ಸಮಜಾಯಿಸಿದಾಗ ಹಿಮವಂತನು ದಿಬ್ಬಣಿಗರನ್ನು ಬೀಳ್ಕೊಡಲು ಒಪ್ಪುವುದು	260
109	ಮೇನೆಯ ಇಚ್ಛೆಗನುಸಾರವಾಗಿ ಓರ್ವ ಬ್ರಾಹ್ಮಣ ಪತ್ನಿಯು ಪಾರ್ವತಿಗೆ ಪತಿವ್ರತಾಧರ್ಮವನ್ನು ಉಪದೇಶಿಸುವುದು	262
110	ಶಿವ-ಪಾರ್ವತಿ ಹಾಗೂ ದಿಬ್ಬಣಿಗರ ಬೀಳ್ಕೊಡಿಗೆ, ಭಗವಾನ್ ಶಿವನು ಸಮಸ್ತ ದೇವತೆಗಳನ್ನು ಬೀಳ್ಕೊಟ್ಟು ಕೈಲಾಸದಲ್ಲಿ ನೆಲೆಸುವುದು ಮತ್ತು ಪಾರ್ವತೀಖಂಡ ಶ್ರವಣದ ಮಹಿಮೆ	266
	ರುದ್ರಸಂಹಿತಾ, ಚತುರ್ಥ (ಕುಮಾರ) ಖಂಡ	
111	ದೇವತೆಗಳಿಂದ ಸ್ಕಂದನನ್ನು ಶಿವ-ಪಾರ್ವತಿಯರ ಬಳಿಗೆ ತರುವುದು, ಅವನನ್ನು ಮುದ್ದಿಸುವುದು, ದೇವತೆಗಳು ಬೇಡಿದಾಗ ಶಿವನು ಅವನನ್ನು ತಾರಕ-ವಧೆಗಾಗಿ ಸ್ವಾಮೀ ಕಾರ್ತಿಕನಿಗೆ ಕೊಡುವುದು, ಕುಮಾರನ ಅಧ್ಯಕ್ಷತೆಯಲ್ಲಿ ದೇವಸೇನೆಯು ಹೊರಡುವುದು, ಮಹೀಸಾಗರ ಸಂಗಮಕ್ಕೆ ತಾರಕಾಸುರನು ಬರುವುದು ಮತ್ತು ಎರಡು ಸೈನ್ಯಗಳು ಇದಿರಾಗುವುದು, ವೀರಭದ್ರನು ತಾರಕನೊಡನೆ ಘೋರ ಸಂಗ್ರಾಮ, ಪುನಃ ಶ್ರೀಹರಿ ಮತ್ತು ತಾರಕರಲ್ಲಿ ಭಯಾನಕ ಯುದ್ಧ	268
112	ಬ್ರಹ್ಮದೇವರ ಆಜ್ಞೆಯಂತೆ ಕುಮಾರನು ಯುದ್ಧಕ್ಕೆ ಹೋಗುವುದು, ತಾರಕನೊಂದಿಗೆ ಅವನ ಭೀಷಣ ಸಂಗ್ರಾಮ ಮತ್ತು ಅವನಿಂದ ತಾರಕನ ವಧೆ, ಅನಂತರ ದೇವತೆಗಳಿಂದ ಕುಮಾರನ ಅಭಿನಂದನೆ ಮತ್ತು ಸ್ತವನ, ಕುಮಾರನು ಅವರಿಗೆ ವರಪ್ರದಾನ ಮಾಡಿ, ಕೈಲಾಸಕ್ಕೆ ಹೋಗಿ ಶಿವ-ಪಾರ್ವತಿಯರ ಬಳಿಯಲ್ಲಿ ವಾಸಿಸುವುದು	270
113	ಶ್ರೀ ಗಣಪತಿ ಚರಿತ್ರೆ	273
114	ಪಾರ್ವತಿಯಿಂದ ಗಣೇಶನಿಗೆ ವರಪ್ರಸಾದ, ಶಿವನಿಂದ ಗಣೇಶನಿಗೆ ಸರ್ವಾಧ್ಯಕ್ಷ ಪದವಿ ಪ್ರದಾನ ಮತ್ತು ಗಣಪತಿ ಚತುರ್ಥಿವ್ರತದ ವರ್ಣನೆ	276
115	ಕಾರ್ತಿಕ ಸ್ವಾಮಿಯ ಮತ್ತು ಶ್ರೀ ಗಣಪತಿಯ ವಿವಾಹದ ಕಥೆ	279
	ರುದ್ರಸಂಹಿತೆಯ ಪಂಚಮ (ಯುದ್ಧ) ಖಂಡ	
116	ತಾರಕಾಸುರನ ಪುತ್ರ ತಾರಕಾಕ್ಷ, ವಿದ್ಯುನ್ಮಾಲಿ ಮತ್ತು ಕಮಲಾಕ್ಷ ಇವರ ತಪಸ್ಸು, ಬ್ರಹ್ಮನಿಂದ ಅವರಿಗೆ ವರಪ್ರದಾನ, ಮಯನಿಂದ ಅವರಿಗಾಗಿ ಮೂರು ಪುರಗಳ ನಿರ್ಮಾಣ ಮತ್ತು ಅವುಗಳ ಅಲಂಕಾರ - ಶೋಭೆಯ ವರ್ಣನೆ	283

	ವಿಷಯ	ಪುಟ ಸಂಖ್ಯೆ
117	ತಾರಕ ಪುತ್ರರಿಂದ ಸಂತಪ್ತರಾದ ದೇವತೆಗಳು ಬ್ರಹ್ಮದೇವರಲ್ಲಿ ಪ್ರಾರ್ಥಿಸಿದುದು, ಬ್ರಹ್ಮದೇವರು ಅವರನ್ನು ಶಿವನ ಬಳಿಗೆ ಕಳಿಸುವುದು, ಶಿವನ ಆಜ್ಞೆಯಿಂದ ದೇವತೆಗಳು ವಿಷ್ಣುವಿನಲ್ಲಿ ಶರಣಾಗುವುದು	285
118	ದೇವತೆಗಳು ಶಿವನ ಬಳಿಗೆ ಹೋಗಿ ಅವನನ್ನು ಸ್ತುತಿಸುವುದು, ಶಿವನು ತ್ರಿಪುರರ ವಧೆಗಾಗಿ ಸಿದ್ಧನಾಗದಿದ್ದಾಗ ಬ್ರಹ್ಮ ಮತ್ತು ವಿಷ್ಣುವು ಅವನನ್ನು ಸಮಜಾಯಿಸುವುದು, ವಿಷ್ಣುವು ಹೇಳಿದ ಶಿವಮಂತ್ರವನ್ನು ದೇವತೆಗಳು ಮತ್ತು ವಿಷ್ಣುವು ಜಪಿಸುವುದು, ಶಿವನ ಪ್ರಸನ್ನತೆ, ಅವನಿಗಾಗಿ ವಿಶ್ವಕರ್ಮನಿಂದ ಸರ್ವದೇವಮಯ ರಥದ ನಿರ್ಮಾಣ	287
119	ಸರ್ವದೇವಮಯ ರಥದ ವರ್ಣನೆ, ಶಿವನು ಆ ರಥವನ್ನು ಏರಿ ಯುದ್ಧಕ್ಕಾಗಿ ಹೊರಡುವುದು, ಅವನಿಗೆ ಪಶುಪತಿ ಎಂಬ ಹೆಸರು ಬಂದಿರುವ ಕಾರಣ, ಶಿವನಿಂದ ಗಣಪತಿಯ ಪೂಜೆ ಹಾಗೂ ತ್ರಿಪುರ ದಹನ, ಮಯ ದಾನವನು ತ್ರಿಪುರಗಳಿಂದ ಜೀವಿತನಾಗಿ ಉಳಿಯುವುದು	290
120	ದೇವತೆಗಳ ಸ್ತುತಿಯಿಂದ ಶಿವನ ಕೋಪವು ಶಾಂತವಾಗುವುದು, ಶಿವನು ಅವರಿಗೆ ವರಗಳನ್ನು ಕೊಡುವುದು, ಮಯ ದಾನವನು ಶಿವನ ಬಳಿಗೆ ಬಂದು ವರವನ್ನು ಬೇಡುವುದು, ಶಿವನಿಂದ ವರವನ್ನು ಪಡೆದು ಮಯನು ವಿತಲಲೋಕಕ್ಕೆ ಹೋಗುವುದು	294
121	ಶಂಖಿಚೂಡನಿಂದ ತಪಸ್ಸು, ವರಪ್ರಾಪ್ತಿ, ಗಾಂಧರ್ವವಿಧಿಯಿಂದ ತುಲಸಿಯ ಪಾಣಿಗ್ರಹಣ	296
122	ಅಸುರ ರಾಜ್ಯಕ್ಕೆ ಶಂಖಿಚೂಡನ ಪಟ್ಟಾಭಿಷೇಕ, ಅವನು ದೇವತೆಗಳ ಅಧಿಕಾರವನ್ನು ಕಸಿದುಕೊಳ್ಳುವುದು, ದೇವತೆಗಳು ಬ್ರಹ್ಮದೇವರಿಗೆ ಶರಣಾಗುವುದು, ಬ್ರಹ್ಮನು ಅವರೊಂದಿಗೆ ವಿಷ್ಣುವಿನ ಬಳಿಗೆ ಹೋಗುವುದು, ವಿಷ್ಣುವು ಶಂಖಿಚೂಡನ ಜನ್ಮ ರಹಸ್ಯವನ್ನು ತಿಳಿಸುವುದು, ಮತ್ತೆ ಎಲ್ಲರೂ ಶಿವನ ಬಳಿಗೆ ಹೋಗುವುದು ಮತ್ತು ಶಿವಸಭೆಯಲ್ಲಿ ಶಿವನನ್ನು ದರ್ಶಿಸಿ, ತಮ್ಮ ಅಭಿಪ್ರಾಯವನ್ನು ಪ್ರಕಟಿಸುವುದು	299
123	ದೇವತೆಗಳು ರುದ್ರನ ಬಳಿಗೆ ಹೋಗಿ ತಮ್ಮ ದುಃಖವನ್ನು ನಿವೇದಿಸಿಕೊಳ್ಳುವುದು, ರುದ್ರನ ಮೂಲಕ ಅವರಿಗೆ ಆಶ್ವಾಸನೆ ಶಂಖಿಚೂಡನು ಸೈನ್ಯಸಹಿತ ಪುಷ್ಪ-ಭದ್ರಾನದಿಯ ತಟದಲ್ಲಿ ಬೀಡುಬಿಟ್ಟದ್ದು ಹಾಗೂ ದಾನವರಾಜನ ದೂತ ಮತ್ತು ಶಿವನ ಮಾತುಕತೆ	302
124	ದೇವತೆಗಳ ಮತ್ತು ದಾನವರ ಯುದ್ಧ, ವಿಷ್ಣುವಿನಿಂದ ಶಂಖಿಚೂಡನ ಕವಚ ಮತ್ತು ತುಲಸಿಯ ಶೀಲದ ಅಪಹರಣ, ಮತ್ತೆ ರುದ್ರನು ತ್ರಿಶೂಲದಿಂದ ಶಂಖಿಚೂಡನ ವಧೆ, ಶಂಖಿನ, ಉತ್ಪತ್ತಿಯ ಕಥೆ	306
125	ವಿಷ್ಣುವು ತುಲಸಿಯ ಶೀಲಹರಣ ಮಾಡಿದ ವರ್ಣನೆ, ಸಿಟ್ಟುಗೊಂಡ ತುಲಸಿಯು ವಿಷ್ಣುವಿಗೆ ಶಪಿಸಿದುದು, ಶಂಭು ತುಲಸೀ ಮತ್ತು ಶಾಲಗ್ರಾಮ ಶಿಲೆಯ ಮಾಹಾತ್ಮ್ಯವನ್ನು ವರ್ಣಿಸಿದುದು	309
126	ಉಮೆಯು ಶಂಭುವಿನ ಕಣ್ಣುಗಳನ್ನು ಮುಚ್ಚಿದಾಗ ಅಂಧಕಾರದಲ್ಲಿ ಶಂಭುವಿನ ಬೆವರಿನಿಂದ ಅಂಧಕಾಸುರನ ಉತ್ಪತ್ತಿ, ಪುತ್ರಾರ್ಥಿಯಾಗಿ ಹಿರಣ್ಯಾಕ್ಷನ ತಪಸ್ಸು ಮತ್ತು ಶಿವನು ಅವನಿಗೆ ಪುತ್ರನಾಗಿ ಅಂಧಕಾಸುರನನ್ನು ಕೊಡುವುದು, ಹಿರಣ್ಯಾಕ್ಷನು ಮೂರು ಲೋಕಗಳನ್ನು ಗೆದ್ದು ಭೂಮಿಯನ್ನು ರಸಾತಳಕ್ಕೆ ಕೊಂಡುಹೋಗುವುದು ಮತ್ತು ವರಾಹರೂಪಧಾರೀ ವಿಷ್ಣುವಿನಿಂದ ಅವನ ವಧೆ	311
127	ಹಿರಣ್ಯಕಶಿಪುವಿನ ತಪಸ್ಸು, ಬ್ರಹ್ಮನಿಂದ ವರಪ್ರದಾನ ಪಡೆದು ಅವನ ಅನಾಚಾರ, ನರಸಿಂಹನಿಂದ ಅವನ ವಧೆ ಮತ್ತು ಪ್ರಹ್ಲಾದನಿಗೆ ರಾಜ್ಯ ಪ್ರಾಪ್ತಿ	313
128	ಅಂಧಕನು ತಪಸ್ಸು ಮಾಡಿ, ವರವನ್ನು ಪಡೆದು ಮೂರು ಲೋಕಗಳನ್ನೂ ಗೆದ್ದು, ಸ್ವೇಚ್ಛಾಚಾರದಲ್ಲಿ ಪ್ರವೃತ್ತನಾಗುವುದು, ಪಾರ್ವತಿಯ ಸೌಂದರ್ಯಕ್ಕೆ ಮೋಹಿತನಾಗಿ ಅಂಧಕನು ಅಲ್ಲಿಗೆ ಹೋಗುವುದು, ಶಿವನೊಡನೆ ಅವನ ಯುದ್ಧ	315
129	ಶುಕ್ರಾಚಾರ್ಯರನ್ನು ಶಿವನು ನುಂಗಿಬಿಡುವುದು, ನೂರು ವರ್ಷಗಳ ಬಳಿಕ ಶುಕ್ರನು ಶಿವನ ಲಿಂಗದ್ವಾರದಿಂದ ಹೊರಗೆ ಬರುವುದು, ಶುಕ್ರನು ಜಪಿಸಿದ ಮೃತ್ಯುಂಜಯ ಮಂತ್ರ ಮತ್ತು ಶಿವಾಷ್ಟೋತ್ತರ ಶತನಾಮ ಸ್ತೋತ್ರದ ವರ್ಣನೆ, ಶಿವನಿಂದ ಅಂಧಕನಿಗೆ ವರಪ್ರದಾನ	319
130	ಶುಕ್ರಾಚಾರ್ಯರ ಘೋರ ತಪಸ್ಸು, ಅಷ್ಟಮೂರ್ತ್ಯಷ್ಟಕ ಸ್ತೋತ್ರದಿಂದ ಅವನನ್ನು ಸ್ತುತಿಸುವುದು, ಶಿವನು ಒಲಿದು ಅವನಿಗೆ ಮೃತಸಂಜೀವನೀ ವಿದ್ಯೆಯನ್ನು ಕರುಣಿಸುವುದು	325
131	ಬಾಣಾಸುರನ ತಪಸ್ಸು, ಶಿವನಿಂದ ಅವನಿಗೆ ವರ ಪ್ರಾಪ್ತಿ,ಉಷೆಯು ರಾತ್ರಿ ಸ್ವಪ್ನದಲ್ಲಿ ಅನಿರುದ್ಧನೊಂದಿಗೆ ಮಿಲನ, ಶ್ರೀಕೃಷ್ಣನು ಶೋಣಿತಪುರವನ್ನು ಮುತ್ತುವುದು, ಶಿವನೊಂದಿಗೆ ಕೇಶವನ ಘೋರ ಯುದ್ಧ	328
132	ಶ್ರೀಕೃಷ್ಣನು ಬಾಣನ ಭುಜಗಳನ್ನು ಕತ್ತರಿಸುವುದು, ಶಿರವನ್ನು ಕತ್ತರಿಸಲು ಸಿದ್ಧನಾದ ಶ್ರೀಕೃಷ್ಣನನ್ನು ಶಿವನು ತಡೆಯುವುದು ಹಾಗೂ ಅವನನ್ನು ಸಮಜಾಯಿಸುವುದು, ಶ್ರೀಕೃಷ್ಣನು ಪರಿವಾರ ಸಹಿತ ದ್ವಾರಕೆಗೆ ಮರಳುವುದು, ಬಾಣನ ತಾಂಡವ ನೃತ್ಯದಿಂದ ಪ್ರಸನ್ನಗೊಂಡ ಶಿವನು ಅವನಿಗೆ ಮಹಾಕಾಲತ್ವವನ್ನು ಕರುಣಿಸುವುದು	333
133	ಗಜಾಸುರನ ತಪಸ್ಸು, ವರಪ್ರಾಪ್ತಿ ಮತ್ತು ಅವನ ಅತ್ಯಾಚಾರ, ಶಿವನಿಂದ ಅವನ ವಧೆ, ಅವನ ಪ್ರಾರ್ಥನೆಯಂತೆ ಶಿವನು ಅವನ ಚರ್ಮವನ್ನು ಧರಿಸುವುದು ಹಾಗೂ 'ಕೃತ್ತಿವಾಸಾ' ಎಂಬ ಹೆಸರಿನಿಂದ ಖ್ಯಾತನಾಗುವುದು, ಕೃತ್ತಿವಾಸೇಶ್ವರ ಲಿಂಗವನ್ನು ಸ್ಥಾಪಿಸುವುದು	335
134	ದುಂದುಭಿನಿರ್ಹ್ರಾದ ಎಂಬ ದೈತ್ಯನು ವ್ಯಾಘ್ರ ರೂಪದಿಂದ ಶಿವಭಕ್ತನ ಮೇಲೆ ಆಕ್ರಮಣ ಮಾಡುವ ವಿಚಾರ ಮತ್ತು ಶಿವನಿಂದ ಅವನ ವಧೆ	336

	ವಿಷಯ	ಪುಟ ಸಂಖ್ಯೆ
135	ವಿದಲ ಮತ್ತು ಉತ್ಪಲ ಎಂಬ ದೈತ್ಯರು ಪಾರ್ವತಿಯ ಮೇಲೆ ಮೋಹಿತರಾಗುವುದು, ಪಾರ್ವತಿಯು ಕಂದುಕ ಪ್ರಹಾರದಿಂದ ಅವರ ಕಥೆ ಮುಗಿಸುವುದು, ಕಂದುಕೇಶ್ವರನ ಸ್ಥಾಪನೆ ಮತ್ತು ಅದರ ಮಹಿಮೆ	337
	ಶತರುದ್ರ ಸಂಹಿತೆ	
136	ಶಿವನ ಸದ್ಯೋಜಾತ, ವಾಮದೇವ, ತತ್ಪುರುಷ, ಅಘೋರ ಮತ್ತು ಈಶಾನ ಎಂಬ ಐದು ಅವತಾರಗಳ ಕಥೆ	339
137	ಶಿವನ ಅಷ್ಟಮೂರ್ತಿಗಳ ಹಾಗೂ ಅರ್ಧನಾರೀಶ್ವರ ರೂಪದ ವಿಸ್ತಾರವಾದ ವರ್ಣನೆ	341
138	ವರಾಹಕಲ್ಪದಲ್ಲಿ ಆಗುವ ಶಿವನ ಪ್ರಥಮ ಅವತಾರದಿಂದ ಹಿಡಿದು ಒಂಭತ್ತನೆಯ ಋಷಭ ಅವತಾರದವರೆಗಿನ ವರ್ಣನೆ	343
139	ಶಿವನು ಎತ್ತಿದ ಹತ್ತನೆಯ ಅವತಾರದಿಂದ ಹಿಡಿದು ಇಪ್ಪತ್ತೆಂಟನೆಯ ಯೋಗೇಶ್ವರ ಅವತಾರಗಳ ವರ್ಣನೆ	345
140	ನಂದೀಶ್ವರನ ಅವತಾರದ ವರ್ಣನೆ	347
141	ನಂದೀಶ್ವರನ ಜನ್ಮ, ವರಪ್ರಾಪ್ತಿ, ಅಭಿಷೇಕ ಮತ್ತು ವಿವಾಹದ ವರ್ಣನೆ	349
142	ಕಾಲಭೈರವನ ಮಾಹಾತ್ಮ್ಯ, ವಿಶ್ವಾನರನ ತಪಸ್ಸು, ಶಿವನು ಪ್ರಸನ್ನನಾಗಿ ಅವನ ಪತ್ನಿ ಶುಚಿಷ್ಮತಿಯ ಗರ್ಭದಿಂದ ಪುತ್ರರೂಪದಿಂದ ಪ್ರಕಟನಾಗುವ ವರ ನೀಡುವುದು	351
143	ಶುಚಿಷ್ಮತೆಯ ಗರ್ಭದಿಂದ ಶಿವನ ಪ್ರಾಕಟ್ಯ, ಬ್ರಹ್ಮದೇವರು ಬಾಲಕನ ಸಂಸ್ಕಾರವನ್ನು ಮಾಡಿ 'ಗೃಹಪತಿ' ಎಂದು ನಾಮಕರಣ ಮಾಡಿದುದು, ನಾರದರು ಅವನ ಭವಿಷ್ಯವನ್ನು ಹೇಳಿದುದು, ತಂದೆಯ ಆಜ್ಞೆಯಿಂದ ಗೃಹಪತಿಯು ಕಾಶಿಗೆ ಹೋಗಿ ತಪಸ್ಸು ಮಾಡುವುದು, ವರವನ್ನು ಕೊಡಲು ಇಂದ್ರನು ಪ್ರಕಟನಾಗುವುದು, ಗೃಹಪತಿಯು ಅವನನ್ನು ತಿರಸ್ಕರಿಸುವುದು, ಶಿವನು ಪ್ರಕಟನಾಗಿ ಅವನಿಗೆ ವರವನ್ನು ಕೊಟ್ಟು ದಿಕ್ಪಾಲ ಪದವಿಯನ್ನು ಕೊಡುವುದು ಹಾಗೂ ಅಗ್ನೀಶ್ವರ ಲಿಂಗ ಮತ್ತು ಅಗ್ನಿಯ ಮಾಹಾತ್ಮ್ಯ	353
144	ಶಿವನ ಮಹಾಕಾಲ ಮೊದಲಾದ ಹತ್ತು ಅವತಾರಗಳ ಹಾಗೂ ಹನ್ನೊಂದು ರುದ್ರಾವತಾರಗಳ ವರ್ಣನೆ	357
145	ಶಿವನ ದುರ್ವಾಸಾವತಾರ ಹಾಗೂ ಹನುಮದವತಾರಗಳ ವರ್ಣನೆ	359
146	ಶಿವನ ಪಿಪ್ಪಲಾದ ಅವತಾರ ಪ್ರಸಂಗದಲ್ಲಿ ದೇವತೆಗಳು ದಧೀಚಿ ಮುನಿಯಲ್ಲಿ ಅಸ್ಥಿಗಳನ್ನು ಬೇಡುವುದು, ದಧೀಚಿಯ ಶರೀರತ್ಯಾಗ, ವಜ್ರನಿರ್ಮಾಣ ಹಾಗೂ ಅದರಿಂದ ವೃತ್ರಾಸುರನ ವಧೆ, ಸುವರ್ಚೆಯು ದೇವತೆಗಳಿಗೆ ಶಾಪಕೊಡುವುದು, ಪಿಪ್ಪಲಾದನ ಜನ್ಮ ಮತ್ತು ಅವನ ವಿಸ್ತೃತ ವೃತ್ತಾಂತ	360
147	ಭಗವಾನ್ ಶಿವನ ದ್ವಿಜೇಶ್ವರಾವತಾರದ ಕಥೆ – ರಾಜಾ ಭದ್ರಾಯು ಮತ್ತು ರಾಣಿ ಕೀರ್ತಿಮಾಲಿನಿಯ ಧರ್ಮದ ದೃಢತೆಯ ಪರೀಕ್ಷೆ	363
148	ಭಗವಾನ್ ಶಿವನ ಯತಿನಾಥ ಹಾಗೂ ಹಂಸವೆಂಬ ಅವತಾರಗಳು	365
149	ಭಗವಾನ್ ಶಿವನ ಕೃಷ್ಣದರ್ಶನವೆಂಬ ಅವತಾರದ ಕಥೆ	366
150	ಭಗವಾನ್ ಶಿವನ ಅವಧೂತೇಶ್ವರಾವತಾರದ ಕಥೆ ಮತ್ತು ಅದರ ಮಹಿಮೆಯ ವರ್ಣನೆ	368
151	ಭಗವಾನ್ ಶಿವನ ಭಿಕ್ಷುವರ್ಯಾವತಾರದ ಕಥೆ, ರಾಜಕುಮಾರ ಮತ್ತು ದ್ವಿಜಕುಮಾರರ ಮೇಲೆ ಕೃಪೆ	370
152	ಶಿವನ ಸುರೇಶ್ವರಾವತಾರದ ಕಥೆ, ಉಪಮನ್ಯುವಿನ ತಪಸ್ಸು ಮತ್ತು ಅವನಿಗೆ ಉತ್ತಮ ವರಪ್ರಾಪ್ತಿ	372
153	ಶಿವನ ಕಿರಾತಾವತಾರದ ಪ್ರಸಂಗದಲ್ಲಿ ಶ್ರೀಕೃಷ್ಣನಿಂದ ದ್ವೈತವನದಲ್ಲಿ ದುರ್ವಾಸರ ಶಾಪದಿಂದ ಪಾಂಡವರ ರಕ್ಷಣೆ, ವ್ಯಾಸರು ಅರ್ಜುನನಿಗೆ ಶಕ್ರವಿದ್ಯೆ ಮತ್ತು ಪಾರ್ಥಿವ ಪೂಜೆಯ ವಿಧಿಯನ್ನು ತಿಳಿಸಿ, ತಪಸ್ಸಿಗಾಗಿ ಸಮ್ಮತಿ ಕೊಡುವುದು, ಅರ್ಜುನನ ಇಂದ್ರಕಿಲ ಪರ್ವತದಲ್ಲಿ ತಪಸ್ಸು, ಇಂದ್ರನ ಆಗಮನ ಮತ್ತು ಅರ್ಜುನನಿಗೆ ವರಪ್ರದಾನ, ಅರ್ಜುನನು ಶಿವನ ಉದ್ದೇಶದಿಂದ ಪುನಃ ತಪಸ್ಸಿನಲ್ಲಿ ತೊಡಗುವುದು	374
154	ಕಿರಾತಾವತಾರದ ಪ್ರಸಂಗದಲ್ಲಿ ಮೂಕನೆಂಬ ದೈತ್ಯನು ಹಂದಿಯಾಗಿ ಅರ್ಜುನನ ಬಳಿಗೆ ಬರುವುದು, ಶಿವನು ಕಿರಾತ ವೇಷದಲ್ಲಿ ಪ್ರಕಟನಾಗುವುದು, ಅರ್ಜುನ ಮತ್ತು ಕಿರಾತ ವೇಷಧಾರೀ ಶಿವನಿಂದ ಆ ದೈತ್ಯನ ವಧೆ	376
155	ಅರ್ಜುನ ಮತ್ತು ಶಿವದೂತನ ಮಾತು-ಕತೆ, ಕಿರಾತ ವೇಷಧಾರೀ ಶಿವನೊಂದಿಗೆ ಅರ್ಜುನನ ಯುದ್ಧ, ಗುರುತು ಸಿಕ್ಕಾಗ ಅರ್ಜುನನಿಂದ ಶಿವನ ಸ್ತುತಿ, ಶಿವನು ಅರ್ಜುನನಿಗೆ ವರವನ್ನು ಕೊಟ್ಟು ಅಂತರ್ಧಾನನಾಗುವುದು, ಅರ್ಜುನನು ಆಶ್ರಮಕ್ಕೆ ಮರಳಿ ಸಹೋದರರೊಂದಿಗೆ ಕೂಡಿಕೊಳ್ಳುವುದು, ಶ್ರೀಕೃಷ್ಣನು ಅರ್ಜುನನನ್ನು ಭೇಟಿಯಾಗಲು ಅಲ್ಲಿಗೆ ಬರುವುದು	378
156	ಶಿವನ ದ್ವಾದಶ ಜ್ಯೋತಿರ್ಲಿಂಗಾವತಾರಗಳ ಸವಿಸ್ತರ ವರ್ಣನೆ	382
	ಕೋಟಿರುದ್ರ ಸಂಹಿತೆ	
157	ದ್ವಾದಶ ಜ್ಯೋತಿರ್ಲಿಂಗಗಳ ಹಾಗೂ ಅವುಗಳ ಉಪಲಿಂಗಗಳ ವರ್ಣನೆ, ಅವುಗಳ ದರ್ಶನ-ಪೂಜೆಯ ಮಹಿಮೆ	385
158	ಕಾಶಿಯೇ ಮುಂತಾದ ಬೇರೆ-ಬೇರೆ ಲಿಂಗಗಳ ವರ್ಣನೆ ಹಾಗೂ ಅತ್ರೀಶ್ವರನ ಉತ್ಪತ್ತಿಯ ಪ್ರಸಂಗದಲ್ಲಿ ಗಂಗೆ ಮತ್ತು ಶಿವನು ಅತ್ರಿಯ ತಪೋವನದಲ್ಲಿ ನಿತ್ಯ ವಾಸಿಸುವ ಕಥೆ	388
159	ಋಷಿಕೆಯ ಮೇಲೆ ಭಗವಾನ್ ಶಿವನ ಕೃಪೆ, ಒಬ್ಬ ಅಸುರನಿಂದ ಆಕೆಯ ಧರ್ಮದ ರಕ್ಷಣೆ ಮಾಡಿ ಆಕೆಯ ಆಶ್ರಮದಲ್ಲಿ 'ನಂದೀಕೇಶ' ಹೆಸರಿನಿಂದ ವಾಸಿಸುವುದು ಮತ್ತು ವರ್ಷದಲ್ಲಿ ಒಂದು ದಿನ ಗಂಗೆಯು ಅಲ್ಲಿಗೆ ಬರುವುದು	389

	ವಿಷಯ	ಪುಟ ಸಂಖ್ಯೆ
160	ಪ್ರಥಮ ಜ್ಯೋತಿರ್ಲಿಂಗ ಸೋಮನಾಥನ ಪ್ರಾದುರ್ಭಾವದ ಕಥೆ ಮತ್ತು ಅದರ ಮಹಿಮೆ	390
161	ಮಲ್ಲಿಕಾರ್ಜುನ ಮತ್ತು ಮಹಾಕಾಲವೆಂಬ ಜ್ಯೋತಿರ್ಲಿಂಗದ ಪ್ರಾದುರ್ಭಾವದ ಕಥೆ ಹಾಗೂ ಅವುಗಳ ಮಹಿಮೆ	392
162	ಮಹಾಕಾಲನ ಮಾಹಾತ್ಮ್ಯದ ಪ್ರಸಂಗದಲ್ಲಿ ಶಿವಭಕ್ತ ಚಂದ್ರಸೇನ ರಾಜ ಹಾಗೂ ಗೋಪ ಬಾಲಕ ಶ್ರೀಕರನ ಕಥೆ	394
163	ಏಂಧ್ಯನ ತಪಸ್ಸು, ಓಂಕಾರದಲ್ಲಿ ಪರಮೇಶ್ವರಲಿಂಗದ ಪ್ರಾದುರ್ಭಾವ ಮತ್ತು ಅದರ ಮಹಿಮೆಯು ವರ್ಣನೆ	397
164	ಕೇದಾರೇಶ್ವರ ಹಾಗೂ ಭೀಮಶಂಕರ ಎಂಬ ಜ್ಯೋತಿರ್ಲಿಂಗಗಳ ಅವಿರ್ಭಾವದ ಕಥೆ ಮತ್ತು ಅವುಗಳ ಮಾಹಾತ್ಮ್ಯದ ವರ್ಣನೆ	398
165	ವಿಶ್ವೇಶ್ವರ ಜ್ಯೋತಿರ್ಲಿಂಗ ಮತ್ತು ಅದರ ಮಹಿಮೆಯ ಪ್ರಸಂಗದಲ್ಲಿ ಪಂಚಕ್ರೋಶಿಯ ಮಹತ್ವದ ಪ್ರತಿಪಾದನೆ	402
166	ವಾರಾಣಸೀ ಹಾಗೂ ವಿಶ್ವೇಶ್ವರನ ಮಾಹಾತ್ಮ್ಯ	404
167	ತ್ರ್ಯಂಬಕ ಜ್ಯೋತಿರ್ಲಿಂಗದ ಪ್ರಸಂಗದಲ್ಲಿ ಮಹರ್ಷಿ ಗೌತಮರು ಮಾಡಿದ ಪರೋಪಕಾರದ ಕಥೆ, ಋಷಿಗಳು ಕಪಟದಿಂದ ಗೌತಮರನ್ನು ಗೋಹತ್ಯೆಯಲ್ಲಿ ಸಿಕ್ಕಿಸಿ ಆಶ್ರಮದಿಂದ ಹೊರಹಾಕುವುದು ಹಾಗೂ ಶುದ್ಧಿಯ ಉಪಾಯವನ್ನು ತಿಳಿಸುವುದು	405
168	ಪತ್ನೀಸಹಿತ ಗೌತಮರ ಆರಾಧನೆಯಿಂದ ಸಂತುಷ್ಟನಾದ ಭಗವಾನ್ ಶಂಕರನು ಅವರಿಗೆ ದರ್ಶನ ಕೊಡುವುದು, ಗಂಗೆಯು ಗೌತಮೀ (ಅಥವಾ ಗೋದಾವರಿ) ಹೆಸರಿನಿಂದ ಮತ್ತು ಶಿವನು ತ್ರ್ಯಂಬಕ ಜ್ಯೋತಿರ್ಲಿಂಗ ಎಂಬ ಹೆಸರಿನಿಂದ ವಿಖ್ಯಾತವಾಗುವುದು, ಇವರಿಬ್ಬರ ಮಹಿಮೆ	408
169	ವೈದ್ಯನಾಥೇಶ್ವರ ಜ್ಯೋತಿರ್ಲಿಂಗದ ಪ್ರಾಕಟ್ಯದ ಕಥೆ ಹಾಗೂ ಮಹಿಮೆ	410
170	ನಾಗೇಶ್ವರ ಎಂಬ ಜ್ಯೋತಿರ್ಲಿಂಗದ ಪ್ರಾದುರ್ಭಾವ ಮತ್ತು ಅದರ ಮಹಿಮೆ	412
171	ರಾಮೇಶ್ವರವೆಂಬ ಜ್ಯೋತಿರ್ಲಿಂಗದ ಆವಿರ್ಭಾವ ಹಾಗೂ ಮಾಹಾತ್ಮ್ಯದ ವರ್ಣನೆ	413
172	ಘುಶ್ಮಾಳ ಶಿವಭಕ್ತಿಯಿಂದ ಸತ್ತುಹೋದ ಆಕೆಯ ಪುತ್ರನು ಜೀವಿತನಾಗುವುದು, ಘುಶ್ಮೇಶ್ವರ ಶಿವನ ಪ್ರಾದುರ್ಭಾವ ಹಾಗೂ ಅವನ ಮಹಿಮೆಯ ವರ್ಣನೆ	415
173	ಶಂಕರನ ಆರಾಧನೆಯಿಂದ ಭಗವಾನ್ ವಿಷ್ಣುವಿಗೆ ಸುದರ್ಶನ ಚಕ್ರದ ಪ್ರಾಪ್ತಿ ಹಾಗೂ ಅದರಿಂದ ದೈತ್ಯರ ಸಂಹಾರ	417
174	ಭಗವಾನ್ ವಿಷ್ಣುವು ಪಠಿಸಿದ ಶಿವಸಹಸ್ರನಾಮ – ಸ್ತೋತ್ರ	418
175	ಭಗವಾನ್ ಶಿವನನ್ನು ಸಂತುಷ್ಟಗೊಳಿಸುವ ವ್ರತಗಳ ವರ್ಣನೆ, ಶಿವರಾತ್ರಿ ವ್ರತದ ವಿಧಿ ಹಾಗೂ ಮಹಿಮೆಯ ಕಥೆ	438
176	ಶಿವರಾತ್ರಿ – ವ್ರತದ ಉದ್ಯಾಪನೆಯ ವಿಧಿ	442
177	ಶಿಳಯದೆಯೇ ಶಿವರಾತ್ರಿ ವ್ರತವನ್ನು ಮಾಡಿದ್ದರಿಂದ ಒಬ್ಬ ಬೇಡನಮೇಲೆ ಭಗವಾನ್ ಶಂಕರನ ಅದ್ಭುತ ಕೃಪೆ	443
178	ಮುಕ್ತಿ ಮತ್ತು ಭಕ್ತಿಯ ಸ್ವರೂಪದ ವಿವೇಚನೆ	448
179	ಶಿವ, ವಿಷ್ಣು, ರುದ್ರ ಮತ್ತು ಬ್ರಹ್ಮದೇವರ ಸ್ವರೂಪದ ವಿವೇಚನೆ	449
180	ಶಿವಸಂಬಂಧೀ ಶತ್ತ್ವಜ್ಞಾನದ ವರ್ಣನೆ ಮತ್ತು ಅದರ ಮಹಿಮೆ, ಕೋಟಿರುದ್ರ-ಸಂಹಿತೆಯ ಮಾಹಾತ್ಮ್ಯ ಹಾಗೂ ಉಪಸಂಹಾರ	451
	ಉಮಾಸಂಹಿತೆ	
181	ಭಗವಾನ್ ಶ್ರೀಕೃಷ್ಣನ ತಪಸ್ಸಿನಿಂದ ಸಂತುಷ್ಟರಾದ ಶಿವ-ಪಾರ್ವತಿಯರು ಅವನಿಗೆ ಅಭೀಷ್ಟ ವರವನ್ನು ಕೊಡುವುದು, ಹಾಗೂ ಶಿವನ ಮಹಿಮೆ	454
182	ನರಕದಲ್ಲಿ ಕೆಡಹುವ ಪಾಪಗಳ ಸಂಕ್ಷಿಪ್ತ ಪರಿಚಯ	455
183	ಪಾಪಿಗಳ ಮತ್ತು ಪುಣ್ಯಾತ್ಮರ ಯಮಲೋಕಯಾತ್ರೆ	458
184	ನರಕಗಳ ಇಪ್ಪತ್ತೆಂಟು ಕೋಟಿಗಳು ಹಾಗೂ ಪ್ರತಿಯೊಂದರ ಐದು-ಐದು ನಾಯಕರ ಕ್ರಮದಿಂದ ಒಂದು ನೂರ ನಲುವತ್ತು ರೌರವಾದಿ ನರಕಗಳ ನಾಮಾವಳಿ	459
185	ಬೇರೆ-ಬೇರೆ ಪಾಪಗಳಿಂದ ದೊರೆಯುವ ನರಕ ಯಾತನೆಯ ವರ್ಣನೆ ಹಾಗೂ ಶ್ವಾನಬಲಿ, ಕಾಕಬಲಿ ಮತ್ತು ದೇವತೆಗಳೆ ಮುಂತಾದವರಿಗೆ ಕೊಟ್ಟಿರುವ ಬಲಿಯ ಆವಶ್ಯಕತೆ ಹಾಗೂ ಮಹತ್ವದ ಪ್ರತಿಪಾದನೆ	460
186	ಯಮಲೋಕದ ಮಾರ್ಗದಲ್ಲಿ ಅನುಕೂಲತೆಯನ್ನು ಒದಗಿಸುವಂತಹ ವಿವಿಧ ದಾನಗಳ ವರ್ಣನೆ	462
187	ಜಲದಾನ, ಜಲಾಶಯದ ನಿರ್ಮಾಣ, ವೃಕ್ಷಾರೋಪಣ, ಸತ್ಯಭಾಷಣ ಮತ್ತು ತಪಸ್ಸಿನ ಮಹಿಮೆ	464
188	ವೇದ-ಪುರಾಣಗಳ ಸ್ವಾಧ್ಯಾಯ ಹಾಗೂ ವಿವಿಧ ಪ್ರಕಾರದ ದಾನದ ಮಹಿಮೆ, ನರಕಗಳ ವರ್ಣನೆ ಮತ್ತು ಅದರಲ್ಲಿ ಬೀಳಿಸುವ ಪಾಪಗಳ ದಿಗ್ದರ್ಶನ, ಪಾಪಗಳ ಸರ್ವೋತ್ತಮ ಪ್ರಾಯಶ್ಚಿತ್ತವು ಶಿವಸ್ಮರಣೆ ಹಾಗೂ ಜ್ಞಾನದ ಮಹತ್ವದ ಪ್ರತಿಪಾದನೆ	465
189	ಮೃತ್ಯುಕಾಲವು ಸಮೀಪಿಸಿದಾಗ ಉಂಟಾಗುವ ಲಕ್ಷಣಗಳ ವರ್ಣನೆ	468
190	ಕಾಲವನ್ನು ಗೆಲ್ಲುವ ಉಪಾಯ, ನವಧಾ ಶಬ್ದಬ್ರಹ್ಮ ಹಾಗೂ ತುಂಕಾರದ ಅನುಸಂಧಾನ, ಅದರಿಂದ ದೊರೆಯುವ ಸಿದ್ಧಿಗಳ ವರ್ಣನೆ	469
191	ಕಾಲ ಅಥವಾ ಮೃತ್ಯುವನ್ನು ಗೆದ್ದು ಅಮರತ್ವವನ್ನು ಪಡೆಯುವ ನಾಲ್ಕು . ಯೌಗಿಕ ಸಾಧನೆಗಳು – ಪ್ರಾಣಾಯಾಮ, ಭ್ರೂಮಧ್ಯದಲ್ಲಿ ಅಗ್ನಿಯಧ್ಯಾನ, ಬಾಯಿಯಿಂದ ವಾಯುಪಾನ ಹಾಗೂ ಮಡಚಿದ ನಾಲಿಗೆಯಿಂದ ಗಂಟಲಿನ ಗಂಟೆಯನ್ನು ಸ್ಪರ್ಶಿಸುವುದು	471
192	ಭಗವತಿ ಉಮೆಯ ಕಾಲಿಕಾ ಅವತಾರದ ಕಥೆ, ದೇವಿಯ ಕೃಪೆಯಿಂದ ಮಧುಕೈಟಭರ ವಧೆಯ ಪ್ರಸಂಗ	473

	ವಿಷಯ	ಪುಟ ಸಂಖ್ಯೆ
193	ಸಮಸ್ತ ದೇವತೆಗಳ ತೇಜದಿಂದ ದೇವಿಯ ಮಹಾಲಕ್ಷ್ಮಿಯ ರೂಪದಲ್ಲಿ ಅವತಾರ ಮತ್ತು ಆಕೆಯಿಂದ ಮಹಿಷಾಸುರನ ವಧೆ	476
194	ದೇವೀ ಉಮೆಯ ಶರೀರದಿಂದ ಸರಸ್ವತಿಯ ಆವಿರ್ಭಾವ, ಆಕೆಯ ರೂಪದ ಪ್ರಶಂಸೆಯನ್ನು ಕೇಳಿ ಶುಂಭನು ಆಕೆಯ ಬಳಿಗೆ ದೂತನನ್ನು ಅಟ್ಟುವುದು, ದೂತನು ನಿರಾಶನಾಗಿ ಮರಳಿದಾಗ ಶುಂಭನು ಕ್ರಮವಾಗಿ ಧೂಮ್ರಲೋಚನ ಚಂಡ-ಮುಂಡ, ರಕ್ತಬೀಜರನ್ನು ಕಳಿಸುವುದು, ದೇವಿಯಿಂದ ಅವರೆಲ್ಲರ ಸಂಹಾರ	478
195	ದೇವಿಯಿಂದ ಸೈನ್ಯ ಮತ್ತು ಸೇನಾಪತಿಗಳಸಹಿತ ನಿಶುಂಭ ಹಾಗೂ ಶುಂಭನ ಸಂಹಾರ	481
196	ದೇವತೆಗಳ ಗರ್ವವನ್ನು ದೂರಾಗಿಸಲು ತೇಜಃ ಪುಂಜರೂಪಿಣಿ ಉಮೆಯ ಪ್ರಾದುರ್ಭಾವ	483
197	ದೇವಿಯಿಂದ ದುರ್ಗಮಾಸುರನವಧೆ, ಆಕೆಗೆ ದುರ್ಗಾ, ಶತಾಕ್ಷಿ, ಶಾಕಂಭರೀ ಮತ್ತು ಭ್ರಾಮರಿ ಮುಂತಾದ ಹೆಸರುಗಳು ಉಂಟಾಗಲು ಕಾರಣ	485
198	ದೇವಿಯ ಕ್ರಿಯಾಯೋಗದ ವರ್ಣನೆ - ದೇವಿಯ ಮೂರ್ತಿ ಹಾಗೂ ಮಂದಿರದ ನಿರ್ಮಾಣ, ಸ್ಥಾಪನೆ, ಪೂಜೆಯ ಮಹತ್ವ, ಪರಾಂಬಿಕೆಯ ಶ್ರೇಷ್ಠತೆ, ಬೇರೆ-ಬೇರೆ ತಿಂಗಳಲ್ಲಿ ಮತ್ತು ತಿಥಿಗಳಲ್ಲಿ ದೇವಿಯ ವ್ರತ, ಉತ್ಸವ, ಪೂಜಾದಿಗಳ ಫಲ ಹಾಗೂ ಈ ಸಂಹಿತೆಯ ಶ್ರವಣ - ಪಾರಾಯಣೆಯ ಮಹಿಮೆ	488
	ಕೈಲಾಸ ಸಂಹಿತೆ	
199	ಋಷಿಗಳು ಸೂತರಲ್ಲಿ ಹಾಗೂ ವಾಮದೇವರು ಸ್ಕಂಧನಲ್ಲಿ ಪ್ರಶ್ನಿಸಿದುದು, ಪ್ರಣವಾರ್ಥ ನಿರೂಪಣೆಗಾಗಿ ಪ್ರಾರ್ಥಿಸಿದುದು	492
200	ಪ್ರಣವದ ವಾಚ್ಯಾರ್ಥರೂಪೀ ಸದಾಶಿವನ ಸ್ವರೂಪದ ಧ್ಯಾನ, ವರ್ಣಾಶ್ರಮ ಪಾಲನೆಯ ಮಹತ್ವ, ಜ್ಞಾನಮಯ ಪೂಜೆ, ಸಂನ್ಯಾಸದ ಪೂರ್ವಾಂಗ ಭೂತ ಸಾಂದೀಶ್ರಾದ್ಧ ಹಾಗೂ ಬ್ರಹ್ಮಯಜ್ಞ ಇವುಗಳ ವರ್ಣನೆ	495
201	ಸಂನ್ಯಾಸಗ್ರಹಣದ ಶಾಸ್ತ್ರೀಯವಿಧಿ - ಗಣಪತಿ ಪೂಜೆ, ಹೋಮ, ತತ್ತ್ವ-ಶುದ್ಧಿ ಸಾವಿತ್ರೀ-ಪ್ರವೇಶ, ಸರ್ವಸಂನ್ಯಾಸ ಮತ್ತು ದಂಡ-ಧಾರಣ ಮುಂತಾದವುಗಳ ಪ್ರಕಾರಗಳು	500
202	ಪ್ರಣವದ ಅರ್ಥಗಳ ವಿವೇಚನೆ	506
203	ಶೈವ ದರ್ಶನಕ್ಕನುಸಾರ ಶಿವತತ್ತ್ವ, ಜಗತ್ - ಪ್ರಪಂಚ ಮತ್ತು ಜೀವತತ್ತ್ವದ ವಿಷಯದಲ್ಲಿ ವಿಶದ ವಿವೇಚನೆ, ಶಿವನಿಂದ ಜೀವ ಹಾಗೂ ಜಗತ್ತಿನ ಅಭಿನ್ನತೆಯ ಪ್ರತಿಪಾದನೆ	508
204	ಮಹಾವಾಕ್ಯಗಳ ಅರ್ಥದ ಕುರಿತು ವಿಚಾರ ಹಾಗೂ ಸಂನ್ಯಾಸಿಗಳ ಯೋಗಪಟ್ಟದ ಪ್ರಕಾರ	513
205	ಯತಿಯ ಅಂತ್ಯೇಷ್ಟಿ ಕರ್ಮದ ದಶಾಹವರೆಗಿನ ವಿಧಿಯ ವರ್ಣನೆ	517
206	ಯತಿಯ ಏಕಾದಶಾಹ ವಿಧಿಯ ವರ್ಣನೆ	519
207	ಯತಿಯ ದ್ವಾದಶಾಹ - ಕೃತ್ಯದ ವರ್ಣನೆ, ಸ್ಕಂದ ಮತ್ತು ವಾಮದೇವರು ಕೈಲಾಸ ಪರ್ವತಕ್ಕೆ ಹೋಗುವುದು ಹಾಗೂ ಸೂತರಿಂದ ಈ ಸಂಹಿತೆಯ ಉಪಸಂಹಾರ	522
	ವಾಯವೀಯ ಸಂಹಿತಾ (ಪೂರ್ವಖಂಡ)	
208	ಪ್ರಯಾಗದಲ್ಲಿ ಋಷಿಗಳಿಂದ ಸಮ್ಮಾನಿತರಾದ ಸೂತಪುರಾಣಿಕರಿಂದ ಕಥೆಯ ಆರಂಭ, ವಿದ್ಯಾಸ್ಥಾನಗಳ ಹಾಗೂ ಪುರಾಣಗಳ ಪರಿಚಯ, ವಾಯುಸಂಹಿತೆಯ ಪ್ರಾರಂಭ	524
209	ಋಷಿಗಳು ಬ್ರಹ್ಮದೇವರ ಬಳಿಗೆ ಹೋಗಿ ಅವರನ್ನು ಸ್ತುತಿಸಿ, ಅವರಲ್ಲಿ ಪರಮ ಪುರುಷನ ವಿಷಯದಲ್ಲಿ ಪ್ರಶ್ನಿಸುವುದು ಮತ್ತು ಬ್ರಹ್ಮದೇವರು ಆನಂದಮಗ್ನರಾಗಿ 'ರುದ್ರ' ಎಂದು ಹೇಳಿ ಉತ್ತರಿಸುವುದು	526
210	ಬ್ರಹ್ಮದೇವರು ಪರಮ ತತ್ತ್ವದ ನಿರೂಪಣೆಯಲ್ಲಿ ಭಗವಾನ್ ಶಿವನ ಮಹಿಮೆಯನ್ನು ಪ್ರತಿಪಾದಿಸುವುದು, ಅವನ ಕೃಪೆಯನ್ನೇ ಎಲ್ಲ ಸಾಧನೆಗಳ ಫಲವೆಂದು ಹೇಳುವುದು ಹಾಗೂ ಅವರ ಆಜ್ಞೆಯಂತೆ ಮುನಿಗಳೆಲ್ಲರು ನೈಮಿಷಾರಣ್ಯಕ್ಕೆ ಹೋಗುವುದು	528
211	ನೈಮಿಷಾರಣ್ಯದಲ್ಲಿ ದೀರ್ಘಸತ್ರದ ಅಂತ್ಯದಲ್ಲಿ ಮುನಿಗಳ ಬಳಿಗೆ ವಾಯುದೇವತೆಯ ಆಗಮನ, ಅವರ ಸತ್ಕಾರ ಹಾಗೂ ಋಷಿಗಳು ಕೇಳಿದಾಗ ವಾಯುದೇವರು ಪಶು, ಪಾಶ ಮತ್ತು ಪಶುಪತಿಯ ತಾತ್ತ್ವಿಕ ವಿವೇಚನೆ ಮಾಡಿದುದು	531
212	ಮಹೇಶ್ವರನ ಮಹಿಮೆಯ ಪ್ರತಿಪಾದನೆ	534
213	ಬ್ರಹ್ಮದೇವರ ಮೂರ್ಛೆ, ಅವರ ಮುಖದಿಂದ ರುದ್ರದೇವರ ಪ್ರಾಕಟ್ಯ, ಎಚ್ಚರಗೊಂಡ ಬ್ರಹ್ಮದೇವರಿಂದ ಎಂಟು ನಾಮಗಳಿಂದ ಮಹೇಶ್ವರನ ಸ್ತುತಿ ಹಾಗೂ ರುದ್ರನ ಆಜ್ಞೆಯಂತೆ ಬ್ರಹ್ಮದೇವರಿಂದ ಸೃಷ್ಟಿಯ ರಚನೆ	537
214	ಭಗವಾನ್ ರುದ್ರನು ಬ್ರಹ್ಮದೇವರ ಮುಖದಿಂದ ಪ್ರಕಟವಾದ ರಹಸ್ಯ, ರುದ್ರನ ಮಹಾಮಹಿಮ ಸ್ವರೂಪದ ವರ್ಣನೆ, ಅವನಿಂದ ರುದ್ರಗಣರ ಸೃಷ್ಟಿ ಹಾಗೂ ಬ್ರಹ್ಮದೇವರು ತಡೆದಾಗ ಸೃಷ್ಟಿಯಿಂದ ನಿವೃತ್ತನಾಗುವುದು	540
215	ಬ್ರಹ್ಮದೇವರು ಮಾಡಿದ ಅರ್ಧನಾರೀಶ್ವರ ರೂಪದ ಸ್ತೋತ್ರ ಹಾಗೂ ಆ ಸ್ತೋತ್ರದ ಮಹಿಮೆ	542
216	ಮಹಾದೇವನ ಶರೀರದಿಂದ ದೇವಿಯ ಪ್ರಾಕಟ್ಯ ಮತ್ತು ದೇವಿಯ ಭ್ರೂಮಧ್ಯದಿಂದ ಶಕ್ತಿಯ ಪ್ರಾದುರ್ಭಾವ	544

॥ ಓಂ. ನಮಃ ಶಿವಾಯ ॥

ಶ್ರೀಶಿವಮಾನಸ ಪೂಜಾ

ರತ್ನೈಃ ಕಲ್ಪಿತಮಾಸನಂ ಹಿಮಜಲೈಃ ಸ್ನಾನಂ ಚ ದಿವ್ಯಾಂಬರಂ
ನಾನಾ ರತ್ನ ವಿಭೂಷಿತಂ ಮೃಗಮದಾ ಮೋದಾಂಕಿತಂ ಚಂದನಮ್ ।
ಜಾತೀ ಚಂಪಕ ಬಿಲ್ವಪತ್ರರಚಿತಂ ಪುಷ್ಪಂ ಚ ಧೂಪಂ ತಥಾ
ದೀಪಂ ದೇವ ದಯಾನಿಧೇ ಪಶುಪತೇ ಹೃತ್ಕಲ್ಪಿತಂ ಗೃಹ್ಯತಾಮ್ ॥

ಎಲೈ ದಯಾಸಾಗರ, ದೇವಾ, ಪಶುಪತೇ ! ನಾನು ಮನಸ್ಸಿನಿಂದ ನಿನಗೆ ಕುಳಿತುಕೊಳ್ಳಲು ರತ್ನಜಡಿತ ಸಿಂಹಾಸನವನ್ನು , ಸ್ನಾನಕ್ಕಾಗಿ ತಣ್ಣಗಿನ ನೀರನ್ನು , ಉಡಲು ದಿವ್ಯ ವಸ್ತ್ರಗಳನ್ನು , ಅನೇಕ ರತ್ನಜಡಿತ ಒಡವೆಗಳನ್ನು, ಕಸ್ತುರೀ ಸುಗಂಧವುಳ್ಳ ಚಂದನವನ್ನು, ಜಾಜಿ, ಸಂಪಿಗೆ, ಬಿಲ್ವಪತ್ರೆ ಮುಂತಾದ ಹೂವುಗಳನ್ನು, ಧೂಪ ಮತ್ತು ದೀಪಗಳನ್ನು ಸಿದ್ಧಪಡಿಸಿರುವೆನು. ನೀನು ಇವನ್ನು ಸ್ವೀಕರಿಸಬೇಕು. ॥1॥

ಸೌವರ್ಣೇ ನವರತ್ನ ಖಂಡರಚಿತೇ ಪಾತ್ರೇ ಘೃತಂ ಪಾಯಸಂ
ಭಕ್ಷ್ಯಂ ಪಂಚವಿಧಂ ಪಯೋದಧಿಯುತಂ ರಂಭಾಫಲಂ ಪಾನಕಮ್ ।
ಶಾಕಾನಾಮಯುತಂ ಜಲಂ ರುಚಿಕರಂ ಕರ್ಪೂರ ಖಂಡೋಜ್ವಲಂ
ತಾಂಬೂಲಂ ಮನಸಾ ಮಯಾ ವಿರಚಿತಂ ಭಕ್ತ್ಯಾ ಪ್ರಭೋ ಸ್ವೀಕುರು ॥

ಹೊಳೆಯುವ ರತ್ನಗಳನ್ನು ಕೋದ ಸುವರ್ಣಪಾತ್ರೆಯಲ್ಲಿ ತುಪ್ಪ ಪಾಯಸ, ಪಂಚ-ಪಕ್ವಾನ್ನಗಳು, ಹಾಲು, ಮೊಸರು, ಬಾಳೆಹಣ್ಣು ಪಾನಕ, ಅನೇಕ ಪಲ್ಯಗಳು, ರುಚಿಕರವಾದ ನೀರು, ಕರ್ಪೂರ ಮಿಶ್ರಿತ ತಾಂಬೂಲ ಇವೆಲ್ಲವನ್ನೂ ನಾನು ಮನಸ್ಸಿನಿಂದ ಭಕ್ತಿಯಿಂದ ಸಿದ್ಧಪಡಿಸಿರುವೆನು. ಪ್ರಭೋ ! ಇವನ್ನು ಸ್ವೀಕರಿಸಬೇಕು. ॥2॥

ಛತ್ರಂ ಚಾಮರಯೋರ್ಯುಗಂ ವ್ಯಜನಕಂ ಚಾದರ್ಶಕಂ ನಿರ್ಮಲಂ
ವೀಣಾಭೇರಿ ಮೃದಂಗ ಕಾಹಲಕಲಾ ಗೀತಂ ಚ ನೃತ್ಯಂ ತಥಾ ।
ಸಾಷ್ಟಾಂಗಂ ಪ್ರಣತಿಃ ಸ್ತುತಿರ್ಬಹುವಿಧಾ ಏತತ್ಸಮಸ್ತಂ ಮಯಾ
ಸಂಕಲ್ಪೇನ ಸಮರ್ಪಿತಂ ತವ ವಿಭೋ ಪೂಜಾಂ ಗೃಹಾಣ ಪ್ರಭೋ ॥

ಎಲೈ ಸರ್ವವ್ಯಾಪಕ ಪ್ರಭುವೇ ! ಛತ್ರ, ಚಾಮರ, ಬೀಸಣಿಗೆ, ನಿರ್ಮಲವಾದ ಕನ್ನಡಿ, ವೀಣೆ, ನಗಾರಿ, ಮೃದಂಗ, ತಾಳ ಮುಂತಾದ ವಾದ್ಯಗಳು, ಸಂಗೀತ, ನೃತ್ಯ, ಸಾಷ್ಟಾಂಗನಮಸ್ಕಾರ ಹಾಗೂ ಅನೇಕ ವಿಧದ ಸ್ತುತಿಗಳು ಇವೆಲ್ಲವನ್ನು ನಾನು ಸಂಕಲ್ಪದಿಂದ ನಿನಗೆ ಅರ್ಪಿಸಿರುವೆನು. ಇವೆಲ್ಲವನ್ನು ನೀನು ಸ್ವೀಕರಿಸಬೇಕು. ॥3॥

ಆತ್ಮಾ ತ್ವಂ ಗಿರಿಜಾಮತಿಃ ಸಹಚರಾಃ ಪ್ರಾಣಾಃ ಶರೀರಂ ಗೃಹಂ
ಪೂಜಾತೇ ವಿಷಯೋಪಭೋಗರಚನಾ ನಿದ್ರಾ ಸಮಾಧಿಸ್ಥಿತಿಃ।
ಸಂಚಾರಃ ಪದಯೋಃ ಪ್ರದಕ್ಷಿಣವಿಧಿಃ ಸ್ತೋತ್ರಾಣಿ ಸರ್ವಾಗಿರೋ
ಯದ್ಯತ್ಕರ್ಮ ಕರೋಮಿ ತತ್ತದಖಿಲಂ ಶಂಭೋ ತವಾರಾಧನಮ್ ॥

ಎಲೈ ಶಂಭೋ ! ನೀನೇ ನನ್ನ ಆತ್ಮಾ ಆಗಿರುವೆ, ಪಾರ್ವತಿಯು ಬುದ್ಧಿಯಾಗಿದೆ, ಪ್ರಾಣಗಳೇ ಮಿತ್ರರಾಗಿವೆ, ಶರೀರವೇ ಮನೆಯಾಗಿದೆ. ವಿಷಯಗಳ ಉಪಭೋಗವೇ ನಿನ್ನ ಪೂಜೆಯು. ನಿದ್ದೆಯೇ ಸಮಾಧಿಯಾಗಿದೆ. ನಡೆಯುವುದೇ ನಿನ್ನ ಪ್ರದಕ್ಷಿಣೆ, ನುಡಿಯುವ ಮಾತುಗಳೇ ನಿನ್ನ ಸ್ತೋತ್ರಗಳು. ನಾನು ಮಾಡುವ ಎಲ್ಲ ಕರ್ಮಗಳು ನಿನ್ನದೇ ಆರಾಧನೆಯಾಗಿದೆ. ॥4॥

ಕರಚರಣಕೃತಂ ವಾಕ್ಕಾಯಜಂ ಕರ್ಮಜಂ ವಾ
ಶ್ರವಣನಯನಜಂ ವಾ ಮಾನಸಂ ವಾಪರಾಧಮ್ ।
ವಿಹಿತಮವಿಹಿತಂ ವಾ ಸರ್ವಮೇತತ್ ಕ್ಷಮಸ್ವ
ಜಯ ಜಯ ಕರುಣಾಬ್ಧೇ ಶ್ರೀಮಹಾದೇವ ಶಂಭೋ ॥

ಎಲೈ ಮಹಾದೇವಾ ! ಕರುಣಾಸಾಗರ, ಶಂಭೋ ! ನಿನಗೆ ಜಯ ಜಯ ಕಾರವಿರಲಿ. ಕೈ, ಕಾಲು ಪಾಣೀ, ಶರೀರ, ಕಿವಿ, ಕಣ್ಣು ಇತ್ಯಾದಿ ನನ್ನ ಇಂದ್ರಿಯಗಳಿಂದ ಅಥವಾ ಮನಸ್ಸಿನಿಂದ. ಉಚಿತವಾಗಿ ಇಲ್ಲವೇ ಅನುಚಿತವಾಗಿ ನಡೆದ ಕರ್ಮಗಳಿಂದ ಉಂಟಾದ ಅಪರಾಧಗಳಿಂದ ನನ್ನನ್ನು ಕ್ಷಮಿಸಬೇಕು. ॥5॥

॥ ಇತಿ ಶ್ರೀ ಮಚ್ಛಂಕರಾಚಾರ್ಯವಿರಚಿತಾ ಶಿವಮಾನಸಪೂಜಾ ಸಮಾಪ್ತಾ ॥

❐ ❐

॥ ದ್ವಾದಶ ಜ್ಯೋತಿರ್ಲಿಂಗ ಸ್ತೋತ್ರಮ್ ॥

ಸೌರಾಷ್ಟ್ರೇ ಸೋಮನಥಂ ಚ ಶ್ರೀಶೈಲೇ ಮಲ್ಲಿಕಾರ್ಜುನಮ್ ।
ಉಜ್ಜಯಿನ್ಯಾಂ ಮಹಾಕಾಲಮೋಂಕಾರಮಮಲೇಶ್ವರಮ್ ॥1॥

ಪರಲ್ಯಾಂ ವೈದ್ಯನಾಥಂ ಚ ಡಾಕಿನ್ಯಾಂ ಭೀಮಶಂಕರಮ್ ।
ಸೇತುಬಂಧೇ ತು ರಾಮೇಶಂ ನಾಗೇಶಂ ದಾರುಕಾವನೇ ॥2॥

ವಾರಾಣಸ್ಯಾಂ ತು ವಿಶ್ವೇಶಂ ತ್ರ್ಯಂಬಕಂ ಗೌತಮೀ ತಟೇ ।
ಹಿಮಾಲಯೇ ತು ಕೇದಾರಂ ಘುಶ್ಮೇಶಂ ಚ ಶಿವಾಲಯೇ ॥3॥

ಏತಾನಿ ಜ್ಯೋತಿರ್ಲಿಂಗಾನಿ ಸಾಯಂ ಪ್ರಾತಃ ಪಠೇನ್ನರಃ ।
ಸಪ್ತಜನ್ಮ ಕೃತಂ ಪಾಪಂ ಸ್ಮರಣೇನ ವಿನಶ್ಯತಿ ॥4॥

भगवान् शिव ध्यानस्थ

Lord Śiva in Meditating Posture

श्रीशिव-पार्वती

Śiva and Pārvatī



तपस्विनी सतीके सामने शिवका प्राकट्य

Śiva Manifests before Penancing Satī

पार्वती और सप्तर्षि

Pārvatī and the Seven Seers



शिवकी विकट बारात

The Hideous Marriage-Procession of Śiva

भगवान् गणेशजी

Lord Gaṇeśa

भगवान् स्कन्द

Lord Skanda

पार्वतीकी काली त्वचाके आवरणसे कौशिकीका प्राकट्य

Kauśikī Emanates from Black Hides of Pārvatī

॥ ಓಂ ಶ್ರೀಪರಮಾತ್ಮನೇ ನಮಃ ॥ ಶ್ರೀ ಗಣೇಶಾಯನಮಃ॥

ಶ್ರೀಶಿವಪುರಾಣ

ಮಾಹಾತ್ಮ್ಯ

ಭವಾಬ್ದಿಮಗ್ನಂ ದೀನಂ ಮಾಂ ಸಮುದ್ಧರ ಭವಾರ್ಣವಾತ್ । ಕರ್ಮಗ್ರಾಹ ಗೃಹೀತಾಂಗಂ ದಾಸೋಽಹಂ ತವ ಶಂಕರ ॥

ಶೌನಕರು ಪ್ರಶ್ನಿಸಿದಾಗ ಸೂತಪುರಾಣಿಕರು ಶಿವಪುರಾಣದ ಅತ್ಯುತ್ತಮ ಮಹಿಮೆಯನ್ನು ಹೇಳಿದುದು

ಶೌನಕರು ಕೇಳಿದರು – ಮಹಾಜ್ಞಾನಿಗಳಾದ ಸೂತಪುರಾಣಿಕರೇ! ತಾವು ಸಮಸ್ತ ಸಿದ್ಧಾಂತಗಳ ತತ್ತ್ವಜ್ಞರಾಗಿರುವಿರಿ. ಸ್ವಾಮಿ! ನನಗೆ ಪುರಾಣ ಕಥೆಗಳ ಸಾರತತ್ತ್ವಗಳನ್ನು ವಿಶೇಷವಾಗಿ ವರ್ಣಿಸಿರಿ. ಜ್ಞಾನ-ವೈರಾಗ್ಯದೊಂದಿಗೆ ಭಕ್ತಿಯಿಂದ ಪ್ರಾಪ್ತವಾಗುವ ವಿವೇಕದ ವೃದ್ಧಿ ಹೇಗಾಗಬಹುದು? ಸಾಧು- ಸತ್ಪುರುಷರು ಯಾವ ವಿಧದಿಂದ ತಮ್ಮ ಕಾಮ- ಕ್ರೋಧಾದಿ ಮಾನಸಿಕ ವಿಕಾರಗಳನ್ನು ಹೇಗೆ ನಿವಾರಿಸಿಕೊಳ್ಳುವರು? ಈ ಘೋರ ಕಲಿಕಾಲದಲ್ಲಿ ಜೀವರು ಪ್ರಾಯಶಃ ಆಸುರ ಸ್ವಭಾವದವರಾಗಿದ್ದಾರೆ. ಈ ಜೀವ ಸಮುದಾಯವನ್ನು ಶುದ್ಧ(ದೈವೀ ಸಂಪತ್ತಿನಿಂದ ಕೂಡಿದ)ವಾಗಿಸಲು ಸರ್ವಶ್ರೇಷ್ಠವಾದ ಉಪಾಯವು ಯಾವುದಿದೆ? ಕಲ್ಯಾಣಕಾರೀ ವಸ್ತುಗಳಲ್ಲಿಯೂ ಎಲ್ಲಕ್ಕಿಂತ ಉತ್ಕೃಷ್ಟವಾದ ಹಾಗೂ ಪರಮ ಮಂಗಲಕರವಾದ ಮತ್ತು ಪವಿತ್ರಗೊಳಿಸುವುದರಲ್ಲಿ ಸರ್ವೋತ್ತಮ ಪವಿತ್ರವಾದ ಶಾಶ್ವತ ಸಾಧನೆಯನ್ನು ಈಗ ನನಗೆ ತಿಳಿಸಿರಿ. ಪೂಜ್ಯರೇ! ಆ ಸಾಧನೆಯ ಅನುಷ್ಠಾನದಿಂದ ಶೀಘ್ರವೇ ಅಂತಃಕರಣವು ವಿಶೇಷ ಶುದ್ಧವಾಗಿ, ಅಂತಹ ನಿರ್ಮಲ ಚಿತ್ತವುಳ್ಳ ಪುರುಷನಿಗೆ ಎಂದೆಂದಿಗೂ ಶಿವನ ಪ್ರಾಪ್ತಿಯಾಗುವಂತಹ ಉಪಾಯವನ್ನು ತಿಳಿಸಬೇಕು.

ಶ್ರೀಸೂತಪುರಾಣಿಕರು ಹೇಳುತ್ತಾರೆ – ಮುನಿ ಶ್ರೇಷ್ಠನಾದ ಶೌನಕನೇ! ನೀನು ಧನ್ಯನಾಗಿರುವೆ. ನಿನ್ನ ಹೃದಯದಲ್ಲಿ ಪುರಾಣಕಥೆಗಳನ್ನು ಕೇಳುವ ವಿಶೇಷ ಪ್ರೇಮ ಹಾಗೂ ಬಯಕೆ ಇದೆ. ಅದಕ್ಕಾಗಿ ಶುದ್ಧ ಬುದ್ಧಿಯಿಂದ ವಿಚಾರಮಾಡಿ ನಾನು ನಿನಗೆ ಉತ್ತಮ ಶಾಸ್ತ್ರವನ್ನು ವರ್ಣಿಸುವೆನು. ವತ್ಸ! ಅದು ಸಮಸ್ತ ಶಾಸ್ತ್ರಗಳ ಸಿದ್ಧಾಂತಗಳಿಂದ ಸಂಪನ್ನವೂ, ಭಕ್ತಾದಿಗಳನ್ನು ಹೆಚ್ಚಿಸುವುದು ಮತ್ತು ಭಗವಾನ್ ಶಿವನನ್ನು ಸಂತುಷ್ಟಗೊಳಿಸುವಂತಹುದು. ಕರ್ಣಗಳಿಗೆ ರಸಾಯನ ವಾಗಿದ್ದು, ಅಮೃತಸ್ವರೂಪ ಹಾಗೂ ದಿವ್ಯವಾಗಿದೆ. ಅದನ್ನು ನೀನು ಶ್ರವಣಿಸು. ಮುನಿಯೇ! ಅದು ಪರಮೋತ್ತಮ ಶಿವಪುರಾಣ ಶಾಸ್ತ್ರವಾಗಿದೆ. ಇದನ್ನು ಹಿಂದೆ ಭಗವಾನ್ ಶಿವನೇ ಪ್ರವಚನ ಮಾಡಿದ್ದನು. ಇದು ಕಾಲರೂಪೀ ಸರ್ಪದಿಂದ ಉಂಟಾಗುವ ಕಷ್ಟಗಳನ್ನು ವಿನಾಶಮಾಡುವ ಉತ್ತಮ ಸಾಧನೆಯಾಗಿದೆ. ಗುರುಗಳಾದ ವ್ಯಾಸರು, ಸನತ್ಕುಮಾರ ಮುನಿಗಳ ಉಪದೇಶವನ್ನು ಪಡೆದು, ಅತ್ಯಂತ ಆದರದಿಂದ ಸಂಕ್ಷೇಪವಾಗಿ ಈ ಪುರಾಣವನ್ನು ಪ್ರತಿಪಾದಿಸಿದರು. ಈ ಪುರಾಣದ ರಚನೆಯ ಉದ್ದೇಶವು – ಕಲಿಯುಗದಲ್ಲಿ ಉತ್ಪನ್ನವಾಗುವ ಮನುಷ್ಯರ ಪರಮ ಹಿತವಾಗುವುದೇ ಆಗಿದೆ.

ಈ ಶಿವಪುರಾಣವು ಪರಮೋತ್ತಮ ಶಾಸ್ತ್ರವಾಗಿದೆ. ಇದನ್ನು ಈ ಭೂಲೋಕದಲ್ಲಿ ಭಗವಾನ್ ಶಿವನ ವಾಙ್ಮಯಸ್ವರೂಪವೆಂದು ತಿಳಿಯಬೇಕು ಮತ್ತು ಎಲ್ಲ ವಿಧದಿಂದಲೂ ಇದನ್ನು ಸೇವಿಸಬೇಕು. ಇದರ ಪಾರಾಯಣೆ ಹಾಗೂ ಶ್ರವಣವು ಸರ್ವಸಾಧನ ರೂಪವಾಗಿದೆ. ಇದರಿಂದ ಶಿವಭಕ್ತಿಯನ್ನು ಪಡೆದು ಶ್ರೇಷ್ಠತಮ ಸ್ಥಿತಿಗಡರಿದ ಮನುಷ್ಯನು ಬಹುಬೇಗನೇ ಶಿವಪದವನ್ನು ಪಡೆದುಕೊಳ್ಳುವನು. ಅದಕ್ಕಾಗಿ ಸರ್ವಪ್ರಯತ್ನಮಾಡಿ ಮನುಷ್ಯರು ಈ ಪುರಾಣವನ್ನು ಓದಲು ಇಚ್ಛಿಸಿರುವರು; ಅಥವಾ ಇದರ ಅಧ್ಯಯನವನ್ನು ಅಭೀಷ್ಟ ಸಾಧನೆಯೆಂದು ತಿಳಿದಿರುವರು. ಇದೇ ರೀತಿಯಾಗಿ ಪ್ರೇಮಪೂರ್ವಕ ಇದರ ಶ್ರವಣವೂ ಸಮಸ್ತ ಮನೋವಾಂಛಿತ ಫಲಗಳನ್ನು ಕೊಡುವಂತಹುದು. ಭಗವಾನ್ ಶಿವನ ಈ ಪುರಾಣವನ್ನು ಕೇಳುವುದರಿಂದ ಮನುಷ್ಯನು ಎಲ್ಲ ಪಾಪಗಳಿಂದ ಮುಕ್ತನಾಗುತ್ತಾನೆ. ಇದೇ ಜೀವನದಲ್ಲಿ ಉತ್ತಮೋತ್ತಮವಾದ ಭೋಗಗಳನ್ನು ಅನುಭವಿಸಿ, ಕೊನೆಗೆ ಶಿವಲೋಕವನ್ನು ಪಡೆದುಕೊಳ್ಳುವನು.

ಈ ಶಿವಪುರಾಣವೆಂಬ ಗ್ರಂಥವು ಇಪ್ಪತ್ತನಾಲ್ಕು ಸಾವಿರ ಶ್ಲೋಕಗಳಿಂದ ಕೂಡಿದೆ. ಇದರ ಏಳು ಸಂಹಿತೆಗಳಿವೆ.

ಮನುಷ್ಯನು ಭಕ್ತಿ-ಜ್ಞಾನ- ವೈರಾಗ್ಯಗಳಿಂದ ಸಂಪನ್ನನಾಗಿ, ಬಹಳ ಆದರದಿಂದ ಇದನ್ನು ಶ್ರವಣಿಸಬೇಕು. ಏಳು ಸಂಹಿತೆಗಳಿಂದ ಕೂಡಿದ ಈ ದಿವ್ಯ ಶಿವಪುರಾಣವು ಪರಬ್ರಹ್ಮ ಪರಮಾತ್ಮನಿಗೆ ಸಮಾನವಾಗಿ ವಿರಾಜಿಸುತ್ತಿದ್ದು, ಎಲ್ಲಕ್ಕಿಂತ ಉತ್ಕೃಷ್ಟ ಗತಿಯನ್ನು ಕರುಣಿಸುವಂತಹುದಾಗಿದೆ.

ಈ ಶಿವಪುರಾಣವನ್ನು ನಿರಂತರವಾಗಿ ಅನುಸಂಧಾನ ಪೂರ್ವಕವಾಗಿ ಓದುವವನು, ಅಥವಾ ಪ್ರತಿದಿನವೂ ಪ್ರೇಮಪೂರ್ವಕವಾಗಿ ಇದನ್ನು ಕೇವಲ ಪಾರಾಯಣ ಮಾಡಿದವನು ಪುಣ್ಯಾತ್ಮನಾಗಿರುವುದರಲ್ಲಿ ಸಂದೇಹವೇ ಇಲ್ಲ. ಉತ್ತಮ ಬುದ್ಧಿಯುಳ್ಳವನು ಅಂತ್ಯಕಾಲದಲ್ಲಿ ಈ ಪುರಾಣವನ್ನು ಭಕ್ತಿಯಿಂದ ಕೇಳುವವನಿಗೆ ಭಗವಾನ್ ಶಿವನು ಅತ್ಯಂತ ಪ್ರಸನ್ನನಾಗಿ ತನ್ನ ಪದ(ಧಾಮ)ವನ್ನು ಕರುಣಿಸುವನು. ಪ್ರತಿದಿನವೂ ಆದರದಿಂದ ಈ ಶಿವಪುರಾಣವನ್ನು ಪೂಜಿಸುವವನು ಈ ಜಗತ್ತಿನಲ್ಲಿ ಸಮಸ್ತ ಭೋಗಗಳನ್ನು ಅನುಭವಿಸಿ, ಕೊನೆಗೆ ಭಗವಾನ್ ಶಿವನ ಪರಮಪದವನ್ನು ಹೊಂದುವನು. ದಿನನಿತ್ಯವೂ ಆಲಸ್ಯರಹಿತನಾಗಿ ಈ ಶಿವಪುರಾಣವನ್ನು ರೇಷ್ಮೆವಸ್ತ್ರದಲ್ಲಿ ಸುತ್ತಿ ಸತ್ಕರಿಸುವವನು ಸದಾಕಾಲ ಸುಖಿಯಾಗುವನು. ಈ ಶಿವಪುರಾಣವು ನಿರ್ಮಲ ಮತ್ತು ಭಗವಾನ್ ಶಿವನ ಸರ್ವಸ್ವವಾಗಿದೆ. ಇಹಲೋಕದಲ್ಲಿ ಮತ್ತು ಪರಲೋಕದಲ್ಲಿ ಸುಖವನ್ನು ಬಯಸುವವನು ಆದರದಿಂದ ಪ್ರಯತ್ನ ಪೂರ್ವಕವಾಗಿ ಇದನ್ನು ಸೇವಿಸಬೇಕು. ನಿರ್ಮಲವೂ, ಉತ್ತಮವೂ ಆದ ಈ ಶಿವಪುರಾಣವು ಧರ್ಮ, ಅರ್ಥ, ಕಾಮ, ಮೋಕ್ಷವೆಂಬ ನಾಲ್ಕು ಪುರುಷಾರ್ಥಗಳನ್ನು ಕೊಡುವಂತಹುದು. ಆದ್ದರಿಂದ ಸದಾಕಾಲ ಪ್ರೇಮದಿಂದ ಇದನ್ನು ಶ್ರವಣಿಸಿ, ವಿಶೇಷವಾಗಿ ಪಾರಾಯಣ ಮಾಡಬೇಕು.

(ಅಧ್ಯಾಯ - ೧)

❐ ❐ ❐

ಶಿವಪುರಾಣದ ಶ್ರವಣದಿಂದ ದೇವರಾಜನಿಗೆ ಶಿವಲೋಕ ಪ್ರಾಪ್ತಿ ಹಾಗೂ ಚಂಚುಲೆಗೆ ಪಾಪದಿಂದ ಭಯ ಹಾಗೂ ಸಂಸಾರದಿಂದ ವೈರಾಗ್ಯ

ಶೌನಕರು ಕೇಳುತ್ತಾರೆ - ಮಹಾನುಭಾವರಾದ ಸೂತಪುರಾಣಿಕರೇ! ತಾವು ಧನ್ಯರಾಗಿರುವಿರಿ. ಪರಮಾರ್ಥ ತತ್ತ್ವವನ್ನು ತಿಳಿದವರಾಗಿದ್ದೀರಿ. ನೀವು ಕೃಪೆಮಾಡಿ ನಮಗೆ ಇಂತಹ ಅದ್ಭುತ ಮತ್ತು ದಿವ್ಯ ಕಥೆಯನ್ನು ಹೇಳಿದಿರಿ. ಭೂಲೋಕದಲ್ಲಿ ಈ ಕಥೆಗೆ ಸಮಾನವಾಗಿ ಶ್ರೇಯಸ್ಸಿನ ಸರ್ವಶ್ರೇಷ್ಠ ಸಾಧನೆಯು ಮತ್ತೊಂದಿಲ್ಲ ಎಂಬುದನ್ನು ಇಂದು ನಾವು ತಮ್ಮ ಕೃಪೆಯಿಂದ ನಿಶ್ಚಯವಾಗಿ ತಿಳಿದುಕೊಂಡೆವು. ಸೂತರೇ! ಕಲಿಯುಗದಲ್ಲಿ ಈ ಕಥೆಯಿಂದ ಯಾವ ಯಾವ ಪಾಪಿಗಳು ಶುದ್ಧರಾಗುತ್ತಾರೆ? ಎಂಬುದನ್ನು ದಯಮಾಡಿ ತಿಳಿಸಿ ಹಾಗೂ ಈ ಜಗತ್ತನ್ನು ಕೃತಾರ್ಥವನ್ನಾಗಿಸಿರಿ.

ಶ್ರೀಸೂತಪುರಾಣಿಕರು ಹೇಳಿದರು- ಮುನಿವರ್ಯ! ಪಾಪೀ, ದುರಾಚಾರೀ, ಕಳ್ಳ, ಕಾಮ- ಕ್ರೋಧಾದಿಗಳಲ್ಲಿ ನಿರಂತರವಾಗಿ ಮುಳುಗಿರುವ ಮನುಷ್ಯರೂ ಕೂಡ ಈ ಪುರಾಣದ ಶ್ರವಣ-ಪಾರಾಯಣದಿಂದ ಅವಶ್ಯವಾಗಿ ಶುದ್ಧವಾಗಿ ಹೋಗುತ್ತಾರೆ. ಈ ವಿಷಯದಲ್ಲಿ ಜ್ಞಾನಿಗಳಾದ ಮುನಿಗಳು ಈ ಪ್ರಾಚೀನವಾದ ಇತಿಹಾಸವನ್ನು ಉದಾಹರಿಸುತ್ತಾರೆ. ಅದರ ಶ್ರವಣಮಾತ್ರದಿಂದ ಪಾಪಗಳು ಪೂರ್ಣವಾಗಿ ನಾಶವಾಗಿ ಹೋಗುತ್ತವೆ.

ಬಹಳ ಹಿಂದಿನ ಮಾತು – ಬೇಡರ ಒಂದು ನಗರದಲ್ಲಿ ದೇವರಾಜನೆಂಬ ಬ್ರಾಹ್ಮಣನೋರ್ವನು ಇರುತ್ತಿದ್ದನು. ಅವನು ಜ್ಞಾನದಲ್ಲಿ ಅತ್ಯಂತ ದುರ್ಬಲನೂ, ದರಿದ್ರನೂ, ರಸವಿಕ್ರಯಿಸುವವನೂ ಹಾಗೂ ವೈದಿಕಧರ್ಮದಿಂದ ವಿಮುಖನಾಗಿದ್ದನು. ಅವನು ಸ್ನಾನ-ಸಂಧ್ಯಾದಿ ಕರ್ಮಗಳಿಂದ ಭ್ರಷ್ಟನಾಗಿದ್ದು, ವೈಶ್ಯವೃತ್ತಿಯಲ್ಲಿ ತತ್ಪರನಾಗಿದ್ದನು. ತನ್ನನ್ನು ನಂಬಿದವರನ್ನು ಅವನು ಮೋಸಗೊಳಿಸುತ್ತಿದ್ದನು. ಅವನು ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರು ಹಾಗೂ ಇತರರನ್ನು ಅನೇಕ ನೆಪಗಳಿಂದ ಕೊಂದು ಅವರ ಧನವನ್ನು ಕಸಿದುಕೊಂಡಿದ್ದನು. ಆದರೆ ಆ ಪಾಪಿಯ ಸ್ವಲ್ಪ ಧನವೂ ಕೂಡ ಎಂದೂ ಧರ್ಮಕಾರ್ಯದಲ್ಲಿ ತೊಡಗಿರಲಿಲ್ಲ. ಅವನು ವೇಶ್ಯಾಗಾಮಿಯಾಗಿದ್ದು, ಎಲ್ಲ ವಿಧದಿಂದಲೂ ಆಚಾರಭ್ರಷ್ಟನಾಗಿದ್ದನು.

ಒಂದು ದಿನ ಅವನು ತಿರುಗಾಡುತ್ತಾ ದೈವಯೋಗದಿಂದ ಪ್ರತಿಷ್ಠಾನಪುರ (ಪ್ರಯಾಗ) ಕ್ಕೆ ತಲುಪಿದನು. ಅಲ್ಲಿ ಅವನು ಒಂದು ಶಿವಾಲಯವನ್ನು ನೋಡಿದನು. ಅದರಲ್ಲಿ ಅನೇಕ ಸಾಧು-ಮಹಾತ್ಮರು ಸೇರಿದ್ದರು. ದೇವರಾಜನೂ ಅದೇ ಶಿವಾಲಯದಲ್ಲಿ ತಂಗಿದನು; ಆದರೆ ಅವನಿಗೆ ಅಲ್ಲಿ ಜ್ವರಬಂದು ಬಿಟ್ಟಿತು. ಆ ಜ್ವರದಿಂದ ಅವನಿಗೆ ಬಹಳ ಪೀಡೆಯುಂಟಾಯಿತು. ಅಲ್ಲೇ ಬ್ರಾಹ್ಮಣನೋರ್ವನು

ಶಿವಪುರಾಣದ ಕಥೆಯನ್ನು ಹೇಳುತ್ತಿದ್ದನು. ಜ್ವರದಿಂದ ಪೀಡಿತನಾದ ದೇವರಾಜನು ಆ ಬ್ರಾಹ್ಮಣೋತ್ತಮನು ಹೇಳುತ್ತಿದ್ದ ಶಿವಕಥೆಯನ್ನು ನಿರಂತರವಾಗಿ ಕೇಳುತ್ತಾ ಇದ್ದನು. ಒಂದು ತಿಂಗಳ ಬಳಿಕ ಅವನು ಜ್ವರದಿಂದ ಅತ್ಯಂತ ಪೀಡಿತನಾಗಿ ಮರಣವನ್ನೈದನು. ಯಮದೂತರು ಬಂದು ಅವನನ್ನು ಪಾಶಗಳಿಂದ ಬಂಧಿಸಿ ಬಲವಂತವಾಗಿ ಯಮಪುರಿಗೆ ಕೊಂಡುಹೋದರು. ಇಷ್ಟರಲ್ಲಿ ಶಿವಲೋಕದಿಂದ ಭಗವಾನ್ ಶಿವನ ಪಾರ್ಷದ ಗಣಗಳು ಬಂದರು. ಅವರು ಗೌರವರ್ಣದವರಾಗಿದ್ದು ಕರ್ಪೂರದಂತೆ ಉಜ್ವಲರಾಗಿದ್ದರು. ಕೈಗಳಲ್ಲಿ ತ್ರಿಶೂಲಗಳು ಶೋಭಿಸುತ್ತಿದ್ದವು ಅವರ ಸರ್ವಾಂಗವು ಭಸ್ಮಲೇಪಿತವಾಗಿತ್ತು. ಮತ್ತು ರುದ್ರಾಕ್ಷಿಯ ಮಾಲೆಗಳಿಂದ ಅವರ ಶರೀರಗಳ ಶೋಭೆಯು ಹೆಚ್ಚಿಸಿತ್ತು. ಅವರೆಲ್ಲರೂ ಕ್ರೋಧಗೊಂಡು ಯಮಪುರಿಗೆ ಹೋಗಿ ಯಮದೂತರನ್ನು ಗದರಿಸಿ, ಬಡಿದು, ಅವರಿಂದ ದೇವರಾಜನನ್ನು ಬಿಡಿಸಿಕೊಂಡರು. ಮತ್ತೆ ಅತ್ಯಂತ ಅದ್ಭುತ ವಿಮಾನದಲ್ಲಿ ಕುಳ್ಳಿರಿಸಿ, ಆ ಶಿವದೂತರು ಕೈಲಾಸಕ್ಕೆ ಹೊರಡುವಾಗ ಯಮಪುರಿಯಲ್ಲಿ ಭಾರೀ ಗದ್ದಲ ಉಂಟಾಯಿತು. ಆ ಗದ್ದಲವನ್ನು ಕೇಳಿದ ಯಮಧರ್ಮನು ತನ್ನ ಅರಮನೆಯಿಂದ ಹೊರಗೆ ಬಂದನು. ಸಾಕ್ಷಾತ್ ಪ್ರತಿರುದ್ರರಂತಿದ್ದ ಆ ನಾಲ್ಕು ಶಿವದೂತರನ್ನು ನೋಡಿ ಧರ್ಮಜ್ಞನಾದ ಯಮರಾಜನು ಅವರನ್ನು ವಿಧಿವತ್ತಾಗಿ ಪೂಜಿಸಿದನು. ಜ್ಞಾನದೃಷ್ಟಿಯಿಂದ ನಡೆದುದೆಲ್ಲವನ್ನು ಅರಿತುಕೊಂಡನು. ಅವನು ಭಯದಿಂದಾಗಿ ಭಗವಾನ್ ಶಿವನ ಆ ಮಹಾತ್ಮರಾದ ದೂತರಲ್ಲಿ ಯಾವುದನ್ನೂ ಕೇಳದೆ ಅವರೆಲ್ಲರನ್ನು ಗೌರವಿಸಿ, ಪ್ರಾರ್ಥಿಸಿಕೊಂಡನು. ಬಳಿಕ ಶಿವದೂತರು ಕೈಲಾಸಕ್ಕೆ ತೆರಳಿ, ಆ ಬ್ರಾಹ್ಮಣನನ್ನು ದಯಾಸಾಗರನಾದ ಸಾಂಬಶಿವನ ಕೈಗೆ ಒಪ್ಪಿಸಿದರು.

ಶೌನಕರು ಕೇಳಿದರು - ಪೂಜ್ಯರಾದ ಸೂತಪುರಾಣಿಕರೇ! ಮಹಾಮತಿಯಾದ ಸರ್ವಜ್ಞರೇ! ತಮ್ಮ ಕೃಪಾಪ್ರಸಾದದಿಂದ ನಾನು ಪದೇ-ಪದೇ ಕೃತಾರ್ಥನಾದೆ. ಈ ಇತಿಹಾಸವನ್ನು ಕೇಳಿ ನನ್ನ ಮನಸ್ಸು ಅತ್ಯಂತ ಆನಂದದಲ್ಲಿ ಮುಳುಗಿಹೋಗಿದೆ. ಆದ್ದರಿಂದ ಈಗ ಭಗವಾನ್ ಶಿವನಲ್ಲಿ ಪ್ರೇಮವು ಹೆಚ್ಚಿಸುವಂತಹ ಶಿವನ ಸಂಬಂಧವಾದ ಇನ್ನೊಂದು ಕಥೆಯನ್ನೂ ಹೇಳಿರಿ.

ಶ್ರೀಸೂತಪುರಾಣಿಕರು ಹೇಳಿದರು - ಶೌನಕರೇ! ಕೇಳಿರಿ. ನಾನು ನಿಮ್ಮ ಮುಂದೆ ಗೋಪನೀಯವಾದ ಕಥಾವಸ್ತುವನ್ನು ವರ್ಣಿಸುವೆನು; ಏಕೆಂದರೆ, ನೀನು ಶಿವಭಕ್ತರಲ್ಲಿ ಅಗ್ರಗಣ್ಯನಾಗಿರುವೆ ಹಾಗೂ ವೇದವೇತ್ತರಲ್ಲಿ ಶ್ರೇಷ್ಠನಾಗಿರುವೆ. ಸಮುದ್ರತೀರದಲ್ಲಿ ಬಾಷ್ಕಲವೆಂಬ ಒಂದು ಗ್ರಾಮವಿತ್ತು. ಅಲ್ಲಿ ವೈದಿಕ ಧರ್ಮದಿಂದ ವಿಮುಖರಾದ ಮಹಾಪಾಪಿಗಳಾದ ದ್ವಿಜರು ವಾಸಿಸುತ್ತಿದ್ದರು. ಅವರೆಲ್ಲರೂ ದುಷ್ಟರಾಗಿದ್ದು, ಅವರ ಮನಸ್ಸು ದೂಷಿತ ವಿಷಯಭೋಗಗಳಲ್ಲೇ ತೊಡಗಿರುತ್ತಿತ್ತು. ಅವರು ದೇವತೆಗಳ ಮೇಲೆ, ಭಾಗ್ಯದ ಮೇಲೆ ವಿಶ್ವಾಸವಿಡುತ್ತಿರಲಿಲ್ಲ. ಅವರೆಲ್ಲರೂ ಕುಟಿಲ ವೃತ್ತಿಯವರಾಗಿದ್ದು, ಬೇಸಾಯವನ್ನು ಮಾಡುತ್ತಾ, ಅನೇಕ ರೀತಿಯ ಘಾತಕ ಶಸ್ತ್ರಗಳನ್ನು ಇಟ್ಟುಕೊಳ್ಳುತ್ತಿದ್ದರು. ಅವರು ವ್ಯಭಿಚಾರಿಗಳೂ, ಕಳ್ಳರೂ ಆಗಿದ್ದರು. ಜ್ಞಾನ-ವೈರಾಗ್ಯ ಹಾಗೂ ಸದ್ಧರ್ಮಗಳ ಸೇವನೆಯೇ ಮನುಷ್ಯರಿಗೆ ಪರಮ ಪುರುಷಾರ್ಥವಾಗಿದೆ – ಎಂಬುದನ್ನು ಅವರು ತಿಳಿದೇ ಇರಲಿಲ್ಲ. ಅವರೆಲ್ಲರೂ ಪಶುಬುದ್ಧಿಯವರಾಗಿದ್ದರು. (ಬ್ರಾಹ್ಮಣರೇ ಹೀಗೆ ಇರುವಲ್ಲಿ ಇತರ ವರ್ಣದವರ ವಿಷಯದಲ್ಲಿ ಹೇಳುವುದೇನಿದೆ?) ಉಳಿದ ವರ್ಣ(ಜಾತಿ)ಗಳ ಜನರೂ ಬ್ರಾಹ್ಮಣರಂತೆಯೇ ಕುತ್ಸಿತ ವಿಚಾರವುಳ್ಳವರೂ, ಸ್ವಧರ್ಮವಿಮುಖರೂ, ಕಳ್ಳರೂ ಆಗಿದ್ದು, ಸದಾಕಾಲ ಕೆಟ್ಟಕರ್ಮಗಳಲ್ಲೇ ತೊಡಗಿರುತ್ತಿದ್ದು, ಯಾವಾಗಲೂ ವಿಷಯಭೋಗಗಳಲ್ಲೇ ಮುಳುಗಿರುತ್ತಿದ್ದರು. ಅಲ್ಲಿಯ ಸ್ತ್ರೀಯರೆಲ್ಲರೂ ಕುಟಿಲ ಸ್ವಭಾವದವರೂ, ಸ್ವೇಚ್ಛಾಚಾರಿಣಿಯರೂ, ಪಾಪಾಸಕ್ತರೂ, ಕುತ್ಸಿತ ವಿಚಾರವುಳ್ಳವರೂ ಮತ್ತು ವ್ಯಭಿಚಾರಿಣಿಯರೂ ಆಗಿದ್ದರು. ಅವರು ಸದ್‌ವ್ಯವಹಾರ ಹಾಗೂ ಸದಾಚಾರದಿಂದ ಸರ್ವಥಾ ರಹಿತರಾಗಿದ್ದರು. ಹೀಗೆ ಅಲ್ಲಿ ದುಷ್ಟರೇ ವಾಸಿಸುತ್ತಿದ್ದರು.

ಆ ಬಾಷ್ಕಲವೆಂಬ ಗ್ರಾಮದಲ್ಲಿ ಎಂದೋ ಒಬ್ಬ ಬಿಂದುಗ ಎಂಬ ಹೆಸರಿನ ಬ್ರಾಹ್ಮಣನು ಇರುತ್ತಿದ್ದನು. ಅವನು ಮಹಾ ಅಧಮನಾಗಿದ್ದು, ದುರಾತ್ಮನೂ, ಮಹಾಪಾಪಿಯೂ ಆಗಿದ್ದನು. ಅವನ ಪತ್ನಿಯು ತುಂಬಾ ಸುಂದರಳಾಗಿದ್ದರೂ ಅತನು ಕೆಟ್ಟದಾರಿಯಲ್ಲೇ ನಡೆಯುತ್ತಿದ್ದನು. ಅವನ ಹೆಂಡತಿಯ ಹೆಸರು ಚಂಚುಲೆ ಎಂದಿತ್ತು. ಆಕೆಯು ಸದಾಕಾಲ ಉತ್ತಮ ಧರ್ಮದ ಪಾಲನೆಯಲ್ಲೇ ತೊಡಗಿರುತ್ತಿದ್ದಳು. ಹೀಗಿದ್ದರೂ ಅವಳನ್ನು ಬಿಟ್ಟು ಆ ದುಷ್ಟ ಬ್ರಾಹ್ಮಣನು ವೇಶ್ಯಾಗಾಮಿಯಾಗಿದ್ದನು. ಹೀಗೆ ಕುಕರ್ಮಗಳಲ್ಲೇ ತೊಡಗಿರುವ ಆ ಬಿಂದುಗನ ಅನೇಕ ವರ್ಷಗಳು ಕಳೆದು ಹೋದುವು. ಅವನ ಪತ್ನೀ ಚಂಚುಲೆಯು ಕಾಮ ಪೀಡಿತಳಾಗಿದ್ದರೂ, ಸ್ವಧರ್ಮನಾಶದ ಭಯದಿಂದ ಕ್ಲೇಶಗಳನ್ನು ಸಹಿಸಿಯೂ ದೀರ್ಘಕಾಲದವರೆಗೆ ಧರ್ಮದಿಂದ ಭ್ರಷ್ಟಳಾಗಲಿಲ್ಲ. ಆದರೆ ದುರಾಚಾರೀ ಪತಿಯ ಆಚರಣೆಯಿಂದ ಪ್ರಭಾವಿತಳಾಗಿ ಕೆಲವು ದಿನಗಳಲ್ಲಿ ಆಕೆಯೂ ದುರಾಚಾರಿಣಿಯಾದಳು.

ಈ ರೀತಿಯಿಂದ ದುರಾಚಾರದಲ್ಲಿ ಮುಳುಗಿದ ಆ ಮೂಢ ಚಿತ್ತವುಳ್ಳ ದಂಪತಿಗಳ ಬಹಳಷ್ಟು ಸಮಯವು ವ್ಯರ್ಥವಾಗಿ ಕಳೆದುಹೋಯಿತು. ಅನಂತರ ನೀಚಜಾತಿಯ ವೇಶ್ಯೆಯ ಪತಿಯಾದ ಆ ದೂಷಿತ ಬುದ್ಧಿಯುಳ್ಳ ಬಿಂದುಗ ಬ್ರಾಹ್ಮಣನು ಕಾಲವಶನಾಗಿ ನರಕದಲ್ಲಿ ಬಿದ್ದನು. ಬಹಳ ಕಾಲದವರೆಗೆ ನರಕದ ದುಃಖಗಳನ್ನು ಅನುಭವಿಸಿ, ಆ ಮೂಢಬುದ್ಧಿಯುಳ್ಳ ಪಾಪಿಯು ವಿಂಧ್ಯಪರ್ವತದಲ್ಲಿ ಭಯಂಕರ ಪಿಶಾಚಿ ಯಾದನು. ಇತ್ತ ಆ ದುರಾಚಾರೀ ಪತಿ ಬಿಂದುಗನು ಸತ್ತುಹೋದ ಮೇಲೆ ಆ ಮೂಢ ಹೃದಯೆಯಾದ ಚಂಚುಲೆಯು ಬಹಳಷ್ಟು ದಿನಗಳವರೆಗೆ ಪುತ್ರರೊಂದಿಗೆ ತನ್ನ ಮನೆಯಲ್ಲೇ ಇದ್ದಳು.

ಒಂದು ದಿನ ದೈವಯೋಗದಿಂದ ಯಾವುದೋ ಪುಣ್ಯಪರ್ವ ಬಂದಾಗ ಚಂಚುಲೆಯು ತನ್ನ ಬಂಧು-ಬಾಂಧವರೊಂದಿಗೆ ಗೋಕರ್ಣಕ್ಷೇತ್ರಕ್ಕೆ ಹೋದಳು. ತೀರ್ಥಯಾತ್ರಿಗಳ ಸಂಗದಿಂದ ಆಕೆಯು ಅವರೊಂದಿಗೆ ತೀರ್ಥಸ್ನಾನ ಮಾಡಿದಳು. ಮತ್ತೆ ಅವಳು ಸಂಗಡಿಗರೊಂದಿಗೆ ಜಾತ್ರೆಯನ್ನು ನೋಡುತ್ತಾ ಅಲ್ಲಿ -ಇಲ್ಲಿ ಅಲೆಯುತ್ತಿದ್ದಳು. ಹೀಗೆ ತಿರುಗಾಡುತ್ತಾ ಯಾವುದೋ ದೇವಸ್ಥಾನಕ್ಕೆ ಹೋಗಿ ಆಕೆಯು ಅಲ್ಲಿ ದೈವಜ್ಞ ಬ್ರಾಹ್ಮಣನ ಮುಖದಿಂದ ಭಗವಾನ್ ಶಿವನ ಪರಮ ಮಂಗಲಮಯ ಉತ್ತಮವಾದ ಪೌರಾಣಿಕ ಕಥೆಯನ್ನು ಕೇಳಿದಳು. ಪುರಾಣಿಕ ಬ್ರಾಹ್ಮಣರು ಹೇಳುತ್ತಿದ್ದರು – ಪರಪುರುಷರೊಂದಿಗೆ ವ್ಯಭಿಚಾರ ಮಾಡುವ ಸ್ತ್ರೀಯು ಸತ್ತನಂತರ ಯಮಲೋಕಕ್ಕೆ ಹೋದಾಗ ಯಮದೂತರು ಆಕೆಯ ಯೋನಿಯಲ್ಲಿ ಕಾದ ಕಬ್ಬಿಣದ ಸಲಾಕೆಯನ್ನು ತೂರಿಸುತ್ತಾರೆ. ಪುರಾಣಿಕರ ಬಾಯಿಂದ- ವೈರಾಗ್ಯವನ್ನು ಹೆಚ್ಚಿಸುವ ಈ ಕಥೆಯನ್ನು ಕೇಳಿ ಚಂಚುಲೆಯು ಭಯದಿಂದ ನಡುಗಿ ಹೋದಳು. ಕಥೆಯು ಮುಗಿದು ಎಲ್ಲ ಜನರು ಹೊರಟುಹೋದಾಗ, ಆ ಭಯಗೊಂಡ ನಾರಿಯು ಏಕಾಂತದಲ್ಲಿ ಶಿವಪುರಾಣವನ್ನು ಪ್ರವಚಿಸುವ ಬ್ರಾಹ್ಮಣನ ಬಳಿ ಹೋಗಿ ಇಂತೆಂದಳು.

ಚಂಚುಲೆಯು ಹೇಳಿದಳು- ಬ್ರಾಹ್ಮಣೋತ್ತಮರೇ! ನಾನು ನನ್ನ ಧರ್ಮವನ್ನು ತಿಳಿದಿರಲಿಲ್ಲ. ಅದರಿಂದಾಗಿ ನನ್ನಿಂದ ಬಹುದೊಡ್ಡ ದುರಾಚಾರ ನಡೆದುಹೋಗಿದೆ. ಸ್ವಾಮಿ! ನನ್ನ ಮೇಲೆ ಅನುಪಮವಾದ ಕೃಪೆಮಾಡಿ ನನ್ನನ್ನು ಉದ್ಧರಿಸಿರಿ. ಇಂದು ತಮ್ಮ ವೈರಾಗ್ಯರಸದಿಂದ ಓತಪ್ರೋತವಾದ ಈ ಪ್ರವಚನವನ್ನು ಕೇಳಿ ನನಗೆ ಅತ್ಯಂತ ಭಯವಾಗುತ್ತದೆ. ನಾನು ನಡುಗುತ್ತಾ ಇದ್ದೇನೆ. ನನಗೆ ಈ ಪ್ರಪಂಚದಿಂದ ವೈರಾಗ್ಯವುಂಟಾಗಿದೆ. ಮೂಢ ಚಿತ್ತವುಳ್ಳ ಪಾಪಿಯಾದ ನನಗೆ ಧಿಕ್ಕಾರವಿರಲಿ. ನಾನು ನಿಂದನೆಗೆ ಯೋಗ್ಯಳಾಗಿದ್ದೇನೆ. ಕುತ್ಸಿತ ವಿಷಯಗಳಲ್ಲಿ ಮೋಸಹೋಗಿ, ಸ್ವಧರ್ಮದಿಂದ ವಿಮುಖಳಾಗಿದ್ದೇನೆ. ಅಯ್ಯೋ! ಯಾವ-ಯಾವ ಘೋರಕಷ್ಟದಾಯಕ ದುರ್ಗತಿಯಲ್ಲಿ ನಾನು ಬೀಳಬೇಕಾದೀತೋ ತಿಳಿಯದು. ಅಲ್ಲಿ ಯಾವ ಬುದ್ಧಿವಂತ ಪುರುಷನು-ಕುಮಾರ್ಗದಲ್ಲಿ ತೊಡಗಿರುವ ಪಾಪಿನಿಯಾದ ನನಗೆ ಸಹಾಯ ಮಾಡುವನು? ಮರಣಕಾಲದಲ್ಲಿ ಭಯಂಕರರಾದ ಯಮದೂತರನ್ನು ನಾನು ಹೇಗೆ ನೋಡಲಿ? ಅವರು ಬಲವಂತವಾಗಿ ಕತ್ತಿಗೆ ಪಾಶವನ್ನು ಬಿಗಿದಾಗ ನಾನು ಹೇಗೆ ಧೈರ್ಯವನ್ನು ಧರಿಸಬಲ್ಲೆನು? ನರಕದಲ್ಲಿ ನನ್ನ ಶರೀರವನ್ನು ತುಂಡು-ತುಂಡಾಗಿ ಕತ್ತರಿಸುವಾಗ ವಿಶೇಷವಾದ ದುಃಖವನ್ನು ಕೊಡುವ ಆ ಮಹಾಯಾತನೆಯನ್ನು ಹೇಗೆ ಸಹಿಸಲಿ? ಅಯ್ಯೋ! ನಾನು ಮೋಸ ಹೋದೆ! ಬೆಂದು ಹೋದೆ! ನನ್ನ ಹೃದಯ ಒಡೆದು ಹೋಯಿತು! ಹೀಗೆ ಎಲ್ಲ ರೀತಿಯಿಂದಲೂ ನಾನು ನಾಶವಾಗಿ ಹೋದೆ; ಏಕೆಂದರೆ, ನಾನು ಎಲ್ಲ ವಿಧದ ಪಾಪಗಳಲ್ಲಿ ಮುಳುಗಿರುವೆನು. ಪೂಜ್ಯರೇ! ತಾವೇ ನನ್ನ ಗುರುಗಳು. ನೀವೇ ತಂದೆ-ತಾಯಿಯರು. ತಮ್ಮಲ್ಲಿ ಶರಣಾಗಿರುವ ದೀನ ಅಬಲೆಯಾದ ನನ್ನನ್ನು ಉದ್ಧರಿಸಿರಿ.

ಶ್ರೀಸೂತಪುರಾಣಿಕರು ಹೇಳುತ್ತಾರೆ- ಶೌನಕರೇ! ಹೀಗೆ ದುಃಖ ಮತ್ತು ವೈರಾಗ್ಯದಿಂದ ಕೂಡಿದ ಚಂಚುಲೆಯು ಬ್ರಾಹ್ಮಣನ ಚರಣಗಳಲ್ಲಿ ಬಿದ್ದು ಬಿಟ್ಟಳು. ಆಗ ಆ ಬುದ್ಧಿವಂತ ಬ್ರಾಹ್ಮಣನು ಕೃಪೆಯಿಂದ ಆಕೆಯನ್ನು ಎಬ್ಬಿಸಿ ಈ ಪ್ರಕಾರವಾಗಿ ಹೇಳಿದರು.

(ಅಧ್ಯಾಯ ೨-೩.)

❐ ❐ ❐

ಬ್ರಾಹ್ಮಣನು ಚಂಚುಲೆಗೆ ಆದ್ಯಂತವಾಗಿ ಶಿವಪುರಾಣವನ್ನು ಹೇಳುವುದು ಹಾಗೂ ಕಾಲಾಂತರದಲ್ಲಿ ಶರೀರವನ್ನು ತ್ಯಜಿಸಿ ಶಿವಲೋಕಕ್ಕೆ ಹೋಗಿ ಚಂಚುಲೆಯು ಪಾರ್ವತಿ ದೇವಿಯ ಸಖಿಯಾಗುವುದು.

ಬ್ರಾಹ್ಮಣನು ಹೇಳಿದನು- ನಾರೀಮಣಿಯೇ! ಭಗವಾನ್ ಶಂಕರನ ಕೃಪೆಯಿಂದ ಶಿವಪುರಾಣದ ಈ ವೈರಾಗ್ಯಯುಕ್ತ ಕಥೆಯನ್ನು ಕೇಳಿ ನೀನು ಸಕಾಲದಲ್ಲಿ ಎಚ್ಚರಗೊಂಡಿರುವುದು ಸೌಭಾಗ್ಯದ ಮಾತಾಗಿದೆ. ಬ್ರಾಹ್ಮಣ ಪತ್ನಿಯೇ! ನೀನು ಹೆದರಬೇಡ. ಭಗವಾನ್ ಶಿವನಲ್ಲಿ ಶರಣಾಗು. ಶಿವನ ಕೃಪೆಯಿಂದ ಎಲ್ಲ ಪಾಪಗಳು ತತ್ಕಾಲವೇ ಪರಿಹಾರವಾಗುತ್ತವೆ. ನಾನು ನಿನಗೆ ಭಗವಾನ್ ಶಿವನ ಕೀರ್ತಿಯ ಕಥೆಯಿಂದ ಕೂಡಿದ ಆ ಪರಮ ವಸ್ತುವನ್ನು ವರ್ಣಿಸುವೆನು. ಅದರಿಂದ ನಿನಗೆ ಸದಾಕಾಲ ಸುಖಿಕೊಡುವಂತಹ ಉತ್ತಮಗತಿಯು ಪ್ರಾಪ್ತವಾಗುತ್ತದೆ. ಶಿವನ ಉತ್ತಮ ಕಥೆಯನ್ನು ಕೇಳಿದ್ದರಿಂದ ನಿನ್ನ ಬುದ್ಧಿಯು ಇಂತಹ ಪಶ್ಚಾತ್ತಾಪದಿಂದ ಶುದ್ಧವಾಗಿ ಹೋಗಿದೆ. ಜೊತೆಗೆ ನಿನ್ನ ಮನಸ್ಸಿನಲ್ಲಿ ವಿಷಯಗಳ ಕುರಿತು ವೈರಾಗ್ಯವೂ ಉಂಟಾಗಿದೆ. 'ಪಶ್ಚಾತ್ತಾಪವೇ ಪಾಪಿಗಳಿಗೆ ಎಲ್ಲಕ್ಕಿಂತ ದೊಡ್ಡ ಪ್ರಾಯಶ್ಚಿತ್ತವಾಗಿದೆ'. ಎಲ್ಲರಿಗಾಗಿ ಪಶ್ಚಾತ್ತಾಪವೇ ಸಮಸ್ತ ಪಾಪಗಳನ್ನು ತೊಳೆಯುವ ಸಾಧನೆ - ಎಂದು ಸತ್ಪುರುಷರು ಹೇಳಿರುವರು. ಪಶ್ಚಾತ್ತಾಪದಿಂದಲೇ ಪಾಪಗಳಿಂದ ಶುದ್ಧಿಯಾಗುತ್ತದೆ. ಪಶ್ಚಾತ್ತಾಪ ಪಡುವವನೇ ನಿಜವಾಗಿ ಪಾಪಗಳ ಪ್ರಾಯಶ್ಚಿತ್ತವನ್ನು ಮಾಡುವನು. ಏಕೆಂದರೆ, ಸತ್ಪುರುಷರು - ಸಮಸ್ತ ಪಾಪಗಳ ಶುದ್ಧಿಗಾಗಿ ಉಪದೇಶಿಸಿದ ಎಲ್ಲ ಪ್ರಾಯಶ್ಚಿತ್ತಗಳು ಪಶ್ಚಾತ್ತಾಪದಿಂದಲೇ ನೆರವೇರುವವು.* ವಿಧಿಪೂರ್ವಕ ಪ್ರಾಯಶ್ಚಿತ್ತವನ್ನು ಮಾಡಿಕೊಂಡು ನಿರ್ಭಯನಾದರೂ ತನ್ನ ಕೆಟ್ಟ ಕರ್ಮಗಳ ಕುರಿತು ಪಶ್ಚಾತ್ತಾಪ ಪಡದ ಪುರುಷನಿಗೆ ಪ್ರಾಯಶಃ ಉತ್ತಮ ಗತಿಯು ದೊರೆಯುವುದಿಲ್ಲ. ಆದರೆ ತನ್ನ ಕೆಟ್ಟ ಕಾರ್ಯಗಳ ಕುರಿತು ಹಾರ್ದಿಕವಾದ ಪಶ್ಚಾತ್ತಾಪ ಉಂಟಾಗುವವನು ಅವಶ್ಯವಾಗಿ ಉತ್ತಮ ಗತಿಯನ್ನು ಪಡೆಯುತ್ತಾನೆ; ಇದರಲ್ಲಿ ಸಂಹೇಹವೇ ಇಲ್ಲ. ಈ ಶಿವಪುರಾಣದ ಕಥೆಯನ್ನು ಕೇಳುವುದರಿಂದ ಆಗುವ ಚಿತ್ತಶುದ್ಧಿಯು ಬೇರೆ ಉಪಾಯಗಳಿಂದ ಆಗುವುದಿಲ್ಲ. ಸ್ವಚ್ಛಗೊಳಿಸಿದ ಕನ್ನಡಿಯು ನಿರ್ಮಲವಾಗುವಂತೆಯೇ ಈ ಶಿವಪುರಾಣದ ಕಥೆಯಿಂದ ಚಿತ್ತವು ಅತ್ಯಂತ ಶುದ್ಧವಾಗಿ ಹೋಗುತ್ತದೆ. ಇದರಲ್ಲಿ ಸಂದೇಹವೇ ಇಲ್ಲ. ಮನುಷ್ಯರ ಶುದ್ಧ ಚಿತ್ತದಲ್ಲಿ ಜಗದಂಬೆ ಪಾರ್ವತಿಸಹಿತ ಭಗವಾನ್ ಶಿವನು ವಿರಾಜಮಾನನಾಗುತ್ತಾನೆ. ಇದರಿಂದ ವಿಶುದ್ಧಾತ್ಮನಾದ ಅವನು ಶ್ರೀಸಾಂಬಸದಾಶಿವನ ಪದವನ್ನು ಪಡೆದುಕೊಳ್ಳುವನು. ಈ ಉತ್ತಮ ಕಥೆಯ ಶ್ರವಣವು ಸಮಸ್ತ ಮನುಷ್ಯರಿಗಾಗಿ ಶ್ರೇಯಸ್ಸಿನ ಬೀಜವಾಗಿದೆ. ಆದ್ದರಿಂದ ಯಥೋಚಿತ ಶಾಸ್ತ್ರೋಕ್ತ ಮಾರ್ಗದಿಂದ ಇದರ ಆರಾಧನೆ ಅಥವಾ ಸೇವೆ ಮಾಡಬೇಕು. ಇದು ಭವರೋಗವನ್ನು ನಾಶಮಾಡುವಂತಹುದು. ಭಗವಾನ್ ಶಿವನ ಕಥೆಯನ್ನು ಕೇಳಿ ಮತ್ತೆ ತನ್ನ ಹೃದಯದಲ್ಲಿ ಅದನ್ನು ಮನನ-ವಿದಿಧ್ಯಾಸನ ಮಾಡಬೇಕು. ಇದರಿಂದ ಪೂರ್ಣವಾಗಿ ಚಿತ್ತಶುದ್ಧಿ ಉಂಟಾಗುತ್ತದೆ. ಚಿತ್ತಶುದ್ಧಿಯಾಗುವುದರಿಂದ ಮಹೇಶ್ವರನ ಭಕ್ತಿಯು ತನ್ನ ಎರಡೂ ಪುತ್ರ (ಜ್ಞಾನ ಮತ್ತು ವೈರಾಗ್ಯ)ರೊಂದಿಗೆ ನಿಶ್ಚಯವಾಗಿ ಪ್ರಕಟವಾಗುತ್ತಾಳೆ. ಅನಂತರ ಮಹೇಶ್ವರನ ಅನುಗ್ರಹದಿಂದ ದಿವ್ಯ ಮುಕ್ತಿಯು ಪ್ರಾಪ್ತವಾಗುತ್ತದೆ, ಇದರಲ್ಲಿ ಸಂಶಯವೇ ಇಲ್ಲ. ಮುಕ್ತಿಯಿಂದ ವಂಚಿತನಾದವನನ್ನು ಪಶುವೆಂದೇ ತಿಳಿಯಬೇಕು; ಏಕೆಂದರೆ, ಅವನ ಚಿತ್ತವು ಮಾಯಾಪಾಶದ ಬಂಧನದಲ್ಲಿ ಆಸಕ್ತವಾಗಿದೆ. ಅವನು ಖಂಡಿತವಾಗಿ ಸಂಸಾರಬಂಧನದಿಂದ ಮುಕ್ತನಾಗಲಾರನು.

ಎಲೈ ಬ್ರಾಹ್ಮಣ ಪತ್ನಿಯೇ! ಇದರಿಂದ ನೀನು ವಿಷಯಗಳಿಂದ ಮನಸ್ಸನ್ನು ತೊಡೆದು ಹಾಕಿಬಿಡು ಮತ್ತು ಭಕ್ತಿಭಾವದಿಂದ ಭಗವಾನ್ ಶಂಕರನ ಈ ಪರಮ ಪವಿತ್ರವಾದ ಕಥೆಯನ್ನು ಕೇಳು. ಪರಮಾತ್ಮ ಶಂಕರನ ಈ ಕಥೆಯನ್ನು ಕೇಳುವುದರಿಂದ ನಿನ್ನ ಚಿತ್ತವು ಶುದ್ಧಿಯಾಗಿ, ನಿನಗೆ ಮೋಕ್ಷದ ಪ್ರಾಪ್ತಿಯಾಗುವುದು, ನಿರ್ಮಲ ಚಿತ್ತದಿಂದ ಭಗವಾನ್ ಶಿವನ ಚರಣಾರವಿಂದಗಳನ್ನು ಚಿಂತಿಸುವವನು ಒಂದೇ ಜನ್ಮದಲ್ಲಿ ಮುಕ್ತನಾಗಿ ಹೋಗುವನು. ಇದನ್ನು ನಾನು ನಿನಗೆ ತ್ರಿವಾದ ಸತ್ಯವಾಗಿ ಹೇಳುತ್ತೇನೆ.

ಶ್ರೀ ಸೂತಪುರಾಣಿಕರು ಹೇಳುತ್ತಾರೆ- ಶೌನಕರೇ! ಇಷ್ಟು ಹೇಳಿ ಆ ಶ್ರೇಷ್ಠ ಶಿವಭಕ್ತರು ಸುಮ್ಮನಾದರು. ಅವರ ಹೃದಯವು ಕರುಣೆಯಿಂದ ದ್ರವಿತವಾಗಿತ್ತು. ಆ ಶುದ್ಧ

---

* ಪಶ್ಚಾತ್ತಾಪಃ ಪಾಪಕೃತಾಂ ಪಾಪಾನಾಂ ನಿಷ್ಕೃತಿಃ ಪರಾ । ಸರ್ವೇಷಾಂ ವರ್ಣಿತಂ ಸದ್ಭಿಃ ಸರ್ವಪಾಪವಿಶೋಧನಮ್ ॥
ಪಶ್ಚಾತ್ತಾಪೇನೈವ ಶುದ್ಧಿಃ ಪ್ರಾಯಶ್ಚಿತ್ತಂ ಕರೋತಿ ಸಃ । ಯಥೋಪದಿಷ್ಟಂ ಸದ್ಭಿರ್ಹಿ ಸರ್ವಪಾಪವಿಶೋಧನಮ್ ॥
(ಶಿವಪುರಾಣ - ಮಾಹಾತ್ಮ್ಯ ಅ-೩. ಶ್ಲೋಕ ೫-೬)

ಚಿತ್ತವುಳ್ಳ ಮಹಾತ್ಮರು. ಭಗವಾನ್ ಶಿವನ ಧ್ಯಾನದಲ್ಲಿ ನಿಮಗ್ನರಾದರು. ಬಳಿಕ ಬಿಂದುಗನ ಪತ್ನೀ ಚಂಚುಲೆಯು ಮನಸ್ಸಿನಲ್ಲೇ ಪ್ರಸನ್ನಳಾದಳು. ಬ್ರಾಹ್ಮಣರು ಮೇಲೆ ಹೇಳಿದ ಉಪದೇಶವನ್ನು ಕೇಳಿ ಆಕೆಯ ಕಣ್ಣುಗಳಿಂದ ಆನಂದಾಶ್ರುಗಳು ಚಿಮ್ಮಿದವು. ಆ ಬ್ರಾಹ್ಮಣ ಪತ್ನೀ ಚಂಚುಲೆಯು ಹೃದಯದಲ್ಲಿ ಹರ್ಷಗೊಂಡು ಆ ಶ್ರೇಷ್ಠ ಬ್ರಾಹ್ಮಣರ ಚರಣಗಳಲ್ಲಿ ಬಿದ್ದುಕೊಂಡು ಕೈಜೋಡಿಸಿ ಕೊಂಡು - 'ನಾನು ಕೃತಾರ್ಥಳಾದೆ' ಎಂದು ಹೇಳಿದಳು. ಅನಂತರ ಎದ್ದು ತನ್ನ ಪಾಪಗಳಿಂದ ಆತಂಕಿತಳಾದ, ವೈರಾಗ್ಯಯುಕ್ತ ಉತ್ತಮ ಬುದ್ಧಿಯುಳ್ಳ ಆ ಸ್ತ್ರೀಯು ಆ ಮಹಾನ್ ಶಿವಭಕ್ತ ಬ್ರಾಹ್ಮಣನಲ್ಲಿ ಕೈ ಜೋಡಿಸಿಕೊಂಡು, ಗದ್ಗದಿತ ಮಾತುಗಳಿಂದ ಇಂತೆಂದಳು.

ಚಂಚುಲೆಯು ಹೇಳಿದಳು- ಬ್ರಾಹ್ಮಣೋತ್ತಮರೇ! ಶಿವಭಕ್ತಿಯಲ್ಲಿ ಶ್ರೇಷ್ಠರಾದ ಸ್ವಾಮಿಗಳೇ! ತಾವು ಧನ್ಯರಾಗಿರುವಿರಿ. ಪರಮಾರ್ಥದರ್ಶಿಯಾಗಿ, ಸದಾಕಾಲ ಪರೋಪಕಾರದಲ್ಲಿ ತೊಡಗಿರುವಿರಿ. ಆದ್ದರಿಂದ ಶ್ರೇಷ್ಠ ಸಾಧು-ಸತ್ಪುರುಷರಲ್ಲಿ ಪ್ರಶಂಸೆಗೆ ಯೋಗ್ಯರಾಗಿರುವಿರಿ. ಸಾಧುಗಳೇ! ನಾನು ನರಕ ಸಮುದ್ರದಲ್ಲಿ ಮುಳುಗಿರುವೆನು. ನನ್ನನ್ನು ಉದ್ಧರಿಸಿರಿ, ಉದ್ಧಾರ ಮಾಡಿರಿ. ಪೌರಾಣಿಕ ಅರ್ಥತತ್ತ್ವಗಳಿಂದ ಸಂಪನ್ನವಾದ ಸುಂದರ ಶಿವಪುರಾಣದ ಕಥೆಯನ್ನು ಕೇಳಿ ನನ್ನ ಮನಸ್ಸಿನಲ್ಲಿ ಸಮಸ್ತ ವಿಷಯಗಳಲ್ಲಿ ವೈರಾಗ್ಯವುಂಟಾಗಿದೆ. ಅದೇ ಶಿವಪುರಾಣವನ್ನು ಕೇಳಲು ಈಗ ನನ್ನ ಮನಸ್ಸಿನಲ್ಲಿ ಶ್ರದ್ಧೆಯುಂಟಾಗಿದೆ.

ಶ್ರೀಸೂತಪುರಾಣಿಕರು ಹೇಳುತ್ತಾರೆ- ಹೀಗೆ ಹೇಳಿ, ಕೈ ಜೋಡಿಸಿಕೊಂಡು ಅವರ ಅನುಗ್ರಹವನ್ನು ಪಡೆದ ಚಂಚುಲೆಯು ಶಿವಪುರಾಣದ ಕಥೆಯನ್ನು ಕೇಳುವ ಇಚ್ಛೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಆ ಭೂಸುರೋತ್ತಮರ ಸೇವೆಯಲ್ಲಿ ಅಲ್ಲೇ ಇರತೊಡಗಿದಳು. ಅನಂತರ ಶಿವಭಕ್ತರಲ್ಲಿ ಶ್ರೇಷ್ಠರೂ, ಶುದ್ಧಬುದ್ಧಿಯುಳ್ಳವರೂ ಆದ ಆ ಬ್ರಾಹ್ಮಣರು ಅಲ್ಲೇ ಆ ಸ್ತ್ರೀಯಳಿಗೆ ಶಿವಪುರಾಣದ ಉತ್ತಮ ಕಥೆಯನ್ನು ಹೇಳಿದರು. ಹೀಗೆ ಆ ಗೋಕರ್ಣ ಕ್ಷೇತ್ರದಲ್ಲಿ ಅದೇ ಶ್ರೇಷ್ಠ ಬ್ರಾಹ್ಮಣರಿಂದ ಆಕೆಯು ಶಿವಪುರಾಣದ ಪರಮೋತ್ತಮವಾದ ಕಥೆಯನ್ನು ಕೇಳಿದಳು. ಅದು ಭಕ್ತಿ-ಜ್ಞಾನ-ವೈರಾಗ್ಯಗಳನ್ನು ಹೆಚ್ಚಿಸುವಂತಹುದು ಮತ್ತು ಮುಕ್ತಿಯನ್ನು ಕರುಣಿಸುವಂತಹುದು. ಆ ಪರಮೋತ್ತಮ ಕಥೆಯನ್ನು ಕೇಳಿ ಆ ಬ್ರಾಹ್ಮಣಪತ್ನಿಯು ಅತ್ಯಂತ ಕೃತಾರ್ಥಳಾದಳು. ಆಕೆಯ ಚಿತ್ತವು ಬಹುಬೇಗನೇ ಶುದ್ಧವಾಯಿತು. ಮತ್ತೆ ಭಗವಾನ್ ಶಿವನ ಅನುಗ್ರಹದಿಂದ ಅವಳ ಹೃದಯದಲ್ಲಿ ಶಿವನ ಸಗುಣರೂಪದ ಚಿಂತನೆ ಆಗತೊಡಗಿತು. ಹೀಗೆ ಆಕೆಯು ಭಗವಾನ್ ಶಿವನಲ್ಲಿ ತೊಡಗಿದ ಉತ್ತಮ ಬುದ್ಧಿಯನ್ನು ಪಡೆದು ಶಿವನ ಸಚ್ಚಿದಾನಂದಮಯ ಸ್ವರೂಪವನ್ನು ಪದೇ-ಪದೇ ಚಿಂತಿಸಲು ಪ್ರಾರಂಭಿಸಿದಳು. ಬಳಿಕ ಸಮಯಕ್ಕನುಸಾರವಾಗಿ ಭಕ್ತಿ-ಜ್ಞಾನ-ವೈರಾಗ್ಯದಿಂದ ಕೂಡಿದ ಚಂಚುಲೆಯು ತನ್ನ ಶರೀರವನ್ನು ಅನಾಯಾಸವಾಗಿ ತ್ಯಜಿಸಿಬಿಟ್ಟಳು. ಇಷ್ಟರಲ್ಲಿ ತ್ರಿಪುರ ಶತ್ರುವಾದ ಭಗವಾನ್ ಶಿವನು ಕಳಿಸಿದ ಒಂದು ದಿವ್ಯ ವಿಮಾನವು ತ್ವರಿತವಾಗಿ ಅಲ್ಲಿಗೆ ಬಂದಿತು. ಅದು ಶಿವಗಣಗಳಿಂದ ತುಂಬಿದ್ದು, ಬಗೆ-ಬಗೆಯ ಶೋಭಾ ಸಾಧನಗಳಿಂದ ಸಂಪನ್ನವಾಗಿತ್ತು. ಚಂಚುಲೆಯು ಆ ವಿಮಾನದಲ್ಲಿ ಆರೂಢಳಾದಳು. ಭಗವಾನ್ ಶಿವನ ಶ್ರೇಷ್ಠ ಪಾರ್ಷದರು ಆಕೆಯನ್ನು ತತ್‌ಕ್ಷಣವೇ ಶಿವಪುರಿಗೆ ತಲುಪಿಸಿದರು. ಆಕೆಯ ಎಲ್ಲ ಪಾಪಮಲಗಳು ತೊಳೆದು ಹೋಗಿದ್ದವು. ಅವಳು ದಿವ್ಯರೂಪಧಾರೀ ದಿವ್ಯಾಂಗನೆಯಾಗಿ ಹೋಗಿದ್ದಳು. ಅವಳ ದಿವ್ಯ ಅವಯವಗಳು ಆಕೆಯ ಶೋಭೆಯನ್ನು ಹೆಚ್ಚಿಸಿದ್ದವು. ತಲೆಯಲ್ಲಿ ಅರ್ಧಚಂದ್ರಾಕಾರ ಕಿರೀಟವನ್ನು ಧರಿಸಿದ್ದ ಆಕೆಯು ಗೌರಾಂಗೀ ದೇವಿಯಂತೆ ಶೋಭಿಸುತ್ತಿದ್ದು, ದಿವ್ಯ ಆಭೂಷಣಗಳಿಂದ ವಿಭೂಷಿತಳಾಗಿದ್ದಳು. ಶಿವಪುರಿಯನ್ನು ತಲುಪಿ ಆಕೆಯು ಸನಾತನ ದೇವನಾದ ತ್ರಿನೇತ್ರಧಾರೀ ಮಹಾದೇವನನ್ನು ನೋಡಿದಳು. ಮುಖ್ಯ-ಮುಖ್ಯರಾದ ದೇವತೆಗಳೆಲ್ಲರೂ ಅವನ ಸೇವೆಯಲ್ಲಿ ಟೊಂಕಕಟ್ಟಿ ನಿಂತಿದ್ದರು. ಗಣಪತಿ, ಭೃಂಗೀ, ನಂದೀಶ್ವರ, ವೀರಭದ್ರರೇ ಮೊದಲಾದವರು ಉತ್ತಮ ಭಕ್ತಿಯಿಂದ ಅವನ ಸೇವೆಯಲ್ಲಿ ಉಪಸ್ಥಿತರಾಗಿದ್ದರು. ಪರಶಿವನ ಅಂಗ ಕಾಂತಿಯು ಕೋಟಿಸೂರ್ಯರಂತೆ ಪ್ರಕಾಶಿಸುತ್ತಿತ್ತು. ಕಂಠದಲ್ಲಿ ನೀಲಿ ಚಿಹ್ನೆಯು ಶೋಭಿಸುತ್ತಿತ್ತು. ಐದು ಮುಖಗಳಿದ್ದು ಪ್ರತಿಯೊಂದರಲ್ಲಿಯೂ ಮೂರು-ಮೂರು ಕಣ್ಣುಗಳಿದ್ದವು. ಮಸ್ತಕದಲ್ಲಿ ಅರ್ಧ ಚಂದ್ರಾಕಾರ ಕಿರೀಟವು ಶೋಭಿಸುತ್ತಿತ್ತು. ಅವನ ವಾಮಾಂಗದಲ್ಲಿ ಗೌರೀದೇವಿಯು ಕುಳಿತ್ತಿದ್ದು, ವಿದ್ಯುತ್ ಪುಂಜದಂತೆ ಪ್ರಕಾಶಿಸುತ್ತಿದ್ದಳು. ಗೌರೀಪತೀ ಮಹಾದೇವನ ಅಂಗಕಾಂತಿಯು ಕರ್ಪೂರದಂತೆ ಗೌರವಾಗಿತ್ತು. ಶರೀರವು ಭಸ್ಮಲೇಪಿತವಾಗಿತ್ತು, ಬಿಳಿಯ ಶುಭ್ರವಸನವನ್ನು ಹೊದ್ದುಕೊಂಡಿದ್ದನು. ಹೀಗೆ ಪರಮೋಜ್ವಲ ಭಗವಾನ್ ಶಂಕರನ ದರ್ಶನ ಪಡೆದ ಆ ಬ್ರಾಹ್ಮಣ ಪತ್ನಿ ಚಂಚುಲೆಯು ಬಹಳ ಪ್ರಸನ್ನವಾದಳು. ಅತ್ಯಂತ ಪ್ರೀತಿಯಿಂದ ಆಕೆಯು ಬಹಳ ಉತ್ಸುಕತೆಯಿಂದ ಭಗವಂತನನ್ನು ಮತ್ತೆ-ಮತ್ತೆ ನಮಸ್ಕರಿಸಿದಳು. ಕೈ ಜೋಡಿಸಿಕೊಂಡು ತುಂಬು ಪ್ರೇಮಾನಂದ, ಸಂತೋಷ

ಯುಕ್ತಳಾಗಿ ವಿನೀತಭಾವದಿಂದ ನಿಂತುಕೊಂಡಳು. ಆಕೆಯ ಕಣ್ಣುಗಳಿಂದ ಅವಿಶ್ರಾಂತವಾಗಿ ಆನಂದಾಶ್ರುಗಳು ಹರಿಯ ತೊಡಗಿದವು. ಶರೀರದಲ್ಲಿ ರೋಮಾಂಚ ಉಂಟಾಯಿತು. ಆಗ ಭಗವತಿ ಪಾರ್ವತಿದೇವಿ ಮತ್ತು ಭಗವಾನ್ ಶಂಕರನು ಅತ್ಯಂತ ಕರುಣೆಯಿಂದ ತಮ್ಮ ಬಳಿಗೆ ಕರಿಸಿಕೊಂಡು, ಸೌಮ್ಯ ದೃಷ್ಟಿಯಿಂದ ಅವಳತ್ತ ನೋಡಿದರು. ಪಾರ್ವತೀದೇವಿಯು ದಿವ್ಯರೂಪ ಧಾರಿಣಿಯಾದ ಬಿಂದುಗಪ್ರಿಯೆ ಚಂಚುಲೆಯನ್ನು ಪ್ರೇಮದಿಂದ ತನ್ನ ಸಖಿಯನ್ನಾಗಿಸಿಕೊಂಡಳು. ಅವಳು ಆ ಪರಮಾನಂದ ಘನ ಜ್ಯೋತಿಸ್ವರೂಪ ಸನಾತನ ಧಾಮದಲ್ಲಿ ಅವಿಚಲವಾಗಿ ನಿವಾಸವನ್ನು ಪಡೆದು, ದಿವ್ಯ ಸೌಖ್ಯದಿಂದ ಸಂಪನ್ನಳಾಗಿ, ಅಕ್ಷಯ ಸುಖವನ್ನು ಅನುಭವಿಸ ತೊಡಗಿದಳು.

(ಅಧ್ಯಾಯ - ೪)

❐ ❐ ❐

ಪಾರ್ವತಿದೇವಿಯ ಆಜ್ಞೆಯಂತೆ ತುಂಬುರು ವಿಂಧ್ಯಪರ್ವತದಲ್ಲಿ ಶಿವಪುರಾಣದ ಕಥೆಯನ್ನು ಬಿಂದುಗನಿಗೆ ಹೇಳಿ ಪಿಶಾಚ ಯೋನಿಯಿಂದ ಉದ್ಧಾರಮಾಡಿದುದು

ಶ್ರೀಸೂತಪುರಾಣಿಕರು ಹೇಳುತ್ತಾರೆ- ಶೌನಕರೇ! ಒಂದು ದಿನ ಪರಮಾನಂದದಲ್ಲಿ ಮಗ್ನಳಾದ ಚಂಚುಲೆಯು ಉಮಾದೇವಿಯ ಬಳಿಗೆ ಹೋಗಿ, ಪ್ರಣಾಮಗೈದು, ಎರಡೂ ಕೈಗಳನ್ನು ಜೋಡಿಸಿ, ಆಕೆಯನ್ನು ಸ್ತುತಿಸತೊಡಗಿದಳು.

ಚಂಚುಲೆಯು ಹೇಳಿದಳು- ಓ ಗಿರಿರಾಜ ನಂದಿನಿಯೇ! ಸ್ಕಂದಮಾತೆಯಾದ ಉಮಾದೇವಿಯೇ! ಮನುಷ್ಯರು ಸದಾಕಾಲ ನಿನ್ನನ್ನು ಸೇವಿಸುತ್ತಿರುವರು. ಸಮಸ್ತ ಸುಖಿಗಳನ್ನು ಕೊಡುವಂತ ಶಂಭುಪ್ರಿಯಳೇ! ನೀನು ಬ್ರಹ್ಮಸ್ವರೂಪಿಣಿಯಾಗಿದ್ದು, ಬ್ರಹ್ಮಾ-ವಿಷ್ಣು ಮೊದಲಾದ ದೇವತೆಗಳಿಂದ ಸೇವ್ಯವಾಗಿರುವೆ. ನೀನೇ ಸಗುಣಾ-ನಿರ್ಗುಣಾ ಆಗಿದ್ದು, ನೀನೇ ಸೂಕ್ಷ್ಮ, ಸಚ್ಚಿದಾನಂದ ಸ್ವರೂಪಿಣಿ ಆದ್ಯಾ ಪ್ರಕೃತಿಯಾಗಿರುವೆ. ನೀನೇ ಪ್ರಪಂಚದ ಸೃಷ್ಟಿ-ಸ್ಥಿತಿ-ಸಂಹಾರ ಮಾಡುವವಳು. ತ್ರಿಗುಣಗಳಿಗೂ ನೀನೇ ಆಶ್ರಯಳಾಗಿರುವೆ. ಬ್ರಹ್ಮಾ- ವಿಷ್ಣು-ಮಹೇಶ್ವರ ಈ ಮೂರೂ ದೇವತೆಗಳ ಆವಾಸಸ್ಥಾನ ಹಾಗೂ ಅವರ ಉತ್ತಮ ಪ್ರತಿಷ್ಠೆಯನ್ನು ಮಾಡುವ ಪರಾಶಕ್ತಿಯೂ ನೀನೇ ಆಗಿರುವೆ.

ಶ್ರೀಸೂತಪುರಾಣಿಕರು ಹೇಳುತ್ತಾರೆ- ಶೌನಕರೇ! ಸದ್ಗತಿಯು ಪ್ರಾಪ್ತವಾಗಿದ್ದ ಆ ಚಂಚುಲೆಯು ಹೀಗೆ ಮಹೇಶ್ವರ ಪತ್ನಿಯಾದ ಉಮೆಯನ್ನು ಸ್ತುತಿಸಿ ತಲೆತಗ್ಗಿಸಿ ಸುಮ್ಮನಾದಳು. ಆಕೆಯ ಕಣ್ಣುಗಳಿಂದ ಪ್ರೇಮಾಶ್ರುಗಳು ಚಿಮ್ಮುದುವು. ಆಗ ಕರುಣೆಯಿಂದ ಶಂಕರಪ್ರಿಯೆ ಭಕ್ತವತ್ಸಲೆಯಾದ ಪಾರ್ವತಿದೇವಿಯು ಚಂಚುಲೆಯನ್ನು ಸಂಬೋಧಿಸಿ ಬಹಳ ಪ್ರೇಮದಿಂದ ಹೀಗೆ ಹೇಳಿದಳು.

ಪಾರ್ವತಿಯು ಅಂದಳು- ಸಖೀ ಚಂಚುಲೇ! ಸುಂದರಿಯೇ! ನೀನು ಮಾಡಿದ ಸ್ತುತಿಯಿಂದ ನಾನು ಬಹಳ ಪ್ರಸನ್ನಳಾಗಿದ್ದೇನೆ. ಹೇಳು, ಯಾವ ವರವನ್ನು ಕೇಳುವೆ? ನಿನಗಾಗಿ ನನ್ನಲ್ಲಿ ಕೊಡಲಾರದ ವಸ್ತುವೇ ಇಲ್ಲ.

ಚಂಚುಲೆಯು ಹೇಳಿದಳು - ಪುಣ್ಯಾತ್ಮಳಾದ ಗಿರಿರಾಜ ಕುಮಾರಿಯೇ! ನನ್ನ ಪತಿ ಬಿಂದುಗರು ಈಗ ಎಲ್ಲಿರುವರು? ಅವರ ಗತಿ ಏನಾಗಿದೆ? ಇದನ್ನು ನಾನು ತಿಳಿಯೆ. ಕಲ್ಯಾಣಮಯಿ ದೀನವತ್ಸಲೆಯೇ! ನಾನು ನನ್ನ ಪತಿಯೊಂದಿಗೆ ಕೂಡುವಂತಹ ಉಪಾಯವನ್ನು ಮಾಡು. ಮಹೇಶ್ವರೀ, ಮಹಾದೇವಿಯೇ! ನನ್ನ ಪತಿಯು ಓರ್ವ ನೀಚಜಾತಿಯ ವೇಶ್ಯೆಯಲ್ಲಿ ಆಸಕ್ತರಾಗಿದ್ದರು ಹಾಗೂ ಪಾಪದಲ್ಲೇ ಮುಳುಗಿ ಹೋಗಿದ್ದರು. ಅವರ ಮೃತ್ಯುವು ನನಗಿಂತ ಮೊದಲೇ ಆಗಿತ್ತು. ಅವರು ಯಾವ ಗತಿಯನ್ನು ಪಡೆದರೋ ತಿಳಿಯದು.

ಗಿರಿಜೆಯು ಹೇಳಿದಳು - ಮಗಳೇ! ಬಿಂದುಗನೆಂಬ ನಿನ್ನ ಪತಿಯು ದೊಡ್ಡಪಾಪಿಯಾಗಿದ್ದನು. ಅವನ ಅಂತಃಕರಣವು ತುಂಬಾ ದೂಷಿತವಾಗಿತ್ತು. ವೇಶ್ಯೆಯನ್ನು ಉಪಭೋಗಿಸುವ ಆ ಮಹಾಮೂಢನು ಸತ್ತ ಬಳಿಕ ನರಕದಲ್ಲಿ ಬಿದ್ದು, ಎಣಿಸಲಾರದಷ್ಟು ವರ್ಷಗಳವರೆಗೆ ನಾನಾ ರೀತಿಯ ದುಃಖಿಗಳನ್ನು ಭೋಗಿಸಿ, ಆ ಪಾಪಾತ್ಮನು ತನ್ನ ಉಳಿದಿರುವ ಪಾಪಗಳನ್ನು ಭೋಗಿಸಲಿಕ್ಕಾಗಿ ವಿಂಧ್ಯಪರ್ವತದಲ್ಲಿ ಪಿಶಾಚಿಯಾಗಿದ್ದಾನೆ ಈಗ ಅವನು ಪಿಶಾಚ ಅವಸ್ಥೆಯಲ್ಲೇ ಇದ್ದಾನೆ. ಮತ್ತು ನಾನಾ ವಿಧವಾದ ಕ್ಲೇಶಗಳನ್ನು ಅನುಭವಿಸುತ್ತಿದ್ದಾನೆ. ಆ ದುಷ್ಟನು ಅಲ್ಲೇ ಗಾಳಿಯನ್ನು ಕುಡಿದು ಇರುತ್ತಾ, ಸದಾಕಾಲ ಎಲ್ಲ ರೀತಿಯ ಕಷ್ಟಗಳನ್ನು ಸಹಿಸುತ್ತಿದ್ದಾನೆ.

ಶ್ರೀಸೂತಪುರಾಣಿಕರು ಹೇಳುತ್ತಾರೆ - ಶೌನಕರೇ! ಗೌರೀ ದೇವಿಯ ಮಾತನ್ನು ಕೇಳಿ, ಉತ್ತಮ ವ್ರತಗಳನ್ನು ಪಾಲಿಸುವ ಚಂಚುಲೆಯು ಆಗ ಪತಿಯ ಮಹಾದುಃಖಿದಿಂದ ದುಃಖಿತಳಾದಳು. ಮತ್ತೆ ಮನಸ್ಸನ್ನು ಸ್ಥಿರಗೊಳಿಸಿಕೊಂಡು, ಆ ಬ್ರಾಹ್ಮಣಪತ್ನಿಯು ಹೃದಯದಲ್ಲಿ ವ್ಯಥೆಗೊಂಡು ಮಹೇಶ್ವರಿಗೆ ನಮಸ್ಕರಿಸಿ ಪುನಃ ಕೇಳಿದಳು.

ಚಂಚುಲೆಯು ಹೇಳಿದಳು - ಮಹೇಶ್ವರಿಯೆ! ಮಹಾದೇವಿಯೇ! ನನ್ನ ಮೇಲೆ ಕೃಪೆಮಾಡಿ, ದೂಷಿತ ಕರ್ಮಗಳನ್ನು ಮಾಡುವ ನನ್ನ ಆ ದುಷ್ಟಪತಿಯನ್ನು ಈಗ ಉದ್ಧಾರಮಾಡಿಬಿಡು. ದೇವಿ! ಕುತ್ಸಿತ ಬುದ್ಧಿಯುಳ್ಳ ನನ್ನ ಪಾಪಾತ್ಮನಾದ ಪತಿಯು ಯಾವ ಉಪಾಯದಿಂದ ಉತ್ತಮಗತಿಯನ್ನು ಪಡೆಯಬಲ್ಲನು? ಇದನ್ನು ಬೇಗನೇ ತಿಳಿಸು. ನಿನಗೆ ನಮಸ್ಕಾರ ಮಾಡುತ್ತೇನೆ.

ಪಾರ್ವತಿಯು ಹೇಳಿದಳು - ಸಖೀ! ನಿನ್ನ ಪತಿಯು ಶಿವಪುರಾಣದ ಪುಣ್ಯಪ್ರದವಾದ ಉತ್ತಮ ಕಥೆಯನ್ನು ಕೇಳಿದರೆ ಎಲ್ಲ ದುರ್ಗತಿಗಳನ್ನು ದಾಟಿ ಅವನು ಉತ್ತಮಗತಿಗೆ ಭಾಗಿಯಾಗುತ್ತಾನೆ.

ಅಮೃತದಂತಿರುವ ಮಧುರ ಅಕ್ಷರಗಳಿಂದ ಕೂಡಿದ ಗೌರಿದೇವಿಯ ಈ ಮಾತನ್ನು ಆದರದಿಂದ ಕೇಳಿ ಚಂಚುಲೆಯು ಕೈ ಜೋಡಿಸಿ, ತಲೆ ತಗ್ಗಿಸಿ ಮತ್ತೆ ಮತ್ತೆ ವಂದಿಸಿಕೊಂಡಳು. ತನ್ನ ಪತಿಯ ಸಮಸ್ತ ಪಾಪಗಳು ಶುದ್ಧವಾಗಿ, ಉತ್ತಮ ಗತಿಯನ್ನು ಪಡೆಯಲಿಕ್ಕಾಗಿ ಪಾರ್ವತಿದೇವಿಯಲ್ಲಿ - ನನ್ನ ಪತಿಯು ಶಿವಪುರಾಣವನ್ನು ಕೇಳುವ ವ್ಯವಸ್ಥೆ ನೀನೇ ಮಾಡಬೇಕು ಎಂದು ಪದೇ-ಪದೇ ಪ್ರಾರ್ಥಿಸಿದಳು. ಬ್ರಾಹ್ಮಣ ಪತ್ನಿಯ ಮೇಲೆ ಶಿವಪ್ರಿಯಾ ಗೌರಿದೇವಿಗೆ ಅತ್ಯಂತ ಕರುಣೆಬಂತು. ಭಕ್ತವತ್ಸಲೆಯಾದ ಮಹೇಶ್ವರೀ ಗಿರಿರಾಜ ಕುಮಾರಿಯು ಭಗವಾನ್ ಶಿವನ ಉತ್ತಮ ಕೀರ್ತಿಯನ್ನು ಗಾನಮಾಡುವ ಗಂಧರ್ವರಾಜ ತುಂಬುರುವನ್ನು ಕರೆಸಿ, ಅವನಲ್ಲಿ ಪ್ರಸನ್ನತೆಯಿಂದ ಹೀಗೆ ಹೇಳಿದಳು. 'ಎಲೈ ತುಂಬುರುವೇ! ನಿನಗೆ ಭಗವಾನ್ ಶಿವನಲ್ಲಿ ಭಕ್ತಿಯಿದೆ. ನೀನು ನನ್ನ ಮನಸ್ಸಿನ ಮಾತನ್ನು ತಿಳಿದು ನನ್ನ ಅಭೀಷ್ಟಕಾರ್ಯವನ್ನು ಸಿದ್ಧ ಮಾಡುವವನಾಗಿರುವೆ. ಆದ್ದರಿಂದ ನಾನು ನಿನ್ನಲ್ಲಿ ಒಂದು ಮಾತನ್ನು ಹೇಳುವೆನು. ನಿನಗೆ ಮಂಗಳವಾಗಲಿ. ನೀನು ನನ್ನ ಈ ಸಖಿಯ ಜೊತೆಗೆ ವಿಂಧ್ಯಪರ್ವತಕ್ಕೆ ಹೋಗು. ಅಲ್ಲಿ ಒಂದು ಮಹಾಘೋರ, ಭಯಂಕರ ಪಿಶಾಚವು ನೆಲೆಸಿದೆ. ಅದರ ವೃತ್ತಾಂತವನ್ನು ನೀನು ಪ್ರಾರಂಭದಿಂದ ಕೇಳು. ನಾನು ನಿನ್ನಲ್ಲಿ ಪ್ರಸನ್ನತೆಯಿಂದ ಎಲ್ಲವನ್ನು ಹೇಳುವೆನು. ಹಿಂದಿನ ಜನ್ಮದಲ್ಲಿ ಆ ಪಿಶಾಚಿಯು ಬಿಂದುಗನೆಂಬ ಬ್ರಾಹ್ಮಣನಾಗಿದ್ದನು. ಅವನು ನನ್ನ ಈ ಸಖೀ ಚಂಚುಲೆಯ ಪತಿಯಾಗಿದ್ದನು. ಆದರೆ ಆ ದುಷ್ಟನು ವೇಶ್ಯಾಗಾಮಿಯಾಗಿ, ಸ್ನಾನ-ಸಂಧ್ಯಾದಿ ನಿತ್ಯಕರ್ಮಗಳನ್ನು ಬಿಟ್ಟು ಅಪವಿತ್ರನಾಗಿ ಇರುತ್ತಿದ್ದನು. ಕ್ರೋಧದಿಂದಾಗಿ ಅವನು ಮೂಢ ಬುದ್ಧಿಯವನಾಗಿದ್ದು, ಕರ್ತವ್ಯಾಕರ್ತವ್ಯದ ವಿವೇಕವೇ ಇರಲಿಲ್ಲ. ಅಭಕ್ಷ ಭಕ್ಷಣ, ಸಜ್ಜನರಲ್ಲಿ ದ್ವೇಷ, ದೂಷಿತ ವಸ್ತುಗಳನ್ನು ದಾನ ಪಡೆಯುವುದು ಇದೆ ಅವನ ಸ್ವಾಭಾವಿಕ ಕರ್ಮಗಳಾಗಿದ್ದವು. ಅವನು ಆಯುಧಗಳನ್ನು ಧರಿಸಿ ಹಿಂಸೆ ಮಾಡುತ್ತಿದ್ದನು. ಎಡಕ್ಕೈಯಿಂದ ತಿನ್ನುವುದು, ದೀನರನ್ನು ಸತಾಯಿಸುವುದು, ಕ್ರೂರತೆಯಿಂದ ಇತರರ ಮನೆಗಳಿಗೆ ಬೆಂಕಿ ಹಚ್ಚುವುದು, ಚಾಂಡಾಲದೊಂದಿಗೆ ಪ್ರೇಮವಿರಿಸಿ, ಪ್ರತಿದಿನವೂ ವೇಶ್ಯೆಯ ಸಂಪರ್ಕದಲ್ಲೇ ಇರುತ್ತಿದ್ದನು. ಅತ್ಯಂತ ದುಷ್ಟನೂ, ಪಾಪಿಯೂ ಆದ ಅವನು ತನ್ನ ಪತ್ನಿಯನ್ನು ತ್ಯಜಿಸಿ, ದುಷ್ಟರ ಸಂಗದಲ್ಲೇ ಆನಂದವನ್ನು ಕಾಣುತ್ತಿದ್ದನು. ಅವನು ಮರಣದತನಕವೂ ದುರಾಚಾರದಲ್ಲೇ ರತನಾಗಿದ್ದನು. ಅಂತ್ಯಕಾಲ ಬಂದಾಗ ಅವನ ಮೃತ್ಯುವಾಗಿ ಪಾಪಿಗಳ ಭೋಗಸ್ಥಾನವಾದ ಘೋರ ಯಮಪುರಿಗೆ ಹೋದನು. ಅಲ್ಲಿ ಅನೇಕ ನರಕಗಳನ್ನು ಅನುಭವಿಸಿ ಆ ದುಷ್ಟಾತ್ಮಾ ಜೀವನು ಈಗ ವಿಂಧ್ಯಪರ್ವತದಲ್ಲಿ ಪಿಶಾಚಿಯಾಗಿರುವನು. ಅಲ್ಲೇ ಆ ದುಷ್ಟ ಪಿಶಾಚಿಯು ತನ್ನ ಪಾಪಗಳ ಫಲಗಳನ್ನು ಅನುಭವಿಸುತ್ತಾ ಇರುವನು. ನೀನು ಅವನ ಮುಂದೆ ಪ್ರಯತ್ನಪೂರ್ವಕ ಪರಮಪುಣ್ಯಮಯವಾದ, ಸಮಸ್ತ ಪಾಪಗಳನ್ನು ನಾಶಮಾಡುವಂತಹ ಶಿವಪುರಾಣದ ದಿವ್ಯ ಕಥೆಯನ್ನು ಪ್ರವಚನಮಾಡು. ಶಿವಪುರಾಣದ ಕಥೆಯ ಶ್ರವಣವೂ ಎಲ್ಲಕ್ಕಿಂತ ಉತ್ಕೃಷ್ಟ ಪುಣ್ಯಕರ್ಮವಾಗಿದೆ. ಆದರಿಂದ ಅವನ ಹೃದಯವು ಬೇಗನೇ ಎಲ್ಲ ಪಾಪಗಳಿಂದ ಶುದ್ಧವಾಗಿ ಹೋದೀತು. ಹಾಗೂ ಅವನು ಪ್ರೇತಯೋನಿಯಿಂದ ಮುಕ್ತನಾಗಿ ಹೋಗುವನು. ಅಂತಹ ದುರ್ಗತಿಯಿಂದ ಮುಕ್ತನಾದ ಬಿಂದುಗನೆಂಬ ಪಿಶಾಚಿಯನ್ನು ನನ್ನ ಆಜ್ಞೆಯಂತೆ ವಿಮಾನದಲ್ಲಿ ಕುಳ್ಳಿರಿಸಿ, ನೀನು ಭಗವಾನ್ ಶಿವನ ಸಮೀಪಕ್ಕೆ ಕರೆದುಕೊಂಡು ಬಾ'.

ಶ್ರೀಸೂತಪುರಾಣಿಕರು ಹೇಳುತ್ತಾರೆ- ಶೌನಕರೇ! ಮಹೇಶ್ವರೀ ಉಮೆಯ ಈ ಆದೇಶದಿಂದ ಗಂಧರ್ವರಾಜ ತುಂಬುರುವು ಮನಸ್ಸಿನಲ್ಲೇ ಸಂತೋಷಗೊಂಡು, ಅವನು ತನ್ನ ಭಾಗ್ಯವನ್ನು ಹೊಗಳಿಕೊಂಡನು. ಬಳಿಕ ಆ ಪಿಶಾಚಿಯ ಸಾಧ್ವಿಯಾದ ಪತ್ನೀ ಚಂಚುಲೆಯೊಂದಿಗೆ ವಿಮಾನದಲ್ಲಿ ಕುಳಿತು ನಾರದರ ಪ್ರಿಯ ಮಿತ್ರನಾದ ತುಂಬುರು ವೇಗವಾಗಿ ಆ ಪಿಶಾಚಿಯು ಇರುವ ವಿಂಧ್ಯಪರ್ವತಕ್ಕೆ ತೆರಳಿದನು. ಅಲ್ಲಿ ಅವನು ಆ ಪಿಶಾಚಿಯನ್ನು ನೋಡಿದನು. ಅದರ ಶರೀರ ವಿಶಾಲವಾಗಿದ್ದು, ಗದ್ದವು ದೊಡ್ಡದಾಗಿತ್ತು. ಅದು ಕೆಲವೊಮ್ಮೆ ನಗುತ್ತಿತ್ತು, ಕೆಲವೊಮ್ಮೆ ಅಳುತ್ತಿತ್ತು, ಕೆಲವೊಮ್ಮೆ ಕುಣಿಯುತ್ತಿತ್ತು. ಅದರ ರೂಪವು ವಿಕರಾಳವಾಗಿತ್ತು. ಭಗವಾನ್ ಶಿವನ ಉತ್ತಮ ಕೀರ್ತಿಯನ್ನು ಗಾನ ಮಾಡುವ

ಮಹಾನುಭಾವನಾದ ತುಂಬುರುವು ಆ ಅಂತ್ಯತ ಭಯಂಕರ ಪಿಶಾಚವನ್ನು ಪಾಶಗಳಿಂದ ಕಟ್ಟಿಹಾಕಿದನು. ಅನಂತರ ತುಂಬುರುವು ಶಿವಪುರಾಣದ ಕಥೆಯನ್ನು ಓದುವ ನಿಶ್ಚಯಮಾಡಿ ಮಹೋತ್ಸವಯುಕ್ತ ಸ್ಥಾನ ಮತ್ತು ಮಂಟಪಾದಿಗಳನ್ನು ರಚಿಸಿದನು. ಇಷ್ಟರಲ್ಲಿ ಸಮಸ್ತ ಲೋಕಗಳಲ್ಲಿ – ದೇವೀ ಪಾರ್ವತಿಯ ಆಜ್ಞೆಯಿಂದ ಒಂದು ಪಿಶಾಚವನ್ನು ಉದ್ಧಾರಮಾಡುವ ಉದ್ದೇಶದಿಂದ ಶಿವಪುರಾಣದ ಉತ್ತಮ ಕಥೆಯನ್ನು ಹೇಳಲು ತುಂಬುರು ವಿಂಧ್ಯಪರ್ವತಕ್ಕೆ ಬಂದಿರುವನೆಂಬ ವಾರ್ತೆಯು ತ್ವರಿತವಾಗಿ ಪ್ರಚಾರವಾಯಿತು. ಮತ್ತೆ ಆ ಕಥೆಯನ್ನು ಕೇಳಲು ಅನೇಕ ಋಷಿ-ಮುನಿಗಳು ಶೀಘ್ರವಾಗಿ ಅಲ್ಲಿಗೆ ತಲುಪಿದರು. ಆದರದಿಂದ ಶಿವಪುರಾಣವನ್ನು ಕೇಳಲಿಕ್ಕಾಗಿ ಬಂದಿರುವ ಶ್ರೇಯಸ್ಕರ ಜನಸಮುದಾಯವು ಅದ್ಭುತವಾಗಿ ಆ ಪರ್ವತದ ಮೇಲೆ ನೆರೆಯಿತು. ತುಂಬುರುವು ಆ ಪಿಶಾಚಿಯನ್ನು ಪಾಶಗಳಿಂದ ಬಂಧಿಸಿ ಒಂದು ಆಸನದಲ್ಲಿ ಕುಳ್ಳಿರಿಸಿದರು. ಕೈಯಲ್ಲಿ ವೀಣೆಯನ್ನೆತ್ತಿಕೊಂಡು ಗೌರೀಪತಿಯ ಕಥೆಯನ್ನು ಹಾಡಲು ಪ್ರಾರಂಭಿಸಿದರು. ಮೊದಲನೆಯ ವಿದ್ಯೇಶ್ವರ ಸಂಹಿತೆಯಿಂದ ಹಿಡಿದು ಏಳನೆಯ ವಾಯು ಸಂಹಿತೆಯವರೆಗೆ ಮಾಹಾತ್ಮ್ಯ ಸಹಿತ ಶಿವಪುರಾಣದ ಕಥೆಯನ್ನು ಅವರು ಸ್ಪಷ್ಟವಾಗಿ ವರ್ಣಿಸಿದರು. ಏಳು ಸಂಹಿತೆಗಳ ಸಹಿತ ಶಿವಪುರಾಣವನ್ನು ಆದರದಿಂದ ಶ್ರವಣ ಮಾಡಿದ ಶ್ರೋತೃಗಳೆಲ್ಲರೂ ಕೃತಾರ್ಥರಾದರು. ಆ ಪರಮ ಪುಣ್ಯಮಯ ಶಿವಪುರಾಣವನ್ನು ಕೇಳಿದ ಪಿಶಾಚಿಯು ತನ್ನ ಎಲ್ಲ ಪಾಪಗಳನ್ನು ತೊಳೆದುಕೊಂಡು ಪಿಶಾಚ ಶರೀರವನ್ನು ತ್ಯಜಿಸಿಬಿಟ್ಟಿತು. ಮತ್ತೆ ಶೀಘ್ರವಾಗಿ ಅದಕ್ಕೆ ದಿವ್ಯರೂಪವುಂಟಾಯಿತು ಅವನ ಗೌರವರ್ಣದ ಅಂಗಕಾಂತಿಯಿಂದ ಕೂಡಿದ ಶರೀರದಲ್ಲಿ ಶ್ವೇತವಸ್ತ್ರ ಹಾಗೂ ಪುರುಷೋಚಿತವಾದ ಎಲ್ಲ ವಿಧದ ಆಭೂಷಣಗಳು ಹೊಳೆಯುತ್ತಿದ್ದವು. ಅವನು ತ್ರಿನೇತ್ರಧಾರೀ ಚಂದ್ರಶೇಖರನ ಸಾರೂಪ್ಯವನ್ನು ಪಡೆದು ಕೊಂಡನು. ಹೀಗೆ ದಿವ್ಯದೇಹಧಾರಿಯಾಗಿ ಶ್ರೀಮಾನ್ ಬಿಂದುಗನು ತನ್ನ ಪ್ರಾಣವಲ್ಲಭೆ ಚಂಚುಲೆಯೊಂದಿಗೆ ಪಾರ್ವತೀವಲ್ಲಭ ಭಗವಾನ್ ಶಿವನ ಗುಣಗಾನವನ್ನು ಮಾಡಲು ತೊಡಗಿದನು. ದಿವ್ಯರೂಪದಿಂದ ಶೋಭಿಸುವ ದಂಪತಿಗಳನ್ನು ನೋಡಿ ಎಲ್ಲ ಋಷಿ-ಮುನಿಗಳು ಅತ್ಯಂತ ವಿಸ್ಮಿತರಾದರು. ಅವರ ಚಿತ್ತವು ಪರಮಾನಂದದಿಂದ ಪರಿಪೂರ್ಣವಾಯಿತು. ಭಗವಾನ್ ಮಹೇಶ್ವರನ ಆ ಅದ್ಭುತ ಚರಿತ್ರವನ್ನು ಕೇಳಿ, ಎಲ್ಲ ಶ್ರೋತೃಗಳು ಪರಮ ಕೃತಾರ್ಥರಾದರು. ಪ್ರೇಮಪೂರ್ವಕ ಶ್ರೀಶಿವನ ಪವಿತ್ರ ಕೀರ್ತಿಯನ್ನು ಕೊಂಡಾಡುತ್ತಾ ತಮ್ಮ-ತಮ್ಮ ಸ್ಥಾನಗಳಿಗೆ ಹೊರಟುಹೋದರು. ದಿವ್ಯರೂಪಧಾರಿಯಾದ ಶ್ರೀಮಾನ್ ಬಿಂದುಗನೂ ಸುಂದರವಾದ ವಿಮಾನದಲ್ಲಿ ಪ್ರಿಯತಮೆಯೊಂದಿಗೆ ಸುಖವಾಗಿ ಕುಳಿತು ಆಕಾಶದಲ್ಲಿ ಸ್ಥಿತನಾಗಿ ಅತ್ಯಂತ ಶೋಭಾಯಮಾನನಾದನು.

ಅನಂತರ ಬಿಂದುಗನು ಮಹೇಶ್ವರನ ಸುಂದರವಾದ ಮನೋಹರ ಗುಣಗಳನ್ನು ಹಾಡುತ್ತಾ, ತನ್ನ ಪ್ರಿಯತಮೆ ಮತ್ತು ತುಂಬುರುವಿನೊಂದಿಗೆ ಬೇಗನೇ ಶಿವಧಾಮಕ್ಕೆ ತಲುಪಿದನು. ಅಲ್ಲಿ ಭಗವಾನ್ ಮಹೇಶ್ವರ ಹಾಗೂ ಪಾರ್ವತೀದೇವಿಯರು ಪ್ರಸನ್ನತೆಯಿಂದ ಬಿಂದುಗನನ್ನು ಬಹಳ ಸತ್ಕಾರಮಾಡಿ, ಅವನನ್ನು ತನ್ನ ಪಾರ್ಷದನನ್ನಾಗಿಸಿ ಕೊಂಡನು. ಅವನ ಪತ್ನೀ ಚಂಚುಲೆಯು ಪಾರ್ವತೀ ದೇವಿಯ ಸಖೀಯಾದಳು. ಘನೀಭೂತ ಜ್ಯೋತಿಃ ಸ್ವರೂಪವಾದ ಆ ಪರಮಾನಂದಮಯ ಸನಾತನ ಧಾಮದಲ್ಲಿ ಅವಿಚಲ ನಿವಾಸವನ್ನು ಪಡೆದು ಆ ದಂಪತಿಗಳು ಪರಮ ಸುಖಿಗಳಾದರು.

(ಅಧ್ಯಾಯ -೫)

❐ ❐ ❐

ಶಿವಪುರಾಣದ ಶ್ರವಣದ ವಿಧಿ ಹಾಗೂ ಶ್ರೋತೃಗಳು ಪಾಲಿಸುವ ಯೋಗ್ಯ ನಿಯಮಗಳ ವರ್ಣನೆ

ಶೌನಕರು ಕೇಳಿದರು – ಮಹಾಪ್ರಾಜ್ಞರಾದ ವ್ಯಾಸಶಿಷ್ಯ ಸೂತಪುರಾಣಿಕರೇ ! ತಮಗೆ ನಮಸ್ಕಾರವು. ಧನ್ಯರಾದ ತಾವು ಶಿವಭಕ್ತರಲ್ಲಿ ಶ್ರೇಷ್ಠರಾಗಿರುವಿರಿ. ತಮ್ಮ ಮಹಾನ್ ಗುಣಗಳನ್ನು ವರ್ಣಿಸಲು ಯೋಗ್ಯವಾಗಿವೆ. ಈಗ ನೀವು ಶ್ರೇಯಸ್ಕರ ಶಿವಪುರಾಣದ ಶ್ರವಣದ ವಿಧಿಯನ್ನು ತಿಳಿಸಿರಿ. ಅದರಿಂದ ಎಲ್ಲ ಶ್ರೋತೃಗಳಿಗೂ ಸಂಪೂರ್ಣವಾದ ಉತ್ತಮ ಫಲದ ಪ್ರಾಪ್ತಿಯಾಗುವುದು.

ಶ್ರೀಸೂತಪುರಾಣಿಕರು ಹೇಳಿದರು– ಶೌನಕ ಮುನಿಯೇ ! ಈಗ ನಾನು ನಿನಗೆ ಸಂಪೂರ್ಣಫಲದ ಪ್ರಾಪ್ತಿಗಾಗಿ ಶಿವಪುರಾಣದ ಶ್ರವಣವಿಧಿಯನ್ನು ಹೇಳುವೆನು.

ಮೊದಲಿಗೆ ಜ್ಯೋತಿಷಿಯನ್ನು ಕರೆಸಿ ದಾನ-ಮಾನಗಳಿಂದ ಅವರನ್ನು ಸಂತೋಷಗೊಳಿಸಿ ತನ್ನ ಸಹಯೋಗಿಗಳೊಂದಿಗೆ ಕುಳಿತು ಕಥೆ ಸಮಾಪ್ತಿ ಯಾಗುವವರೆಗೆ ಯಾವುದೇ ವಿಘ್ನಗಳೂ, ಬಾಧೆಗಳು ಬಾರದಿರುವಂತಹ ಶುದ್ಧ ಮುಹೂರ್ತವನ್ನು ನಿಶ್ಚಯಿಸ ಬೇಕು. ಮತ್ತೆ ಪ್ರಯತ್ನ ಪೂರ್ವಕ ದೇಶ- ವಿದೇಶಗಳಿಗೆ, ಪ್ರತಿಯೊಂದು ಸ್ಥಾನಗಳಿಗೂ 'ನಮ್ಮಲ್ಲಿ ಶಿವಪುರಾಣದ ಕಥೆಯು ನಡೆಯುವುದಿದೆ. ತಾವು ಕಲ್ಯಾಣದ ಇಚ್ಛುಕರಾದ ಜನರೊಂದಿಗೆ ಅದನ್ನು ಕೇಳಲಿಕ್ಕಾಗಿ ಅವಶ್ಯವಾಗಿ ಆಗಮಿಸಬೇಕು, ಎಂಬ ಸಂದೇಶವನ್ನು ಕಳಿಸಬೇಕು. ಅನೇಕ ಜನರು ಭಗವಾನ್ ಹರನ ಕಥೆಯಿಂದ ದೂರವಾಗಿದ್ದಾರೆ. ಎಷ್ಟೋ ಸ್ತ್ರೀ-ಶುದ್ರಾದಿಗಳು ಭಗವಾನ್ ಶಂಕರನ ಕಥಾ-ಕೀರ್ತನೆಯಿಂದ ವಂಚಿತರಾಗುತ್ತಿದ್ದಾರೆ. ಅವರೆಲ್ಲರಿಗೂ ಸುದ್ದಿ ತಲುಪುವಂತೆ ವ್ಯವಸ್ಥೆ ಮಾಡಬೇಕು. ದೇಶ-ದೇಶಗಳಲ್ಲಿ ಭಗವಾನ್ ಶಿವನ ಭಕ್ತರನ್ನು, ಶಿವ ಕಥಾ-ಕೀರ್ತನೆಯ ಮತ್ತು ಶ್ರವಣಕ್ಕೆ ಉತ್ಸುಕರಾದರೆಲ್ಲರನ್ನು ಆದರಪೂರ್ವಕವಾಗಿ ಕರೆಸಬೇಕು. ಬಂದಿರುವ ಜನರೆಲ್ಲರನ್ನು ಎಲ್ಲ ವಿಧದಿಂದ ಆದರ-ಸತ್ಕಾರ ಮಾಡಬೇಕು. ಶಿವಮಂದಿರದಲ್ಲಿ, ತೀರ್ಥಕ್ಷೇತ್ರದಲ್ಲಿ, ವನದಲ್ಲಿ, ಅಥವಾ ಮನೆಯಲ್ಲಿ ಶಿವಪುರಾಣದ ಕಥೆಯನ್ನು ಕೇಳಲು ಉತ್ತಮ ಸ್ಥಾನವನ್ನು ನಿರ್ಮಾಣಮಾಡಬೇಕು. ಬಾಳೆಯ ಕಂಬಗಳಿಂದ ಎತ್ತರವಾದ ಒಂದು ಮಂಟಪವನ್ನು ಸಿದ್ಧಗೊಳಿಸಬೇಕು. ಅದನ್ನು ಸುತ್ತಲೂ ಫಲ-ಪುಷ್ಪಗಳಿಂದ ಮತ್ತು ಸುಂದರವಾದ ಮೇಲ್ಕಟ್ಟುಗಳಿಂದ ಅಲಂಕರಿಸಬೇಕು. ನಾಲ್ಕೂ ಕಡೆಗಳಲ್ಲಿ ಧ್ವಜ-ಪತಾಕೆಗಳಿಂದ, ನಾನಾರೀತಿಯ ಸುವಸ್ತುಗಳಿಂದ ಶೃಂಗರಿಸಿ ಸುಂದರ ಶೋಭಾಸಂಪನ್ನವಾಗಿಸಬೇಕು. ಭಗವಾನ್ ಶಿವನ ಕುರಿತು ಎಲ್ಲ ರೀತಿಯಿಂದ ಉತ್ತಮವಾದ ಭಕ್ತಿಯನ್ನು ಇರಿಸಿಕೊಳ್ಳಬೇಕು; ಅದೇ ಎಲ್ಲ ವಿಧವಾದ ಆನಂದವನ್ನು ಕರುಣಿಸುವಂತಹುದು. ಪರಮಾತ್ಮ ಭಗವಾನ್ ಶಿವನಿಗಾಗಿ ದಿವ್ಯ ಆಸನವನ್ನು ನಿರ್ಮಿಸಬೇಕು. ಅದರಂತೆ ಕಥಾ ಪ್ರವಚನ ಮಾಡುವರಿಗೂ ದಿವ್ಯ ಸುಖಾಸನವನ್ನು ಸಿದ್ಧಗೊಳಿಸಬೇಕು. ಮುನಿವರ್ಯನೇ! ನಿಯಮ ಪೂರ್ವಕವಾಗಿ ಕಥೆಯನ್ನು ಕೇಳುವ ಶ್ರೋತೃಗಳಿಗೂ ಯಥಾಯೋಗ್ಯ ಸುಂದರ ಸ್ಥಾನಗಳನ್ನು ಕಲ್ಪಿಸಬೇಕು. ಇತರ ಜನರಿಗೂ ಸಾಧಾರಣ ಸ್ಥಾನವನ್ನು ಇರಿಸಬೇಕು. ಯಾರ ಮುಖದಿಂದ ಹೊರಟ ವಾಣಿಯು ದೇಹಧಾರಿಗಳಿಗಾಗಿ ಕಾಮಧೇನುವಿನಂತೆ ಅಭೀಷ್ಟ ಫಲವನ್ನು ಕೊಡು ವಂತಹುದೋ, ಆ ಪುರಾಣವೇತ್ತರಾದ ವಿದ್ವಾನ್ ಪ್ರವಚನಕಾರರ ವಿಷಯದಲ್ಲಿ ತುಚ್ಛ ಬುದ್ಧಿಯನ್ನು ಎಂದೂ ಇಡಬಾರದು. ಜಗತ್ತಿನಲ್ಲಿ ಜನ್ಮ ಹಾಗೂ ಗುಣಗಳಿಂದ ಅನೇಕರು ಗುರುಗಳಿರುತ್ತಾರೆ; ಆದರೆ ಅವರೆಲ್ಲರಲ್ಲಿ ಪುರಾಣಗಳನ್ನು ತಿಳಿದ ವಿದ್ವಾಂಸನೇ ಪರಮಗುರು ಎಂದು ತಿಳಿಯಲಾಗಿದೆ. ಪುರಾಣಕನು ಪವಿತ್ರನೂ, ದಕ್ಷನೂ, ಶಾಂತನೂ, ಈರ್ಷೆಯಿಲ್ಲದವನೂ, ಸಾಧುವೂ, ದಯಾಳುವೂ ಆಗಿರಬೇಕು. ಇಂತಹ ಪ್ರವಚನ ಕುಶಲಿಯು ಈ ಪುಣ್ಯಮಯ ಕಥೆಯನ್ನು ಹೇಳಲಿ. ಸೂರ್ಯೋದಯ ದಿಂದ ಪ್ರಾರಂಭಿಸಿ ಮೂರುವರೆ ಯಾಮದವರೆಗೆ (ಅಂದರೆ ಅಂದಾಜು ಸಂಜೆ ೪ ಗಂಟೆಯವರೆಗೆ) ಉತ್ತಮ ಬುದ್ಧಿಯುಳ್ಳ ವಿದ್ವಾಂಸ ನಾದವನು ಶಿವಪುರಾಣದ ಕಥೆಯನ್ನು ಚೆನ್ನಾಗಿ ಪ್ರವಚಿಸಬೇಕು. ಮಧ್ಯಾಹ್ನ ಕಾಲದಲ್ಲಿ ಎರಡು ಗಳಿಗೆ ಕಥೆಯನ್ನು ನಿಲ್ಲಿಸಬೇಕು. ಏಕೆಂದರೆ, ಕಥಾ-ಕೀರ್ತನದಿಂದ ಬಿಡುವು ದೊರೆತು ಮಲ-ಮೂತ್ರತ್ಯಾಗಕ್ಕೆ ಅನುಕೂಲ ವಾಗುವುದು.

ಕಥಾ ಪ್ರಾರಂಭದ ಮೊದಲದಿನ ಪ್ರವಚನಕಾರನು ವ್ರತಸ್ಥನಾಗಿ ಕ್ಷೌರಮಾಡಿಸಿಕೊಳ್ಳಬೇಕು. ಕಥೆ ನಡೆಯುವ ದಿನಗಳಲ್ಲಿ ಪ್ರಯತ್ನಪೂರ್ವಕ ಪ್ರಾತಃಕಾಲದಲ್ಲೇ ಎಲ್ಲ ನಿತ್ಯಕರ್ಮಗಳನ್ನು ಸಂಕ್ಷೇಪವಾಗಿ ಮುಗಿಸಿಕೊಳ್ಳಬೇಕು. ಪ್ರವಚನಕಾರನ ಜೊತೆಗೆ ಅವನಂತೆ ವಿದ್ವಾಂಸನಾದ ಮತ್ತೊಬ್ಬನನ್ನು ನಿಯಮಿಸಬೇಕು. ಅವನೂ ಕೂಡ ಎಲ್ಲ ವಿಧದಿಂದ ಸಂಶಯಗಳನ್ನು ಕಳೆಯಲು ಸಮರ್ಥನಾಗಿದ್ದು, ಜನರಿಗೆ ತಿಳಿಸಿ ಹೇಳುವುದರಲ್ಲಿ ಚತುರನಾಗಿರಬೇಕು. ಮೊದಲಿಗೆ ಕಥೆಯಲ್ಲಿ ವಿಘ್ನಗಳು ಬಾರದಿರುವಂತೆ ಗಣಪತಿಯನ್ನು ಪೂಜಿಸಬೇಕು. ಕಥೆಯ ಸ್ವಾಮಿಯಾದ ಭಗವಾನ್ ಶಿವನ ಮತ್ತು ವಿಶೇಷವಾಗಿ ಶಿವಪುರಾಣದ ಪುಸ್ತಕವನ್ನು ಭಕ್ತಿಭಾವದಿಂದ ಪೂಜಿಸಬೇಕು. ಬಳಿಕ ಉತ್ತಮ ಬುದ್ಧಿಯುಳ್ಳ ಶ್ರೋತೃವು ತನು-ಮನದಿಂದ ಶುದ್ಧವಾಗಿ ಪ್ರಸನ್ನಚಿತ್ತದಿಂದ ಆದರಪೂರ್ವಕ ಶಿವಪುರಾಣದ ಕಥೆಯನ್ನು ಕೇಳಬೇಕು. ಶ್ರೋತಾ ಮತ್ತು ವಕ್ತಾ ಇವರು ಅನೇಕ ರೀತಿಯ ಕರ್ಮಗಳಲ್ಲಿ ಅಲೆಯುತ್ತಿದ್ದರೆ, ಕಾಮಕ್ರೋಧಾದಿ ಆರು ವಿಕಾರಗಳಿಂದ ಕೂಡಿದ್ದರೆ, ಸ್ತ್ರೀಯರಲ್ಲಿ ಆಸಕ್ತರಾಗಿದ್ದರೆ, ಪಾಖಂಡಮಾತುಗಳನ್ನು ನುಡಿಯುವವನಾಗಿದ್ದರೆ, ಅವರು ಪುಣ್ಯಭಾಗಿಗಳಾಗುವುದಿಲ್ಲ. ಲೌಕಿಕಚಿಂತೆಗಳನ್ನು ಹಾಗೂ ಧನ, ಗೃಹ, ಪತ್ನೀ-ಪುತ್ರಾದಿಗಳ ಚಿಂತೆಯನ್ನು ಬಿಟ್ಟು, ಕಥೆಯಲ್ಲೇ ಮನಸ್ಸನ್ನು ತೊಡಗಿಸುವ ಶುದ್ಧಬುದ್ಧಿ ಯುಳ್ಳವರಿಗೆ ಉತ್ತಮ ಫಲಪ್ರಾಪ್ತಿ ಯಾಗುತ್ತದೆ. ಯಾವ ಶ್ರೋತೃವು ಶ್ರದ್ಧಾ-ಭಕ್ತಿಯಿಂದ ಯುಕ್ತನಾಗಿ, ಇತರ ಕರ್ಮಗಳ ಕಡೆಗೆ ಮನಸ್ಸನ್ನು ಕೊಡವುದಿಲ್ಲವೋ ಮೌನರಾಗಿ,

ಪವಿತ್ರರಾಗಿ, ಉದ್ವೇಗ ಶೂನ್ಯರಾಗಿರುವರೋ ಅವರೇ ಪುಣ್ಯಭಾಗಿಗಳಾಗುತ್ತಾರೆ.

ಶ್ರೀಸೂತಪುರಾಣಿಕರು ಹೇಳುತ್ತಾರೆ- ಶೌನಕರೇ! ಶಿವಪುರಾಣವನ್ನು ಶ್ರವಣಿಸುವವನು ಕೈಗೊಳ್ಳುವ ವ್ರತ-ನಿಯಮಗಳನ್ನು ಹೇಳುವೆನು, ಭಕ್ತಿಯಿಂದ ಕೇಳಿರಿ. ನಿಯಮಬದ್ಧವಾಗಿ ಈ ಶ್ರೇಷ್ಠ ಕಥೆಯನ್ನು ಕೇಳುವುದರಿಂದ ಯಾವುದೇ ವಿಘ್ನಗಳಿಲ್ಲದೆ ಉತ್ತಮ ಫಲದ ಪ್ರಾಪ್ತಿಯಾಗುತ್ತದೆ. ದೀಕ್ಷಾರಹಿತನಾದವನು ಕಥಾ-ಶ್ರವಣಕ್ಕೆ ಅಧಿಕಾರಿಯಲ್ಲ. ಮುನಿಯೇ! ಕಥೆಯನ್ನು ಕೇಳುವ ಇಚ್ಛೆಯುಳ್ಳವರು ಮೊದಲಿಗೆ ಗುರುಗಳಿಂದ ದೀಕ್ಷೆಯನ್ನು ಪಡೆಯಬೇಕು. ನಿಯಮದಿಂದ ಕಥೆಯನ್ನು ಕೇಳುವವರು ಬ್ರಹ್ಮಚರ್ಯದಿಂದ ಇದ್ದು, ನೆಲದಮೇಲೆ ಮಲಗಬೇಕು. ಪತ್ರಾವಳಿ (ಊಟದೆಲೆ) ಯಲ್ಲೇ ಪ್ರತಿದಿನವು ಕಥೆ ಮುಗಿದ ಬಳಿಕವೇ ಊಟ ಮಾಡಬೇಕು. ಶಕ್ತಿಯಿದ್ದವರು ಪುರಾಣದ ಸಮಾಪ್ತಿಯವರೆಗೆ ಉಪವಾಸವಿದ್ದು, ಶುದ್ಧತೆಯಿಂದ, ಭಕ್ತಿಭಾವದಿಂದ ಉತ್ತಮ ಶಿವಪುರಾಣವನ್ನು ಕೇಳಬೇಕು. ಈ ಕಥೆಯ ವ್ರತವನ್ನು ಕೈಗೊಂಡ ಪುರುಷನು ಪ್ರತಿದಿನವೂ ಒಂದೇ ಸಲ ಹವಿಷ್ಯಾನ್ನವನ್ನು ಭೋಜನ ಮಾಡಬೇಕು. ಎಲ್ಲ ರೀತಿಯಿಂದ ಕಥಾ-ಶ್ರವಣದ ನಿಯಮಗಳನ್ನು ಸುಖವಾಗಿ ಪಾಲಿಸುವಂತಹುದೇ ಇರಬೇಕು. ಕಥೆಯನ್ನು ಕೇಳುವವನು ಗರಿಷ್ಠವಾದ ಅನ್ನ, ಬೇಳೆ, ಕರಟಿದ ಪದಾರ್ಥ, ಸೇಬು, ಭಾವದೂಷಿತ, ಹಳಸಿದ ಅನ್ನ ಇವುಗಳನ್ನು ವ್ರತಸ್ಥನಾದವನು ತಿನ್ನಬಾರದು. ಕಥಾ ಶ್ರವಣದ ವ್ರತವನ್ನು ಕೈಗೊಂಡವನು ಈರುಳ್ಳಿ, ಬೆಳ್ಳುಳ್ಳಿ, ಇಂಗು, ಮೂಲಂಗಿ, ಮಾದಕವಸ್ತುಗಳು, ಅಭಕ್ಷವೆಂದು ಹೇಳಲಾಗುವ ವಸ್ತುಗಳನ್ನು ತ್ಯಜಿಸಬೇಕು. ಕಥಾವ್ರತಿಯು ಕಾಮ, ಕ್ರೋಧಾದಿ ಅರು ವಿಕಾರಗಳನ್ನು, ಬ್ರಾಹ್ಮಣರ ನಿಂದನೆ, ಪತಿವ್ರತೆಯ, ಸಾಧು-ಸಂತರ ನಿಂದೆಯನ್ನು ತ್ಯಜಿಸಬೇಕು. ಕಥಾವ್ರತಿಯು ಪ್ರತಿದಿನವೂ ಸತ್ಯ, ಶೌಚ, ದಯೆ, ಮೌನ, ಸರಳತೆ, ವಿನಯ ಮತ್ತು ಹಾರ್ದಿಕ ಉದಾರತೆ ಮುಂತಾದ ಸದ್ಗುಣಗಳನ್ನು ತನ್ನದಾಗಿಸಿಕೊಳ್ಳಬೇಕು. ಶ್ರೋತೃವು ನಿಷ್ಕಾಮನಿರಲಿ, ಸಕಾಮನಿರಲಿ ನಿಯಮಪೂರ್ವಕವಾಗಿ ಕಥೆಯನ್ನು ಕೇಳಬೇಕು. ಸಕಾಮ ಪುರುಷನು ಅಭೀಷ್ಟ ಕಾಮನೆಯನ್ನು ಪಡೆಯುತ್ತಾನೆ ಮತ್ತು ನಿಷ್ಕಾಮನಾದವನು ಮೋಕ್ಷವನ್ನು ಹೊಂದುವನು. ದರಿದ್ರ, ಕ್ಷಯರೋಗೀ, ಪಾಪೀ, ಭಾಗ್ಯಹೀನ, ಸಂತಾನಹೀನ, ಇವರುಗಳೂ ಈ ಉತ್ತಮ ಕಥೆಯನ್ನು ಕೇಳಬೇಕು. ಕಾಕವಂಧ್ಯೆ (ಒಂದೇ ಮಗನಿರುವವಳು)ಯೇ ಮೊದಲಾದ ಏಳು ವಿಧದ ದುಷ್ಟ ಸ್ತ್ರೀಯರೂ, ಗರ್ಭಪಾತವಾಗುವವರೂ, ಎಲ್ಲ ಸ್ತ್ರೀಯರೂ ಈ ಶಿವಪುರಾಣದ ಉತ್ತಮ ಕಥೆಯನ್ನು ಕೇಳಬೇಕು. ಮುನಿಗಳೇ! ಸ್ತ್ರೀಯಾಗಲೀ, ಪುರುಷರಾಗಲೀ ಎಲ್ಲರೂ ಪ್ರಯತ್ನಪೂರ್ವಕವಾಗಿ ವಿಧಿ-ವಿಧಾನದಿಂದ ಶಿವಪುರಾಣದ ಉತ್ತಮೋತ್ತಮ ಕಥೆಯನ್ನು ಕೇಳಬೇಕು.

ಮಹರ್ಷಿಯೇ! ಈ ಪ್ರಕಾರವಾಗಿ ಶಿವಪುರಾಣದ ಕಥೆಯ ಯಜ್ಞೋತ್ಸವವು ಸಮಾಪ್ತವಾದಾಗ ಶ್ರೋತೃಗಳು ಭಕ್ತಿಪೂರ್ವಕ ಭಗವಾನ್ ಶಿವನ ಪೂಜೆಯಂತೆಯೇ ಪುರಾಣ ಪುಸ್ತಕದ ಪೂಜೆಯನ್ನು ಮಾಡಬೇಕು. ಅನಂತರ ವಿಧಿವತ್ತಾಗಿ ಪ್ರವಚನಕಾರರನ್ನು ಅವಶ್ಯವಾಗಿ ಪೂಜಿಸಬೇಕು. ಪುಸ್ತಕವನ್ನು ಕಟ್ಟಲು ಒಳ್ಳೆಯ ರೇಶ್ಮೆವಸ್ತ್ರವಿದ್ದು, ಗಟ್ಟಿಯಾದ ಹಗ್ಗವು ಇರಬೇಕು. ಮತ್ತೆ ಅದನ್ನು ಪೂಜಿಸಬೇಕು. ಮುನಿಶ್ರೇಷ್ಠರೇ! ಹೀಗೆ ಮಹಾನ್ ಉತ್ಸವದೊಂದಿಗೆ ಪುಸ್ತಕ ಮತ್ತು ಪ್ರವಚನಕಾರರ ವಿಧಿವತ್ತಾಗಿ ಪೂಜೆಯನ್ನು ಮಾಡಿ, ಸಹಾಯಕರಾದ ವಿದ್ವಾಂಸರನ್ನು ಧನಾದಿಗಳಿಂದ ಸತ್ಕರಿಸಬೇಕು. ಅಲ್ಲಿಗೆ ಬಂದಿರುವ ಬ್ರಾಹ್ಮಣರಿಗೆ ಅನ್ನ-ಧನಾದಿಗಳನ್ನು ದಾನಮಾಡಬೇಕು. ಜೊತೆಗೆ ಗೀತ - ವಾದ್ಯ - ನೃತ್ಯಗಳಿಂದ ಮಹೋತ್ಸವವನ್ನು ಆಚರಿಸಬೇಕು. ಮುನಿಯೇ! ಶ್ರೋತೃವು ವಿರಕ್ತನಾಗಿದ್ದರೆ ಅವನು ಕಥಾಸಮಾಪ್ತಿಯ ದಿನ ವಿಶೇಷವಾಗಿ ಶ್ರೀರಾಮಚಂದ್ರನಿಗೆ ಭಗವಾನ್ ಶಿವನು ಉಪದೇಶಿಸಿದ ಶ್ರೀರಾಮಗೀತೆಯನ್ನು* ಪಾರಾಯಣ ಮಾಡಬೇಕು. ಮುನಿಯೇ! ಗೃಹಸ್ಥನಾಗಿದ್ದರೆ, ಬುದ್ಧಿವಂತನಾದ ಅವನು ಶ್ರವಣ-ಕರ್ಮದ ಸಾಂಗತೆಗಾಗಿ ಶುದ್ಧ ಹವಿಸ್ಸಿನಿಂದ ರುದ್ರಸಂಹಿತೆಯ ಪ್ರತಿಯೊಂದು ಶ್ಲೋಕದಿಂದ ಹವನ ಮಾಡಬೇಕು, ಅಥವಾ ಗಾಯತ್ರೀ ಮಂತ್ರದಿಂದ ಇಲ್ಲವೇ ಶಿವಪಂಚಾಕ್ಷರೀ ಮಂತ್ರದಿಂದ ಹೋಮಮಾಡಬೇಕು; ಏಕೆಂದರೆ, ನಿಜವಾಗಿಯೂ ಈ ಪುರಾಣವು ಮಂತ್ರಮಯವಾಗಿದೆ. ಹೋಮ ಮಾಡುವ ಶಕ್ತಿಯಿಲ್ಲದಿದ್ದರೆ ಯಥಾಶಕ್ತಿಯಿಂದ ಹವನದ ವಸ್ತುಗಳನ್ನು ವಿದ್ವಾಂಸನಾದ ಬ್ರಾಹ್ಮಣನಿಗೆ ದಾನ ಮಾಡಬೇಕು. ನ್ಯೂನಾತಿರಿಕ್ತ ದೋಷದ ಶಾಂತಿಗಾಗಿ ಭಕ್ತಿಪೂರ್ವಕ ಶಿವಸಹಸ್ರನಾಮವನ್ನು ಪಠಿಸಬೇಕು, ಇಲ್ಲವೇ ಶ್ರವಣಿಸಬೇಕು. ಇದರಿಂದ ಎಲ್ಲವೂ ಸಫಲವಾಗುತ್ತದೆ. ಇದರಲ್ಲಿ ಸಂದೇಹವೇ ಇಲ್ಲ. ಏಕೆಂದರೆ, ಮೂರು ಲೋಕಗಳಲ್ಲಿಯೂ ಈ ಕಥಾ

---

* ಶ್ರೀರಾಮಗೀತೆಯು ಅಧ್ಯಾತ್ಮರಾಮಾಯಣದಲ್ಲಿದ್ದು, ಅದು ಗೀತಾ ಪ್ರೆಸ್ಸಿನಿಂದ ಕನ್ನಡದಲ್ಲಿ ಪ್ರಕಟವಾಗಿದೆ.

ಶ್ರವಣಕ್ಕಿಂತ ಮಿಗಿಲಾದ ಯಾವ ವಸ್ತುವೂ ಇಲ್ಲ. ಕಥಾಶ್ರವಣ ಸಂಬಂಧವಾದ ವ್ರತದ ಪೂರ್ಣ ಸಿದ್ಧಿಗಾಗಿ ಹನ್ನೊಂದು ಬ್ರಾಹ್ಮಣರಿಗೆ ಮೃಷ್ಟಾನ್ನ ಭೋಜನವನ್ನು ಮಾಡಿಸಿ, ಅವರಿಗೆ ದಕ್ಷಿಣೆಯನ್ನು ಕೊಡಬೇಕು. ಮುನಿಯೇ! ಶಕ್ತಿಯಿದ್ದವರು ಒಂದು ಸುಂದರ ಸಿಂಹಾಸನವನ್ನು ರಚಿಸಿ ಅದರ ಮೇಲೆ ಉತ್ತಮ ಅಕ್ಷರಗಳಿಂದ ಬರೆದ ಅಥವಾ ಬರೆಸಿದ ಶಿವಪುರಾಣದ ಪುಸ್ತಕವನ್ನು ವಿಧಿಪೂರ್ವಕವಾಗಿ ಸ್ಥಾಪಿಸಬೇಕು. ಬಳಿಕ ಅದಕ್ಕೆ ಆವಾಹನಾದಿ ಷೋಡಶೋಪಚಾರಗಳಿಂದ ಪೂಜೆಯನ್ನು ಮಾಡಿ ದಕ್ಷಿಣೆಯನ್ನು ಅರ್ಪಿಸಬೇಕು. ಮತ್ತೆ ಜಿತೇಂದ್ರಿಯನಾದ ಆಚಾರ್ಯನನ್ನು ವಸ್ತ್ರಾಭೂಷಣಗಳಿಂದ, ಗಂಧ-ಮಾಲ್ಯಾದಿಗಳಿಂದ ಪೂಜಿಸಿ, ಆ ಸ್ವರ್ಣಸಿಂಹಾಸನದೊಂದಿಗೆ ಆ ಪುಸ್ತಕವನ್ನು ದಕ್ಷಿಣೆಯೊಂದಿಗೆ ದಾನ ಮಾಡಬೇಕು. ಶೌನಕರೇ! ಈ ಶಿವಪುರಾಣದ ದಾನ ಪ್ರಭಾವದಿಂದ ಭಗವಾನ್ ಶಿವನ ಅನುಗ್ರಹದಿಂದ ಭವಬಂಧನದಿಂದ ಮುಕ್ತನಾಗುವನು. ಹೀಗೆ ವಿಧಿ-ವಿಧಾನಗಳನ್ನು ಪಾಲಿಸುವವನು ಶ್ರೀಸಂಪನ್ನ ಶಿವಪುರಾಣದ ಸಂಪೂರ್ಣ ಫಲವನ್ನು ಕೊಡುವವನೂ, ಎಲ್ಲರೀತಿಯ ಭೋಗ-ಮೋಕ್ಷವನ್ನು ಕರುಣಿಸುವವನೂ ಆಗುವನು.

ಮುನಿಯೇ! ಸಮಸ್ತ ಅಭೀಷ್ಟವನ್ನು ಕೊಡುವಂತಹ ಶಿವಪುರಾಣದ ಎಲ್ಲ ಮಾಹಾತ್ಮ್ಯವನ್ನು ನಾನು ನಿನಗೆ ಹೇಳಿರುವೆನು. ಇನ್ನೀಗ ಏನನ್ನು ಕೇಳಲು ಬಯಸುವೆ? ಶಿವಪುರಾಣವು ಸಮಸ್ತ ಪುರಾಣಗಳ ಹಣೆಬೊಟ್ಟು, ಶಿರೋಮಣಿ ಎಂದು ತಿಳಿಯಲಾಗಿದೆ. ಇದು ಭಗವಾನ್ ಶಿವನಿಗೆ ಅತ್ಯಂತ ಪ್ರಿಯವೂ, ರಮಣೀಯವೂ, ಭಗರೋಗವನ್ನು ನಿವಾರಿಸುವಂತಹುದೂ ಆಗಿದೆ. ಸದಾಕಾಲ ಪರಶಿವನನ್ನು ಧ್ಯಾನಿಸುವವನೂ, ವಾಣಿಯಿಂದ ಶಿವನ ಗುಣಗಳನ್ನು ಕೊಂಡಾಡುವವನೂ, ಎರಡೂ ಕಿವಿಗಳಿಂದ ಶಿವನ ಕಥೆಯನ್ನು ಕೇಳುವವನೂ, ಆದ ಅವನ ಜನ್ಮವೇ ಜಗತ್ತಿನಲ್ಲಿ ಸಾರ್ಥಕವಾದದು. ಅವರು ನಿಶ್ಚಯವಾಗಿ ಸಂಸಾರಸಾಗರದಿಂದ ದಾಟಿ ಹೋಗುತ್ತಾರೆ.* ಭಿನ್ನ-ಭಿನ್ನ ಪ್ರಕಾರದ ಗುಣಗಳೆಲ್ಲ ಯಾವ ಸಚ್ಚಿದಾನಂದಮಯ ಸ್ವರೂಪವನ್ನು ಸ್ಪರ್ಶಿಸಲಾರವೋ, ತನ್ನ ಮಹಿಮೆಯಿಂದ ಜಗತ್ತಿನ ಒಳಗೂ-ಹೊರಗೂ ವಿರಾಜಮಾನನಾಗಿದ್ದಾನೋ, ಮನಸ್ಸಿನ ಅಂತರ್ಬಾಹ್ಯದಲ್ಲಿ ವಾಣಿ ಮತ್ತು ಮನೋವೃತ್ತಿಗಳಿಂದ ಪ್ರಕಾಶಿತನಾಗಿರುವನೋ, ಆ ಅನಂತ ಸಚ್ಚಿದಾನಂದರೂಪೀ ಪರಮಶಿವನಲ್ಲಿ ನಾನು ಶರಣಾಗುತ್ತೇನೆ.

(ಅಧ್ಯಾಯ ೬-೭)

❑ ❑ ❑

* ತೇ ಜನ್ಮಭಾಜಃ ಖಲು ಜೀವಲೋಕೇ ಯೇ ವೈ ಸದಾ ಧ್ಯಾಯಂತಿ ವಿಶ್ವನಾಥಮ್ ।
ವಾಣೇ ಗುಣಾನ್ ಸ್ತೌತಿ ಕಥಾಂ ಶೃಣೋತಿ ಶ್ರೋತ್ರದ್ವಯಂ ತೇ ಭವಮುತ್ತರಂತಿ ॥

॥ ಶ್ರೀಪುರಾಣ ಪುರುಷೋತ್ತಮಾಯ ನಮಃ ॥
॥ ಶ್ರೀಸಾಂಬಸದಾಶಿವಾಯನಮಃ ॥

ಶ್ರೀಶಿವಪುರಾಣ

ವಿದ್ಯೇಶ್ವರ ಸಂಹಿತೆ

ಪ್ರಯಾಗದಲ್ಲಿ ಸೂತರಬಳಿ ತತ್‌ಕ್ಷಣ ಪಾಪನಾಶಮಾಡುವ ಸಾಧನೆಯ ವಿಷಯದಲ್ಲಿ ಮುನಿಗಳ ಪ್ರಶ್ನೆ

ಆದ್ಯಂತಮಂಗಲಮಜಾತಸಮಾನಭಾವಮ್
ಆರ್ಯಂ ತಮೀಶಮಜರಾಮರಮಾತ್ಮದೇವಮ್ ।
ಪಂಚಾನನಂ ಪ್ರಬಲಪಂಚವಿನೋದಶೀಲಂ
ಸಂಭಾವಯೇ ಮನಸಿ ಶಂಕರಮಂಬಿಕೇಶಮ್ ॥

ಅಂಬಿಕಾಪತಿಯಾದ ಭಗವಾನ್ ಶಂಕರನನ್ನು ನಾನು ಮನಸಾ ಚಿಂತಿಸುತ್ತೇನೆ. ಅವನು ಆದಿ-ಅಂತ್ಯ-ಮಧ್ಯದಲ್ಲಿಯೂ ನಿತ್ಯ ಮಂಗಲಮಯನಾಗಿರುವನು. ಅವನಿಗೆ ಸಮಾನವಾದ ತುಲನೆಯು ಎಲ್ಲಿಯೂ ಇಲ್ಲ. ಅವನು ಆತ್ಮಸ್ವರೂಪವನ್ನು ಪ್ರಕಾಶಿಸುವ ಪರಮಾತ್ಮನೇ ಆಗಿರುವನು. ಅವನಿಗೆ ಐದು ಮುಖಗಳಿದ್ದು, ಅವನು ಅನಾಯಾಸವಾಗಿ ಲೀಲಾಮಾತ್ರದಿಂದ ಜಗತ್ತಿನ ಸೃಷ್ಟಿ, ಸ್ಥಿತಿ, ಸಂಹಾರ, ಅನುಗ್ರಹ, ತಿರೋಭಾವ ಎಂಬ ಐದು ಪ್ರಬಲ ಕರ್ಮಗಳನ್ನು ನಡೆಸುತ್ತಿರುವನು. ಅಂತಹ ಸರ್ವಶ್ರೇಷ್ಠ ಅಜರ, ಅಮರ, ಪಾರ್ವತೀಪತಿಯಾದ ಭಗವಾನ್ ಶಿವನನ್ನು ಧ್ಯಾನಮಾಡೋಣ.

ಶ್ರೀವ್ಯಾಸರು ಹೇಳುತ್ತಾರೆ- ಮಹಾನ್ ಧರ್ಮಕ್ಷೇತ್ರವಾದ, ಬ್ರಹ್ಮಲೋಕದ ಮಾರ್ಗವಾಗಿರುವ, ಗಂಗಾ-ಯಮುನಾ ಸಂಗಮಗೊಂಡ ಪರಮಪುಣ್ಯಪ್ರದ ಪ್ರಯಾಗದಲ್ಲಿ, ಸತ್ಯವ್ರತದಲ್ಲಿ ತತ್ಪರರಾಗಿರುವ ಮಹಾತೇಜಸ್ವೀ ಮಹಾನುಭಾವರಾದ ಮುನಿಗಳು ಒಂದು ವಿಶಾಲವಾದ ಜ್ಞಾನಯಜ್ಞವನ್ನು ಆಯೋಜಿಸಿದ್ದರು. ಆ ಜ್ಞಾನಯಜ್ಞದ ಸಮಾಚಾರವನ್ನು ಕೇಳಿ ಪೌರಾಣಿಕ ಶಿರೋಮಣಿಗಳಾದ ವ್ಯಾಸಶಿಷ್ಯರಾದ ಮಹಾಮುನಿ ಸೂತರು ಮುನಿಗಳ ದರ್ಶನಕ್ಕಾಗಿ ಅಲ್ಲಿಗೆ ಬಂದರು. ಸೂತಪುರಾಣಿಕರು ಬಂದಿರುವುದನ್ನು ನೋಡಿ ಎಲ್ಲ ಮುನಿಗಳು ಹರ್ಷಿತರಾದರು. ಅವರೆಲ್ಲರೂ ಅತ್ಯಂತ ಪ್ರಸನ್ನಚಿತ್ತದಿಂದ ಅವರನ್ನು ಸ್ವಾಗತಿಸಿ, ಸತ್ಕರಿಸಿದರು. ಅನಂತರ ಸಂತೋಷಗೊಂಡ ಮಹಾತ್ಮರೆಲ್ಲರೂ ಸೂತರನ್ನು ವಿಧ-ವಿಧವಾಗಿ ಸ್ತುತಿಸಿ, ವಿನಯದಿಂದ ಕೈಜೋಡಿಸಿಕೊಂಡು ಅವರಲ್ಲಿ ಹೀಗೆ ಕೇಳಿದರು-

ಸರ್ವಜ್ಞ ವಿದ್ವಾನ್ ರೋಮಹರ್ಷಣರೇ! ತಾವು ಅಹೋಭಾಗ್ಯರಾಗಿರುವಿರಿ. ಅದರಿಂದಲೇ ನೀವು ವ್ಯಾಸರ ಮುಖದಿಂದ ತನ್ನ ಪ್ರಸನ್ನತೆಗಾಗಿ ಸಮಸ್ತ ಪುರಾಣವಿದ್ಯೆಯನ್ನು ಪಡೆದುಕೊಂಡಿರಿ. ಆದ್ದರಿಂದ ರತ್ನಾಕರನು ದೊಡ್ಡ-ದೊಡ್ಡ ಸಾರಭೂತ ರತ್ನಗಳ ಆಗರವಾಗಿರುವಂತೆಯೇ, ತಾವು ಆಶ್ಚರ್ಯಸ್ವರೂಪೀ ಕಥೆಗಳ ಭಂಡಾರವಾಗಿರುವಿರಿ. ಮೂರು ಲೋಕಗಳಲ್ಲಿರುವ ಭೂತ, ಭವಿಷ್ಯ, ವರ್ತಮಾನ ಯಾವುದೇ ವಸ್ತುವು ನಿಮ್ಮಿಂದ ಅಜ್ಞಾತವಾಗಿಲ್ಲ. ನಮ್ಮ ಸೌಭಾಗ್ಯದಿಂದಲೇ ಈ ಯಜ್ಞವನ್ನು ದರ್ಶಿಸಲು ನೀವು ಇಲ್ಲಿಗೆ ಬಂದಿರುವಿರಿ. ಆ ನೆಪದಿಂದ ನಮ್ಮಗಳ ಶ್ರೇಯಸ್ಸೇ ಆಗುವುದಿದೆ. ಏಕೆಂದರೆ, ತಮ್ಮಂತಹವರ ಆಗಮನವು ನಿರರ್ಥಕವಾಗಲಾರದು. ನಾವು ಮೊದಲೂ ಕೂಡ ನಿಮ್ಮಿಂದ ಶುಭಾಶುಭ ತತ್ತ್ವವನ್ನು ಪೂರ್ಣವಾದ ವರ್ಣನೆಯನ್ನು ಕೇಳಿರುವೆವು. ಆದರೆ ಅದರಿಂದ ತೃಪ್ತಿಯುಂಟಾಗಲಿಲ್ಲ. ನಮಗೆ ಅದನ್ನು ಪುನಃ ಕೇಳಬೇಕೆಂಬ ಇಚ್ಛೆಯು ಉಂಟಾಗಿದೆ.

ಉತ್ತಮ ಬುದ್ಧಿಯುಳ್ಳ ಸೂತಪುರಾಣಿಕರೇ! ಈಗ ನಮಗೆ ಒಂದೇ ಮಾತನ್ನು ಕೇಳುವುದಿದೆ. ನೀವು ಅನುಗ್ರಹಿಸಿದರೆ ಗೋಪನೀಯವಾಗಿದ್ದರೂ ಅದನ್ನು ವರ್ಣಿಸಿರಿ. ಘೋರವಾದ ಕಲಿಯುಗವು ಬಂದಾಗ ಮನುಷ್ಯರು ಪುಣ್ಯಕರ್ಮಗಳಿಂದ ದೂರವಾಗುವರು. ದುರಾಚಾರದಲ್ಲಿ ಸಿಕ್ಕಿಕೊಂಡು ಎಲ್ಲರೂ ಸತ್ಯ ಭಾಷಣದಿಂದ ವಿಮುಖರಾಗುವರು. ಇತರರ ನಿಂದೆಯಲ್ಲೇ ತತ್ಪರರಾಗುವರು. ಪರರ ಧನವನ್ನು ಕಸಿದುಕೊಳ್ಳಲು ಇಚ್ಛಿಸುವರು. ಅವರ ಮನಸ್ಸು ಪರಸ್ತ್ರೀಯರಲ್ಲಿ ಆಸಕ್ತವಾಗಿದ್ದೀತು. ಅವರು ಇತರ ಪ್ರಾಣಿಗಳನ್ನು ಹಿಂಸಿಸುವರು. ತನ್ನ ಶರೀರವನ್ನೇ ಆತ್ಮನೆಂದು ತಿಳಿಯುವರು.

ಮೂಢ, ನಾಸ್ತಿಕ ಮತ್ತು ಪಶುಬುದ್ಧಿಯವರಾಗುವರು. ತಂದೆ-ತಾಯಿಯರನ್ನು ದ್ವೇಷಿಸುವರು. ಬ್ರಾಹ್ಮಣರು ಲೋಭರೂಪೀ ಮೊಸಳೆಗೆ ತುತ್ತಾಗುವರು. ವೇದಗಳನ್ನು ಮಾರಿ ಜೀವಿಸುವರು. ಧನವನ್ನು ಗಳಿಸಲೆಂದೇ ವಿದ್ಯೆಯನ್ನು ಅಭ್ಯಸಿಸುವರು ಮತ್ತು ಮದದಿಂದ ಮೋಹಿತರಾಗುವರು. ತಮ್ಮ ಸ್ವಜಾತಿಯ ಕರ್ಮಗಳನ್ನು ಬಿಟ್ಟುಬಿಡುವರು. ಪ್ರಾಯಶಃ ಎಲ್ಲರನ್ನೂ ಮೋಸಗೊಳಿಸುತ್ತಾ, ತ್ರಿಕಾಲ ಸಂಧ್ಯಾವಂದನೆಯಿಂದ ದೂರವುಳಿಯುವರು. ಬ್ರಹ್ಮಜ್ಞಾನದಿಂದ ಶೂನ್ಯರಾಗುವರು, ಕ್ಷತ್ರಿಯರೆಲ್ಲರೂ ಸ್ವಧರ್ಮವನ್ನು ತ್ಯಜಿಸುವರು; ಕುಸಂಗೀ, ಪಾಪೀ ಮತ್ತು ವ್ಯಭಿಚಾರಿಗಳಾಗುವರು. ಅವರಲ್ಲಿ ಶೌರ್ಯದ ಅಭಾವವುಂಟಾದೀತು. ಅವರು ಕುತ್ಸಿತ ಕಳ್ಳತನದಿಂದ ಜೀವನ ನಡೆಸುತ್ತಾ, ಶೂದ್ರರಂತೆ ವರ್ತಿಸುವರು. ಅವರ ಚಿತ್ತವು ಕಾಮಕ್ಕೆ ಆಡಿಯಾಳಾಗಿದ್ದೀತು. ವೈಶ್ಯರು ಸಂಸ್ಕಾರ ಭ್ರಷ್ಟರೂ, ಸ್ವಧರ್ಮತ್ಯಾಗಿಗಳೂ, ಕುಮಾರ್ಗಿಗಳೂ, ಧನೋಪಾರ್ಜನ ಪರಾಯಣರೂ, ತೂಕ-ಅಳತೆಯಲ್ಲಿ ಕುತ್ಸಿತ ವೃತ್ತಿಯ ಪರಿಚಯ ಕೊಡುವವರಾಗುವರು. ಹೀಗೆಯೇ ಶೂದ್ರರು ಬ್ರಾಹ್ಮಣರ ಆಚಾರದಲ್ಲಿ ತತ್ಪರರಾಗುವರು. ಅವರು ತಮ್ಮ ಧರ್ಮ-ಕರ್ಮಗಳನ್ನು ಬಿಟ್ಟು ಉಜ್ವಲವಾದ ವೇಷ-ಭೂಷಣಗಳಿಂದ ಅಲಂಕರಿಸಿಕೊಂಡು ವ್ಯರ್ಥವಾಗಿ ಅಲೆಯುವರು. ಅವರು ಸ್ವಭಾವತಃ ತಮ್ಮ ಧರ್ಮವನ್ನು ತ್ಯಜಿಸುವರು. ಅವರ ವಿಚಾರಗಳು ಧರ್ಮಕ್ಕೆ ಪ್ರತಿಕೂಲವಾಗಿರುವವು. ಅವರು ಕುಟಿಲರೂ, ದ್ವಿಜನಿಂದಕರೂ ಆಗುವರು. ಇದ್ದ ಹಣವನ್ನು ಕೆಟ್ಟ ಕಾರ್ಯಗಳಲ್ಲೇ ತೊಡಗಿಸುವರು. ವಿದ್ವಾಂಸರಾಗಿದ್ದರೆ ವಾದ-ವಿವಾದ ಮಾಡುವವರಾಗುವರು. ತಮ್ಮನ್ನು ಕುಲೀನರೆಂದು ತಿಳಿದು ಎಲ್ಲ ವರ್ಣದವರೊಂದಿಗೆ ವಿವಾಹ ಸಂಬಂಧ ಬೆಳೆಸುವರು. ಎಲ್ಲ ವರ್ಣದವರನ್ನು ತಮ್ಮ ಸಂಪರ್ಕದಿಂದ ಭ್ರಷ್ಟರಾಗಿಸುವರು. ತಮ್ಮ ಅಧಿಕಾರ ಸೀಮೆಯನ್ನು ದಾಟಿ ದ್ವಿಜರಿಗೆ ಉಚಿತವಾದ ಸತ್ಕರ್ಮಗಳನ್ನು ಅನುಷ್ಠಾನ ಮಾಡುವರು. ಕಲಿಯುಗದ ಸ್ತ್ರೀಯರು ಪ್ರಾಯಶಃ ಸದಾಚಾರದಿಂದ ಭ್ರಷ್ಟರೂ, ಪತಿಯ ಅಪಮಾನ ಮಾಡುವವರೂ ಆಗುವರು. ಅತ್ತೆ-ಮಾವಂದಿರಲ್ಲಿ ದ್ರೋಹಮಾಡುವರು. ಯಾರಿಗೂ ಭಯಪಡರು. ಮಲಿನವಾದ ಭೋಜನವನ್ನು ಮಾಡುವರು. ಕುತ್ಸಿತ ಹಾವ-ಭಾವಗಳನ್ನು ತೋರುವರು. ತಮ್ಮ ಶೀಲ-ಸ್ವಭಾವಗಳು ಬಹಳ ಕೆಟ್ಟದಾಗಿದ್ದು, ತಮ್ಮ ಪತಿಯ ಸೇವೆಯಿಂದ ವಿಮುಖರಾಗುವರು. ಸೂತಪುರಾಣಿಕರೇ! ಹೀಗೆ ಬುದ್ಧಿಯು ನಾಶವಾದವರಿಗೆ, ತಮ್ಮ ಧರ್ಮವನ್ನು ತ್ಯಜಿಸಿದವರಿಗೆ, ಈ ಲೋಕ ಮತ್ತು ಪರಲೋಕದಲ್ಲಿ ಉತ್ತಮ ಗತಿಯು ಹೇಗೆ ದೊರೆಯಬಲ್ಲದು? ಇದೇ ಚಿಂತೆಯಲ್ಲಿ ನಮ್ಮ ಮನಸ್ಸು ವ್ಯಾಕುಲಗೊಂಡಿದೆ. ಪರೋಪಕಾರದಂತಹ ಬೇರೆ ಯಾವ ಧರ್ಮವೂ ಇಲ್ಲ. ಆದ್ದರಿಂದ ಅಲ್ಪವಾದ ಉಪಾಯದಿಂದ ಇವರೆಲ್ಲರ ಪಾಪಗಳು ತತ್‌ಕಾಲದಲ್ಲಿ ನಾಶವಾಗುವಂತಹ ಉಪಾಯವನ್ನು ದಯಮಾಡಿ ಈಗ ತಿಳಿಸಿರಿ; ಏಕೆಂದರೆ, ತಾವು ಸಮಸ್ತ ಸಿದ್ಧಾಂತಗಳನ್ನು ಬಲ್ಲವರಾಗಿದ್ದೀರಿ.

ವ್ಯಾಸರು ಹೇಳುತ್ತಾರೆ- ಆ ಮಹಾನುಭಾವರಾದ ಮುನಿಗಳ ಈ ಮಾತನ್ನು ಕೇಳಿ ಸೂತಪುರಾಣಿಕರು ಮನಸ್ಸಿನಲ್ಲೇ ಭಗವಾನ್ ಶಂಕರನನ್ನು ಸ್ಮರಿಸಿ, ಅವರಲ್ಲಿ ಇಂತೆಂದರು.

(ಅಧ್ಯಾಯ ೧)

❐ ❐ ❐

ಶಿವಪುರಾಣದ ಪರಿಚಯ

ಶ್ರೀಸೂತಪುರಾಣಿಕರು ಹೇಳುತ್ತಾರೆ- ಸಾಧು ಮಹಾತ್ಮರಿರಾ! ತಾವು ಒಳ್ಳೆಯ ಮಾತನ್ನೇ ಕೇಳಿರುವಿರಿ. ತಮ್ಮ ಈ ಪ್ರಶ್ನೆಯು ಮೂರು ಲೋಕಗಳ ಹಿತವನ್ನು ಮಾಡುವಂತಹುದು. ನಾನು ಸದ್ಗುರು ವೇದವ್ಯಾಸರನ್ನು ಸ್ಮರಿಸಿ, ತಮ್ಮಗಳ ಸ್ನೇಹವಶವಾಗಿ ಈ ವಿಷಯವನ್ನು ವರ್ಣಿಸುವೆನು; ನೀವು ಆದರದಿಂದ ಕೇಳಿರಿ. ಎಲ್ಲಕಿಂತ ಉತ್ತಮವಾದ ಶಿವಪುರಾಣವು ವೇದಾಂತದ ಸಾರಸರ್ವಸ್ವವಾಗಿದೆ. ವಕ್ತಾ ಮತ್ತು ಶ್ರೋತಾ ಇಬ್ಬರ ಸಮಸ್ತ ಪಾಪರಾಶಿಯಿಂದ ಉದ್ಧಾರಮಾಡುವಂತಹುದು. ಇಷ್ಟೇ ಅಲ್ಲ, ಅದು ಪರಲೋಕದಲ್ಲಿ ಪರಮಾರ್ಥ ವಸ್ತುವನ್ನು ಕರುಣಿಸುವಂತಹುದು. ಕಲಿಕಾಲದ ಕಲ್ಮಷರಾಶಿಯನ್ನು ವಿನಾಶ ಮಾಡುವಂತಹುದು. ಆದರಲ್ಲಿ ಭಗವಾನ್ ಶಿವನ ಉತ್ತಮ ಕೀರ್ತಿಯ ವರ್ಣನೆಯಿದೆ. ಬ್ರಾಹ್ಮಣರೇ! ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳನ್ನು ಕೊಡುವ ಈ ಪುರಾಣವು ಸದಾಕಾಲ ತನ್ನ ಪ್ರಭಾವದ ದೃಷ್ಟಿಯಿಂದ ವೃದ್ಧಿ ಮತ್ತು ವಿಸ್ತಾರವನ್ನು

ಪಡೆದಿದೆ. ವಿಪ್ರರೇ! ಆ ಸರ್ವೋತ್ತಮ ಶಿವಪುರಾಣದ ಅಧ್ಯಯನ ಮಾತ್ರದಿಂದಲೇ ಕಲಿಯುಗದ ಪಾಪಾಸಕ್ತ ಜೀವರು ಶ್ರೇಷ್ಠತಮ ಗತಿಯನ್ನು ಪಡೆದುಕೊಳ್ಳುವರು. ಇಲ್ಲಿ ಶಿವಪುರಾಣದ ಉದಯ ಆಗುವವರೆಗೆ ಕಲಿಯುಗದ ಮಹಾ ಉತ್ಪಾತಗಳು ಜಗತ್ತಿನಲ್ಲಿ ನಿರ್ಭಯವಾಗಿ ವಿಚರಿಸುವವು. ಇದನ್ನು ವೇದತುಲ್ಯವೆಂದು ತಿಳಿಯಲಾಗಿದೆ. ಈ ವೇದಕಲ್ಪ ಪುರಾಣವನ್ನು ಮೊಟ್ಟಮೊದಲಿಗೆ ಭಗವಾನ್ ಶಿವನೇ ರಚಿಸಿದ್ದನು. ವಿದ್ಯೇಶ್ವರ ಸಂಹಿತೆ, ರುದ್ರಸಂಹಿತೆ, ವಿನಾಯಕ ಸಂಹಿತೆ, ಉಮಾಸಂಹಿತೆ, ಮಾತೃಸಂಹಿತೆ, ಏಕಾದಶರುದ್ರ ಸಂಹಿತೆ, ಕೈಲಾಸ ಸಂಹಿತೆ, ಶತರುದ್ರ ಸಂಹಿತೆ, ಕೋಟಿರುದ್ರ ಸಂಹಿತೆ, ಸಹಸ್ರಕೋಟಿರುದ್ರ ಸಂಹಿತೆ, ವಾಯವೀಯ ಸಂಹಿತೆ ಮತ್ತು ಧರ್ಮ ಸಂಹಿತೆ – ಹೀಗೆ ಈ ಪುರಾಣದ ಹನ್ನೆರಡು ಭೇದ ಅಥವಾ ಖಂಡಗಳಾಗಿವೆ. ಈ ಹನ್ನೆರಡು ಸಂಹಿತೆಗಳು ಅತ್ಯಂತ ಪುಣ್ಯಮಯವೆಂದು ತಿಳಿಯಲಾಗಿದೆ. ವಿಪ್ರರೇ! ಈಗ ನಾನು ಅವುಗಳ ಶ್ಲೋಕಸಂಖ್ಯೆಯನ್ನು ಹೇಳುವೆನು. ತಾವೆಲ್ಲರೂ ಅದನ್ನು ಆದರದಿಂದ ಕೇಳಿರಿ. ವಿದ್ಯೇಶ್ವರ ಸಂಹಿತೆಯಲ್ಲಿ ಹತ್ತುಸಾವಿರ ಶ್ಲೋಕಗಳಿವೆ. ರುದ್ರ ಸಂಹಿತೆ, ವಿನಾಯಕ ಸಂಹಿತೆ, ಉಮಾ ಸಂಹಿತೆ, ಮಾತೃ ಸಂಹಿತೆ ಇವುಗಳ ಪ್ರತಿಯೊಂದರಲ್ಲಿ ಎಂಟೆಂಟು ಸಾವಿರ ಶ್ಲೋಕಗಳಿವೆ. ಬ್ರಾಹ್ಮಣರೇ! ಏಕಾದಶರುದ್ರ ಸಂಹಿತೆಯಲ್ಲಿ ಹದಿಮೂರುಸಾವಿರ, ಕೈಲಾಸ ಸಂಹಿತೆಯಲ್ಲಿ ಆರುಸಾವಿರ, ಶತರುದ್ರ ಸಂಹಿತೆಯಲ್ಲಿ ಮೂರು ಸಾವಿರ, ಕೋಟಿರುದ್ರ ಸಂಹಿತೆಯಲ್ಲಿ ಒಂಭತ್ತುಸಾವಿರ, ಸಹಸ್ರಕೋಟಿ ರುದ್ರ ಸಂಹಿತೆಯಲ್ಲಿ ಹನ್ನೊಂದು ಸಾವಿರ, ವಾಯವೀಯ ಸಂಹಿತೆಯಲ್ಲಿ ನಾಲ್ಕು ಸಾವಿರ ಮತ್ತು ಧರ್ಮಸಂಹಿತೆಯಲ್ಲಿ ಹನ್ನೆರಡು ಸಾವಿರ ಶ್ಲೋಕಗಳು ಇವೆ. ಹೀಗೆ ಮೂಲ ಶಿವಪುರಾಣದ ಶ್ಲೋಕ ಸಂಖ್ಯೆಯು ಒಂದು ಲಕ್ಷವಿದೆ. ಆದರೆ ವ್ಯಾಸರು ಅದನ್ನು ಇಪ್ಪತ್ತನಾಲ್ಕು ಸಾವಿರ ಶ್ಲೋಕಗಳಲ್ಲಿ ಸಂಕ್ಷಿಪ್ತಗೊಳಿಸಿರುವರು, ಪುರಾಣಗಳ ಕ್ರಮಸಂಖ್ಯೆಯಲ್ಲಿ ಈ ಶಿವಪುರಾಣವು ನಾಲ್ಕನೆಯದಾಗಿದೆ. ಇದರಲ್ಲಿ ಏಳು ಸಂಹಿತೆಗಳಿವೆ.

ಹಿಂದಿನ ಕಾಲದಲ್ಲಿ ಭಗವಾನ್ ಶಿವನು ಶ್ಲೋಕ ಸಂಖ್ಯೆಯ ದೃಷ್ಟಿಯಿಂದ ನೂರುಕೋಟಿ ಶ್ಲೋಕಗಳ ಒಂದೇ ಪುರಾಣ ಗ್ರಂಥವನ್ನು ರಚಿಸಿದ್ದನು. ಸೃಷ್ಟಿಯ ಪ್ರಾರಂಭದಲ್ಲಿ ನಿರ್ಮಿತವಾದ ಆ ಪುರಾಣ ಸಾಹಿತ್ಯವು ಅತ್ಯಂತ ವಿಸ್ತೃತವಾಗಿತ್ತು. ಮತ್ತೆ ದ್ವಾಪರ ಮುಂತಾದ ಯುಗಗಳಲ್ಲಿ ಆದಿಯಲ್ಲಿ ದ್ವೈಪಾಯನ ವ್ಯಾಸರು ಪುರಾಣವನ್ನು ಹದಿನೆಂಟು ಭಾಗದಲ್ಲಿ ವಿಭಾವಿಸಿದರು. ಆಗ ಸಮಸ್ತ ಪುರಾಣಗಳ ಸಂಕ್ಷಿಪ್ತ ಸ್ವರೂಪವು ಕೇವಲ ನಾಲ್ಕು ಲಕ್ಷ ಶ್ಲೋಕಗಳಾಗಿ ಉಳಿಯಿತು. ಆ ಸಮಯದಲ್ಲಿ ಅವರು ಶಿವಪುರಾಣವನ್ನು ಇಪ್ಪತ್ತನಾಲ್ಕು ಸಾವಿರ ಶ್ಲೋಕಗಳಲ್ಲಿ ಪ್ರತಿಪಾದಿಸಿದರು. ಇದೇ ಇದರ ಶ್ಲೋಕಗಳ ಸಂಖ್ಯೆಯಾಗಿದೆ. ಈ ವೇದತುಲ್ಯ ಪುರಾಣವು ಏಳು ಸಂಹಿತೆಗಳಲ್ಲಿ ಹಂಚಲಾಗಿದೆ. ಇದರ ಮೊದಲನೆಯ ಸಂಹಿತೆಯ ಹೆಸರು ವಿದ್ಯೇಶ್ವರ ಸಂಹಿತೆಯಾಗಿದೆ. ಎರಡನೆಯದು ರುದ್ರಸಂಹಿತೆ ಎಂದು ತಿಳಿಯಬೇಕು. ಮೂರನೆಯದರ ಹೆಸರು ಶತರುದ್ರಸಂಹಿತೆ. ನಾಲ್ಕನೆಯದು ಕೋಟಿರುದ್ರಸಂಹಿತೆ, ಐದನೆಯದು ಉಮಾಸಂಹಿತೆ, ಕೈಲಾಸ ಸಂಹಿತೆ, ಆರನೆಯದು ಹಾಗೂ ಏಳನೆಯದರ ಹೆಸರು ವಾಯವೀಯ ಸಂಹಿತೆಯಾಗಿದೆ. ಹೀಗೆ ಇವು ಏಳು ಸಂಹಿತೆಗಳೆಂದು ತಿಳಿಯಲಾಗಿದೆ. ಈ ಏಳು ಸಂಹಿತೆಯಿಂದ ಒಡಗೊಂಡ ದಿವ್ಯ ಶಿವಪುರಾಣವು ವೇದತುಲ್ಯ ಪ್ರಾಮಾಣಿಕ ಹಾಗೂ ಎಲ್ಲಕ್ಕಿಂತ ಉತ್ಕೃಷ್ಟ ಗತಿಯನ್ನು ಕರುಣಿಸುವಂತಹುದು. ಈ ನಿರ್ಮಲ ಶಿವಪುರಾಣವು ಭಗವಾನ್ ಶಿವನಿಂದ ಪ್ರತಿಪಾದಿಸಲ್ಪಟ್ಟಿದೆ. ಇದನ್ನು ಶೈವಶಿರೋಮಣಿ ಭಗವಾನ್ ವ್ಯಾಸರು ಸಂಕ್ಷೇಪವಾಗಿ ಸಂಕಲಿತಗೊಳಿಸಿದ್ದಾರೆ. ಇದು ಸಮಸ್ತ ಜೀವಸಮುದಾಯಕ್ಕಾಗಿ ಉಪಕಾರಿಯೂ, ತ್ರಿವಿಧ ತಾಪಗಳನ್ನು ನಾಶಮಾಡುವಂತಹದೂ, ತುಲನೆ ರಹಿತವೂ, ಸತ್ಪುರುಷರಿಗೆ ಶ್ರೇಯಸ್ಕರವೂ ಆಗಿದೆ. ಇದರಲ್ಲಿ ವೇದಾಂತ-ವಿಜ್ಞಾನಮಯ, ಪ್ರಧಾನ ಹಾಗೂ ನಿಷ್ಕಪಟ (ನಿಷ್ಕಾಮ) ಧರ್ಮವನ್ನು ಪ್ರತಿಪಾದಿತವಾಗಿದೆ. ಈ ಪುರಾಣವು ಈರ್ಷಾರಹಿತ ಅಂತಃಕರಣವುಳ್ಳ ವಿದ್ವಾಂಸರಿಗಾಗಿ ತಿಳಿದುಕೊಳ್ಳುವ ವಸ್ತುವಾಗಿದೆ. ಇದರಲ್ಲಿ ಶ್ರೇಷ್ಠ ಮಂತ್ರ-ಸಮೂಹಗಳ ಸಂಕಲನವಿದೆ ಮತ್ತು ಧರ್ಮ, ಅರ್ಥ, ಕಾಮ ಈ ತ್ರಿವರ್ಗದ ಪ್ರಾಪ್ತಿಯ ಸಾಧನೆಗಳ ವರ್ಣನೆಯೂ ಇದೆ. ಈ ಉತ್ತಮ ಶಿವಪುರಾಣವು ಸಮಸ್ತ ಪುರಾಣಗಳಲ್ಲಿ ಶ್ರೇಷ್ಠವಾಗಿದೆ. ವೇದವೇದಾಂತಗಳಲ್ಲಿ ವೇದ್ಯರೂಪದಿಂದ ವಿಲಸಿತವಾದ ಪರಮ ವಸ್ತುವಾಗಿದ್ದು, ಪರಮಾತ್ಮನನ್ನು ಇದರಲ್ಲಿ ಗಾನ ಮಾಡಲಾಗಿದೆ. ಇದನ್ನು ಬಹಳ ಆದರದಿಂದ ಓದುವವನು, ಕೇಳುವವನು ಭಗವಾನ್ ಶಿವನಿಗೆ ಪ್ರಿಯನಾಗಿ ಪರಮಗತಿಯನ್ನು ಪಡೆದುಕೊಳ್ಳುವನು.

(ಅಧ್ಯಾಯ ೨)

❐ ❐ ❐

ಸಾಧ್ಯ-ಸಾಧನಾದಿಗಳ ವಿಚಾರ ಹಾಗೂ ಶ್ರವಣ - ಕೀರ್ತನ - ಮನನ ಈ ಸಾಧನೆಗಳ ಶ್ರೇಷ್ಠತೆಯ ಪ್ರತಿಪಾದನೆ

ಶ್ರೀವ್ಯಾಸರು ಹೇಳುತ್ತಾರೆ- ಸೂತಪುರಾಣಿಕರ ಈ ಮಾತನ್ನು ಕೇಳಿ ಆ ಎಲ್ಲ ಮಹರ್ಷಿಗಳು ಹೇಳಿದರು - ಈಗ ತಾವು ವೇದಾಂತಸಾರ-ಸರ್ವಸ್ವರೂಪವಾದ ಅದ್ಭುತ ಶಿವಪುರಾಣದ ಕಥೆಯನ್ನು ನಮಗೆ ಹೇಳಿರಿ.

ಶ್ರೀಸೂತಪುರಾಣಿಕರು ಹೇಳಿದರು- ತಾವೆಲ್ಲ ಮಹರ್ಷಿಗಳು ರೋಗ-ಶೋಕರಹಿತವಾದ ಕಲ್ಯಾಣಮಯ ಭಗವಾನ್ ಶಿವನನ್ನು ಸ್ಮರಿಸಿ, ವೇದದ ಸಾರ-ತತ್ತ್ವದಿಂದ ಪ್ರಕಟಗೊಂಡ ಪುರಾಣಶ್ರೇಷ್ಠವಾದ ಶಿವಪುರಾಣದ ಕಥೆಯನ್ನು ಕೇಳಿರಿ. ಶಿವಪುರಾಣದಲ್ಲಿ ಭಕ್ತಿ, ಜ್ಞಾನ, ವೈರಾಗ್ಯ - ಈ ಮೂರನ್ನು ಆದರದಿಂದ ಹಾಡಲಾಗಿದೆ ಮತ್ತು ವೇದಾಂತವೇದ್ಯ ಸದ್ ವಸ್ತುವನ್ನು ವಿಶೇಷ ರೂಪದಿಂದ ವರ್ಣಿಸಲಾಗಿದೆ. ಈ ವರ್ತಮಾನ ಕಲ್ಪದಲ್ಲಿ ಸೃಷ್ಟಿಕರ್ಮವು ಪ್ರಾರಂಭವಾದಾಗ ಆರು ಕುಲಗಳ ಮಹರ್ಷಿಗಳು ಪರಸ್ಪರ ವಾದ-ವಿವಾದವನ್ನು ಮಾಡುತ್ತಾ ಹೇಳತೊಡಗಿದರು - ಇಂತಹ ವಸ್ತು ಎಲ್ಲಕ್ಕಿಂತ ಉತ್ಕೃಷ್ಟವಾಗಿದೆ ಮತ್ತು ಇಂತಹ ವಸ್ತು ಇಲ್ಲ. ಅವರ ಈ ವಿವಾದವು ಅತ್ಯಂತ ಮಹಾನ್ ರೂಪವನ್ನು ಧರಿಸಿತು. ಆಗ ಅವರೆಲ್ಲರೂ ತಮ್ಮ ಸಂದೇಹವನ್ನು ಪರಿಹರಿಸಿಕೊಳ್ಳಲು ಸೃಷ್ಟಿಕರ್ತನಾದ ಅವಿನಾಶೀ ಬ್ರಹ್ಮದೇವರ ಬಳಿಗೆ ಹೋಗಿ, ಕೈಜೋಡಿಸಿಕೊಂಡು, ವಿನಮ್ರವಾಣಿಯಿಂದ ವಿನಂತಿಸಿ ಕೊಂಡರು. ಸ್ವಾಮಿ! ತಾವು ಸಮಸ್ತ ಜಗತ್ತನ್ನು ಧರಿಸಿ-ಪೋಷಿಸುವವರಾಗಿದ್ದೀರಿ. ಎಲ್ಲ ಕಾರಣಗಳಿಗೂ ಮಹಾಕಾರಣರಾಗಿರುವಿರಿ. 'ಸಮಸ್ತ ತತ್ತ್ವಗಳಿಂದ ಅತೀತವಾದ ಪರಾತ್ಪರ ಪುರಾಣಪುರುಷನು ಯಾರು?' ಎಂಬುದನ್ನು ನಿಮ್ಮಿಂದ ತಿಳಿಯಲು ಇಚ್ಛಿಸುತ್ತಿದ್ದೇವೆ.

ಬ್ರಹ್ಮದೇವರು ಹೇಳಿದರು - ಮನಸ್ಸಿನ ಸಹಿತ ವಾಣಿಯು ಯಾರನ್ನು ಪಡೆಯದೆ ಮರಳುತ್ತದೆಯೋ, ಯಾರಿಂದ ಬ್ರಹ್ಮ-ವಿಷ್ಣು-ರುದ್ರ ಮತ್ತು ಇಂದ್ರಾದಿಗಳಿಂದ ಕೂಡಿದ ಸಮಸ್ತ ಜಗತ್ತು, ಎಲ್ಲ ಪ್ರಾಣಿಗಳು ಇಂದ್ರಿಯಗಳೊಂದಿಗೆ ಮೊಟ್ಟಮೊದಲಿಗೆ ಪ್ರಕಟವಾಯಿತೋ, ಸರ್ವಜ್ಞನಾದ ಅವನೇ ದೇವ-ಮಹಾದೇವನೇ ಸಂಪೂರ್ಣ ಜಗತ್ತಿನ ಸ್ವಾಮಿಯಾಗಿರುವನು. ಅವನೇ ಎಲ್ಲಕ್ಕಿಂತ ಉತ್ಕೃಷ್ಟನಾಗಿರುವನು. ಭಕ್ತಿಯಿಂದಲೇ ಅವನ ಸಾಕ್ಷಾತ್ಕಾರವಾಗುತ್ತದೆ. ಬೇರೆ ಯಾವುದೇ ಉಪಾಯದಿಂದ ಎಲ್ಲಿಯೂ ಅವನ ದರ್ಶನವಾಗುವುದಿಲ್ಲ. ವಿಧಿ, ಹರಿ, ಹರ ಹಾಗೂ ಇತರ ದೇವೇಶ್ವರರೂ ಸದಾಕಾಲ ಉತ್ತಮ ಭಕ್ತಿಯಿಂದ ಅವನನ್ನು ದರ್ಶಿಸಲು ಬಯಸುತ್ತಾರೆ. ಭಗವಾನ್ ಶಿವನಲ್ಲಿ ಭಕ್ತಿ ಉಂಟಾಗುವುದರಿಂದ ಮನುಷ್ಯನು ಸಂಸಾರ-ಬಂಧನದಿಂದ ಮುಕ್ತನಾಗಿ ಹೋಗುತ್ತಾನೆ. ವೃಕ್ಷಬೀಜ ನ್ಯಾಯದಂತೆ ದೇವರ ಕೃಪಾಪ್ರಸಾದದಿಂದ ಅವನಲ್ಲಿ ಭಕ್ತಿ ಉಂಟಾಗುತ್ತದೆ ಮತ್ತು ಭಕ್ತಿಯಿಂದ ದೇವರ ಕೃಪಾಪ್ರಸಾದ ಪ್ರಾಪ್ತವಾಗುತ್ತದೆ. ಅದಕ್ಕಾಗಿ ಬ್ರಹ್ಮರ್ಷಿಗಳಾದ ನೀವೆಲ್ಲರೂ ಭಗವಾನ್ ಶಂಕರನ ಕೃಪಾಪ್ರಸಾದವನ್ನು ಪಡೆಯಲು ಭೂಲೋಕಕ್ಕೆ ಹೋಗಿ, ಅಲ್ಲಿ ಸಾವಿರಾರು ವರ್ಷಗಳವರೆಗೆ ನಡೆಯುವ ಒಂದು ವಿಶಾಲವಾದ ಯಜ್ಞವನ್ನು ಆಯೋಜಿಸಿರಿ. ಈ ಯಜ್ಞಪತಿ ಭಗವಾನ್ ಶಿವನ ಕೃಪೆಯಿಂದಲೇ ವೇದೋಕ್ತ ವಿದ್ಯೆಯ ಸಾರಭೂತವಾದ ಸಾಧ್ಯ-ಸಾಧನೆಯ ಜ್ಞಾನವು ಉಂಟಾಗುವುದು.

ಶಿವಪದದ ಪ್ರಾಪ್ತಿಯೇ ಸಾಧ್ಯವಾಗಿದೆ, ಅವನ ಸೇವೆಯೇ ಸಾಧನೆಯಾಗಿದೆ, ಅವನ ಪ್ರಸಾದದಿಂದ ನಿತ್ಯ-ನೈಮಿತ್ತಿಕ ಮೊದಲಾದ ಫಲಗಳಿಂದ ನಿಃಸ್ಪೃಹನಾಗುವವನೇ ಸಾಧಕನಾಗಿದ್ದಾನೆ. ವೇದೋಕ್ತ ಕರ್ಮಗಳನ್ನು ಅನುಷ್ಠಾನಮಾಡಿ, ಅದರ ಮಹಾನ್ ಫಲವನ್ನು ಭಗವಾನ್ ಶಿವನ ಚರಣಗಳಲ್ಲಿ ಅರ್ಪಿಸುವುದೇ ಪರಮೇಶ್ವರ ಪದದ ಪ್ರಾಪ್ತಿಯಾಗಿದೆ. ಅದೇ ಸಾಲೋಕ್ಯ ಮೊದಲಾದ ಕ್ರಮದಿಂದ ದೊರೆಯುವ ಮುಕ್ತಿಯಾಗಿದೆ. ಆಯಾಯಾ ಮನುಷ್ಯರ ಭಕ್ತಿಗನುಸಾರವಾಗಿ ಅವರೆಲ್ಲರಿಗೂ ಉತ್ತಮ ಫಲದ ಪ್ರಾಪ್ತಿಯಾಗುತ್ತದೆ. ಆ ಭಕ್ತಿಯ ಸಾಧನೆಗಳು ಅನೇಕವಿದ್ದು ಅವನ್ನು ಸಾಕ್ಷಾತ್ ಮಹೇಶ್ವರನೇ ಪ್ರತಿಪಾದಿಸಿರುವನು. ಅವುಗಳಲ್ಲಿ ಸಾರಭೂತ ಸಾಧನೆಯನ್ನು ಸಂಕ್ಷಿಪ್ತವಾಗಿ ನಾನು ಹೇಳುತ್ತೇನೆ. ಕಿವಿಗಳಿಂದ ಭಗವಂತನ ನಾಮ-ಗುಣ-ಲೀಲೆಗಳನ್ನು ಶ್ರವಣಿಸುವುದು, ವಾಣಿಯಿಂದ ಅವನನ್ನು ಕೀರ್ತಿಸುವುದು, ಮನಸ್ಸಿನಿಂದ ಅವನನ್ನು ಮನನ ಮಾಡುವುದು ಇವು ಮೂರನ್ನು ಮಹಾನ್ ಸಾಧನೆಯೆಂದು ಹೇಳಲಾಗಿದೆ.* ತಾತ್ಪರ್ಯ- ಮಹೇಶ್ವರನ ಶ್ರವಣ, ಕೀರ್ತನ

---

* ಶ್ರೋತ್ರೇಣ ಶ್ರವಣಂ ತಸ್ಯ ವಚಸಾ ಕೀರ್ತನಂ ತಥಾ ॥ ಮನಸಾ ಮನನಂ ತಸ್ಯ ಮಹಾಸಾಧನಮುಚ್ಯತೇ ।
(ಶಿವಪುರಾಣ-ವಿದ್ಯೇ-೩/೨೧, ೨೨)

ಮತ್ತು ಮನನವನ್ನು ಮಾಡಬೇಕು; ಈ ಶ್ರುತಿಯ ವಾಕ್ಯವು ನಮಗೆಲ್ಲರಿಗೂ ಪ್ರಮಾಣಭೂತವಾಗಿದೆ. ಇದೇ ಸಾಧನೆಯಿಂದ ಸಮಸ್ತ ಮನೋರಥಗಳ ಸಿದ್ಧಿಯಲ್ಲಿ ತೊಡಗಿರುವ ನೀವೆಲ್ಲರೂ ಪರಮ ಸಾಧ್ಯವನ್ನು ಪಡೆದುಕೊಳ್ಳುವಿರಿ. ಜನರು ಪ್ರತ್ಯಕ್ಷ ವಸ್ತುವನ್ನು ಕಣ್ಣಿಂದ ನೋಡಿ ಅದರಲ್ಲಿ ಪ್ರವೃತ್ತರಾಗುತ್ತಾರೆ. ಆದರೆ ಎಲ್ಲಿಯೂ ಪ್ರತ್ಯಕ್ಷವಾಗಿ ಕಾಣುವುದಿಲ್ಲವೋ, ಅದನ್ನು ಶ್ರವಣೇಂದ್ರಿಯದ ಮೂಲಕ ತಿಳಿದುಕೊಂಡು, ಮನುಷ್ಯನು ಅದರ ಪ್ರಾಪ್ತಿಗಾಗಿ ಪ್ರಯತ್ನಿಸುವನು. ಆದ್ದರಿಂದ ಮೊದಲನೆಯ ಸಾಧನೆಯು ಶ್ರವಣವೇ ಆಗಿದೆ. ಅದರ ಮೂಲಕ ಗುರುಗಳಿಂದ ತತ್ತ್ವವನ್ನು ಕೇಳಿ ಶ್ರೇಷ್ಠಬುದ್ಧಿಯುಳ್ಳ ವಿದ್ವಾನ್ ಪುರುಷನು ಉಳಿದ ಸಾಧನೆಗಳಾದ ಕೀರ್ತನ - ಮನನಗಳನ್ನು ಸಿದ್ಧಿಪಡಿಸಿ ಕೊಳ್ಳುವನು. ಕ್ರಮವಾಗಿ ಮನನದವರೆಗೆ ಈ ಸಾಧನೆಗಳನ್ನು ಚೆನ್ನಾಗಿ ಸಾಧಿಸಿದ ಬಳಿಕ ಅದರಿಂದ ಸಾಲೋಕ್ಯಾದಿ ಕ್ರಮದಿಂದ ನಿಧಾನವಾಗಿ ಭಗವಾನ್ ಶಿವನ ಸಂಯೋಗವು ಪ್ರಾಪ್ತಿಯಾಗುತ್ತದೆ. ಮೊದಲಿಗೆ ಶರೀರದ ಎಲ್ಲ ರೋಗಗಳು ನಾಶವಾಗಿ, ಮತ್ತೆ ಎಲ್ಲ ವಿಧದ ಲೌಕಿಕ ಆನಂದಗಳೂ ವಿಲೀನವಾಗುತ್ತವೆ.

ಭಗವಾನ್ ಶಂಕರನ ಪೂಜೆ, ಅವನ ನಾಮಗಳ ಜಪ ಹಾಗೂ ಅವನ ಗುಣ-ರೂಪ-ಲೀಲೆಗಳನ್ನು ಚಿತ್ತದಿಂದ ನಿರಂತರ ಪರಿಶೋಧನ ಅಥವಾ ಚಿಂತನೆಯಾಗುವುದನ್ನೇ ಮನನವೆಂದು ಹೇಳಲಾಗಿದೆ. ಅದು ಮಹೇಶ್ವರನ ಕೃಪಾದೃಷ್ಟಿಯಿಂದ ದೊರೆಯುತ್ತದೆ. ಅದನ್ನು ಸಮಸ್ತ ಶ್ರೇಷ್ಠ ಸಾಧನೆಗಳಲ್ಲಿ ಪ್ರಧಾನ ಇಲ್ಲವೇ ಪ್ರಮುಖವೆಂದು ಹೇಳಲಾಗಿದೆ.

ಸೂತಪುರಾಣಿಕರು ಹೇಳುತ್ತಾರೆ- ಮುನೀಶ್ವರರೇ ! ಈ ಸಾಧನೆಯ ಮಾಹಾತ್ಮ್ಯವನ್ನು ತಿಳಿಸುವ ಪ್ರಸಂಗದಲ್ಲಿ ನಾನು ನಿಮಗೆ ಒಂದು ಪ್ರಾಚೀನ ವೃತ್ತಾಂತವನ್ನು ವರ್ಣಿಸುವೆನು. ಅದನ್ನು ದತ್ತ-ಚಿತ್ತರಾಗಿ ಕೇಳಿರಿ. ಹಿಂದೊಮ್ಮೆ ಪರಾಶರನಂದನ, ನನ್ನ ಗುರುಗಳಾದ ವೇದವ್ಯಾಸರು ಸರಸ್ವತೀ ನದಿಯ ಸುಂದರ ತೀರದಲ್ಲಿ ತಪಸ್ಸು ಮಾಡುತ್ತಿದ್ದರು. ಒಂದು ದಿನ ಸೂರ್ಯನಂತೆ ತೇಜಸ್ವೀ ವಿಮಾನದಲ್ಲಿ ಕುಳಿತು ಸಂಚರಿಸುತ್ತಿದ್ದ ಭಗವಾನ್ ಸನತ್ಕುಮಾರರು ಅಕಸ್ಮಾತ್ತಾಗಿ ಅಲ್ಲಿಗೆ ಆಗಮಿಸಿ, ಧ್ಯಾನಮಗ್ನರಾಗಿದ್ದ ನನ್ನ ಗುರುಗಳನ್ನು ನೋಡಿದರು. ಆದರಿಂದ ಎಚ್ಚರಗೊಂಡು ಅವರು ಬ್ರಹ್ಮಮಾನಸ ಪುತ್ರರಾದ ಸನತ್ಕುಮಾರರು ತಮ್ಮ ಎದುರಿನಲ್ಲೇ ಇರುವುದನ್ನು ನೋಡಿದರು. ನೋಡಿ ಅವರು ತ್ವರಿತವಾಗಿ ಎದ್ದು, ಅವರ ಚರಣಗಳಲ್ಲಿ ವಂದಿಸಿಕೊಂಡರು. ವ್ಯಾಸರು ಅವರಿಗೆ ಅರ್ಘ್ಯಪಾದ್ಯಾದಿಗಳನಿತ್ತು ದೇವತಾಯೋಗ್ಯವಾದ ಆಸನವನ್ನು ನೀಡಿದರು. ಆಗ ಪ್ರಸನ್ನರಾದ ಭಗವಾನ್ ಸನತ್ಕುಮಾರರು ವಿನೀತಭಾವದಿಂದ ನಿಂತುಕೊಂಡಿರುವ ವ್ಯಾಸರಲ್ಲಿ ಗಂಭೀರವಾಣಿಯಿಂದ ಇಂತೆಂದರು.

ಮುನಿವರ್ಯರೇ ! ನೀವು ಸತ್ಯವಸ್ತುವನ್ನು ಚಿಂತಿಸಿರಿ, ಆ ಸತ್ಯವಸ್ತುವು ಭಗವಾನ್ ಶಿವನೇ ಆಗಿರುವನು. ಅವನು ನಿನಗೆ ಸಾಕ್ಷಾತ್ಕಾರದ ವಿಷಯನಾಗುವನು. ಭಗವಾನ್ ಶಂಕರನ ಶ್ರವಣ-ಕೀರ್ತನ-ಮನನ ಇವು ಮೂರು ಮಹತ್ತರ ಸಾಧನಗಳೆಂದು ಹೇಳಲಾಗಿದೆ. ಇವು ಮೂರು ವೇದ ಸಮ್ಮತವೇ ಆಗಿವೆ. ಹಿಂದೆ ನಾನು ಬೇರೆ-ಬೇರೆ ಸಾಧನೆಗಳ ಸಂಭ್ರಮದಲ್ಲಿ ಬಿದ್ದು, ತಿರುಗಾಡುತ್ತಾ ಮಂದರಾಚಲಕ್ಕೆ ಹೋಗಿ ಅಲ್ಲಿ ತಪಸ್ಸಿನಲ್ಲಿ ತೊಡಗಿದೆನು. ಆನಂತರ ಮಹೇಶ್ವರ ಶಿವನ ಆಜ್ಞೆಯಂತೆ ಭಗವಾನ್ ನಂದೀಕೇಶ್ವರರು ಅಲ್ಲಿಗೆ ಬಂದರು. ಅವರಿಗೆ ನನ್ನ ಮೇಲೆ ಅತ್ಯಂತ ದಯೆ ಇತ್ತು. ಅವರು ಎಲ್ಲರ ಸಾಕ್ಷಿಯೂ, ಶಿವಗಣಗಳ ಒಡೆಯರೂ ಆದ ಭಗವಾನ್ ನಂದಿಕೇಶ್ವರರು ಸ್ನೇಹಪೂರ್ವಕ ಮುಕ್ತಿಯ ಉತ್ತಮ ಸಾಧನೆಯನ್ನು ನನಗೆ ಹೇಳುತ್ತಾ - 'ಭಗವಾನ್ ಶಂಕರನ ಶ್ರವಣ-ಕೀರ್ತನ-ಮನನ ಇವು ಮೂರೂ ಸಾಧನೆಗಳು ವೇದ ಸಮ್ಮತವಾಗಿರುವವು ಮತ್ತು ಮುಕ್ತಿಯ ಸಾಕ್ಷಾತ್ ಕಾರಣವಾಗಿವೆ. ಇದನ್ನು ಸ್ವತಃ ಭಗವಾನ್ ಶಿವನೇ ನನಗೆ ಹೇಳಿರುವನು ಎಂದು ತಿಳಿಸಿದರು. ಆದ್ದರಿಂದ ಬ್ರಹ್ಮರ್ಷಿಯೇ ! ನೀವು ಶ್ರವಣಾದಿ ಮೂರೂ ಸಾಧನೆಗಳನ್ನು ಅನುಷ್ಠಾನಮಾಡಿರಿ' ಹೀಗೆ ಪದೇ-ಪದೇ ವ್ಯಾಸರಲ್ಲಿ ಹೇಳಿ ಅನುಯಾಯಿಗಳೊಂದಿಗೆ ಬ್ರಹ್ಮಪುತ್ರ ಸನತ್ಕುಮಾರರು ಪರಮ ಸುಂದರ ಬ್ರಹ್ಮಧಾಮಕ್ಕೆ ತೆರಳಿದರು. ಹೀಗೆ ಹಿಂದಿನ ಈ ಉತ್ತಮ ವೃತ್ತಾಂತವನ್ನು ನಾನು ಸಂಕ್ಷೇಪವಾಗಿ ವರ್ಣಿಸಿರುವೆನು.

ಋಷಿಗಳು ಕೇಳಿದರು- ಸೂತಪುರಾಣಿಕರೇ! ಶ್ರವಣಾದಿ ಮೂರು ಸಾಧನೆಗಳನ್ನು ನೀವು ಮುಕ್ತಿಯ ಉಪಾಯವೆಂದು ಹೇಳಿದಿರಿ. ಆದರೆ ಶ್ರವಣಾದಿ ಸಾಧನೆಗಳಲ್ಲಿ ಅಸಮರ್ಥನಾದ ಮನುಷ್ಯನು ಯಾವ ಉಪಾಯವನ್ನು ಅವಲಂಬಿಸಿ ಮುಕ್ತನಾಗಬಲ್ಲನು? ಯಾವ ಸಾಧನಭೂತ ಕರ್ಮದ ಮೂಲಕ ಪ್ರಯಾಸವಿಲ್ಲದೆಯೇ ಮೋಕ್ಷವನ್ನು ಪಡೆಯಬಲ್ಲನು ? ಎಂಬುದನ್ನು ತಿಳಿಸಿರಿ.

(ಅಧ್ಯಾಯ - ೩-೪)

❑ ❑ ❑

ಭಗವಾನ್ ಶಂಕರನ ಲಿಂಗ ಹಾಗೂ ಸಾಕಾರ ವಿಗ್ರಹದ ಪೂಜೆಯ ರಹಸ್ಯ ಮತ್ತು ಮಹತ್ವದ ವರ್ಣನೆ

ಶ್ರೀಸೂತಪುರಾಣಿಕರು ಹೇಳುತ್ತಾರೆ- ಶೌನಕರೇ! ಶ್ರವಣ, ಕೀರ್ತನೆ, ಮನನ - ಈ ಮೂರು ಸಾಧನೆಗಳ ಅನುಷ್ಠಾನದಲ್ಲಿ ಅಸಮರ್ಥನಾಗಿದ್ದವರು, ಭಗವಾನ್ ಶಂಕರನ ಲಿಂಗ ಅಥವಾ ಮೂರ್ತಿಯನ್ನು ಸ್ಥಾಪಿಸಿ ಪ್ರತಿದಿನವೂ ಅದನ್ನು ಪೂಜಿಸಿದರೆ ಸಂಸಾರ-ಸಾಗರದಿಂದ ದಾಟಿ ಹೋಗುವರು. ವಂಚನೆ ಅಥವಾ ಲೋಭ, ಹಟಮಾಡದೆ ತನ್ನ ಶಕ್ತಿಗನುಸಾರವಾಗಿ ಧನವನ್ನು ಶಿವಲಿಂಗ ಅಥವಾ ಶಿವಮೂರ್ತಿಯ ಸೇವೆಯಲ್ಲಿ ಅರ್ಪಿಸಬೇಕು. ಜೊತೆಗೆ ನಿರಂತರವಾಗಿ ಆ ಲಿಂಗ ಹಾಗೂ ಮೂರ್ತಿಯ ಪೂಜೆಯನ್ನು ಮಾಡಬೇಕು. ಅದಕ್ಕಾಗಿ ಭಕ್ತಿಭಾವದಿಂದ ಮಂಟಪ, ಗೋಪುರ, ತೀರ್ಥ, ಮಠ ಮತ್ತು ಕ್ಷೇತ್ರವನ್ನು ಸ್ಥಾಪಿಸಿ, ಉತ್ಸವವನ್ನು ಆಚರಿಸಬೇಕು. ವಸ್ತ್ರ, ಗಂಧ, ಪುಷ್ಪ ಧೂಪ, ದೀಪಗಳಿಂದ ಪೂಜಿಸಿ, ಉತ್ತಮ ವ್ಯಂಜನಗಳಿಂದೊಡಗೂಡಿದ ನಾನಾ ರೀತಿಯ ಭಕ್ಷ್ಯ-ಭೋಜ್ಯಗಳನ್ನು ನೈವೇದ್ಯವಾಗಿ ಸಮರ್ಪಿಸಬೇಕು. ಛತ್ರ, ಧ್ವಜ, ವ್ಯಜನ, ಚಾಮರ ಹಾಗೂ ಇತರ ರಾಜೋಪಚಾರಗಳನ್ನು ಭಗವಾನ್ ಶಿವನ ಲಿಂಗ ಮತ್ತು ಮೂರ್ತಿಗೆ ಅರ್ಪಿಸಬೇಕು. ಪ್ರದಕ್ಷಿಣೆ, ನಮಸ್ಕಾರ ಹಾಗೂ ಯಥಾಶಕ್ತಿ ಮೂಲಮಂತ್ರದ ಜಪಮಾಡಬೇಕು. ಆವಾಹನೆಯಿಂದ ಮೊದಲುಗೊಂಡು ವಿಸರ್ಜನೆಯವರೆಗೆ ಎಲ್ಲ ಕಾರ್ಯಗಳನ್ನು ಭಕ್ತಿಭಾವದಿಂದ ಪ್ರತಿದಿನವೂ ಆಚರಿಸಬೇಕು. ಹೀಗೆ ಶಿವಲಿಂಗ ಅಥವಾ ಶಿವಮೂರ್ತಿಯಲ್ಲಿ ಭಗವಾನ್ ಶಂಕರನ ಪೂಜೆಯನ್ನು ಮಾಡುವವನು ಶ್ರವಣಾದಿ ಸಾಧನೆಗಳನ್ನು ಅನುಷ್ಠಾನ ಮಾಡದಿದ್ದರೂ, ಭಗವಾನ್ ಶಿವನ ಪ್ರಸನ್ನತೆಯಿಂದ ಸಿದ್ಧಿಯನ್ನು ಪಡೆಯಬಲ್ಲನು. ಹಿಂದೆ ಅನೇಕ ಮಹಾತ್ಮರು ಲಿಂಗ ಮತ್ತು ಶಿವಮೂರ್ತಿಯ ಪೂಜೆ ಮಾಡುವುದರಿಂದಲೇ ಭವಬಂಧನದಿಂದ ಮುಕ್ತರಾಗಿ ಹೋಗಿರುವರು.

ಋಷಿಗಳು ಕೇಳಿದರು- ಮೂರ್ತಿಯಲ್ಲೇ ಎಲ್ಲೆಡೆ ದೇವತೆಗಳ ಪೂಜೆ ನಡೆಯುತ್ತಾ ಇದೆ. (ಲಿಂಗದಲ್ಲಿ ಇಲ್ಲ) ಆದರೆ ಭಗವಾನ್ ಶಿವನ ಪೂಜೆಯು ಎಲ್ಲೆಡೆ ಮೂರ್ತಿಯಲ್ಲಿ ಮತ್ತು ಲಿಂಗದಲ್ಲೇ ಏಕೆ ನಡೆಯುತ್ತದೆ ?

ಸೂತಪುರಾಣಿಕರು ಹೇಳುತ್ತಾರೆ- ಮುನೀಶ್ವರರೇ! ನಿಮ್ಮ ಈ ಪ್ರಶ್ನೆಯು ಅತ್ಯಂತ ಪವಿತ್ರವೂ, ಅದ್ಭುತವೂ ಆಗಿದೆ. ಈ ವಿಷಯದಲ್ಲಿ ಮಹಾದೇವನೇ ಹೇಳಬಲ್ಲನು. ಬೇರೆ ಯಾರೂ, ಎಲ್ಲಿಯೂ ಇದನ್ನು ಪ್ರತಿಪಾದಿಸಲಾರರು. ನಿಮ್ಮ ಪ್ರಶ್ನೆಯ ಉತ್ತರವಾಗಿ ಭಗವಾನ್ ಶಿವನು ಏನನ್ನು ಹೇಳಿರುವನೋ ಅದನ್ನು ನಾನು ಗುರುಗಳ ಮುಖದಿಂದ ಕೇಳಿರುವಂತೆಯೇ, ಕ್ರಮವಾಗಿ ವರ್ಣಿಸುವೆನು. ಏಕಮಾತ್ರ ಭಗವಾನ್ ಶಿವನೇ ಬ್ರಹ್ಮರೂಪನಾದ್ದರಿಂದ 'ನಿಷ್ಕಲ' (ನಿರಾಕಾರ)ನೆಂದು ಹೇಳಲಾಗಿದೆ. ರೂಪವುಳ್ಳವನು ಆದ್ದರಿಂದ ಅವನನ್ನು 'ಸಕಲ'(ಸಾಕಾರ)ನೆಂದೂ ಹೇಳುತ್ತಾರೆ. ಆದ್ದರಿಂದ ಅವನು ಸಕಲ ಮತ್ತು ನಿಷ್ಕಲ ಎರಡೂ ಆಗಿರುವನು. ಶಿವನು ನಿಷ್ಕಲ-ನಿರಾಕಾರನಾದ್ದರಿಂದಲೇ ಅವನ ಪೂಜೆಯ ಆಧಾರಭೂತ ನಿರಾಕಾರ ಲಿಂಗವೇ ಪ್ರಾಪ್ತವಾಗಿದೆ. ಆರ್ಥಾತ್ - ಶಿವಲಿಂಗವು ಶಿವನ ನಿರಾಕಾರ ಸ್ವರೂಪದ ಪ್ರತೀಕವಾಗಿದೆ. ಇದೇ ರೀತಿ ಶಿವನು ಸಕಲ-ಸಾಕಾರನಾದ್ದರಿಂದ ಅವನ ಪೂಜೆಯ ಆಧಾರಭೂತ ಶ್ರೀವಿಗ್ರಹವು ಸಾಕಾರವಾಗಿ ಪ್ರಾಪ್ತವಾಗಿದೆ. ಅಂದರೆ ಶಿವನ ಸಾಕಾರವಿಗ್ರಹವು ಅವನ ಸಾಕಾರ ಸ್ವರೂಪದ ಪ್ರತೀಕವಾಗಿದೆ. ಸಕಲ ಮತ್ತು ಅಕಲ (ಸಮಸ್ತ ಅಂಗ-ಆಕಾರಸಹಿತ ಸಾಕಾರ ಮತ್ತು ಅಂಗ-ಆಕಾರದಿಂದ ಸರ್ವಥಾ ರಹಿತ ನಿರಾಕಾರ) ರೂಪವಿರುವುದರಿಂದಲೇ ಅವನು 'ಬ್ರಹ್ಮ' ಎಂಬ ಶಬ್ದದಿಂದ ಹೇಳುವ ಪರಮಾತ್ಮನಾಗಿದ್ದಾನೆ. ಇದೇ ಕಾರಣದಿಂದ ಎಲ್ಲ ಜನರು ಲಿಂಗ (ನಿರಾಕಾರ) ಮತ್ತು ಮೂರ್ತಿ(ಸಾಕಾರ) ಎರಡರಲ್ಲಿಯೂ ಸದಾಕಾಲ ಭಗವಾನ್ ಶಿವನ ಪೂಜೆ ಮಾಡುತ್ತಾರೆ. ಶಿವನಿಂದ ಬೇರೆ-ಬೇರೆಯಾದ ದೇವತೆಗಳು ಸಾಕ್ಷಾತ್ ಬ್ರಹ್ಮರಾಗಿಲ್ಲ. ಅದಕ್ಕಾಗಿ ಎಲ್ಲಿಯೂ ಅವರಿಗಾಗಿ ನಿರಾಕಾರ ಲಿಂಗವು ದೊರೆಯುವುದಿಲ್ಲ.

ಹಿಂದೆ ಮಂದರಾಚಲದಲ್ಲಿ ಬ್ರಹ್ಮಪುತ್ರ ಸನತ್ಕುಮಾರ ಮುನಿಗಳು ನಂದಿಕೇಶ್ವರನಲ್ಲಿ ಇದೇ ರೀತಿಯ ಪ್ರಶ್ನೆಯನ್ನು ಮಾಡಿದ್ದರು.

ಸನತ್ಕುಮಾರರು ಕೇಳಿದರು - ಭಗವಾನ್ ನಂದಿಕೇಶ್ವರರೇ! ಶಿವನಿಂದ ಬೇರೆಯಾದ ದೇವತೆಗಳೆಲ್ಲರ ಪೂಜೆಗಾಗಿ ಎಲ್ಲೆಡೆ ಪ್ರಾಯಶಃ ವೇರ (ಮೂರ್ತಿ) ಮಾತ್ರವೇ ಹೆಚ್ಚು ಸಂಖ್ಯೆಯಲ್ಲಿ ನೋಡಲಾಗುತ್ತದೆ, ಕೇಳಲಾಗುತ್ತದೆ. ಕೇವಲ ಭಗವಾನ್ ಶಿವನ ಪೂಜೆಯಲ್ಲೇ ಲಿಂಗ ಮತ್ತು ಮೂರ್ತಿ ಎರಡರ ಉಪಯೋಗವು ನೋಡಲಾಗುತ್ತದೆ. ಅದ್ದರಿಂದ ಕಲ್ಯಾಣಮಯ ನಂದಿಕೇಶ್ವರರೇ! ಈ

ವಿಷಯದಲ್ಲಿ ಇರುವ ತಾತ್ತ್ವಿಕ ಮಾತನ್ನು ನನಗೆ ಚೆನ್ನಾಗಿ ತಿಳಿಯುವಂತೆ ಹೇಳಿರಿ.

ನಂದಿಕೇಶ್ವರರು ಹೇಳಿದರು - ಪುಣ್ಯಾತ್ಮರಾದ ಬ್ರಹ್ಮಕುಮಾರರೇ! ನಿಮ್ಮ ಈ ಪ್ರಶ್ನೆಯ ಉತ್ತರವನ್ನು ನಮ್ಮಂತಹ ಜನರಿಂದ ಉತ್ತರಿಸಲಾಗದು; ಏಕೆಂದರೆ, ಇದು ಗೋಪನೀಯ ವಿಷಯವಾಗಿದೆ ಮತ್ತು ಲಿಂಗವು ಸಾಕ್ಷಾತ್ ಬ್ರಹ್ಮನ ಪ್ರತೀಕವಾಗಿದೆ. ಆದರೂ ನೀವು ಶಿವಭಕ್ತರಾಗಿರುವುದರಿಂದ ಈ ವಿಷಯದಲ್ಲಿ ಭಗವಾನ್ ಶಿವನು ಏನನ್ನು ತಿಳಿಸಿರುವನೋ ಅದನ್ನೇ ನಿಮ್ಮ ಮುಂದೆ ಹೇಳುವೆನು. ಭಗವಾನ್ ಶಿವನು ಬ್ರಹ್ಮಸ್ವರೂಪನೂ, ನಿಷ್ಕಲನೂ ಆಗಿರುವನು, ಆದ್ದರಿಂದ ಅವನ ಪೂಜೆಯಲ್ಲಿ ನಿಷ್ಕಲ ಲಿಂಗವನ್ನೇ ಉಪಯೋಗಿಸುತ್ತಾರೆ. ಎಲ್ಲ ವೇದಗಳ ಮತವೂ ಇದೇ ಆಗಿದೆ.

ಸನತ್ಕುಮಾರರು ಕೇಳಿದರು - ಮಹಾನುಭಾವರಾದ ಯೋಗೀಂದ್ರರೇ! ಭಗವಾನ್ ಶಿವನ ಹಾಗೂ ಇತರ ದೇವತೆಗಳ ಪೂಜೆಯಲ್ಲಿ ಲಿಂಗ ಮತ್ತು ಮೂರ್ತಿಯ ಪ್ರಚಾರದ ರಹಸ್ಯವನ್ನು ವಿಭಾಗಪೂರ್ವಕ ಹೇಳಿದುದು ಯಥಾರ್ಥವಾಗಿದೆ. ಅದಕ್ಕಾಗಿ ಲಿಂಗ ಮತ್ತು ಮೂರ್ತಿಯೇ ಮೊದಲಾದ ಉತ್ತತ್ತಿಯ ಉತ್ತಮ ವೃತ್ತಾಂತವನ್ನು ಈಗ ಕೇಳಲು ಬಯಸುತ್ತೇನೆ. ಲಿಂಗದ ಪ್ರಾಕಟ್ಯದ ರಹಸ್ಯವನ್ನು ಸೂಚಿಸುವ ಪ್ರಸಂಗವನ್ನು ಹೇಳಿರಿ.

ಇದರ ಉತ್ತರವಾಗಿ ನಂದಿಕೇಶ್ವರರು ಭಗವಾನ್ ಮಹಾದೇವನ ನಿಷ್ಕಲ ಸ್ವರೂಪ ಲಿಂಗದ ಆವಿರ್ಭಾವದ ಪ್ರಸಂಗವನ್ನು ಹೇಳಲು ಪ್ರಾರಂಭಿಸಿದರು. ಅವರು ಬ್ರಹ್ಮಾ ಹಾಗೂ ವಿಷ್ಣುವಿನ ವಿವಾದ, ದೇವತೆಗಳ ವ್ಯಾಕುಲತೆ ಹಾಗೂ ಚಿಂತೆ, ದೇವತೆಗಳು ದಿವ್ಯ ಕೈಲಾಸ ಶಿಖರಕ್ಕೆ ತೆರಳುವುದು, ಅವರಿಂದ ಚಂದ್ರಶೇಖರ ಮಹಾದೇವನ ಸ್ತವನ, ದೇವತೆಗಳಿಂದ ಪ್ರೇರಿತನಾಗಿ ಮಹಾದೇವನು ಬ್ರಹ್ಮಾ-ವಿಷ್ಣು ಇವರ ವಿವಾದ ಸ್ಥಳಕ್ಕೆ ಆಗಮನ ಹಾಗೂ ಇಬ್ಬರ ನಡುವೆ ನಿಷ್ಕಲ ಆದಿ-ಅಂತ್ಯರಹಿತ ಭೀಷಣ ಅಗ್ನಿಸ್ತಂಭದ ರೂಪದಲ್ಲಿ ಅವನ ಆವಿರ್ಭಾವ, ಮೊದಲಾದ ಪ್ರಸಂಗಗಳ ಕಥೆಯನ್ನು ಹೇಳಿದರು. ಅನಂತರ ಶ್ರೀಬ್ರಹ್ಮಾ ಮತ್ತು ಶ್ರೀವಿಷ್ಣು ಇಬ್ಬರಿಂದ ಆ ಜ್ಯೋತಿರ್ಮಯ ಸ್ತಂಭದ ಎತ್ತರ ಮತ್ತು ಆಳವನ್ನು ನೋಡುವ ಪ್ರಯತ್ನ, ಕೇದಗೆ ಹೂವಿನ ಶಾಪ-ವರದಾನ ಮುಂತಾದ ಪ್ರಸಂಗಗಳನ್ನೂ ಹೇಳಿದರು.

(ಅಧ್ಯಾಯ ೫ ರಿಂದ ೮)

❐ ❐ ❐

ಮಹೇಶ್ವರನು ಬ್ರಹ್ಮಾ ಮತ್ತು ವಿಷ್ಣು ಇವರಿಗೆ ತನ್ನ ನಿಷ್ಕಲ ಹಾಗೂ ಸಕಲ ಸ್ವರೂಪದ ಪರಿಚಯ ಮಾಡಿಸಿ ಲಿಂಗಪೂಜೆಯ ಮಹತ್ತ್ವವನ್ನು ಹೇಳುವುದು

ನಂದಿಕೇಶ್ವರರು ಹೇಳುತ್ತಾರೆ - ಅನಂತರ ಬ್ರಹ್ಮಾ ಮತ್ತು ವಿಷ್ಣು ಇಬ್ಬರೂ ಭಗವಾನ್ ಶಂಕರನಿಗೆ ನಮಸ್ಕಾರಮಾಡಿ, ಎರಡೂ ಕೈಗಳನ್ನು ಜೋಡಿಸಿ ಅವನ ಎಡ-ಬಲದಲ್ಲಿ ಸುಮ್ಮನೇ ನಿಂತುಕೊಂಡರು. ಮತ್ತೆ ಅವರು ಅಲ್ಲಿ ಸಾಕ್ಷಾತ್ ಪ್ರಕಟನಾದ ಪೂಜನೀಯ ಮಹಾದೇವನಿಗೆ ಶ್ರೇಷ್ಠವಾದ ಆಸನದಲ್ಲಿ ಕುಳ್ಳಿರಿಸಿ ಪವಿತ್ರವಾದ ಪುರುಷ-ವಸ್ತುಗಳಿಂದ ಅವನನ್ನು ಪೂಜಿಸಿದರು. ದೀರ್ಘಕಾಲದವರೆಗೆ ವಿಕೃತವಾಗದೆ ಸುಸ್ಥಿರವಾಗಿ ಇರುವ ವಸ್ತುವನ್ನು 'ಪುರುಷವಸ್ತು' ಎಂದು ಹೇಳುತ್ತಾರೆ. ಸ್ವಲ್ಪ ಸಮಯದವರೆಗೆ ಉಳಿಯುವ ಕ್ಷಣಭಂಗುರ ವಸ್ತುಗಳನ್ನು 'ಪ್ರಾಕೃತವಸ್ತು' ಎಂದು ಹೇಳುತ್ತಾರೆ. ಹೀಗೆ ವಸ್ತುಗಳ ಎರಡು ಭೇದಗಳನ್ನು ತಿಳಿಯಬೇಕು. (ಯಾವ ಪುರುಷ-ವಸ್ತುಗಳಿಂದ ಅವರು ಭಗವಾನ್ ಶಿವನನ್ನು ಪೂಜಿಸಿದರು, ಅದನ್ನು ಹೇಳುವೆನು) ಹಾರ, ನೂಪುರ, ಕೊಯೂರ, ಕಿರೀಟ, ಮಣಿಮಯ ಕುಂಡಲಗಳು, ಯಜ್ಞೋಪವೀತ, ಉತ್ತರೀಯ ವಸ್ತ್ರ ಪುಷ್ಪ-ಮಾಲೆ, ರೇಶ್ಮೆವಸ್ತ್ರ, ಹಾರ, ಮುದ್ರಿಕೆ, ಪುಷ್ಪ ತಾಂಬೂಲ, ಕರ್ಪೂರ, ಚಂದನ ಹಾಗೂ ಅಗರು ಅನುಲೇಪ, ಧೂಪ, ದೀಪ, ಶ್ವೇತಚ್ಛತ್ರ, ವ್ಯಜನ, ಧ್ವಜ, ಚಾಮರ ಮತ್ತು ಬೇರೆ-ಬೇರೆ ದಿವ್ಯ ಉಪಹಾರಗಳ ಮೂಲಕ ಪೂಜಿಸಿದರು. ಅವುಗಳ ವೈಭವವು ವಾಣಿ-ಮನಸ್ಸುಗಳಿಗೆ ನಿಲುಕದೇ ಇತ್ತು, ಕೇವಲ ಪಶುಪತಿ(ಪರಮಾತ್ಮ)ಗೇ ಯೋಗ್ಯವಾಗಿದ್ದವು. ಅವನ್ನು ಪಶು (ಬದ್ಧ ಜೀವನು) ಎಂದಿಗೂ ಪಡೆಯಲಾರನು. ಎಲ್ಲರಿಂದ ಮೊದಲು ಅಲ್ಲಿ ಬ್ರಹ್ಮಾ-ವಿಷ್ಣು ಇವರು ಭಗವಾನ್ ಶಂಕರನನ್ನು ಪೂಜಿಸಿದರು. ಇದರಿಂದ ಪ್ರಸನ್ನನಾದ ಭಗವಾನ್ ಶಿವನು ಭಕ್ತಿಯಿಂದ ನಮ್ರರಾಗಿ ನಿಂತಿದ್ದ ಆ ದೇವತಾದ್ವಯರಲ್ಲಿ ಮುಗುಳುನಗುತ್ತಾ ಇಂತೆಂದನು.

ಮಹೇಶ್ವರನು ಹೇಳಿದನು - ಮಕ್ಕಳಿರಾ! ಇಂದಿನ ದಿನವು ಒಂದು ಮಹಾ ಸುದಿನವಾಗಿದೆ. ಇಂದು ನೀವುಗಳು ಮಾಡಿದ ಪೂಜೆಯಿಂದ ನಾನು ನಿಮ್ಮ ಮೇಲೆ ಅತ್ಯಂತ ಪ್ರಸನ್ನನಾಗಿರುವೆನು. ಈ ಕಾರಣದಿಂದ ಇಂದಿನ ದಿನವು

ಪವಿತ್ರ ಹಾಗೂ ಮಹಾನ್ ಆಗುವುದು. ಇಂದಿನ ಈ ತಿಥಿಯು 'ಶಿವರಾತ್ರಿ'ಯ ಹೆಸರಿನಿಂದ ವಿಖ್ಯಾತವಾಗಿ ನನಗಾಗಿ ಪರಮಪ್ರಿಯವಾಗುವುದು. ಈ ಸಮಯದಲ್ಲಿ ನನ್ನ ಲಿಂಗ (ನಿಷ್ಕಲ-ಅಂಗ-ಆಕೃತಿಯಿಂದ ರಹಿತ ನಿರಾಕಾರ ಸ್ವರೂಪದ ಪ್ರತೀಕ) ಮತ್ತು ಮೂರ್ತಿ (ಸಕಲ- ಸಾಕಾರ ರೂಪದ ಪ್ರತೀಕ)ಯ ಪೂಜೆ ಮಾಡುವವನು ಜಗತ್ತಿನ ಸೃಷ್ಟಿ ಹಾಗೂ ಪಾಲನಾದಿ ಕಾರ್ಯಗಳನ್ನು ಮಾಡಬಲ್ಲನು. ಶಿವರಾತ್ರಿಯ ದಿನ ಹಗಲು-ರಾತ್ರಿ ನಿರಾಹಾರವಿದ್ದು, ಜಿತೇಂದ್ರಿಯನಾಗಿ, ತನ್ನ ಶಕ್ತಿಗನುಸಾರ ನಿಶ್ಚಲಭಾವದಿಂದ ಯಥೋಚಿತವಾಗಿ ನನ್ನ ಪೂಜೆಯನ್ನು ಮಾಡುವವನಿಗೆ ಸಿಗುವ ಫಲದ ವರ್ಣನೆಯನ್ನು ಕೇಳು. ಒಂದು ವರ್ಷದವರೆಗೆ ನಿರಂತರ ನನ್ನ ಪೂಜೆಮಾಡಿದರೆ ಸಿಗುವ ಫಲವು, ಕೇವಲ ಶಿವರಾತ್ರಿಯಂದು ನನ್ನ ಪೂಜೆ ಮಾಡುವುದರಿಂದ ಮನುಷ್ಯನು ತತ್ಕಾಲದಲ್ಲಿ ಪಡೆದುಕೊಳ್ಳುವನು. ಪೂರ್ಣಚಂದ್ರನು ಉದಯಿಸಿದಾಗ ಸಮುದ್ರಕ್ಕೆ ಭರತವು ಬರುವಂತೆಯೇ, ಈ ಶಿವರಾತ್ರಿ ತಿಥಿಯು ನನ್ನ ಧರ್ಮದ ವೃದ್ಧಿಯ ಸಮಯವಾಗಿದೆ. ಈ ತಿಥಿಯಲ್ಲಿ ನನ್ನ ಪ್ರತಿಷ್ಠಾಪನೆ ಮುಂತಾದ ಮಂಗಲೋತ್ಸವಗಳು ಆಗಬೇಕು. ಮೊಟ್ಟಮೊದಲಿಗೆ ನಾನು ಜ್ಯೋತಿರ್ಮಯ ಸ್ತಂಭರೂಪದಿಂದ ಪ್ರಕಟನಾದಾಗ ಮಾರ್ಗಶಿರ ಮಾಸದಲ್ಲಿ ಆರ್ದ್ರಾನಕ್ಷತ್ರದಿಂದ ಕೂಡಿದ ಪೌರ್ಣಮಿ ಅಥವಾ ಪ್ರತಿಪದೆಯಾಗಿತ್ತು. ಮಾರ್ಗಶಿರ ತಿಂಗಳ ಆರ್ದ್ರಾ ನಕ್ಷತ್ರದಲ್ಲಿ ಪಾರ್ವತಿಸಹಿತ ನನ್ನ ದರ್ಶನ ಮಾಡುವವನು, ಅಥವಾ ನನ್ನ ಮೂರ್ತಿ ಇಲ್ಲವೇ ಲಿಂಗದ ದರ್ಶನ ಪಡೆಯುವವನು ನನಗೆ ಕಾರ್ತಿಕೇಯನಿಗಿಂತಲೂ ಹೆಚ್ಚು ಪ್ರಿಯನಾಗಿರುವನು. ಆ ಶುಭ ದಿನದಲ್ಲಿ ನನ್ನ ದರ್ಶನಮಾತ್ರದಿಂದ ಪೂರ್ಣಫಲ ಪ್ರಾಪ್ತವಾಗುತ್ತದೆ. ದರ್ಶನದ ಜೊತೆ-ಜೊತೆಗೆ ನನ್ನ ಪೂಜೆಯನ್ನು ಮಾಡಿದರೆ ವರ್ಣಿಸಲಾರದಷ್ಟು ಹೆಚ್ಚು ಫಲವು ಪ್ರಾಪ್ತವಾಗುತ್ತದೆ.

ಅಲ್ಲಿ ನಾನು ಲಿಂಗರೂಪದಿಂದ ಪ್ರಕಟನಾಗಿ ಬಹಳ ದೊಡ್ಡವನಾಗಿದ್ದೆ. ಆದ್ದರಿಂದ ಆ ಲಿಂಗದ ಕಾರಣ ಈ ಭೂತಲವು 'ಲಿಂಗಸ್ಥಾನ' ಎಂಬ ಹೆಸರಿನಿಂದ ಪ್ರಸಿದ್ಧವಾಯಿತು. ಜಗತ್ತಿನ ಜನರು ಇದರ ದರ್ಶನ ಮತ್ತು ಪೂಜೆ ಮಾಡಲು ಅನುಕೂಲವಾಗಲು ಈ ಅನಾದಿ ಮತ್ತು ಅನಂತ ಜ್ಯೋತಿಸ್ತಂಭ ಅಥವಾ ಜ್ಯೋತಿರ್ಮಯ ಲಿಂಗವು ಅತ್ಯಂತ ಚಿಕ್ಕದಾಯಿತು. ಈ ಲಿಂಗವು ಎಲ್ಲ ರೀತಿಯ ಭೋಗಗಳನ್ನು ಸುಲಭವಾಗಿಸುವುದು ಹಾಗೂ ಭೋಗ-ಮೋಕ್ಷದ ಏಕಮಾತ್ರ ಸಾಧನೆಯಾಗಿದೆ. ಇದರ ದರ್ಶನ, ಸ್ಪರ್ಶ ಮತ್ತು ಧ್ಯಾನ ಮಾಡಿದರೆ, ಇದು ಪ್ರಾಣಿಗಳನ್ನು ಜನ್ಮ ಮತ್ತು ಮೃತ್ಯುವಿನ ಕಷ್ಟದಿಂದ ಬಿಡುಗಡೆಗೊಳಿಸುವುದು, ಅಗ್ನಿಯಪರ್ವತದಂತೆ ಈ ಶಿವಲಿಂಗವು ಪ್ರಕಟವಾದ ಸ್ಥಾನವನ್ನು 'ಅರುಣಾಚಲ' ವೆಂಬ ಹೆಸರಿನಿಂದ ಪ್ರಸಿದ್ಧವಾದೀತು. ಇಲ್ಲಿ ಅನೇಕ ಪ್ರಕಾರದ ದೊಡ್ಡ -ದೊಡ್ಡ ತೀರ್ಥಗಳು ಪ್ರಕಟವಾಗುವವು. ಈ ಸ್ಥಾನದಲ್ಲಿ ವಾಸಿಸುವುದರಿಂದ ಅಥವಾ ಸಾಯುವುದರಿಂದ ಜೀವರಿಗೆ ಮೋಕ್ಷವೇ ಆಗುತ್ತದೆ.

ಸಕಲ ಮತ್ತು ನಿಷ್ಕಲ ಎಂಬ ನನ್ನ ಎರಡು ರೂಪಗಳಿವೆ. ಬೇರೆ ಯಾರಿಗೂ ಇಂತಹ ರೂಪಗಳಿಲ್ಲ. ಮೊದಲಿಗೆ ನಾನು ಸ್ತಂಭರೂಪದಿಂದ ಪ್ರಕಟನಾದೆ, ಮತ್ತೆ ತನ್ನ ಸಾಕ್ಷಾತ್ ರೂಪದಿಂದ ಕಾಣಿಸಿಕೊಂಡೆ. ಬ್ರಹ್ಮಭಾವವು ನನ್ನ 'ನಿಷ್ಕಲ' ರೂಪವಾಗಿದೆ ಹಾಗೂ ಮಹೇಶ್ವರ ಭಾವ 'ಸಕಲ' ರೂಪವಾಗಿದೆ; ಇವೆರಡೂ ನನ್ನದೇ ಸಿದ್ಧರೂಪಗಳಾಗಿವೆ. ನಾನೇ ಪರಬ್ರಹ್ಮ ಪರಮಾತ್ಮನಾಗಿರುವೆನು. ಕಲಾಯುಕ್ತ ಮತ್ತು ಅಕಲ ನನ್ನದೇ ಸ್ವರೂಪವಾಗಿದೆ. ಬ್ರಹ್ಮರೂಪೀಯಾದ್ದರಿಂದ ನಾನು ಈಶ್ವರನೂ ಆಗಿರುವೆನು. ಜೀವಿಗಳ ಮೇಲೆ ಅನುಗ್ರಹಾದಿಗಳನ್ನು ಮಾಡುವುದೇ ನನ್ನ ಕಾರ್ಯವಾಗಿದೆ. ಬ್ರಹ್ಮಾ, ಕೇಶವರೇ! ನಾನು ಎಲ್ಲಕ್ಕಿಂತ ಬೃಹತ್ತಾಗಿದ್ದು, ಜಗತ್ತಿನ ವೃದ್ಧಿಯನ್ನು ಮಾಡುವವನಾದ ಕಾರಣ 'ಬ್ರಹ್ಮ'ನೆಂದು ಕರೆಸಿಕೊಳ್ಳುವೆನು. ಎಲ್ಲೆಡೆ ಸಮರೂಪದಿಂದ ಸ್ಥಿತನಾಗಿದ್ದು, ವ್ಯಾಪಕನಾದ್ದರಿಂದ ನಾನೇ ಎಲ್ಲರ ಆತ್ಮನಾಗಿರುವೆನು. ಸರ್ಗದಿಂದ ಹಿಡಿದು ಅನುಗ್ರಹದವರೆಗಿನ (ಆತ್ಮಾ ಅಥವಾ ಈಶ್ವರನಿಂದ ಭಿನ್ನ) ಇರುವ ಜಗತ್-ಸಂಬಂಧೀ ಐದು ಕಾರ್ಯಗಳೂ ಸದಾ ನನ್ನದೇ ಆಗಿವೆ. ನಾನಲ್ಲದೆ ಬೇರೆಯಾರದೂ ಅಲ್ಲ; ಏಕೆಂದರೆ, ನಾನೇ ಎಲ್ಲರ ಈಶ್ವರನಾಗಿರುವೆನು. ಮೊದಲಿಗೆ ನನ್ನ ಬ್ರಹ್ಮರೂಪದ ಬೋಧವನ್ನು ಮಾಡಿಸಲು 'ನಿಷ್ಕಲ' ಲಿಂಗ ಪ್ರಕಟವಾಗಿತ್ತು. ಮತ್ತೆ ಅಜ್ಞಾತ ಈಶ್ವರ ತತ್ತ್ವದ ಸಾಕ್ಷಾತ್ಕಾರವನ್ನು ಮಾಡಿಸಲು ಸಾಕ್ಷಾತ್ ಜಗದೀಶ್ವರನಾದ ನಾನು 'ಸಕಲ' ರೂಪದಲ್ಲಿ ತತ್ಕಾಲದಲ್ಲಿ ಪ್ರಕಟನಾದೆ. ಆದ್ದರಿಂದ ನನ್ನಲ್ಲಿರುವ ಈ ತತ್ತ್ವವನ್ನೇ ನನ್ನ ಸಕಲರೂಪವೆಂದು ತಿಳಿಯಬೇಕು; ಈ ನಿಷ್ಕಲಸ್ತಂಭವು ನನ್ನ ಬ್ರಹ್ಮಸ್ವರೂಪವನ್ನು ತಿಳಿಸುವುದಾಗಿದೆ. ಇದು ನನ್ನದೇ ಲಿಂಗ (ಚಿಹ್ನೆ) ವಾಗಿದೆ. ನೀವಿಬ್ಬರೂ ಇಲ್ಲಿ ಇದ್ದು ಪ್ರತಿದಿನವೂ ಇದನ್ನು ಪೂಜಿಸಿರಿ. ಇದು ನನ್ನದೇ ಸ್ವರೂಪವಾಗಿದ್ದು ನನ್ನ ಸಾಮಿಪ್ಯದ ಪ್ರಾಪ್ತಿಯನ್ನು ಮಾಡಿಸುವುದಾಗಿದೆ. ಲಿಂಗ ಮತ್ತು ಲಿಂಗಿಯಲ್ಲಿ ನಿತ್ಯ ಅಭೇದವಿರುವ ಕಾರಣ ನನ್ನ ಈ

ಲಿಂಗವನ್ನು ಮಹಾಪುರುಷರೂ ಕೂಡ ಪೂಜಿಸ ಬೇಕು. ನನ್ನ ಒಂದು ಲಿಂಗವನ್ನು ಸ್ಥಾಪಿಸಿದರೆ, ಉಪಾಸಕನಿಗೆ ನನ್ನ ಸಮಾನತೆಯ ಪ್ರಾಪ್ತಿಯಾಗುವಂತಹ ಫಲವನ್ನು ಹೇಳಲಾಗಿದೆ. ಒಂದರ ಬಳಿಕ ಇನ್ನೊಂದು ಶಿವಲಿಂಗವನ್ನು ಸ್ಥಾಪಿಸಿದರೆ ಉಪಾಸಕನಿಗೆ ಫಲರೂಪವಾಗಿ ನನ್ನೊಂದಿಗೆ ಏಕತ್ವ (ಸಾಯುಜ್ಯಮೋಕ್ಷ) ರೂಪೀ ಫಲಪ್ರಾಪ್ತ ವಾಗುತ್ತದೆ. ಪ್ರಧಾನವಾಗಿ ಶಿವಲಿಂಗವನ್ನೇ ಸ್ಥಾಪಿಸಬೇಕು. ಮೂರ್ತಿಯ ಸ್ಥಾಪನೆಯು ಅದರಿಂದ ಗೌಣವಾಗಿದೆ. ಶಿವಲಿಂಗದ ಅಭಾವದಲ್ಲಿ ಎಲ್ಲ ರೀತಿಯಿಂದ ಮೂರ್ತಿಯುಕ್ತವಾಗಿದ್ದರೂ ಆ ಸ್ಥಾನವು ಕ್ಷೇತ್ರವೆಂದು ಹೇಳಲಾಗುವುದಿಲ್ಲ.

(ಅಧ್ಯಾಯ -೯)

❑ ❑ ❑

ಪಂಚಕಾರ್ಯಗಳ ಪ್ರತಿಪಾದನೆ, ಪ್ರಣವ ಹಾಗೂ ಪಂಚಾಕ್ಷರ ಮಂತ್ರದ ಮಹತ್ವ, ಬ್ರಹ್ಮಾ-ವಿಷ್ಣು ಇವರಿಂದ ಭಗವಾನ್ ಶಿವನ ಸ್ತುತಿ ಹಾಗೂ ಶಿವನ ಅಂತರ್ಧಾನ

ಬ್ರಹ್ಮಾ ಮತ್ತು ವಿಷ್ಣು ಕೇಳಿದರು - ಪ್ರಭೋ ! ಸೃಷ್ಟಿಯೇ ಮೊದಲಾದ ಐದು ಕಾರ್ಯಗಳ ಲಕ್ಷಣಗಳೇನು ? ಇದನ್ನು ನಮಗಿಬ್ಬರಿಗೂ ತಿಳಿಸು.

ಭಗವಾನ್ ಶಿವನು ಹೇಳಿದನು - ನನ್ನ ಕರ್ತವ್ಯಗಳನ್ನು ತಿಳಿದುಕೊಳ್ಳುವುದು ಅತ್ಯಂತ ಗಹನವಾಗಿದೆ. ಹೀಗಿದ್ದರೂ ಕೃಪಾಪೂರ್ವಕವಾಗಿ ನಿಮಗೆ ಅವುಗಳ ವಿಷಯದಲ್ಲಿ ಹೇಳುತ್ತಿದ್ದೇನೆ. ಬ್ರಹ್ಮಾಚ್ಯುತರೇ ! 'ಸೃಷ್ಟಿ', 'ಪಾಲನೆ' 'ಸಂಹಾರ' 'ತಿರೋಭಾವ' ಮತ್ತು 'ಅನುಗ್ರಹ' ಇವು ಐದು ಜಗತ್ತಿನ ಸಂಬಂಧವಾದ ನಿತ್ಯಸಿದ್ಧ ನನ್ನ ಕಾರ್ಯಗಳಾಗಿವೆ. ಪ್ರಪಂಚದ ರಚನೆಯ ಪ್ರಾರಂಭವನ್ನು ಸರ್ಗ ಅಥವಾ ಸೃಷ್ಟಿ ಎಂದು ಹೇಳುತ್ತಾರೆ. ನನ್ನಿಂದ ಪಾಲಿತವಾಗಿ ಸೃಷ್ಟಿಯು ಸುಸ್ಥಿರವಾಗಿ ಇರುವುದು ಅದರ ಸ್ಥಿತಿಯಾಗಿದೆ; ಅದರ ವಿನಾಶವೇ ಸಂಹಾರವಾಗಿದೆ. ಪ್ರಾಣಗಳ ಉತ್ಕ್ರಮಣವನ್ನು ತಿರೋಭಾವವೆಂದು ಹೇಳುತ್ತಾರೆ. ಇವೆಲ್ಲದರಿಂದ ಬಿಡುಗಡೆ ಹೊಂದುವುದೇ ನನ್ನ ಅನುಗ್ರಹವಾಗಿದೆ; ಹೀಗೆ ನನ್ನ ಐದು ಕಾರ್ಯಗಳಾಗಿವೆ. ಸೃಷ್ಟ್ಯಾದಿ ನಾಲ್ಕು ಕಾರ್ಯಗಳು ಪ್ರಪಂಚದ ವಿಸ್ತಾರ ಮಾಡುವುದಾಗಿದೆ, ಐದನೆಯದಾದ ಅನುಗ್ರಹವು ಮೋಕ್ಷದ ಕಾರಣವಾಗಿದೆ. ಅದು ಸದಾ ನನ್ನಲ್ಲೇ ಅಚಲಭಾವದಿಂದ ಸ್ಥಿರವಾಗಿರುತ್ತದೆ. ನನ್ನ ಭಕ್ತರಾದವರು ಈ ಐದು ಕಾರ್ಯಗಳನ್ನು ಐದು ಭೂತಗಳಲ್ಲಿ ನೋಡುತ್ತಾರೆ. ಸೃಷ್ಟಿಯನ್ನು ಭೂತಲದಲ್ಲಿಯೂ, ಸ್ಥಿತಿಯನ್ನು ನೀರಿನಲ್ಲಿಯೂ, ಸಂಹಾರವನ್ನು ಅಗ್ನಿಯಲ್ಲೂ, ತಿರೋಭಾವ ವಾಯುವಿನಲ್ಲಿಯೂ, ಅನುಗ್ರಹವನ್ನು ಆಕಾಶದಲ್ಲಿ ಸ್ಥಿತವಾಗಿವೆ. ಪೃಥಿವಿಯಿಂದ ಎಲ್ಲರ ಸೃಷ್ಟಿಯಾಗುತ್ತದೆ. ಜಲದಿಂದ ಎಲ್ಲರ ವೃದ್ಧಿ ಹಾಗೂ ಜೀವನ ರಕ್ಷಣೆಯಾಗುತ್ತದೆ. ಬೆಂಕಿಯು ಎಲ್ಲವನ್ನು ಸುಟ್ಟು ಬಿಡುತ್ತದೆ. ವಾಯುವು ಎಲ್ಲವನ್ನು ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಕೊಂಡು ಹೋಗುತ್ತದೆ. ಆಕಾಶವು ಎಲ್ಲರನ್ನು ಅನುಗ್ರಹಿಸುತ್ತದೆ. ವಿದ್ವಾಂಸರಾದವರು ಈ ವಿಷಯವನ್ನು ಹೀಗೇ ತಿಳಿದುಕೊಳ್ಳಬೇಕು. ಈ ಐದು ಕೃತ್ಯಗಳನ್ನು ನಡೆಸಲಿಕ್ಕಾಗಿಯೇ, ನನಗೆ ಐದು ಮುಖಿಗಳಿವೆ. ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಮುಖಿಗಳು ಮತ್ತು ಅವುಗಳ ನಡುವೆ ಐದನೆಯದು. ಮಕ್ಕಳಿರಾ ! ನೀವಿಬ್ಬರು ತಪಸ್ಸು ಮಾಡಿ ಪರಮೇಶ್ವರನಾದ ನನ್ನನ್ನು ಪ್ರಸನ್ನಗೊಳಿಸಿ ಸೃಷ್ಟಿ ಮತ್ತು ಸ್ಥಿತಿ ಎಂಬ ಎರಡು ಕಾರ್ಯಗಳನ್ನು ಪಡೆದುಕೊಂಡಿರುವಿರಿ. ಇವೆರಡೂ ನನಗೆ ಬಹಳ ಪ್ರಿಯವಾಗಿವೆ. ಹೀಗೆಯೇ ನನ್ನ ವಿಭೂತಿಸ್ವರೂಪ 'ರುದ್ರ' ಮತ್ತು 'ಮಹೇಶ್ವರ' ಇವರಿಬ್ಬರು ಎರಡು ಬೇರೆ ಉತ್ತಮ ಕೃತ್ಯ-ಸಂಹಾರ ಮತ್ತು ತಿರೋಭಾವ ನನ್ನಿಂದ ಪಡೆದುಕೊಂಡಿರುವರು. ಆದರೆ ಅನುಗ್ರಹವೆಂಬ ಕೃತ್ಯವು ಬೇರೆ ಯಾರೂ ಪಡೆದಿಲ್ಲ. ರುದ್ರ ಮತ್ತು ಮಹೇಶ್ವರರು ತಮ್ಮ ಕರ್ಮವನ್ನು ಮರೆಯುವುದಿಲ್ಲ. ಅದಕ್ಕಾಗಿ ನಾನು ಅವರಿಗೆ ನನ್ನ ಸಮಾನತೆಯನ್ನು ಕರುಣಿಸಿರುವೆನು. ಅವರು ರೂಪ, ವೇಷ, ಕೃತ್ಯ, ವಾಹನ, ಆಸನ ಮತ್ತು ಆಯುಧ ಮೊದಲಾದವುಗಳಲ್ಲಿ ನನಗೆ ಸಮಾನರಾಗಿದ್ದಾರೆ. ಹಿಂದೆ ನಾನು ಉಪದೇಶಿಸಿದ ನನ್ನ ಸ್ವರೂಪಭೂತವಾದ ಮಂತ್ರವು ಓಂಕಾರದ ರೂಪದಲ್ಲಿ ಪ್ರಸಿದ್ಧವಾಗಿದೆ. ಅದು ಮಹಾಮಂಗಲಕಾರಿ ಮಂತ್ರವಾಗಿದೆ. ಮೊಟ್ಟಮೊದಲು ನನ್ನ ಮುಖದಿಂದ ಓಂಕಾರವು ಪ್ರಕಟವಾಯಿತು. ಅದು ನನ್ನ ಸ್ವರೂಪದ ಬೋಧವನ್ನು ಮಾಡಿಸುವುದಾಗಿದೆ. ಓಂಕಾರವು ವಾಚಕವಾಗಿದ್ದು, ನಾನು ವಾಚ್ಯನಾಗಿದ್ದೇನೆ. ಈ ಮಂತ್ರವು ನನ್ನ ಸ್ವರೂಪವೇ ಆಗಿದೆ. ಪ್ರತಿನಿತ್ಯವು ನಿರಂತರವಾಗಿ ಓಂಕಾರವನ್ನು ಸ್ಮರಿಸುವುದರಿಂದ ಸದಾ ನನ್ನದೇ ಸ್ಮರಣೆಯಾಗುವುದು.

ನನ್ನ ಉತ್ತರವರ್ತಿ ಮುಖದಿಂದ ಆಕಾರದ, ಪಶ್ಚಿಮ ಮುಖದಿಂದ ಉಕಾರದ, ದಕ್ಷಿಣ ಮುಖದಿಂದ ಮಕಾರದ, ಪೂರ್ವವರ್ತಿ ಮುಖದಿಂದ ಬಿಂದುವಿನ ಹಾಗೂ ಮಧ್ಯವರ್ತಿ ಮುಖದಿಂದ ನಾದದ ಪ್ರಾಕಟ್ಯವಾಯಿತು. ಹೀಗೆ ಐದು ಅವಯವಗಳಿಂದ ಯುಕ್ತವಾದ ಓಂಕಾರದ ವಿಸ್ತಾರವಾಯಿತು. ಇವೆಲ್ಲ ಅವಯವಗಳಿಂದ ಏಕೀಭೂತವಾಗಿ ಅದು ಪ್ರಣವ 'ಓಂ' ಎಂಬ ಏಕಾಕ್ಷರವಾಯಿತು. ಈ ನಾಮ-ರೂಪಾತ್ಮಕ ಜಗತ್ತು ಉತ್ಪನ್ನವಾದ ವೇದಗಳೂ, ಸ್ತ್ರೀ-ಪುರುಷ ವರ್ಗರೂಪೀ ಎರಡೂ ಪಂಗಡಗಳೂ ಈ ಪ್ರಣವ ಮಂತ್ರದಿಂದ ವ್ಯಾಪ್ತವಾಗಿವೆ. ಈ ಮಂತ್ರವು ಶಿವ ಮತ್ತು ಶಕ್ತಿಯ ಬೋಧಕವಾಗಿದೆ. ಇದರಿಂದಲೇ ನನ್ನ ಸಕಲ ರೂಪದ ಬೋಧಕವಾದ ಪಂಚಾಕ್ಷರ ಮಂತ್ರದ ಉತ್ಪತ್ತಿಯಾಯಿತು. ಅದು ಅಕಾರಾದಿ ಕ್ರಮದಿಂದ ಮತ್ತು ಮಕಾರಾದಿ ಕ್ರಮದಿಂದ ಕ್ರಮಶಃ ಪ್ರಕಾಶಿತವಾಯಿತು. ('ಓಂ ನಮಃ ಶಿವಾಯ' ಇದೇ ಪಂಚಾಕ್ಷರ ಮಂತ್ರವಾಗಿದೆ.) ಈ ಪಂಚಾಕ್ಷರ ಮಂತ್ರದಿಂದಲೇ ಮಾತೃಕಾವರ್ಣಗಳು ಪ್ರಕಟವಾದುವು. ಅವು ಪಂಚ ಭೇದಗಳಿವೆ.* ಇದರಿಂದಲೇ ಶಿರೋಮಂತ್ರಸಹಿತ ತ್ರಿಪದಾ ಗಾಯತ್ರಿಯ ಪ್ರಾಕಟ್ಯವಾಯಿತು. ಆ ಗಾಯತ್ರಿಯಿಂದ ಸಂಪೂರ್ಣ ವೇದಗಳು ಪ್ರಕಟವಾಗಿವೆ ಹಾಗೂ ಆ ವೇದಗಳಿಂದ ಕೋಟ್ಯಾವಧಿ ಮಂತ್ರಗಳು ಹೊರಟಿವೆ. ಆಯಾ ಮಂತ್ರಗಳಿಂದ ಬೇರೆ-ಬೇರೆ ಕಾರ್ಯಗಳು ಸಿದ್ಧವಾಗುತ್ತವೆ. ಆದರೆ ಈ ಪ್ರಣವ ಹಾಗೂ ಪಂಚಾಕ್ಷರಿಯಿಂದ ಸಮಸ್ತ ಮನೋರಥಗಳೂ ಸಿದ್ಧವಾಗುತ್ತವೆ. ಈ ಮಂತ್ರ ಸಮುದಾಯದಿಂದ ಭೋಗ ಮತ್ತು ಮೋಕ್ಷ ಎರಡೂ ಸಿದ್ಧವಾಗುತ್ತವೆ. ನನ್ನ ಸಕಲ ಸ್ವರೂಪಕ್ಕೆ ಸಂಬಂಧವುಳ್ಳ, ಎಲ್ಲ ಮಂತ್ರರಾಜಗಳು ಸಾಕ್ಷಾತ್ ಭೋಗಗಳನ್ನು ಕೊಡುವಂತಹುದು ಹಾಗೂ ಶುಭಕಾರಕ (ಮೋಕ್ಷಪ್ರದ) ವಾಗಿವೆ.

ನಂದಿಕೇಶ್ವರರು ಹೇಳುತ್ತಾರೆ - ಅನಂತರ ಜಗದಂಬೆ ಪಾರ್ವತಿಯ ಜೊತೆಗೆ ಕುಳಿತಿರುವ ಗುರುವರ್ಯ ಮಹಾದೇವನು ಉತ್ತರಾಭಿಮುಖವಾಗಿ ಕುಳಿತಿರುವ ಬ್ರಹ್ಮಾ-ವಿಷ್ಣು ಇವರನ್ನು ಉತ್ತರೀಯದಿಂದ ಅಚ್ಛಾದನೆ ಮಾಡಿ, ತಲೆಯಮೇಲೆ ತನ್ನ ಕರಕಮಲವನ್ನಿರಿಸಿ ನಿಧಾನವಾಗಿ ಉಚ್ಚರಿಸುತ್ತಾ ಅವರಿಗೆ ದಿವ್ಯ ಮಂತ್ರವನ್ನು ಉಪದೇಶ ಮಾಡಿದನು. ಮಂತ್ರ-ತಂತ್ರದಲ್ಲಿ ಹೇಳಿರುವ ವಿಧಿಯನ್ನು ಪಾಲಿಸಿ ಮೂರು ಬಾರಿ ಮಂತ್ರವನ್ನು ಉಚ್ಚರಿಸಿ ಭಗವಾನ್ ಶಿವನು ಅವರಿಬ್ಬರೂ ಶಿಷ್ಯರಿಗೆ ಮಂತ್ರದೀಕ್ಷೆಯನ್ನು ಕೊಟ್ಟನು. ಮತ್ತೆ ಆ ಶಿಷ್ಯರು ಗುರುದಕ್ಷಿಣೆಯಾಗಿ ತಮ್ಮನ್ನೇ ಸಮರ್ಪಿಸಿಕೊಂಡು ಎರಡೂ ಕೈಗಳನ್ನು ಜೋಡಿಸಿ ಸಮೀಪದಲ್ಲಿ ನಿಂತುಕೊಂಡು ಆ ದೇವೇಶ್ವರ ಜಗದ್ಗುರುವನ್ನು ಸ್ತೋತ್ರಮಾಡಿದರು.

ಬ್ರಹ್ಮಾ ಮತ್ತು ವಿಷ್ಣು ಹೇಳಿದರು - ಪ್ರಭೋ! ನಿಷ್ಕಲರೂಪನಾದ ನಿನಗೆ ನಮಸ್ಕಾರವು. ನಿಷ್ಕಲ ತೇಜದಿಂದ ಪ್ರಕಾಶಿತನಾಗಿರುವ ನಿನಗೆ ನಮಸ್ಕಾರ. ಎಲ್ಲರ ಸ್ವಾಮಿಯಾದ ನಿನಗೆ ನಮಸ್ಕಾರ. ಸರ್ವಾತ್ಮನಾದ ನಿನಗೆ ನಮಸ್ಕಾರ. ಅಥವಾ ಸಕಲ ಸ್ವರೂಪನಾದ ಮಹೇಶ್ವರನಿಗೆ ನಮಸ್ಕಾರವು. ಪ್ರಣವ ವಾಚ್ಯಾರ್ಥನಾದ ನಿನಗೆ ನಮಸ್ಕಾರ. ಪ್ರಣವಲಿಂಗವುಳ್ಳ ನಿನಗೆ ನಮಸ್ಕಾರ. ಸೃಷ್ಟಿ, ಸ್ಥಿತಿ, ಸಂಹಾರ, ತಿರೋಭಾವ, ಅನುಗ್ರಹ ಮಾಡುವ ನಿನಗೆ ನಮಸ್ಕಾರ. ಪಂಚಮುಖವುಳ್ಳ ಪರಮೇಶ್ವರನಿಗೆ ನಮಸ್ಕಾರ. ಪಂಚ ಬ್ರಹ್ಮಸ್ವರೂಪೀ, ಪಂಚಕೃತ್ಯಮಾಡುವ ನಿನಗೆ ನಮಸ್ಕಾರ. ನೀನು ಎಲ್ಲರ ಆತ್ಮನಾಗಿದ್ದು, ಬ್ರಹ್ಮನಾಗಿರುವೆ. ಗುಣ-ಶಕ್ತಿಗಳು ಅನಂತವಾಗಿವೆ. ನಿನಗೆ ನಮಸ್ಕಾರವಿರಲಿ. ನಿನಗೆ ಸಕಲ ಮತ್ತು ನಿಷ್ಕಲ ಎರಡು ರೂಪಗಳಿವೆ. ನೀನು ಸದ್ಗುರು ಹಾಗೂ ಶಂಭುವಾಗಿರುವೆ. ನಿನಗೆ ನಮಸ್ಕಾರ ಮಾಡುತ್ತೇವೆ.‡

ಈ ಪದ್ಯಗಳಿಂದ ತಮ್ಮ ಗುರು ಮಹೇಶ್ವರನನ್ನು ಸ್ತುತಿಸಿ ಬ್ರಹ್ಮಾ ಮತ್ತು ವಿಷ್ಣು ಅವನ ಚರಣಗಳಲ್ಲಿ ನಮಸ್ಕರಿಸಿದರು.

ಮಹೇಶ್ವರನು ಹೇಳಿದನು - 'ಆರ್ದ್ರಾ' ನಕ್ಷತ್ರದಿಂದ ಕೂಡಿದ ಚತುರ್ದಶಿಯಂದು ಪ್ರಣವವನ್ನು ಜಪಿಸಿದರೆ, ಅದು ಅಕ್ಷಯ ಫಲವನ್ನು ಕೊಡುವುದು. ಸೂರ್ಯಸಂಕ್ರಾಂತಿಯುಕ್ತ ಮಹಾ ಆರ್ದ್ರಾ ನಕ್ಷತ್ರದಲ್ಲಿ ಒಮ್ಮೆ ಮಾಡಿದ ಪ್ರಣವದ

---

* ಅ ಇ ಉ ಋ ಲೃ - ಈ ಐದು ಮೂಲಭೂತ ಸ್ವರವಾಗಿವೆ ಹಾಗೂ ವ್ಯಂಜನಗಳೂ ಐದು-ಐದು ವರ್ಣಗಳಿಂದ ಯುಕ್ತವಾದ ಐದು ವರ್ಗಗಳಿವೆ.

‡ ನಮೋ ನಿಷ್ಕಲರೂಪಾಯ ನಮೋ ನಿಷ್ಕಲತೇಜಸೇ । ನಮಃ ಸಕಲನಾಥಾಯ ನಮಸ್ತೇ ಸಕಲಾತ್ಮನೇ ॥
ನಮಃ ಪ್ರಣವವಾಚ್ಯಾಯ ನಮಃ ಪ್ರಣವಲಿಂಗಿನೇ । ನಮಃ ಸೃಷ್ಟ್ಯಾದಿಕರ್ತ್ರೇ ಚ ನಮಃ ಪಂಚಮುಖಾಯ ತೇ ॥
ಪಂಚಬ್ರಹ್ಮ ಸ್ವರೂಪಾಯ ಪಂಚಕೃತ್ಯಾಯ ತೇ ನಮಃ । ಆತ್ಮನೇ ಬ್ರಹ್ಮಣೇ ತುಭ್ಯಮನಂತಗುಣಶಕ್ತಯೇ ॥
ಸಕಲಾಕಲರೂಪಾಯ ಶಂಭವೇ ಗುರವೇ ನಮಃ ॥

(ಶಿ-ಪು-ವಿದ್ಯೇ-ಸಂ-೧೦/೨೮-೩೧)

ಜಪವು ಕೋಟಿಪಟ್ಟು ಜಪದ ಫಲವನ್ನು ಕೊಡುವುದು. ಮೃಗಶಿರಾ ನಕ್ಷತ್ರದ ಕೊನೆಯಭಾಗ ಹಾಗೂ ಪುನರ್ವಸುವಿನ ಮೊದಲಭಾಗದಲ್ಲಿ ಪೂಜೆ, ಹೋಮ, ತರ್ಪಣ ಮುಂತಾದವುಗಳಿಗೆ ಆರ್ದ್ರಾನಕ್ಷತ್ರದಂತೆ ಫಲದೊರೆಯುವುದೆಂದು ತಿಳಿಯಬೇಕು. ನನ್ನ ಅಥವಾ ನನ್ನ ಲಿಂಗದ ದರ್ಶನವನ್ನು ಪ್ರಭಾತಕಾಲದಲ್ಲೇ - ಪ್ರಾತಃ ಮತ್ತು ಸಂಗವ (ಮಧ್ಯಾಹ್ನದ ಪೂರ್ವ) ಕಾಲದಲ್ಲೇ ಮಾಡಬೇಕು. ನನ್ನ ದರ್ಶನ-ಪೂಜೆಗಾಗಿ ಚತುರ್ದಶೀ ತಿಥಿಯು ನಿಶೀಥವ್ಯಾಪಿನೀ ಅಥವಾ ಪ್ರದೋಷವ್ಯಾಪಿನಿಯಾಗಿರಬೇಕು. ಏಕೆಂದರೆ, ಪರಿವರ್ತಿನೀ ತಿಥಿಯಿಂದ ಕೂಡಿದ ಚತುರ್ದಶಿಯನ್ನೇ ಪ್ರಶಂಸಿಸಲಾಗಿದೆ. ಪೂಜೆ ಮಾಡುವವರಿಗೆ ನನ್ನ ಮೂರ್ತಿ ಅಥವಾ ಲಿಂಗ ಎರಡೂ ಸಮಾನವಾಗಿವೆ. ಹೀಗಿದ್ದರೂ ಮೂರ್ತಿಗಿಂತ ಲಿಂಗದ ಸ್ಥಾನವು ಉಚ್ಚವಾಗಿದೆ. ಅದಕ್ಕಾಗಿ ಮುಮುಕ್ಷುಗಳು ವೇರ(ಮೂರ್ತಿ)ಕ್ಕಿಂತ ಲಿಂಗವನ್ನೇ ಶ್ರೇಷ್ಠವೆಂದು ತಿಳಿದು ಪೂಜಿಸಬೇಕು. ಲಿಂಗವನ್ನು ಓಂಕಾರ ಮಂತ್ರದಿಂದ ಮತ್ತು ಮೂರ್ತಿಯನ್ನು ಪಂಚಾಕ್ಷರ ಮಂತ್ರದಿಂದ ಪೂಜಿಸಬೇಕು. ಶಿವಲಿಂಗವನ್ನು ಸ್ವತಃ ಸ್ಥಾಪಿಸಿ, ಅಥವಾ ಇತರರಿಂದ ಸ್ಥಾಪಿಸಿಕೊಂಡು ಉತ್ತಮ ದ್ರವ್ಯಮಯ ಉಪಚಾರಗಳಿಂದ ಪೂಜೆಮಾಡಬೇಕು. ಇದರಿಂದ ನನ್ನ ಪದವು ಸುಲಭವಾಗುತ್ತದೆ. ಹೀಗೆ ಆ ಶಿಷ್ಯರಿಬ್ಬರಿಗೆ ಉಪದೇಶಮಾಡಿ ಭಗವಾನ್ ಶಿವನು ಅಲ್ಲೇ ಅಂತರ್ಧಾನನಾದನು.

(ಅಧ್ಯಾಯ -೧೦)

❐ ❐ ❐

ಶಿವಲಿಂಗದ ಸ್ಥಾಪನೆ, ಅದರ ಲಕ್ಷಣಗಳು, ಪೂಜೆಯ ವಿಧಿಯ ವರ್ಣನೆ ಹಾಗೂ ಶಿವಪದದ ಪ್ರಾಪ್ತಿಯಾಗಿಸುವ ಸತ್ಕರ್ಮಗಳ ವಿವೇಚನೆ

ಋಷಿಗಳು ಕೇಳಿದರು - ಸೂತಪುರಾಣಿಕರೇ! ಶಿವಲಿಂಗವನ್ನು ಹೇಗೆ ಪ್ರತಿಷ್ಠಾಪಿಸಬೇಕು? ಲಿಂಗದ ಲಕ್ಷಣಗಳೇನು? ಅದನ್ನು ಹೇಗೆ ಪೂಜಿಸಬೇಕು? ಯಾವ ದೇಶ-ಕಾಲಗಳಲ್ಲಿ, ಯಾವ ದ್ರವ್ಯದಿಂದ ಅದನ್ನು ನಿರ್ಮಿಸಬೇಕು?

ಸೂತಪುರಾಣಿಕರು ಹೇಳುತ್ತಾರೆ - ಮಹರ್ಷಿಗಳೇ! ನಿಮಗಾಗಿ ಈ ವಿಷಯವನ್ನು ನಾನು ವರ್ಣಿಸುವೆನು; ಗಮನವಿಟ್ಟು ಕೇಳಿ, ತಿಳಿದುಕೊಳ್ಳಿರಿ. ಅನುಕೂಲ ಹಾಗೂ ಶುಭಸಮಯದಲ್ಲಿ ಪವಿತ್ರ ತೀರ್ಥದ ನದೀತಟದಲ್ಲಿ ತನ್ನ ಅಭಿರುಚಿಗನುಸಾರವಾಗಿ ನಿತ್ಯ ಪೂಜೆ ನಡೆಯುವಂತಹ ಸ್ಥಳದಲ್ಲಿ ಶಿವಲಿಂಗವನ್ನು ಸ್ಥಾಪಿಸಬೇಕು. ಪಾರ್ಥಿವ ದ್ರವ್ಯದಿಂದ, ಜಲಮಯದ್ರವ್ಯದಿಂದ, ಅಥವಾ ತೈಜಸ ದ್ರವ್ಯದಿಂದ ತನ್ನ ರುಚಿಗನುಸಾರ ಕಲ್ಪೋಕ್ತ ಲಕ್ಷಣಗಳಿಂದ ಕೂಡಿದ ಶಿವಲಿಂಗವನ್ನು ನಿರ್ಮಾಣಮಾಡಿ ಅದನ್ನು ಪೂಜಿಸುವುದರಿಂದ ಉಪಾಸಕನಿಗೆ ಪೂಜೆಯ ಪೂರ್ಣಫಲವು ದೊರೆಯುತ್ತದೆ. ಪರಿಪೂರ್ಣ ಶುಭಲಕ್ಷಣಗಳಿಂದ ಕೂಡಿದ ಶಿವಲಿಂಗವನ್ನು ಪೂಜಿಸಿದರೆ ಅದು ತತ್‌ಕಾಲದಲ್ಲೇ ಪೂಜೆಯ ಫಲವನ್ನು ಕೊಡುವಂತಹುದು. ಚಲಪ್ರತಿಷ್ಠೆ ಮಾಡುವುದಿದ್ದರೆ ಅದಕ್ಕೆ ಸಣ್ಣ ಶಿವಲಿಂಗ ಅಥವಾ ವಿಗ್ರಹವು ಶ್ರೇಷ್ಠವೆಂದು ತಿಳಿಯಲಾಗಿದೆ. ಅಚಲಪ್ರತಿಷ್ಠೆ ಮಾಡುವುದಿದ್ದರೆ ಸ್ಥೂಲ ಶಿವಲಿಂಗ ಅಥವಾ ವಿಗ್ರಹ ಒಳ್ಳೆಯದೆಂದು ತಿಳಿಯಲಾಗಿದೆ. ಉತ್ತಮ ಲಕ್ಷಣಗಳಿಂದ ಯುಕ್ತವಾದ ಶಿವಲಿಂಗವನ್ನು ಪೀಠಸಹಿತ ಸ್ಥಾಪಿಸಬೇಕು. ಶಿವಲಿಂಗದ ಪೀಠವು ಮಂಡಲಾಕಾರ, (ವರ್ತುಲ), ಚೌಕಾಕಾರ, ತ್ರಿಕೋಣ, ಅಥವಾ ಮಂಚದ ಕಾಲಿನಂತೆ ಮೇಲೆ-ಕೆಳಗೆ ದಪ್ಪವಾಗಿದ್ದು, ನಡುವಿನಲ್ಲಿ ಸಣ್ಣದಾಗಿರಬೇಕು. ಇಂತಹ ಲಿಂಗಪೀಠವು ಮಹಾಫಲವನ್ನು ಕೊಡುವುದು. ಮೊದಲಿಗೆ ಮಣ್ಣಿನಿಂದ, ಕಲ್ಲಿನಿಂದ, ಅಥವಾ ಲೋಹಾದಿಗಳಿಂದ ಶಿವಲಿಂಗವನ್ನು ನಿರ್ಮಿಸಬೇಕು. ಯಾವ ದ್ರವ್ಯದಿಂದ ಶಿವಲಿಂಗದ ನಿರ್ಮಾಣವಾಗಿದೆಯೋ, ಅದರಿಂದಲೇ ಪೀಠವನ್ನು ನಿರ್ಮಿಸಬೇಕು. ಇದೇ ಸ್ಥಾವರ (ಅಚಲಪ್ರತಿಷ್ಠೆಯುಳ್ಳ) ಶಿವಲಿಂಗದ ವಿಶೇಷ ಮಾತಾಗಿದೆ. ಚರ (ಚಲಪ್ರತಿಷ್ಠೆಯುಳ್ಳ) ಶಿವಲಿಂಗದಲ್ಲಿಯೂ ಲಿಂಗ ಮತ್ತು ಪೀಠವು ಒಂದೇ ಉಪಾದಾನವಾಗಿರಬೇಕು. ಆದರೆ ಬಾಣಲಿಂಗಕ್ಕಾಗಿ ಈ ನಿಯಮವಿಲ್ಲ. ಲಿಂಗದ ಅಳತೆ ನಿರ್ಮಾಣಕರ್ತೃವಿನ ಅಥವಾ ಸ್ಥಾಪನೆ ಮಾಡುವ ಯಜಮಾನನ ಅಳತೆಯ ಹನ್ನೆರಡು ಅಂಗುಲದಷ್ಟು ಇರಬೇಕು. ಇಂತಹ ಶಿವಲಿಂಗವನ್ನೇ ಉತ್ತಮವೆಂದು ಹೇಳಲಾಗಿದೆ. ಇದರಲ್ಲಿ ಕಡಿಮೆಯಾದರೆ ಫಲದಲ್ಲಿಯೂ ಕೊರತೆ ಉಂಟಾದೀತು; ಹೆಚ್ಚಾದರೆ ಯಾವುದೇ ದೋಷವಿಲ್ಲ. ಚರಲಿಂಗದಲ್ಲಿಯೂ ಹೀಗೆಯೇ ನಿಯಮವಿದೆ. ಅದರ ಉದ್ದವು ಕನಿಷ್ಠ ಕರ್ತೃವಿನ ಒಂದು ಅಂಗುಲದಷ್ಟು ಇರಬೇಕು. ಅದರಿಂದ ಚಿಕ್ಕದಾಗಿದ್ದರೆ ಅಲ್ಪ ಫಲ ದೊರೆಯುತ್ತದೆ. ಆದರೆ ಅದರಿಂದ ದೊಡ್ಡದಿದ್ದರೆ

ದೋಷವೇನೂ ಇಲ್ಲ. ಯಜಮಾನನು ಮೊದಲಿಗೆ ಶಿಲ್ಪ ಶಾಸ್ತ್ರಕ್ಕನುಸಾರ ಒಂದು ವಿಮಾನ ಅಥವಾ ದೇವಾಲಯವನ್ನು ನಿರ್ಮಿಸಬೇಕು. ಅದು ಅನೇಕ ದೇವತಾ ಮೂರ್ತಿಗಳಿಂದ ಅಲಂಕೃತವಾಗಿರಬೇಕು. ಅದರ ಗರ್ಭಗೃಹವು ಸುಂದರವೂ, ಸುದೃಢವೂ ಕನ್ನಡಿಯಂತೆ ಸ್ವಚ್ಛವೂ ಇರಬೇಕು. ಅದನ್ನು ನವರತ್ನಗಳಿಂದ ವಿಭೂಷಿತಗೊಳಿಸಬೇಕು. ಅದಕ್ಕೆ ಪೂರ್ವ ಮತ್ತು ಪಶ್ಚಿಮಗಳಲ್ಲಿ ಎರಡು ಮುಖ್ಯ ಬಾಗಿಲುಗಳು ಇರಬೇಕು. ಶಿವಲಿಂಗವನ್ನು ಸ್ಥಾಪಿಸುವಲ್ಲಿ ಲಿಂಗದ ಕೆಳಗೆ ನವರತ್ನಗಳನ್ನು ಹಾಗೂ ಇತರ ಮಹತ್ವಪೂರ್ಣ ದ್ರವ್ಯಗಳನ್ನು ವೈದಿಕಮಂತ್ರಗಳಿಂದ ಸ್ಥಾಪಿಸಬೇಕು. ಸದ್ಯೋಜಾತಾದಿ ಐದು ಮಂತ್ರಗಳಿಂದ* ಶಿವಲಿಂಗದ ಐದು ಸ್ಥಾನಗಳಲ್ಲಿ ಕ್ರಮವಾಗಿ ಪೂಜೆಯನ್ನು ಮಾಡಿ, ಅಗ್ನಿಯಲ್ಲಿ ಹವಿಸ್ಸಿನಿಂದ ಅನೇಕ ಆಹುತಿಗಳನ್ನು ಕೊಡಬೇಕು. ಮತ್ತೆ ಪರಿವಾರ ಸಹಿತ ಶಿವನ ಪೂಜೆಯನ್ನು ಮಾಡಿ ಗುರುಸ್ವರೂಪನಾದ ಆಚಾರ್ಯನನ್ನು ಧನದಿಂದಲೂ, ಬಂಧು-ಬಾಂಧವರನ್ನು ಮನೋಪಾಂಛಿತ ವಸ್ತುಗಳಿಂದ ಸಂತುಷ್ಟಗೊಳಿಸಬೇಕು. ಯಾಚಕರಿಗೆ ಜಡ (ಸುವರ್ಣ, ಗೃಹ, ಭೂಮಿ, ಸಂಪತ್ತು) ಮತ್ತು ಚೇತನ (ಗೋವುಗಳೇ ಆದಿ) ವೈಭವಗಳನ್ನು ಪ್ರದಾನಮಾಡಬೇಕು.

ಸ್ಥಾವರ-ಜಂಗಮ ಎಲ್ಲ ಜೀವಿಗಳನ್ನು ಪ್ರಯತ್ನಪೂರ್ವಕ ಸಂತುಷ್ಟಗೊಳಿಸಿ, ಲಿಂಗಸ್ಥಾಪನೆಯ ಕೆಳಗೆ ಸುವರ್ಣ ಹಾಗೂ ಒಂಭತ್ತು ಪ್ರಕಾರದ ರತ್ನಗಳನ್ನು ಇರಿಸಿ, ಸದ್ಯೋಜಾತಾದಿ ವೈದಿಕಮಂತ್ರಗಳನ್ನು ಉಚ್ಚರಿಸುತ್ತಾ ಪರಮ ಕಲ್ಯಾಣಕಾರೀ ಮಹಾದೇವನನ್ನು ಧ್ಯಾನಿಸಬೇಕು. ಬಳಿಕ ನಾದಘೋಷದಿಂದ ಕೂಡಿ ಮಹಾಮಂತ್ರ ಓಂಕಾರವನ್ನು ಉಚ್ಚರಿಸಿ ಆ ಸ್ಥಳದಲ್ಲಿ ಶಿವಲಿಂಗವನ್ನು ಸ್ಥಾಪಿಸಿ, ಅದನ್ನು ಪೀಠದಿಂದ ಸಂಯುಕ್ತಗೊಳಿಸಬೇಕು. ಹೀಗೆ ಪೀಠಯುಕ್ತ ಲಿಂಗವನ್ನು ಸ್ಥಾಪನೆಮಾಡಿ ಅದನ್ನು ಅಷ್ಟಬಂಧದಿಂದ ಸ್ಥಿರಗೊಳಿಸಬೇಕು. ಹೀಗೆಯೇ ಅಲ್ಲಿ ಪರಮ ಸುಂದರ ಮೂರ್ತಿಯನ್ನು ಸ್ಥಾಪಿಸಬೇಕು. ಸಾರಾಂಶ-ಭೂಮಿ ಸಂಸ್ಕಾರಾದಿ ಎಲ್ಲ ವಿಧಿಯನ್ನು ಲಿಂಗಪ್ರತಿಷ್ಠೆಯಲ್ಲಿ ಹೇಳಿದಂತೆಯೇ ಮೂರ್ತಿ ಪ್ರತಿಷ್ಠಾಪನೆಯಲ್ಲೂ ತಿಳಿಯಬೇಕು. ಅಂತರವಿಷ್ಟೇ - ಲಿಂಗಪ್ರತಿಷ್ಠಾಪನೆಗಾಗಿ ಪ್ರಣವ ಮಂತ್ರದ ಉಚ್ಚಾರಣೆಯ ವಿಧಾನವಿದೆ. ಆದರೆ ಮೂರ್ತಿಯ ಪ್ರತಿಷ್ಠೆಯನ್ನು ಪಂಚಾಕ್ಷರ ಮಂತ್ರದಿಂದ ಮಾಡಬೇಕು. ಲಿಂಗಪ್ರತಿಷ್ಠಾಪನೆ ಇರುವಲ್ಲಿಯೇ ಉತ್ಸವ ಮೂರ್ತಿಯು ಇರುವುದು ಅವಶ್ಯಕವಾಗಿದೆ. ಉತ್ಸವ ಮೂರ್ತಿಯನ್ನು ಹೊರಗೂ ಕೊಂಡು ಹೋಗಬಹುದು. ಅದನ್ನು ಗುರು- ಹಿರಿಯರಿಂದ ಗ್ರಹಣಮಾಡಬೇಕು. ಸಾಧು- ಪುರುಷರಿಂದ ಪೂಜಿತವಾದ ಉತ್ಸವಮೂರ್ತಿಯನ್ನು ಪಡೆಯಲು ಯೋಗ್ಯವಾಗಿದೆ. ಹೀಗೆ ಲಿಂಗದಲ್ಲಿ ಮತ್ತು ಮೂರ್ತಿಯಲ್ಲಿ ಮಾಡಿದ ಮಹಾದೇವನ ಪೂಜೆಯು ಶಿವಪದವನ್ನು ಕೊಡುವುದಂತಹುದಾಗಿದೆ. ಸ್ಥಾವರ ಮತ್ತು ಜಂಗಮ ಎಂಬ ಭೇದದಿಂದ ಲಿಂಗದ ಎರಡು ಪ್ರಕಾರಗಳನ್ನು ಹೇಳಲಾಗಿವೆ. ವೃಕ್ಷ, ಲತಾದಿಗಳನ್ನು ಸ್ಥಾವರ ಲಿಂಗವೆಂದು ಹೇಳುತ್ತಾರೆ ಮತ್ತು ಕ್ರಿಮಿ-ಕೀಟ ಮುಂತಾದವುಗಳನ್ನು ಜಂಗಮಲಿಂಗವೆಂದು ಹೇಳಲಾಗಿದೆ. ಸ್ಥಾವರ ಲಿಂಗವನ್ನು ಅಭಿಷೇಕಾದಿಗಳಿಂದ ಸೇವೆ ಮಾಡಬೇಕು. ಜಂಗಮ ಲಿಂಗಕ್ಕೆ ಆಹಾರ-ಜಲ ಇತ್ಯಾದಿಗಳನ್ನುಕೊಟ್ಟು ತೃಪ್ತಿಪಡಿಸುವುದು ಉಚಿತವಾಗಿದೆ. ಸ್ಥಾವರ-ಜಂಗಮ ಜೀವಿಗಳಿಗೆ ಸುಖನೀಡಲು ಅನುರಕ್ತನಾಗುವುದು ಭಗವಾನ್ ಶಿವನ ಪೂಜೆಯೇ ಆಗಿದೆ; ಎಂದು ವಿದ್ವಾನ್ ಪುರುಷರು ತಿಳಿಯುತ್ತಾರೆ. (ಈ ಚರಾಚರ ಜೀವಿಗಳನ್ನೇ ಭಗವಾನ್ ಶಂಕರನ ಪ್ರತೀಕವೆಂದು ತಿಳಿದು ಅವನ್ನು ಪೂಜಿಸಬೇಕು.)

ಈ ಪ್ರಕಾರವಾಗಿ ಮಹಾಲಿಂಗವನ್ನು ಸ್ಥಾಪಿಸಿ ವಿವಿಧ ಉಪಚಾರಗಳಿಂದ ಅದನ್ನು ಪೂಜಿಸಬೇಕು. ತನ್ನ ಶಕ್ತಿಗನುಸಾರವಾಗಿ ನಿತ್ಯಪೂಜೆಯನ್ನು ಮಾಡಬೇಕು. ದೇವಾಲಯದ ಮುಂದೆ ಧ್ವಜವನ್ನು ನೆಡಬೇಕು. ಶಿವಲಿಂಗವು ಸಾಕ್ಷಾತ್ ಶಿವಪದವನ್ನು ಕರುಣಿಸುವಂತಹುದು. ಅಥವಾ ಚರಲಿಂಗವನ್ನು ಷೋಡಶೋಪಚಾರಗಳಿಂದ ಯಥೋಚಿತವಾಗಿ ಕ್ರಮವಾಗಿ ಪೂಜಿಸಬೇಕು. ಈ ಪೂಜೆಯೂ ಕೂಡ ಶಿವಪದವನ್ನು ದೊರಕಿಸುವಂತಹುದು. ಆವಾಹನ, ಆಸನ, ಅರ್ಘ್ಯ, ಪಾದ್ಯ, ಪಾದ್ಯಾಂಗ ಆಚಮನ, ಅಭ್ಯಂಗಪೂರ್ವಕ ಸ್ನಾನ, ವಸ್ತ್ರ, ಯಜ್ಞೋಪವೀತ, ಗಂಧ,

---

* ಓಂ ಸದ್ಯೋಜಾತಂ ಪ್ರಪದ್ಯಾಮಿ ಸದ್ಯೋಜಾತಾಯ ವೈ ನಮೋ ನಮಃ । ಭವೇ ಭವೇನಾತಿಭವೇ ಭವಸ್ವ ಮಾಂ ಭವೋದ್ಭವಾಯ ನಮಃ ॥ ಓಂ ವಾಮದೇವಾಯ ನಮೋ ಜೇಷ್ಠಾಯ ನಮಃ ಶ್ರೇಷ್ಠಾಯ ನಮೋ ರುದ್ರಾಯ ನಮಃ ಕಾಲಾಯ ನಮಃ ಕಲವಿಕರಣಾಯ ನಮೋ ಬಲವಿಕರಣಾಯ ನಮೋ ಬಲಾಯನಮೋ ಬಲಪ್ರಮಥನಾಯ ನಮಃ ಸರ್ವಭೂತದಮನಾಯ ನಮೋ ಮನೋನ್ಮನಾಯ ನಮಃ ॥ ಓಂ ಅಘೋರೇಭ್ಯೋ೯ಥ ಘೋರೇಭ್ಯೋ ಘೋರ ಘೋರತರೇಭ್ಯಃ । ಸರ್ವೇಭ್ಯಃ ಸರ್ವಶರ್ವೇಭ್ಯೋ ನಮಸ್ತೇ ಅಸ್ತು ರುದ್ರರೂಪೇಭ್ಯಃ ॥ಓಂ ತತ್ಪುರುಷಾಯ ವಿದ್ಮಹೇ ಮಹಾದೇವಾಯ ಧೀಮಹಿ । ತನ್ನೋ ರುದ್ರಃ ಪ್ರಚೋದಯಾತ್ ॥ ಓಂ ಈಶಾನಃ ಸರ್ವವಿದ್ಯಾಮೀಶ್ವರಃ ಸರ್ವಭೂತಾನಾಂ ಬ್ರಹ್ಮಾಧಿಪತಿರ್ಬ್ರಹ್ಮಣೋ೯ಧಿಪತಿರ್ಬ್ರಹ್ಮಾ ಶಿವೋ ಮೇ ಅಸ್ತು ಸದಾಶಿವೋಮ್॥

ಪುಷ್ಪ, ಧೂಪ, ದೀಪ, ನೈವೇದ್ಯ, ತಾಂಬೂಲ, ನೀರಾಜನ, ನಮಸ್ಕಾರ ಮತ್ತು ವಿಸರ್ಜನ – ಇವು ಹದಿನಾರು ಉಪಚಾರಗಳಾಗಿವೆ. ಅಥವಾ ಅರ್ಘ್ಯದಿಂದ ಹಿಡಿದು ನೈವೇದ್ಯದವರೆಗೆ ವಿಧಿವತ್ತಾಗಿ ಪೂಜಿಸಬೇಕು. ಅಭಿಷೇಕ, ನೈವೇದ್ಯ, ನಮಸ್ಕಾರ ಹಾಗೂ ತರ್ಪಣ ಇದೆಲ್ಲವನ್ನು ಯಥಾಶಕ್ತಿಯಾಗಿ ನಿತ್ಯವೂ ಮಾಡಬೇಕು. ಹೀಗೆ ಮಾಡಿದ ಶಿವನ ಪೂಜೆಯು ಶಿವಪದವನ್ನು ಪ್ರಾಪ್ತಿಯಾಗಿಸುವಂತಹುದು. ಯಾವುದೇ ಮನುಷ್ಯನಿಂದ ಸ್ಥಾಪಿತವಾದ ಶಿವಲಿಂಗವನ್ನು ಋಷಿಗಳಿಂದ ಸ್ಥಾಪಿತವಾದ ಶಿವಲಿಂಗವನ್ನು, ದೇವತೆಗಳಿಂದ ಸ್ಥಾಪಿತವಾದ ಶಿವಲಿಂಗವನ್ನು ತಾನೇ-ತಾನಾಗಿ ಪ್ರಕಟಗೊಂಡ ಸ್ವಯಂಭೂಲಿಂಗವನ್ನು ಹಾಗೂ ತಾನೇ ನೂತನವಾಗಿ ಸ್ಥಾಪಿಸಿದ ಶಿವಲಿಂಗವನ್ನು, ಉಪಚಾರಾದಿಗಳನ್ನು ಸಮರ್ಪಿಸಿ ಹೇಗೆ ಪೂಜೆ ಮಾಡಿದರೂ ಅಥವಾ ಪೂಜಾ ಸಾಮಗ್ರಿಯನ್ನು ಕೊಡುವುದರಿಂದಲೂ, ಮನುಷ್ಯನು ಮೇಲೆ ಹೇಳಿದ ಎಲ್ಲ ಫಲವನ್ನು ಪಡೆಯುವನು. ಕ್ರಮವಾಗಿ ಶಿವಲಿಂಗಕ್ಕೆ ಪ್ರದಕ್ಷಿಣಾ-ನಮಸ್ಕಾರ ಮಾಡುವುದರಿಂದಲೂ ಶಿವಪದವು ಪ್ರಾಪ್ತವಾಗುತ್ತದೆ. ನಿಯಮ ಪೂರ್ವಕ ಶಿವಲಿಂಗದ ದರ್ಶನ ಮಾತ್ರ ಪಡೆಯುವುದರಿಂದಲೂ ಶ್ರೇಯಸ್ಸಾಗುತ್ತದೆ. ಮಣ್ಣು, ಹಿಟ್ಟು, ಸೆಗಣಿ, ಹೂವು, ಕಣಗಿಲೆಪುಷ್ಪ, ಹಣ್ಣು, ಬೆಲ್ಲ, ಬೆಣ್ಣೆ, ಭಸ್ಮ ಅಥವಾ ಅನ್ನದಿಂದಲೂ ತನ್ನ ಅಭಿರುಚಿಗನುಸಾರವಾಗಿ ಶಿವಲಿಂಗವನ್ನು ನಿರ್ಮಿಸಿ ಅದಕ್ಕನುಸಾರ ಪೂಜೆ ಮಾಡಬೇಕು. ಪ್ರತಿದಿನವೂ ಹತ್ತು ಸಾವಿರ ಪ್ರಣವ ಮಂತ್ರವನ್ನು ಜಪಿಸುವುದರಿಂದ, ಅಥವಾ ಬೆಳಿಗ್ಗೆ-ಸಂಜೆ ಎರಡೂ ಸಂಧ್ಯೆಗಳಲ್ಲಿ ಒಂದೊಂದು ಸಾವಿರ ಪ್ರಣವವನ್ನು ಜಪಿಸಬೇಕು. ಇದೂ ಕೂಡ ಶಿವಪದವನ್ನು ಕೊಡುವಂತಹುದು ಎಂದು ತಿಳಿಯಬೇಕು.

ಜಪಕಾಲದಲ್ಲಿ ಮಕಾರಾಂತ ಪ್ರಣವದ ಉಚ್ಚಾರವು ಮನಸ್ಸು ಶುದ್ಧಗೊಳಿಸುತ್ತದೆ. ಸಮಾಧಿಯಲ್ಲಿ ಮಾನಸಿಕ ಜಪದ ವಿಧಾನವಿದೆ. ಉಳಿದ ಎಲ್ಲ ಸಮಯದಲ್ಲಿ ಉಪಾಂಶು* ಜಪವನ್ನೇ ಮಾಡಬೇಕು. ನಾದ ಮತ್ತು ಬಿಂದುವಿನಿಂದ ಯುಕ್ತವಾದ ಓಂಕಾರದ ಉಚ್ಚಾರವನ್ನು ವಿದ್ವಾಂಸರು 'ಸಮಾನಪ್ರಣವ' ಎಂದು ಹೇಳುತ್ತಾರೆ. ಪ್ರತಿನಿತ್ಯವೂ ಅದರದಿಂದ ಹತ್ತುಸಾವಿರ ಪಂಚಾಕ್ಷರೀ ಮಂತ್ರವನ್ನು ಜಪಿಸಿದರೆ, ಅಥವಾ ಎರಡೂ ಸಂಧ್ಯೆಗಳಲ್ಲಿ ಒಂದೊಂದು ಸಾವಿರ ಜಪಮಾಡಿದರೂ ಶಿವಪದವನ್ನು ಕರುಣಿಸುವುದೆಂದು ತಿಳಿಯಬೇಕು. ಬ್ರಾಹ್ಮಣರಿಗಾಗಿ ಅದಿಯಲ್ಲಿ ಪ್ರಣವದೊಂದಿಗೆ ಪಂಚಾಕ್ಷರ ಮಂತ್ರವೇ ಉತ್ತಮವಾಗಿದೆ. ಅಭಿಮಂತ್ರಿತ ಕಲಶದಿಂದ ಮಾಡಿದ ಸ್ನಾನ, ಮಂತ್ರದೀಕ್ಷೆ, ಮಾತೃಕಾನ್ಯಾಸ, ಸತ್ಯದಿಂದ ಪವಿತ್ರ ಅಂತಃಕರಣವುಳ್ಳ ಬ್ರಾಹ್ಮಣ, ಜ್ಞಾನಿಗುರು – ಇವೆಲ್ಲವೂ ಉತ್ತಮವೆಂದು ತಿಳಿಯಲಾಗಿದೆ. ದ್ವಿಜರಿಗೆ **'ನಮಃ ಶಿವಾಯಃ'** ಉಚ್ಚಾರಣೆಯ ವಿಧಿಯಿದೆ. ಇತರರಿಗೆ ಅಂತ್ಯದಲ್ಲಿ ನಮಃ ಪದದ ವಿಧಾನವಿದೆ. ಅರ್ಥಾತ್ – **'ಶಿವಾಯ ನಮಃ'** ಹೀಗೆ ಮಂತ್ರವನ್ನು ಉಚ್ಚರಿಸಬೇಕು. ಸ್ತ್ರೀಯರಿಗಾಗಿಯೂ ಕೆಲವು ಕಡೆ **'ಶಿವಾಯ ನಮಃ'** ಎಂದೂ ಜಪಿಸುವ ವಿಧಾನವಿದೆ. ಕೆಲವು ಋಷಿಗಳು ಬ್ರಾಹ್ಮಣ ಸ್ತ್ರೀಯರಿಗೆ ನಮಃ ಪೂರ್ವಕ ಶಿವಾಯ ಜಪದ ಅನುಮತಿಯನ್ನು ಕೊಟ್ಟಿರುವರು. ಅರ್ಥಾತ್ – ಅವರು ನಮಃ ಶಿವಾಯ ಹೀಗೆ ಜಪ ಮಾಡಬೇಕು. ಪಂಚಾಕ್ಷರೀ ಮಂತ್ರವನ್ನು ಐದುಕೋಟಿ ಜಪ ಮಾಡುವುದರಿಂದ ಮನುಷ್ಯನು ಭಗವಾನ್ ಸದಾಶಿವನಿಗೆ ಸಮಾನನಾಗುತ್ತಾನೆ. ಒಂದು, ಎರಡು, ಮೂರು, ಅಥವಾ ನಾಲ್ಕು ಕೋಟಿ ಜಪಮಾಡುವುದರಿಂದ ಕ್ರಮವಾಗಿ ಬ್ರಹ್ಮ, ವಿಷ್ಣು, ರುದ್ರ ಹಾಗೂ ಮಹೇಶ್ವರ ಇವರ ಪದವನ್ನು ಪಡೆಯುತ್ತಾರೆ ಅಥವಾ ಮಂತ್ರದಲ್ಲಿರುವ ಅಕ್ಷರಗಳನ್ನು ಬೇರೆ-ಬೇರೆಯಾಗಿ ಒಂದೊಂದು ಲಕ್ಷ ಜಪಮಾಡಬೇಕು. ಅಥವಾ ಎಲ್ಲ ಅಕ್ಷರಗಳನ್ನು ಸೇರಿಸಿ ಅಕ್ಷರಗಳಷ್ಟು ಲಕ್ಷ ಜಪಮಾಡಬೇಕು. ಈ ಪ್ರಕಾರದ ಜಪವನ್ನು ಶಿವಪದ ಪ್ರಾಪ್ತಿಯಾಗಿಸುವುದು ಎಂದು ತಿಳಿಯಬೇಕು. ಒಂದು ಸಾವಿರದಂತೆ ಒಂದು ಸಾವಿರ ದಿನ ಪಂಚಾಕ್ಷರೀ ಮಂತ್ರದ ಜಪಮಾಡಿ ಹತ್ತು ಲಕ್ಷ ಪೂರ್ಣಗೊಳಿಸಿದರೆ, ಹಾಗೂ ಪ್ರತಿದಿನವೂ ಬ್ರಾಹ್ಮಣ ಭೋಜನ ಮಾಡಿಸಿದರೆ ಆ ಮಂತ್ರದಿಂದ ಬಯಸಿದ ಕಾರ್ಯದ ಸಿದ್ಧಿಯಾಗುವುದು.

ಬ್ರಾಹ್ಮಣನು ಪ್ರತಿದಿನವು ಪ್ರಾತಃಕಾಲದಲ್ಲಿ ಒಂದು ಸಾವಿರದ ಎಂಟುಸಲ ಗಾಯತ್ರಿಯ ಜಪ ಮಾಡಬೇಕು. ಹೀಗೆ ಮಾಡಿದಾಗ ಕ್ರಮವಾಗಿ ಗಾಯತ್ರಿಯು ಶಿವಪದವನ್ನು ಕರುಣಿಸುವುದು. ವೇದಮಂತ್ರಗಳನ್ನು ಮತ್ತು ವೈದಿಕ ಸೂಕ್ತಗಳನ್ನು ನಿಯಮಬದ್ಧವಾಗಿ ಜಪಿಸಬೇಕು. ವೇದಪಾರಾಯಣವೂ ಶಿವಪದದ ಪ್ರಾಪ್ತಿಯಾಗಿಸುವುದು, ಎಂದು ತಿಳಿಯಬೇಕು. ಬೇರೆ-ಬೇರೆ ಇರುವ ಅನೇಕ ಮಂತ್ರಗಳೂ ಕೂಡ ಅಕ್ಷರಕ್ಕೆ ಲಕ್ಷದಂತೆ ಜಪಮಾಡಬೇಕು. ಹೀಗೆ ಯಥಾಶಕ್ತಿ ಜಪಮಾಡುವವನು ಕ್ರಮಶಃ ಶಿವಪದ

---

* ಬೇರೆಯವರಿಗೆ ಕೇಳಿಸದಂತೆ ಮೆಲ್ಲನೆ ಮಂತ್ರಾಕ್ಷರಗಲನ್ನು ಉಚ್ಚರಿಸುವ ಜಪವನ್ನು ಉಪಾಂಶು ಎಂದು ಹೇಳುತ್ತಾರೆ.

(ಮೋಕ್ಷ)ವನ್ನು ಪಡೆದುಕೊಳ್ಳುವನು. ತನ್ನ ರುಚಿಗನುಸಾರವಾಗಿ ಯಾವುದೇ ಒಂದು ಮಂತ್ರವನ್ನು ತನ್ನದಾಗಿಸಿಕೊಂಡು ಮರಣಪರ್ಯಂತ ಪ್ರತಿದಿನವೂ ಅದನ್ನು ಜಪ ಮಾಡಬೇಕು. ಅಥವಾ 'ಓಂ' ಈ ಮಂತ್ರವನ್ನು ಪ್ರತಿದಿನವೂ ಒಂದು ಸಾವಿರ ಜಪಿಸಬೇಕು. ಹೀಗೆ ಮಾಡುವುದರಿಂದ ಭಗವಾನ್ ಶಿವನ ಆಜ್ಞೆಯಂತೆ ಸಮಸ್ತ ಮನೋರಥಗಳ ಸಿದ್ಧಿಯು ಆಗುತ್ತದೆ.

ಭಗವಾನ್ ಶಿವನಿಗಾಗಿ ಹೂವಿನ ತೋಟವನ್ನು ಮಾಡುವವನು, ಶಿವನ ಸೇವಾಕಾರ್ಯವಾಗಿ ಶಿವಮಂದಿರವನ್ನು ಗುಡಿಸಿ-ಸಾರಿಸುವ ವ್ಯವಸ್ಥೆ ಮಾಡುವವನು, ಈ ಪುಣ್ಯ ಕರ್ಮಗಳಿಂದ ಶಿವ ಪದವನ್ನು ಪಡೆದುಕೊಳ್ಳುವನು. ಭಗವಾನ್ ಶಿವನ ಕಾಶಿಯೇ ಮೊದಲಾದ ಕ್ಷೇತ್ರಗಳಲ್ಲಿ ಭಕ್ತಿಯಿಂದ ನಿತ್ಯ ನಿವಾಸ ಮಾಡಬೇಕು. ಅದು ಜಡ-ಚೇತನವೆಲ್ಲಕ್ಕೂ ಭೋಗ-ಮೋಕ್ಷಗಳನ್ನು ಕೊಡುವಂತಹದಾಗುತ್ತದೆ. ಆದ್ದರಿಂದ ವಿದ್ವಾನ್ ಮನುಷ್ಯನು ಶಿವನ ಕ್ಷೇತ್ರದಲ್ಲಿ ಅಮರಣಾಂತ ವಾಸಿಸಬೇಕು. ಪುಣ್ಯ ಕ್ಷೇತ್ರದಲ್ಲಿರುವ ಕೆರೆ, ಬಾವಿ, ಸರೋವರ ಮುಂತಾದುವನ್ನು ಶಿವಗಂಗೆ ಎಂದು ತಿಳಿಯಬೇಕು. ಭಗವಾನ್ ಶಿವನ ಹೀಗೆ ವಚನವಿದೆ. ಅಲ್ಲಿ ಮನುಷ್ಯನು ಸ್ನಾನ, ದಾನ, ಜಪ ಮಾಡಿ ಭಗವಾನ್ ಶಿವನನ್ನು ಪಡೆದುಕೊಳ್ಳುವನು. ಆದ್ದರಿಂದ ದೇಹವಿರುವತನಕ ಶಿವಕ್ಷೇತ್ರವನ್ನು ಆಶ್ರಯಿಸಿ ವಾಸಿಸಬೇಕು. ಶಿವಕ್ಷೇತ್ರದಲ್ಲಿ ಯಾರಾದರೂ ತನ್ನ ಮೃತ ಸಂಬಂಧಿಯ ದಾಹ, ದಶಾಹ, ಮಾಸಿಕಶ್ರಾದ್ಧ ಸಂಪಿಡೀಕರಣ ಅಥವಾ ವಾರ್ಷಿಕ ಶ್ರಾದ್ಧ ಮಾಡುವವನು ಅಥವಾ ಎಂದಾದರೂ ಶಿವಕ್ಷೇತ್ರದಲ್ಲಿ ತನ್ನ ಪಿತೃಗಳಿಗೆ ಪಿಂಡದಾನ ಮಾಡುವವನು ತತ್‌ಕಾಲದಲ್ಲೇ ಎಲ್ಲ ಪಾಪಗಳಿಂದ ಮುಕ್ತನಾಗಿ ಕೊನೆಗೆ ಶಿವಪದವನ್ನು ಹೊಂದುವನು. ಇಲ್ಲವೇ ಶಿವನ ಕ್ಷೇತ್ರದಲ್ಲಿ ಏಳು, ಐದು, ಮೂರು ಅಥವಾ ಒಂದು ರಾತ್ರಿಯಾದರೂ ವಾಸಿಸಬೇಕು. ಹೀಗೆ ಮಾಡುವುದರಿಂದ ಕ್ರಮವಾಗಿ ಶಿವಪದವು ದೊರೆಯುವುದು.

ಜಗತ್ತಿನಲ್ಲಿ ತಮ್ಮ-ತಮ್ಮ ವರ್ಣದಂತೆ ಸದಾಚಾರವನ್ನು ಪಾಲಿಸುವುದರಿಂದಲೂ ಮನುಷ್ಯನು ಶಿವಪದವನ್ನು ಪಡೆಯುತ್ತಾನೆ. ವರ್ಣಾನುಕೂಲ ಆಚರಣೆಯಿಂದ ಹಾಗೂ ಭಕ್ತಿಭಾವದಿಂದ ಅವನು ತನ್ನ ಸತ್ಕರ್ಮಗಳ ಅತಿಶಯ ಫಲವನ್ನು ಪಡೆಯುವನು. ಸಕಾಮವಾಗಿ ಮಾಡಿದ ತನ್ನ ಕರ್ಮಗಳ ಅಭೀಷ್ಟಫಲವನ್ನೂ ಅವನು ಶೀಘ್ರವಾಗಿ ಪಡೆದುಕೊಳ್ಳುವನು. ನಿಷ್ಕಾಮಭಾವದಿಂದ ಮಾಡಿದ ಎಲ್ಲ ಕರ್ಮಗಳೂ ಸಾಕ್ಷಾತ್ ಶಿವಪದವನ್ನು ಕರುಣಿಸುವಂತಹುದು.

ಪ್ರಾತಃಕಾಲ, ಮಧ್ಯಾಹ್ನಕಾಲ, ಸಾಯಂಕಾಲ ಹೀಗೆ ದಿನದ ಮೂರು ವಿಭಾಗಗಳಿರುತ್ತವೆ. ಈ ಮೂರರಲ್ಲಿಯೂ ಕ್ರಮವಾಗಿ ಒಂದೊಂದು ವಿಧದ ಕರ್ಮಗಳು ಸಂಪಾದನೆಯಾಗುತ್ತವೆ. ಪ್ರಾತಃಕಾಲವನ್ನು ಶಾಸ್ತ್ರವಿಹಿತ ನಿತ್ಯಕರ್ಮಗಳ ಅನುಷ್ಠಾನದ ಸಮಯವೆಂದು ತಿಳಿಯಬೇಕು. ಮಧ್ಯಾಹ್ನಕಾಲವು ಸಕಾಮಕರ್ಮಕ್ಕಾಗಿ ಉಪಯೋಗಿಯಾಗಿದೆ. ಸಾಯಂಕಾಲವನ್ನು ಶಾಂತಿ ಕರ್ಮಕ್ಕಾಗಿ ಉಪಯೋಗಿಯಾಗಿದೆ ಎಂದು ತಿಳಿಯಬೇಕು. ಹೀಗೆ ರಾತ್ರಿಯಲ್ಲಿಯೂ ಸಮಯದ ವಿಭಜನೆ ಮಾಡಲಾಗಿದೆ. ರಾತ್ರಿಯ ನಾಲ್ಕು ಜಾವಗಳಲ್ಲಿ ನಡುವಿನ ಎರಡು ಜಾವಗಳನ್ನು ನಿಶೀಥಕಾಲವೆಂದು ಹೇಳಲಾಗಿದೆ. ವಿಶೇಷವಾಗಿ ಅದೇ ಕಾಲದಲ್ಲಿ ಮಾಡಿದ ಭಗವಾನ್ ಶಿವನ ಪೂಜೆಯು ಅಭೀಷ್ಟ ಫಲವನ್ನು ಕೊಡುವುದು. ಹೀಗೆ ತಿಳಿದು ಕರ್ಮಮಾಡುವವನು ಯಥೋಕ್ತವಾದ ಫಲಕ್ಕೆ ಭಾಗಿಯಾಗುವನು. ವಿಶೇಷವಾಗಿ ಕಲಿಯುಗದಲ್ಲಿ ಕರ್ಮದಿಂದಲೇ ಫಲದ ಸಿದ್ಧಿಯಾಗುತ್ತದೆ. ತಮ್ಮ-ತಮ್ಮ ಅಧಿಕ್ಕಾರನುಸಾರವಾಗಿ ಮೇಲೆ ಹೇಳಲಾದ ಯಾವುದೇ ಕರ್ಮದ ಮೂಲಕ ಶಿವಾರಾಧನೆಯನ್ನು ಮಾಡುವವರು, ಸದಾಚಾರಿಗಳಾಗಿದ್ದರೆ, ಪಾಪಭೀರು ಆಗಿದ್ದರೆ ಆಯಾ ಕರ್ಮಗಳ ಪೂರ್ಣಫಲಗಳನ್ನು ಅವಶ್ಯವಾಗಿ ಪಡೆಯುತ್ತಾರೆ.

ಋಷಿಗಳು ಕೇಳಿದರು - ಸೂತಪುರಾಣಿಕರೇ! ಪುಣ್ಯಕ್ಷೇತ್ರಗಳು ಯಾವುಯಾವುದಿದೆ? ಅವನ್ನು ಆಶ್ರಯಿಸಿದರೆ ಎಲ್ಲ ಸ್ತ್ರೀ-ಪುರುಷರು ಶಿವಪದವನ್ನು ಹೊಂದಬಲ್ಲರೋ? ಅದನ್ನು ಸಂಕ್ಷೇಪವಾಗಿ ನಮಗೆ ತಿಳಿಸಿರಿ.

(ಅಧ್ಯಾಯ - ೧೧)

❐ ❐ ❐

ಮೋಕ್ಷದಾಯಕ ಪುಣ್ಯಕ್ಷೇತ್ರಗಳ ವರ್ಣನೆ, ಕಾಲ ವಿಶೇಷದಿಂದ ಬೇರೆ-ಬೇರೆ ನದಿಗಳ ತೀರ್ಥಗಳಲ್ಲಿ ಸ್ನಾನದ ಉತ್ತಮ ಫಲದ ನಿರ್ದೇಶ ಹಾಗೂ ತೀರ್ಥಗಳಲ್ಲಿ ಪಾಪಗಳಿಂದ ದೂರವುಳಿಯಲು ಎಚ್ಚರಿಕೆ

ಸೂತಪುರಾಣಿಕರು ಹೇಳುತ್ತಾರೆ- ವಿದ್ವಾನ್ ಹಾಗೂ ಬುದ್ಧಿವಂತರಾದ ಮಹರ್ಷಿಗಳೇ! ಮೋಕ್ಷದಾಯಕ ಶಿವಕ್ಷೇತ್ರಗಳ ವರ್ಣನೆಯನ್ನು ಕೇಳಿರಿ. ಅನಂತರ ಲೋಕರಕ್ಷಣೆಗಾಗಿ ಶಿವನಿಗೆ ಸಂಬಂಧಿಸಿದ ಆಗಮಗಳನ್ನು ನಾನು ವರ್ಣಿಸುವೆನು. ಪರ್ವತ, ವನ, ಕಾನನಗಳಸಹಿತ ಈ ಪೃಥಿವಿಯ ವಿಸ್ತಾರ ಐವತ್ತುಕೋಟಿ ಯೋಜನವಿದೆ. ಭಗವಾನ್ ಶಿವನ ಆಜ್ಞೆಯಂತೆ ಪೃಥಿವಿಯು ಸಮಸ್ತ ಜಗತ್ತನ್ನು ಧರಿಸಿಕೊಂಡು ಸ್ಥಿರವಾಗಿದೆ. ಭಗವಾನ್ ಶಿವನು ಬೇರೆ-ಬೇರೆ ಸ್ಥಾನಗಳಲ್ಲಿ ಅಲ್ಲಲ್ಲಿಯ ನಿವಾಸಿಗಳ ಮೇಲೆ ಕೃಪೆಮಾಡಿ ಮೋಕ್ಷಪ್ರದವಾದ ಶಿವಕ್ಷೇತ್ರಗಳನ್ನು ನಿರ್ಮಿಸಿರುವನು. ಕೆಲವು ಕ್ಷೇತ್ರಗಳನ್ನು ದೇವತೆಗಳು ಹಾಗೂ ಮಹರ್ಷಿಗಳು ತಮ್ಮ ನಿವಾಸ ಸ್ಥಾನವನ್ನಾಗಿಸಿಕೊಂಡು ಅವನ್ನು ಅನುಗ್ರಹಿಸಿದ್ದಾರೆ. ಅದರಿಂದ ಅವುಗಳಲ್ಲಿ ತೀರ್ಥತ್ವವು ಪ್ರಕಟವಾಯಿತು. ಬೇರೆ ಅನೇಕ ತೀರ್ಥಕ್ಷೇತ್ರಗಳು ಜನರ ರಕ್ಷಣೆಗಾಗಿ ಸ್ವಯಂ ಪ್ರಾದುರ್ಭವಿಸಿವೆ. 'ತೀರ್ಥಕ್ಷೇತ್ರಕ್ಕೆ ಹೋದಾಗ ಮನುಷ್ಯನು ಸದಾಕಾಲ ಸ್ನಾನ, ದಾನ ಮತ್ತು ಜಪ ಮುಂತಾದುವನ್ನು ಮಾಡಬೇಕು. ಇಲ್ಲದಿದ್ದರೆ ಅವನು ರೋಗ, ದರಿದ್ರತೆ, ಮೂಕತ್ವವೇ ಮುಂತಾದ ದೋಷಗಳಿಗೆ ಭಾಗಿಯಾಗುತ್ತಾನೆ'. ಈ ಭಾರತವರ್ಷದಲ್ಲಿ ಮರಣ ಹೊಂದಿದವನು ತನ್ನ ಪುಣ್ಯಫಲದಿಂದ ಬ್ರಹ್ಮಲೋಕದಲ್ಲಿ ವಾಸಿಸುವನು. ಮತ್ತೆ ಪುಣ್ಯಕ್ಷಯವಾದ ಬಳಿಕ ಪುನಃ ಮನುಷ್ಯಯೋನಿಯಲ್ಲಿ ಹುಟ್ಟುವನು. (ಪಾಪೀ ಮನುಷ್ಯನು ಪಾಪಗಳನ್ನು ಮಾಡಿ ದುರ್ಗತಿಗೇ ಹೋಗುತ್ತಾನೆ) ಬ್ರಾಹ್ಮಣರೇ ! ಪುಣ್ಯಕ್ಷೇತ್ರದಲ್ಲಿ ಪಾಪವನ್ನು ಮಾಡಿದರೆ ಅದು ಇನ್ನೂ ದೃಢವಾಗಿ ಹೋಗುತ್ತದೆ. ಆದ್ದರಿಂದ ಪುಣ್ಯಕ್ಷೇತ್ರದಲ್ಲಿ ವಾಸಿಸುವಾಗ ಅತಿ ಸೂಕ್ಷ್ಮವಾದ ಸ್ವಲ್ಪವೂ ಪಾಪಗಳನ್ನು ಮಾಡಬಾರದು.*

ಸಿಂಧು ಮತ್ತು ಶತದ್ರೂ ನದಿಗಳ ತಟದಲ್ಲಿ ಬಹಳಷ್ಟು ಪುಣ್ಯಕ್ಷೇತ್ರಗಳಿವೆ. ಸರಸ್ವತೀ ನದಿಯನ್ನು ಪರಮ ಪವಿತ್ರವೂ, ಅರವತ್ತು ಮುಖವುಳ್ಳದ್ದೂ ಎಂದು ಹೇಳಲಾಗಿದೆ. ಅರ್ಥಾತ್ - ಅದರ ಅರವತ್ತು ಪ್ರವಾಹಗಳಿವೆ. ವಿದ್ವಾಂಸನಾದ ಮನುಷ್ಯನು ಸರಸ್ವತಿಯ ಆಯಾಯಾ ಪ್ರವಾಹದ ತೀರಗಳಲ್ಲಿ ನಿವಾಸ ಮಾಡಿದರೆ, ಅವನು ಕ್ರಮವಾಗಿ ಬ್ರಹ್ಮಪದವನ್ನು ಪಡೆದುಕೊಳ್ಳುವನು. ಹಿಮಾಲಯದಿಂದ ಹೊರಟ ಪುಣ್ಯನದಿ ಗಂಗೆಯು ನೂರು ಮುಖವುಳ್ಳವಳು. ಅದರ ದಡದಲ್ಲಿ ಕಾಶೀ-ಪ್ರಯಾಗ ಮುಂತಾದ ಅನೇಕ ಪುಣ್ಯ-ಕ್ಷೇತ್ರಗಳಿವೆ. ಮಕರರಾಶಿಯಲ್ಲಿ ಸೂರ್ಯನು ಇರುವಾಗ ಗಂಗಾತಟದ ಭೂಮಿಯು ಮೊದಲಿಗಿಂತಲೂ ಹೆಚ್ಚು ಪ್ರಶಸ್ತ ಹಾಗೂ ಪುಣ್ಯದಾಯಕವಾಗುತ್ತದೆ. ಶೋಣಭದ್ರಾ ನದಿಯ ಹತ್ತು ಪ್ರವಾಹಗಳಿವೆ. ಅವು ಬೃಹಸ್ಪತಿಯು ಮಕರರಾಶಿಗೆ ಬಂದಾಗ ಅತ್ಯಂತ ಪವಿತ್ರ ಹಾಗೂ ಅಭೀಷ್ಟ ಫಲವನ್ನು ಕೊಡುವುದಾಗುತ್ತವೆ. ಆಗ ಅಲ್ಲಿ ಸ್ನಾನ-ಉಪವಾಸ ಮಾಡುವುದರಿಂದ ವಿನಾಯಕ ಪದದ ಪ್ರಾಪ್ತಿಯಾಗುತ್ತದೆ. ಪುಣ್ಯಸಲಿಲೆ ಮಹಾನದಿಯಾದ ನರ್ಮದೆಗೆ ಇಪ್ಪತ್ತನಾಲ್ಕು ಸ್ರೋತಗಳಿವೆ. ಅವುಗಳಲ್ಲಿ ಸ್ನಾನ ಹಾಗೂ ಅವುಗಳ ತಟದಲ್ಲಿ ವಾಸಿಸುವುದರಿಂದ ಮನುಷ್ಯನಿಗೆ ವೈಷ್ಣವಪದದ ಪ್ರಾಪ್ತಿಯಾಗುತ್ತದೆ. ತಮಸೆಗೆ ಹನ್ನೆರಡು ಮತ್ತು ರೇವಾ ನದಿಗೆ ಹತ್ತು ಮುಖಗಳಿವೆ. ಪುಣ್ಯಮಯ ಗೋದಾವರಿಗೆ ಇಪ್ಪತ್ತೊಂದು ಮುಖಗಳೆಂದು ಹೇಳಲಾಗಿದೆ. ಅವು ಬ್ರಹ್ಮಹತ್ಯೆ ಹಾಗೂ ಗೋಹತ್ಯೆಯ ಪಾಪವನ್ನು ನಾಶಮಾಡಿ ರುದ್ರಲೋಕವನ್ನು ಕೊಡುವುದು. ಕೃಷ್ಣವೇಣಿ ನದಿಯ ಜಲವು ಅತ್ಯಂತ ಪವಿತ್ರವಾಗಿದೆ. ಆ ನದಿಯು ಸಮಸ್ತ ಪಾಪಗಳನ್ನು ನಾಶಮಾಡುವಂತಹುದಾಗಿದೆ. ಅದಕ್ಕೆ ಹದಿನೆಂಟು ಮುಖಗಳನ್ನು ಹೇಳಲಾಗಿದೆ. ಹಾಗೂ ಅದು ವಿಷ್ಣುಲೋಕವನ್ನು ಕರುಣಿಸುವಂತಹುದು. ತುಂಗಭದ್ರೆಗೆ ಹತ್ತು ಮುಖಗಳಿವೆ. ಅದು ಬ್ರಹ್ಮ ಲೋಕವನ್ನು ಕೊಡುವಂತಹುದು. ಪುಣ್ಯ ಸಲಿಲೆಯಾದ ಸುವರ್ಣ ಮುಖರಿಗೆ ಒಂಭತ್ತು ಮುಖಗಳೆಂದು ಹೇಳಲಾಗಿದೆ. ಬ್ರಹ್ಮಲೋಕದಿಂದ ಮರಳಿದ ಜೀವಿಗಳು ಅದರ ತೀರದಲ್ಲಿ ಹುಟ್ಟುತ್ತಾರೆ. ಸರಸ್ವತೀ ನದಿ, ಪಂಪಾಸರೋವರ, ಕನ್ಯಾಕುಮಾರಿ ಹಾಗೂ ಶುಭಪ್ರದ ಶ್ವೇತನದಿ - ಇವೆಲ್ಲವುಗಳೂ ಪುಣ್ಯಕ್ಷೇತ್ರಗಳಾಗಿವೆ. ಇವುಗಳ ದಡದಲ್ಲಿ ವಾಸಿಸುವುದರಿಂದ ಇಂದ್ರಲೋಕದ ಪ್ರಾಪ್ತಿಯಾಗುತ್ತದೆ. ಸಹ್ಯಾದ್ರಿ ಪರ್ವತದಿಂದ ಹೊರಟ ಮಹಾನದಿ ಕಾವೇರಿ

* ಕ್ಷೇತ್ರೇ ಪಾಪಸ್ಯ ಕರಣಂ ದೃಢಂ ಭವತಿ ಭೂಸುರಾಃ । ಪುಣ್ಯಕ್ಷೇತ್ರೇ ನಿವಾಸೇ ಹಿ ಪಾಪಮಣ್ವಪಿ ನಾಚರೇತ್ ॥

(ಶ -ಪು - ವಿದ್ಯೇ -೧೨/೭)

ನದಿಯು ಪರಮ ಪುಣ್ಯಮಯಿಯಾಗಿರುವಳು. ಅದಕ್ಕೆ ಇಪ್ಪತ್ತೇಳು ಮುಖಗಳೆಂದು ಹೇಳಲಾಗಿದೆ. ಅದು ಸಮಸ್ತ ಅಭೀಷ್ಟ ವಸ್ತುಗಳನ್ನು ಕೊಡುವುದು. ಅದರ ದಡದಲ್ಲಿರು ವವರು ಸ್ವರ್ಗಲೋಕವನ್ನು ಪಡೆಯುವರು ಮತ್ತು ಬ್ರಹ್ಮ ಹಾಗೂ ವಿಷ್ಣುವಿನ ಪದವನ್ನೂ ಪಡೆಯುವರು. ಕಾವೇರಿ ನದಿಯ ದಡದಲ್ಲಿರುವ ಶೈವಕ್ಷೇತ್ರಗಳು ಅಭೀಷ್ಟ ಫಲವನ್ನು ಕೊಡುವುದರ ಜೊತೆಗೇ ಶಿವಲೋಕವನ್ನು ಕರುಣಿಸುವವು.

ನೈಮಿಷಾರಣ್ಯ ಹಾಗೂ ಬದರಿಕಾಶ್ರಮದಲ್ಲಿ ಸೂರ್ಯ ಮತ್ತು ಬೃಹಸ್ಪತಿಗಳು ಮೇಷರಾಶಿಗೆ ಬಂದಾಗ ಅಲ್ಲಿ ಮಾಡಿದ ಸ್ನಾನ-ಪೂಜೆ ಮುಂತಾದವುಗಳಿಂದ ಬ್ರಹ್ಮಲೋಕವು ಪ್ರಾಪ್ತವಾಗುವುದೆಂದು ತಿಳಿಯಬೇಕು. ಸಿಂಹ ಮತ್ತು ಕರ್ಕಾಟಕ ರಾಶಿಯಲ್ಲಿ ಸೂರ್ಯಸಂಕ್ರಾಂತಿಯಾದಾಗ ಸಿಂಧು ನದಿಯಲ್ಲಿ ಮಾಡಿರುವ ಸ್ನಾನವು ಹಾಗೂ ಕೇದಾರ ತೀರ್ಥದ ಸೇವನೆ ಮತ್ತು ಸ್ನಾನ ಜ್ಞಾನದಾಯವೆಂದು ತಿಳಿಯಲಾಗಿದೆ. ಬೃಹಸ್ಪತಿಯು ಸಿಂಹರಾಶಿಯಲ್ಲಿ ಸ್ಥಿತನಾದಾಗ ಸಿಂಹಸಂಕ್ರಾತಿಯುಕ್ತ ಭಾದ್ರಪದಮಾಸದಲ್ಲಿ ಗೋದಾವರಿಯಲ್ಲಿ ಸ್ನಾನಮಾಡಿದರೆ ಅದರಿಂದ ಶಿವಲೋಕವು ಪ್ರಾಪ್ತವಾಗುವುದೆಂದು ಹಿಂದೆ ಸ್ವತಃ ಭಗವಾನ್ ಶಿವನು ಹೇಳಿರುವನು. ಸೂರ್ಯ ಮತ್ತು ಬೃಹಸ್ಪತಿ ಕನ್ಯಾರಾಶಿಯಲ್ಲಿ ಸ್ಥಿತರಾದಾಗ ಯಮುನೆ ಹಾಗೂ ಶೋಣಭದ್ರಾ ನದಿಗಳಲ್ಲಿ ಸ್ನಾನಮಾಡಬೇಕು. ಆ ಸ್ನಾನದಿಂದ ಯಮಧರ್ಮ ಮತ್ತು ಗಣಪತಿಯ ಲೋಕಗಳಲ್ಲಿ ಮಹಾನ್ ಭೋಗಗಳು ದೊರೆಯುವವು. ಹೀಗೆ ಮಹರ್ಷಿಗಳ ಅಭಿಪ್ರಾಯವಾಗಿದೆ. ಸೂರ್ಯ ಮತ್ತು ಬೃಹಸ್ಪತಿ ತುಲಾರಾಶಿಯಲ್ಲಿ ಸ್ಥಿತರಾದಾಗ ಕಾವೇರೀ ನದಿಯಲ್ಲಿ ಸ್ನಾನ ಮಾಡಬೇಕು. ಆ ಸ್ನಾನದ ಮಹಿಮೆಯಿಂದ ಸಂಪೂರ್ಣ ಅಭೀಷ್ಟ ವಸ್ತುಗಳು ದೊರಕುವವು ಎಂದು ಭಗವಾನ್ ವಿಷ್ಣುವಿನ ವಚನವಿದೆ. ಸೂರ್ಯ ಮತ್ತು ಬೃಹಸ್ಪತಿ ವೃಶ್ಚಿಕರಾಶಿಯಲ್ಲಿ ಸ್ಥಿತವಾದಾಗ ಮಾರ್ಗಶಿರ ತಿಂಗಳಲ್ಲಿ ನರ್ಮದೆಯಲ್ಲಿ ಸ್ನಾನಮಾಡುವುದರಿಂದ ಶ್ರೀವಿಷ್ಣುವಿನ ಲೋಕವು ದೊರೆಯಬಲ್ಲದು. ಸೂರ್ಯ ಹಾಗೂ ಬೃಹಸ್ಪತಿ ಧನುರಾಶಿಯಲ್ಲಿ ಸ್ಥಿತವಾದಾಗ ಸುವರ್ಣಮುಖರೀ ನದಿಯಲ್ಲಿ ಸ್ನಾನ ಮಾಡಿದರೆ ಶಿವಲೋಕವು ದೊರೆಯುವುದು, ಹೀಗೆ ಬ್ರಹ್ಮದೇವರ ವಚನವಿದೆ. ಸೂರ್ಯ ಮತ್ತು ಬೃಹಸ್ಪತಿ ಮಕರರಾಶಿಯಲ್ಲಿ ಸ್ಥಿತವಾದಾಗ ಮಾಘಮಾಸದಲ್ಲಿ ಗಂಗೆಯ ಜಲದಲ್ಲಿ ಸ್ನಾನಮಾಡಬೇಕು. ಆ ಸ್ನಾನವು ಶಿವಲೋಕವನ್ನು ಪ್ರಾಪ್ತಿಮಾಡಿಕೊಡುವುದು ಎಂದು ಬ್ರಹ್ಮದೇವರು ಹೇಳಿರುವರು. ಶಿವಲೋಕದ ಬಳಿಕ ಬ್ರಹ್ಮಾ ಹಾಗೂ ವಿಷ್ಣುವಿನ ಲೋಕಗಳಲ್ಲಿ ಸುಖವನ್ನು ಅನುಭವಿಸಿ, ಕೊನೆಗೆ ಮನುಷ್ಯನಿಗೆ ಜ್ಞಾನದ ಪ್ರಾಪ್ತಿಯಾಗುವುದು. ಸೂರ್ಯನು ಕುಂಭರಾಶಿಯಲ್ಲಿದ್ದಾಗ ಮಾಘ ಮತ್ತು ಫಾಲ್ಗುಣ ಮಾಸಗಳಲ್ಲಿ ಗಂಗಾ ತೀರದಲ್ಲಿ ಮಾಡಿದ ಶ್ರಾದ್ಧ-ಪಿಂಡದಾನವು ಅಥವಾ ತಿಲೋದಕದಾನ (ತರ್ಪಣ) ತಂದೆ ಮತ್ತು ತಾಯಿ ಎರಡೂ ಕುಲಗಳ ಅನೇಕ ತಲೆಮಾರುಗಳು ಉದ್ಧಾರವಾಗುವುವು ಎಂದು ತಿಳಿಯಲಾಗಿದೆ. ಸೂರ್ಯ ಮತ್ತು ಬೃಹಸ್ಪತಿ ಮೀನ ರಾಶಿಯಲ್ಲಿ ಸ್ಥಿತರಾದಾಗ ಕೃಷ್ಣವೇಣೀ ನದಿಯಲ್ಲಿ ಮಾಡಿದ ಸ್ನಾನವನ್ನು ಋಷಿಗಳು ಪ್ರಶಂಸಿಸಿದ್ದಾರೆ. ಆಯಾ ತಿಂಗಳಲ್ಲಿ ಮೇಲೆ ಹೇಳಿದಂತೆ ತೀರ್ಥಗಳಲ್ಲಿ ಮಾಡಿದ ಸ್ನಾನದಿಂದ ಇಂದ್ರಪದವಿಯ ಪ್ರಾಪ್ತವಾಗುತ್ತದೆ. ವಿದ್ವಾಂಸರಾದವರು ಗಂಗೆ ಅಥವಾ ಕಾವೇರಿ ನದಿಗಳನ್ನು ಆಶ್ರಯಿಸಿ ತೀರ್ಥವಾಸ (ದೀಕ್ಷಾಬದ್ಧನಾಗಿ ಎಲ್ಲಿಗೂ ಹೋಗದೆ ನದೀ ದಡದಲ್ಲಿ ವಾಸಿಸುವುದು) ಮಾಡಬೇಕು. ಹೀಗೆ ಮಾಡುವುದರಿಂದ ಮಾಡಿದ ಪಾಪಗಳು ತತ್ಕಾಲದಲ್ಲೇ ನಿಶ್ಚಯವಾಗಿ ನಾಶವಾಗಿ ಹೋಗುವುವು.

ರುದ್ರಲೋಕವನ್ನು ಕರುಣಿಸುವಂತಹ ಅನೇಕ ಕ್ಷೇತ್ರಗಳಿವೆ. ತಾಮ್ರಪರ್ಣಿ ಮತ್ತು ವೇಗವತೀ ಇವೆರಡೂ ನದಿಗಳು ಬ್ರಹ್ಮಲೋಕದ ಪ್ರಾಪ್ತಿರೂಪೀ ಫಲವನ್ನು ಕೊಡುವುವು. ಇವುಗಳ ಎರಡೂ ದಡಗಳಲ್ಲಿ ಎಷ್ಟೋ ಸ್ವರ್ಗದಾಯಕ ಕ್ಷೇತ್ರಗಳಿವೆ. ಇವುಗಳ ನಡುವೆ ಅನೇಕ ಪುಣ್ಯಪ್ರದ ಕ್ಷೇತ್ರಗಳಿವೆ. ಅಲ್ಲಿ ವಾಸಿಸುವ ವಿದ್ವಾನ್ ಮನುಷ್ಯನು ಮಹಾನ್ ಫಲಕ್ಕೆ ಭಾಗಿಯಾಗುವನು. ವಿದ್ವಾಂಸನಾದವನು ಸದಾಚಾರ, ಉತ್ತಮವೃತ್ತಿ, ಸದ್ಭಾವದೊಂದಿಗೆ ದಯಾಭಾವವನ್ನು ಇರಿಸಿಕೊಂಡು ತೀರ್ಥಕ್ಷೇತ್ರದಲ್ಲಿ ನಿವಾಸ ಮಾಡಬೇಕು. ಇಲ್ಲದಿದ್ದರೆ ಅದರ ಫಲವು ಸಿಗುವುದಿಲ್ಲ. ಪುಣ್ಯಕ್ಷೇತ್ರದಲ್ಲಿ ಮಾಡಿದ ಸ್ವಲ್ಪವೇ ಪುಣ್ಯವೂ ಕೂಡ ಅನೇಕ ಪ್ರಕಾರದಿಂದ ವೃದ್ಧಿಯನ್ನು ಪಡೆಯುವುದು. ಅಲ್ಲಿ ಮಾಡಿದ ಸಣ್ಣಪಾಪವೂ ಕೂಡ ಮಹತ್ತರವಾಗುತ್ತದೆ. ಪುಣ್ಯಕ್ಷೇತ್ರದಲ್ಲೇ ಇದ್ದು ಜೀವನವನ್ನು ಕಳೆಯುವ ನಿಶ್ಚಯವಿದ್ದರೆ, ಆ ಪುಣ್ಯ ಸಂಕಲ್ಪದಿಂದ ಅವನ ಮೊದಲಿನ ಎಲ್ಲ ಪಾಪಗಳು ತತ್ಕಾಲದಲ್ಲೇ ನಾಶವಾಗಿ ಹೋದಾವು. ಏಕೆಂದರೆ, ಪುಣ್ಯವನ್ನು ಐಶ್ವರ್ಯದಾಯಕ ವೆಂದು ಹೇಳಲಾಗಿದೆ. ಬ್ರಾಹ್ಮಣರೇ ! ತೀರ್ಥಕ್ಷೇತ್ರವಾಸಜನಿತ ಪುಣ್ಯವು ಕಾಯಿಕ, ವಾಚಿಕ, ಮಾನಸಿಕ ಎಲ್ಲ ಪಾಪಗಳನ್ನು ನಾಶಮಾಡಿಬಿಡುತ್ತದೆ. ತೀರ್ಥದಲ್ಲಿ ಮಾಡಿರುವ ಮಾನಸಿಕ ಪಾಪವು ವಜ್ರಲೇಪವಾಗುತ್ತದೆ. ಅದು ಅನೇಕ ಕಲ್ಪಗಳವರೆಗೆ

ಬೆನ್ನು ಬಿಡುವುದಿಲ್ಲ.* ಅಂತಹ ಪಾಪವು ಕೇವಲ ಧ್ಯಾನದಿಂದಲೇ ನಾಶವಾಗುತ್ತದೆ; ಅಲ್ಲದೇ ಇಲ್ಲ. ವಾಚಿಕ ಪಾಪವು ಜಪದಿಂದ ಹಾಗೂ ಕಾಯಿಕ ಪಾಪವು ಶರೀರವನ್ನು ದಂಡಿಸುವುದರಿಂದ, ಕಠೋರ ತಪಸ್ಸಿನಿಂದ ನಾಶವಾಗುತ್ತದೆ. ಆದ್ದರಿಂದ ಸುಖವನ್ನು ಬಯಸುವ ಪುರುಷನು ದೇವತೆಗಳ ಪೂಜೆಯನ್ನು ಮಾಡುತ್ತಾ, ಬ್ರಾಹ್ಮಣರಿಗೆ ದಾನವನ್ನು ಕೊಡುತ್ತಾ, ಪಾಪದಿಂದ ದೂರವುಳಿದು ತೀರ್ಥಕ್ಷೇತ್ರದಲ್ಲಿ ವಾಸ ಮಾಡಬೇಕು.

(ಅಧ್ಯಾಯ -೧೨)

❑ ❑ ❑

ಸದಾಚಾರ, ಶೌಚಾಚಾರ, ಸ್ನಾನ, ಭಸ್ಮಧಾರಣೆ, ಸಂಧ್ಯಾವಂದನೆ, ಪ್ರಣವಜಪ, ಗಾಯತ್ರೀಜಪ, ದಾನ, ನ್ಯಾಯವಾದ ಧನೋಪಾರ್ಜನೆ, ಅಗ್ನಿಹೋತ್ರ ಮುಂತಾದವುಗಳ ವಿಧಿ ಹಾಗೂ ಮಹಿಮೆಯ ವರ್ಣನೆ

ಋಷಿಗಳು ಕೇಳಿದರು - ಸೂತಪುರಾಣಿಕರೇ ! ವಿದ್ವಾನ್ ಪುರುಷನು ಪುಣ್ಯಲೋಕಗಳ ಮೇಲೆ ವಿಜಯವನ್ನು ಸಾಧಿಸುವಂತಹ ಸದಾಚಾರವನ್ನು ಈಗ ನಮಗೆ ತಿಳಿಸಿರಿ. ಸ್ವರ್ಗಪ್ರದವಾದ ಧರ್ಮಮಯ ಆಚಾರಗಳನ್ನು ಹಾಗೂ ನರಕಗಳ ಕಷ್ಟಗಳನ್ನು ಕೊಡುವಂತಹ ಅಧರ್ಮಮಯ ಆಚಾರವನ್ನು ವರ್ಣಿಸಿರಿ.

ಸೂತಪುರಾಣಿಕರು ಹೇಳಿದರು - ಸದಾಚಾರವನ್ನು ಪಾಲಿಸುವ ವಿದ್ವಾನ್ ಬ್ರಾಹ್ಮಣನೇ ನಿಜವಾಗಿ 'ಬ್ರಾಹ್ಮಣ' ನೆಂಬ ಹೆಸರನ್ನು ಧರಿಸಲು ಅಧಿಕಾರಿಯಾಗಿದ್ದಾನೆ. ಕೇವಲ ವೇದೋಕ್ತ ಆಚಾರಗಳನ್ನು ಪಾಲಿಸುವವನಿಗೆ ಹಾಗೂ ವೇದಾಭ್ಯಾಸಿಯಾದ ಬ್ರಾಹ್ಮಣನಿಗೆ 'ವಿಪ್ರ' ಎಂಬ ಸಂಜ್ಞೆಯಿರುತ್ತದೆ. ಸದಾಚಾರ, ವೇದಾಚಾರ, ವಿದ್ಯೆ- ಇವುಗಳಲ್ಲಿ ಒಂದೊಂದು ಗುಣಗಳಿಂದ ಯುಕ್ತನಾದವನಿಗೆ 'ದ್ವಿಜ' ಎಂದು ಹೇಳುತ್ತಾರೆ. ಯಾರಲ್ಲಿ ಸ್ವಲ್ಪಮಾತ್ರ ಆಚಾರದ ಪಾಲನೆ ನೋಡಲಾಗುತ್ತದೋ, ಯಾರು ವೇದಾಧ್ಯಯನವನ್ನೂ ಸ್ವಲ್ಪವೇ ಮಾಡಿರುವನೋ, ಯಾರು ರಾಜನ ಸೇವಕ (ಪುರೋಹಿತ, ಮಂತ್ರಿ ಆದಿ)ನಾಗಿರುವನೋ, ಅವನನ್ನು 'ಕ್ಷತ್ರಿಯ ಬ್ರಾಹ್ಮಣ'ನೆಂದು ಹೇಳುತ್ತಾರೆ. ಕೃಷಿ ಮತ್ತು ವ್ಯಾಪಾರ ಕರ್ಮಮಾಡುವವನನ್ನು ಅಲ್ಪ - ಸ್ವಲ್ಪ ಬ್ರಾಹ್ಮಣೋಚಿತ ಆಚಾರವನ್ನು ಪಾಲಿಸುವ ಬ್ರಾಹ್ಮಣನನ್ನು 'ವೈಶ್ಯ ಬ್ರಾಹ್ಮಣ'ನೆಂದು ಹೇಳುತ್ತಾರೆ. ಯಾರು ಸ್ವತಃ ನೇಗಿಲಿನಿಂದ ಊಳುವನೋ, ಅವನನ್ನು 'ಶೂದ್ರ ಬ್ರಾಹ್ಮಣ' ನೆಂದು ಹೇಳಲಾಗಿದೆ. ಇತರರ ದೋಷಗಳನ್ನು ನೋಡುವವನನ್ನು ಹಾಗೂ ಪರದ್ರೋಹಿಯನ್ನು 'ಚಾಂಡಾಲ ದ್ವಿಜ' ವೆಂದು ಹೇಳುವರು. ಇದೇ ರೀತಿ ಕ್ಷತ್ರಿಯರಲ್ಲಿಯೂ ಪೃಥಿವಿಯನ್ನು ಪಾಲಿಸುವವನು 'ರಾಜಾ' ಆಗಿದ್ದಾನೆ. ಇತರರು ರಾಜತ್ವಹೀನ ಕ್ಷತ್ರಿಯರೆಂದು ತಿಳಿಯಲಾಗಿದೆ. ವೈಶ್ಯರಲ್ಲಿಯೂ ಯಾರು ಧಾನ್ಯಾದಿ ವಸ್ತುಗಳ ಕ್ರಯ-ವಿಕ್ರಯ ಮಾಡುವರೋ, ಅವರು 'ವೈಶ್ಯ' ನೆನಿಸುವರು. ಉಳಿದವರನ್ನು 'ವಣಿಕ್' ಎಂದು ಹೇಳುತ್ತಾರೆ. ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು - ಇವರ ಸೇವೆಯಲ್ಲಿ ತೊಡಗಿರುವವನೇ ನಿಜವಾಗಿ 'ಶೂದ್ರ'ನೆಂದು ಹೇಳಿಸಿಕೊಳ್ಳುವನು. ಊಳುಮೆಯ ಕೆಲಸ ಮಾಡುವವನನ್ನು 'ವೃಷಲ'ನೆಂದು ತಿಳಿಯಬೇಕು. ಸೇವೆ, ಶಿಲ್ಪ ಊಳುವುದು ಇದನ್ನು ಬಿಟ್ಟು ಬೇರೆ ವೃತ್ತಿಯನ್ನು ಆಶ್ರಯಿಸುವ ಶೂದ್ರನನ್ನು 'ದಸ್ಯು' ಎಂದು ಹೇಳುತ್ತಾರೆ. ಇವೆಲ್ಲ ವರ್ಣದ ಮನುಷ್ಯರು ಬ್ರಾಹ್ಮೀಮುಹೂರ್ತದಲ್ಲಿ ಎದ್ದು ಪೂರ್ವಾಭಿಮುಖವಾಗಿ ಮೊಟ್ಟಮೊದಲಿಗೆ ದೇವತೆಗಳ, ಮತ್ತೆ ಧರ್ಮದ, ಅರ್ಥದ, ಅದರ ಪ್ರಾಪ್ತಿಗಾಗಿ ಪಡುವ ಕ್ಲೇಶಗಳ ಹಾಗೂ ಆಯ-ವ್ಯಯದ ಚಿಂತನೆ ಮಾಡಬೇಕು.

ರಾತ್ರಿಯ ಕೊನೆಯ ಜಾವವನ್ನು ಉಷಃಕಾಲವೆಂದು ತಿಳಿಯಬೇಕು. ಆ ಕೊನೆಯ ಜಾವದ ಮಧ್ಯಭಾಗವನ್ನು ಸಂಧಿ ಎಂದು ಹೇಳುತ್ತಾರೆ. ಆ ಸಂಧಿಕಾಲದಲ್ಲಿ ದ್ವಿಜರು ಎದ್ದು ಮಲ-ಮೂತ್ರಾದಿಗಳನ್ನು ತ್ಯಾಗಮಾಡಬೇಕು. ಮನೆಯಿಂದ ದೂರ ಹೋಗಿ, ಶರೀರವನ್ನು ಹೊರಗಿನಿಂದ ಮುಚ್ಚಿಕೊಂಡು ಹಗಲಿನಲ್ಲಿ ಉತ್ತರಾಭಿಮುಖವಾಗಿ ಕುಳಿತು

---

* ಪುಣ್ಯಕ್ಷೇತ್ರೇ ಕೃತಂ ಪುಣ್ಯಂ ಬಹುಧಾ ಋದ್ದಿಮೃಚ್ಛತಿ । ಪುಣ್ಯ ಕ್ಷೇತ್ರೇ ಕೃತಂ ಪಾಪಂ ಮಹದಣ್ವಪಿ ಜಾಯತೇ ॥
ತತ್ಕಾಲಂ ಜೀವನಾರ್ಥಂಚೇತ್ ಪುಣ್ಯೇನ ಕ್ಷಯಮೇಷ್ಯತಿ । ಪುಣ್ಯಮೈಶ್ವರ್ಯದಂ ಪ್ರಾಹುಃ ಕಾಯಿಕಂ ವಾಚಿಕಂ ತಥಾ ॥
ಮಾನಸಂ ಚ ತಥಾ ಪಾಪಂ ತಾದೃಶಂ ನಾಶಯೇದ್ ದ್ವಿಜಾಃ । ಮಾನಸಂ ವಜ್ರಲೇಪಂ ತು ಕಲ್ಪಕಲ್ಪಾನುಗಂ ತಥಾ ॥
(ಶಿವಪುರಾಣ - ವಿದ್ಯೇ - ಸಂ - ೧೨/೩೬-೩೮)

ಮಲ-ಮೂತ್ರಗಳನ್ನು ತ್ಯಜಿಸಬೇಕು. ಉತ್ತರಾಭಿಮುಖವಾಗಿ ಕುಳಿತುಕೊಳ್ಳಲು ಏನಾದರು ತೊಂದರೆ ಇದ್ದರೆ ಬೇರೆ ದಿಕ್ಕಿನ ಕಡೆ ಮುಖಮಾಡಿ ಕುಳಿತುಕೊಳ್ಳಬೇಕು. ಜಲ, ಅಗ್ನಿ ಬ್ರಾಹ್ಮಣ ಹಾಗೂ ದೇವತೆಗಳು ಇವುಗಳ ಮುಂದೆ ಕುಳಿತುಕೊಳ್ಳ ಬಾರದು. ಮಲತ್ಯಾಗ ಮಾಡಿ ಎದ್ದಮೇಲೆ ಮಲವನ್ನು ನೋಡಬಾರದು. ಅನಂತರ ಜಲಾಶಯದಿಂದ ಹೊರಗೆ ಹರಿದು ಹೋಗುವ ನೀರಿನಲ್ಲಿ ಶುದ್ಧಿಮಾಡಿಕೊಳ್ಳಬೇಕು. ಅಥವಾ ದೇವತೆಗಳ, ಪಿತೃಗಳ, ಋಷಿಗಳ ತೀರ್ಥಗಳಲ್ಲಿ ಇಳಿಯದೆಯೇ, ದೊರೆತ ನೀರಿನಿಂದ ಶುದ್ಧಿಮಾಡಿ ಕೊಳ್ಳಬೇಕು. ಗುದಕ್ಕೆ ಏಳು, ಐದು ಅಥವಾ ಮೂರು ಬಾರಿ ಮೃತ್ತಿಕೆಯನ್ನು ಹಚ್ಚಿ ಶುದ್ಧ ಮಾಡಿಕೊಳ್ಳಬೇಕು. ಲಿಂಗವನ್ನು ಮಣ್ಣನ್ನು ಹಚ್ಚಿ ತೊಳೆಯಬೇಕು. ಲಿಂಗ ಮತ್ತು ಗುದದ ಶುದ್ಧಿಯ ಬಳಿಕ ಎದ್ದು ಬೇರೆಡೆಗೆ ಹೋಗಿ ಕೈ-ಕಾಲುಗಳನ್ನು ತೊಳೆದು ಎಂಟು ಬಾರಿ ಬಾಯಿ ಮುಕ್ಕಳಿಸಬೇಕು. ಶಾಸ್ತ್ರದಲ್ಲಿ ಹೇಳಿದ ಮರದ ಎಲೆಯಿಂದ ಅಥವಾ ಸಣ್ಣ ಕಡ್ಡಿಯಿಂದ ನೀರಿನ ಹೊರಗೆ ಹಲ್ಲುಗಳನ್ನು ಉಜ್ಜಬೇಕು. ಹಲ್ಲು ಉಜ್ಜಲು ತರ್ಜನಿಯನ್ನು ಉಪಯೋಗಿಸಬಾರದು. ಹೀಗೆ ದಂತ ಧಾವನದ ವಿಧಿಯನ್ನು ಹೇಳಲಾಗಿದೆ. ಅನಂತರ ಜಲ ಸಂಬಂಧಿ ದೇವತೆಗಳನ್ನು ನಮಸ್ಕರಿಸಿ ಮಂತ್ರಗಳನ್ನು ಪಠಿಸುತ್ತಾ ಜಲಾಶಯದಲ್ಲಿ ಸ್ನಾನಮಾಡಬೇಕು. ಕತ್ತಿನವರೆಗೆ ಅಥವಾ ಸೊಂಟದವರೆಗೆ ನೀರಿನಲ್ಲಿ ನಿಂತುಕೊಳ್ಳುವ ಶಕ್ತಿಯಿಲ್ಲದಿದ್ದರೆ ಮೊಣಕಾಲಿನವರೆಗೆ ನೀರಿನಲ್ಲಿ ನಿಂತು ತನ್ನ ಮೇಲೆ ನೀರನ್ನು ಸುರಿದುಕೊಂಡು ಮಂತ್ರೋಚ್ಚಾರಣ ಪೂರ್ವಕ ಸ್ನಾನ ಮಾಡಬೇಕು. ವಿದ್ವಾನ್ ಮನುಷ್ಯನು ಅಲ್ಲಿ ತೀರ್ಥಜಲದಿಂದ ದೇವತಾದಿಗಳ ಸ್ನಾನಾಂಗ ತರ್ಪಣಗಳನ್ನು ಮಾಡಬೇಕು.

ಅನಂತರ ತೊಳೆದ ಸ್ವಚ್ಛ ವಸ್ತ್ರವನ್ನು ಪಂಚಕಚ್ಛವಾಗಿ ಉಟ್ಟುಕೊಳ್ಳಬೇಕು. ಜೊತೆಗೆ ಒಂದು ಉತ್ತರೀಯವನ್ನು ಧರಿಸಬೇಕು; ಏಕೆಂದರೆ ಸಂಧ್ಯಾವಂದನಾದಿ ಎಲ್ಲ ಕರ್ಮಗಳಲ್ಲಿ ಅದರ ಆವಶ್ಯಕತೆ ಇರುತ್ತದೆ. ನದಿಯೇ ಮುಂತಾದ ತೀರ್ಥಗಳಲ್ಲಿ ಸ್ನಾನ ಮಾಡಿದಮೇಲೆ ಸ್ನಾನ-ಸಂಬಂಧಿ ಬಿಚ್ಚಿಟ್ಟ ಬಟ್ಟೆಗಳನ್ನು ಅಲ್ಲೇ ತೊಳೆಯಬಾರದು. ಸ್ನಾನದ ನಂತರ ನೆನೆದ ಬಟ್ಟೆಗಳನ್ನು ಬಾವಿಯಬಳಿ, ಕೆರೆಯಲ್ಲಿ ಅಥವಾ ಮನೆಗೆ ಕೊಂಡುಹೋಗಿ ಕಲ್ಲಿನಮೇಲೆ, ಕಟ್ಟಿಗೆಯ ಮೇಲೆ ಅಥವಾ ಸ್ವಚ್ಛವಾದ ಜಾಗದಲ್ಲಿ ತೊಳೆದು ಹಿಂಡಬೇಕು. ದ್ವಿಜರಿರಾ! ವಸ್ತ್ರವನ್ನು ಹಿಂಡಿದ ನೀರಿನಿಂದ ಒಂದು ಶ್ರೇಣಿಯ ಪಿತೃಗಳು ತೃಪ್ತರಾಗುತ್ತಾರೆ. ಅನಂತರ ಜಾಬಾಲಿ ಉಪನಿಷತ್ತಿನಲ್ಲಿ ಹೇಳಿರುವ 'ಅಗ್ನಿರಿತಿ' ಮಂತ್ರದಿಂದ ಭಸ್ಮವನ್ನು ತೆಗೆದು ಕೊಂಡು ತ್ರಿಪುಂಡ್ರವನ್ನು ಹಚ್ಚಿಕೊಳ್ಳಬೇಕು.*

ಈ ವಿಧಿಯನ್ನು ಮಾಡುವಮೊದಲೇ ಭಸ್ಮವು ನೀರಿನಲ್ಲಿ ಬಿದ್ದು ಹೋದರೆ ಬೀಳಿಸುವವನು ನರಕಕ್ಕೆ ಹೋಗುತ್ತಾನೆ. **'ಆಪೋ ಹಿ ಷ್ಠಾ'** ಇತ್ಯಾದಿ ಮಂತ್ರಗಳಿಂದ ಪಾಪಶಾಂತಿ ಗಾಗಿ ತಲೆಯಮೇಲೆ ನೀರನ್ನು ಪ್ರೋಕ್ಷಿಸಿ, **'ಯಸ್ಯ ಕ್ಷಯಾಯ'** ಈ ಮಂತ್ರವನ್ನು ಹೇಳಿ ಕಾಲುಗಳಿಗೆ ನೀರನ್ನು ಚಿಮುಕಿಸಬೇಕು. ಇದನ್ನು ಸಂಧಿ ಪ್ರೋಷಣವೆಂದು ಹೇಳುತ್ತಾರೆ. **'ಆಪೋ ಹಿ ಷ್ಠಾ'** - ಇವು ಮೂರು ಋಚೆಯ ಮಂತ್ರವಾಗಿದೆ. ಪ್ರತಿಯೊಂದು ಋಚೆಯಲ್ಲಿ ಗಾಯತ್ರೀ ಛಂದಸ್ಸಿನ ಮೂರು-ಮೂರು ಚರಣಗಳಿವೆ. ಇವುಗಳಲ್ಲಿ ಪ್ರಥಮ ಋಚೆಯ ಮೂರು ಚರಣಗಳನ್ನು ಪಠಿಸಿ ಕ್ರಮವಾಗಿ ಕಾಲು, ತಲೆ ಮತ್ತು ಹೃದಯ ಇವುಗಳಿಗೆ ನೀರನ್ನು ಪ್ರೋಕ್ಷಿಸಬೇಕು. ಎರಡನೆಯ ಋಚೆಯ ಮೂರು ಚರಣಗಳನ್ನು ಹೇಳಿ ಕ್ರಮವಾಗಿ ಮಸ್ತಕ, ಹೃದಯ, ಕಾಲು, ಇವುಗಳನ್ನು ಪ್ರೋಕ್ಷಿಸಬೇಕು. ಮೂರನೆಯ ಋಚೆಯ ಮೂರು ಚರಣಗಳನ್ನು ಪಠಿಸಿ ಕ್ರಮವಾಗಿ ಹೃದಯ, ಕಾಲು, ಮಸ್ತಕಗಳಲ್ಲಿ ನೀರನ್ನು ಪ್ರೋಕ್ಷಿಸಬೇಕು. ಇದನ್ನು ವಿದ್ವಾಂಸರು

---

* ಜಾಬಾಲಿ ಉಪನಿಷತ್ತಿನಲ್ಲಿ ಭಸ್ಮಧಾರಣದ ವಿಧಿಯನ್ನು ಹೀಗೆ ಹೇಳಲಾಗಿದೆ -

'ಓಂ ಅಗ್ನಿರಿತಿ ಭಸ್ಮ ವಾಯುರಿತಿ ಭಸ್ಮ ವ್ಯೋಮೇತಿ ಭಸ್ಮ ಜಲಮಿತಿ ಭಸ್ಮ ಸ್ಥಲಮಿತಿ ಭಸ್ಮ' ಈ ಮಂತ್ರದಿಂದ ಭಸ್ಮವನ್ನು ಅಭಿಮಂತ್ರಿಸಬೇಕು.

'ಮಾ ನಸ್ತೋಕೇ ತನಯೇ ಮಾ ನ ಆಯುಷಿ ಮಾ ನೋ ಗೋಷು ಮಾ ನೋ ಅಶ್ವೇಷು ರೀರಿಷಃ। ಮಾ ನೋ ವೀರಾನ್ರುದ್ರ ಭಾಮಿನೋ ವಧೀರ್ಹವಿಷ್ಮಂತಃ ಸದಮಿತ್ತ್ವಾ ಹವಾಮಹೇ ॥ ಈ ಮಂತ್ರದಿಂದ ಭಸ್ಮವನ್ನು ಎತ್ತಿಕೊಂಡು ನೀರಿನಿಂದ ಕಲಿಸಿ, ಮತ್ತೆ - 'ತ್ರ್ಯಂಬಕಂ ಜಮದಗ್ನೇಃ ಕಶ್ಯಪಸ್ಯ ತ್ರ್ಯಾಯುಷಮ್ । ಯದ್ದೇವೇಷು ತ್ರ್ಯಾಯುಷಂ ತನ್ನೋಽಸ್ತು ತ್ರ್ಯಾಯುಷಮ್' ಇತ್ಯಾದಿ ಮಂತ್ರಗಳಿಂದ ತಲೆ, ಹಣೆ, ವಕ್ಷಃಸ್ಥಳ, ಬಾಹುಗಳಲ್ಲಿ ತ್ರಿಪುಂಡ್ರವನ್ನು ಹಚ್ಚಬೇಕು.

'ತ್ರ್ಯಂಬಕಂ ಜಮದಗ್ನೇಃ ಕಶ್ಯಪಸ್ಯ ತ್ರ್ಯಾಯುಷಂ । ಯದ್ದೇವೇಷು ತ್ರ್ಯಾಯುಷಂ ತನ್ನೋಽಸ್ತು ತ್ರ್ಯಾಯುಷಮ್'॥ ಹಾಗೂ 'ತ್ರ್ಯಂಬಕಂ ಯಜಾಮಹೇ ಸುಗಂಧಿಂ ಪುಷ್ಟಿವರ್ಧನಮ್ । ಉರ್ವಾರುಕಮಿವ ಬಂಧನಾನ್ ಮೃತ್ಯೋರ್ಮುಕ್ಷೀಯ ಮಾಮೃತಾತ್'॥ ಇವೆರಡೂ ಮಂತ್ರಗಳನ್ನು ಮೂರು-ಮೂರು ಬಾರಿ ಪಠಿಸುತ್ತಾ ಮೂರು ರೇಖೆಗಳನ್ನು ಎಳೆಯಬೇಕು.

'ಮಂತ್ರಸ್ನಾನ' ವೆಂದು ಹೇಳುತ್ತಾರೆ. ಯಾವುದೇ ಅಪವಿತ್ರ ವಸ್ತುವಿನ ಸ್ಪರ್ಶವಾದರೆ, ತನ್ನ ಆರೋಗ್ಯ ಸರಿಯಿಲ್ಲದಿದ್ದರೆ, ರಾಜ ಮತ್ತು ರಾಷ್ಟ್ರದ ಮೇಲೆ ಆಪತ್ತು ಬಂದೊದಗಿದರೆ, ಪ್ರಯಾಣದಲ್ಲಿ ಸ್ನಾನಕ್ಕೆ ನೀರು ಸಿಗದೆ ವಿವಶನಾದಾಗ 'ಮಂತ್ರಸ್ನಾನ'ವನ್ನು ಮಾಡಬೇಕು. ಪ್ರಾತಃಕಾಲದಲ್ಲಿ **'ಸೂರ್ಯಶ್ಚಮಾ ಮನ್ಯುಶ್ಚ'** ಮುಂತಾದ ಮಂತ್ರಗಳಿಂದ ಸೂರ್ಯಾನುವಾಕದಿಂದ ಹಾಗೂ ಸಾಯಂಕಾಲದಲ್ಲಿ **'ಅಗ್ನಿಶ್ಚ ಮಾ ಮನ್ಯುಶ್ಚ'** ಇತ್ಯಾದಿ ಅಗ್ನಿಸಂಬಂಧವಾದ ಅನುವಾಕದಿಂದ ಮಂತ್ರಾಚಮನವನ್ನು ಮಾಡಬೇಕು. ಪುನಃ ನೀರಿನಿಂದ ಶರೀರವನ್ನು ಪ್ರೋಕ್ಷಿಸಬೇಕು. ಮಧ್ಯಾಹ್ನ ಕಾಲದಲ್ಲಿಯೂ **'ಆಪಃ ಪುನಂತು'** ಈ ಮಂತ್ರದಿಂದ ಮಂತ್ರಾಚಮನ ಮಾಡಿ ಹಿಂದಿನಂತೆ ಪ್ರೋಕ್ಷಣ ಅಥವಾ ಮಾರ್ಜನ ಮಾಡಬೇಕು.

ಪ್ರಾತಃಕಾಲದ ಸಂಧ್ಯೋಪಾಸನೆಯಲ್ಲಿ ಗಾಯತ್ರೀ ಮಂತ್ರವನ್ನು ಜಪಿಸಿ ಮೂರು ಬಾರಿ ಸೂರ್ಯನಿಗೆ ಅರ್ಘ್ಯವನ್ನು ಮೇಲಕ್ಕೆತ್ತರಿಸಿ ಕೊಡಬೇಕು. ಬ್ರಾಹ್ಮಣ ಶ್ರೇಷ್ಠರೇ! ಮಧ್ಯಾಹ್ನಕಾಲದಲ್ಲಿ ಗಾಯತ್ರೀ ಮಂತ್ರವನ್ನು ಹೇಳಿ ಒಂದೇ ಅರ್ಘ್ಯವನ್ನು ಕೊಡಬೇಕು. ಮತ್ತೆ ಸಾಯಂಕಾಲ ಪಶ್ಚಿಮದ ಕಡೆಗೆ ಮುಖಮಾಡಿ ಕುಳಿತುಕೊಂಡೆ ಪೃಥಿವಿಯಲ್ಲೇ ಸೂರ್ಯನಿಗೆ ಅರ್ಘ್ಯವನ್ನು ಕೊಡಬೇಕು. ಪ್ರಾತಃಕಾಲ ಮತ್ತು ಮಧ್ಯಾಹ್ನ ಕಾಲದಲ್ಲಿ ಬೊಗಸೆಯಲ್ಲಿ ನೀರನ್ನು ಎತ್ತಿಕೊಂಡು ಬೆರಳುಗಳ ತುದಿಗಳಿಂದ ಸೂರ್ಯನಿಗೆ ಅರ್ಘ್ಯವನ್ನು ಕೊಡಬೇಕು. ಮತ್ತೆ ಬೆರಳುಗಳ ಸಂದಿಯಿಂದ ಸೂರ್ಯನನ್ನು ನೋಡಿ, ಅವನಿಗಾಗಿ ಪ್ರದಕ್ಷಿಣೆ ಮಾಡಿ ಶುದ್ಧಾಚಮನವನ್ನು ಮಾಡಬೇಕು. ಸಾಯಂಕಾಲದಲ್ಲಿ ಸೂರ್ಯಾಸ್ತಕ್ಕೆ ಎರಡುಗಳಿಗೆಗಳ ಮಂಚಿತವಾಗಿ ಮಾಡಿದ ಸಂಧ್ಯೆಯು ನಿಷ್ಫಲವಾಗುತ್ತದೆ; ಏಕೆಂದರೆ ಅದು ಸಾಯಂಸಂಧ್ಯೆಯ ಸಮಯವಲ್ಲ. ಸರಿಯಾದ ಸಮಯದಲ್ಲಿ ಸಂಧ್ಯಾವಂದನೆ ಮಾಡಬೇಕೆಂದು ಶಾಸ್ತ್ರದ ಆಜ್ಞೆಯಿದೆ. ಸಂಧ್ಯೋಪಾಸನೆ ಮಾಡದೆ ದಿನ ಕಳೆದು ಹೋದರೆ ಪ್ರತಿಯೊಂದು ಸಮಯಕ್ಕಾಗಿ ಪ್ರಾಯಶ್ಚಿತ್ತವನ್ನು ಮಾಡಿ ಕೊಳ್ಳಬೇಕು. ಒಂದು ದಿನ ಕಳೆದು ಹೋದರೆ ಪ್ರತಿಯೊಂದು ಕಳೆದು ಹೋದ ಸಂಧ್ಯಾಸಮಯಕ್ಕಾಗಿ ನಿತ್ಯ-ನಿಯಮವನ್ನು ಬಿಟ್ಟು ನೂರು ಗಾಯತ್ರೀ ಮಂತ್ರವನ್ನು ಹೆಚ್ಚಾಗಿ ಜಪಿಸಬೇಕು. ನಿತ್ಯಕರ್ಮವು ಲುಪ್ತವಾಗಿ ಹತ್ತು ದಿನಗಳಿಂದ ಹೆಚ್ಚು ಕಳೆದುಹೋದರೆ, ಅದರ ಪ್ರಾಯಶ್ಚಿತ್ತರೂಪವಾಗಿ ಒಂದು ಲಕ್ಷ ಗಾಯತ್ರೀ ಜಪವನ್ನು ಮಾಡಬೇಕು. ಒಂದು ತಿಂಗಳು ನಿತ್ಯಕರ್ಮವು ಬಿಟ್ಟುಹೋದರೆ ಪುನಃ ತನ್ನ ಉಪನಯನವನ್ನು ಮಾಡಿಸಿಕೊಳ್ಳಬೇಕು.

ಅರ್ಘ್ಯಸಿದ್ಧಿಗಾಗಿ ಈಶ, ಗೌರೀ, ಕಾರ್ತಿಕೇಯ, ವಿಷ್ಣು, ಬ್ರಹ್ಮಾ, ಚಂದ್ರ ಮತ್ತು ಯಮ ಇಂತಹ ಇತರ ದೇವತೆಗಳಿಗೂ ಶುದ್ಧ ಜಲದಿಂದ ತರ್ಪಣ ಮಾಡಬೇಕು. ಮತ್ತೆ ತರ್ಪಣ ಕರ್ಮವನ್ನು ಬ್ರಹ್ಮಾರ್ಪಣೆ ಮಾಡಿ ಶುದ್ಧ ಆಚಮನವನ್ನು ಮಾಡಬೇಕು. ತೀರ್ಥದ ದಕ್ಷಿಣದ ಪ್ರಶಸ್ತ ಮಠದಲ್ಲಿ, ಮಂತ್ರಾಲಯದಲ್ಲಿ, ದೇವಾಲಯದಲ್ಲಿ, ಮನೆಯಲ್ಲಿ ಅಥವಾ ಬೇರೆ ಯಾವುದೇ ನಿಯತ ಸ್ಥಾನದಲ್ಲಿ, ಆಸನದಲ್ಲಿ ಸ್ಥಿರತೆಯಿಂದ ಕುಳಿತುಕೊಂಡು ವಿದ್ವಾಂಸನಾದವನು ತನ್ನ ಬುದ್ಧಿಯನ್ನು ಸ್ಥಿರಗೊಳಿಸಿ, ಸಮಸ್ತ ದೇವ- ದೇವತೆಗಳಿಗೆ ನಮಸ್ಕರಿಸಿ ಮೊದಲಿಗೆ ಪ್ರಣವದ ಜಪಮಾಡಿ ಅನಂತರ ಗಾಯತ್ರೀ ಮಂತ್ರವನ್ನು ಜಪಿಸಬೇಕು. ಪ್ರಣವದ 'ಅ' 'ಉ' 'ಮ' ಈ ಮೂರು ಅಕ್ಷರಗಳಿಂದ ಜೀವ ಮತ್ತು ಬ್ರಹ್ಮನ ಏಕತೆಯನ್ನು ಪ್ರತಿಪಾದಿಸಲಾಗಿದೆ. ಇದನ್ನು ತಿಳಿದುಕೊಂಡು ಪ್ರಣವದ ಜಪವನ್ನು ಮಾಡಬೇಕು. ಜಪಕಾಲದಲ್ಲಿ - ಸ್ವಯಂ ಪ್ರಕಾಶ ಚಿನ್ಮಯರಾದ ಮೂರು ಲೋಕಗಳನ್ನು ಸೃಷ್ಟಿಸುವ ಬ್ರಹ್ಮಾ, ಪಾಲಿಸುವ ವಿಷ್ಣು, ಸಂಹಾರಮಾಡುವ ರುದ್ರ - ಇವರನ್ನು ಉಪಾಸನೆ ಮಾಡುತ್ತಿದ್ದೇನೆ ಎಂದು ಭಾವಿಸಬೇಕು. ಈ ಬ್ರಹ್ಮಸ್ವರೂಪ ಓಂಕಾರವು ನಮ್ಮ ಕರ್ಮೇಂದ್ರಿಯಗಳ ಮತ್ತು ಜ್ಞಾನೇಂದ್ರಿಯಗಳ ವೃತ್ತಿಗಳನ್ನು, ಮನದ ವೃತ್ತಿಗಳನ್ನು, ಬುದ್ಧಿಯ ವೃತ್ತಿಗಳನ್ನು, ಸದಾಕಾಲ ಭೋಗ-ಮೋಕ್ಷವನ್ನು ಕೊಡುವ ಧರ್ಮ ಹಾಗೂ ಜ್ಞಾನದ ಕಡೆಗೆ ಪ್ರೇರಿತಗೊಳಿಸಲಿ. ಪ್ರಣವದ ಈ ಅರ್ಥವನ್ನು ಬುದ್ಧಿಯಿಂದ ಚಿಂತಿಸುತ್ತಾ ಇದನ್ನು ಜಪ ಮಾಡುವವನು ನಿಶ್ಚಯವಾಗಿ ಬ್ರಹ್ಮನನ್ನು ಪಡೆದು ಕೊಳ್ಳುವನು. ಅಥವಾ ಅರ್ಥಾನುಸಂಧಾನವಿಲ್ಲದೆಯೂ ಪ್ರಣವವನ್ನು ಪ್ರತಿದಿನ ಜಪಿಸಬೇಕು. ಇದರಿಂದ ಬ್ರಾಹ್ಮಣತ್ವದ ಪೂರ್ತಿಯಾಗುತ್ತದೆ. ಬ್ರಾಹ್ಮಣತ್ವದ ಪೂರ್ಣತೆಗಾಗಿ ಶ್ರೇಷ್ಠ ಬ್ರಾಹ್ಮಣನು ಪ್ರತಿದಿನ ಪ್ರಾತಃ ಕಾಲದಲ್ಲಿ ಒಂದು ಸಹಸ್ರ ಗಾಯತ್ರೀ ಮಂತ್ರವನ್ನು ಜಪಿಸಬೇಕು. ಮಧ್ಯಾಹ್ನಕಾಲದಲ್ಲಿ ನೂರು ಬಾರಿ ಮತ್ತು ಸಾಯಂಕಾಲದಲ್ಲಿ ಇಪ್ಪತ್ತೆಂಟು ಬಾರಿ ಜಪದ ವಿಧಾನವಿದೆ. ಬೇರೆ ವರ್ಣದ ಜನರು ಆರ್ಥಾತ್ ಕ್ಷತ್ರಿಯ ಮತ್ತು ವೈಶ್ಯರು ಮೂರೂ ಸಂಧ್ಯೆಗಳಲ್ಲಿ ಯಥಾಸಾಧ್ಯ ಗಾಯತ್ರೀ ಜಪವನ್ನು ಮಾಡಬೇಕು.

ಶರೀರದೊಳಗೆ ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಹತ, ಆಜ್ಞಾ ಮತ್ತು ಸಹಸ್ರಾರ – ಈ ಆರು ಚಕ್ರಗಳಿವೆ. ಇವುಗಳಲ್ಲಿ ಮೂಲಾಧಾರದಿಂದ ಹಿಡಿದು ಸಹಸ್ರಾರದವರೆಗೆ ಆರು ಸ್ಥಾನಗಳಲ್ಲಿ ಕ್ರಮಶಃ ವಿದ್ಯೇಶ್ವರ,

ಬ್ರಹ್ಮಾ ವಿಷ್ಣು ಈಶ, ಜೀವಾತ್ಮಾ ಮತ್ತು ಪರಮಾತ್ಮಾ ಸ್ಥಿತರಾಗಿದ್ದಾರೆ. ಇವೆಲ್ಲವುಗಳಲ್ಲಿ ಬ್ರಹ್ಮ-ಬುದ್ಧಿಯನ್ನಿರಿಸಿ ಇವುಗಳ ಏಕತೆಯ ನಿಶ್ಚಯವನ್ನು ಮಾಡಬೇಕು. 'ಆ ಬ್ರಹ್ಮವು ನಾನೇ ಆಗಿದ್ದೇನೆ' ಎಂಬ ಭಾವನೆಯಿಂದ ಪ್ರತಿಯೊಂದು ಶ್ವಾಸದೊಂದಿಗೆ 'ಸೋಽಹಂ' ಇದನ್ನು ಜಪಿಸಬೇಕು. ಇವೇ ವಿದ್ಯೇಶ್ವರ ಮುಂತಾದವರನ್ನು ಬ್ರಹ್ಮರಂಧ್ರದಲ್ಲಿ ಹಾಗೂ ಶರೀರದ ಹೊರಗೂ ಭಾವಿಸಬೇಕು. ಪ್ರಕೃತಿಯ ವಿಕಾರವಾದ ಮಹತ್ತ್ವದಿಂದ ಹಿಡಿದು ಪಂಚಭೂತಗಳವರೆಗೆ ತತ್ತ್ವಗಳಿಂದ ಉಂಟಾದ ಶರೀರವನ್ನು ಇಂತಹ ಸಾವಿರಾರು ಶರೀರಗಳನ್ನು ಒಂದೊಂದಾಗಿ, ಅಜಪಾ ಗಾಯತ್ರಿಯ ಜಪದಿಂದ ಒಂದೊಂದಾಗಿ ಕ್ರಮವಾಗಿ ಅತಿಕ್ರಮಿಸಿ, ಜೀವಿಯನ್ನು ನಿಧಾನವಾಗಿ ಪರಮಾತ್ಮನೊಂದಿಗೆ ಒಂದಾಗಿಸುವುದು. ಹೀಗೆ ಜಪದ ತತ್ತ್ವವನ್ನು ಹೇಳಲಾಗಿದೆ. ನೂರು ಅಥವಾ ಇಪ್ಪತ್ತೆಂಟು ಮಂತ್ರಜಪದಿಂದ ಅಷ್ಟೇ ಶರೀರಗಳ ಅತಿಕ್ರಮಣ ವಾಗುತ್ತದೆ. ಈ ಪ್ರಕಾರದ ಮಂತ್ರಜಪವನ್ನು ಅದಿಕ್ರಮದಿಂದ ವಾಸ್ತವಿಕ ಜಪವೆಂದು ತಿಳಿಯಬೇಕು. ಸಾವಿರ ಜಪವು ಬ್ರಹ್ಮಲೋಕವನ್ನು ಕೊಡುವುದಾಗಿದೆ. ನೂರು ಜಪವು ಇಂದ್ರಪದವಿ ಕೊಡುವುದೆಂದು ತಿಳಿಯಲಾಗಿದೆ. ಬ್ರಾಹ್ಮಣೇತರರು ಅತ್ಯರಕ್ಷಣೆಗಾಗಿ ಮಾಡುವ ಸ್ವಲ್ಪ ಮಾತ್ರ ಜಪದಿಂದ ಅವನು ಬ್ರಾಹ್ಮಣ ಕುಲದಲ್ಲಿ ಹುಟ್ಟುತ್ತಾನೆ. ಪ್ರತಿದಿನವೂ ಸೂರ್ಯೋಪಸ್ಥಾನ ಮಾಡಿ ಬಳಿಕ ಮೇಲೆ ಹೇಳಿದಂತೆ ಜಪಾನುಷ್ಠಾನ ಮಾಡಬೇಕು. ಹನ್ನೆರಡು ಲಕ್ಷ ಗಾಯತ್ರಿಯ ಜಪ ಮಾಡಿದವನು ಪೂರ್ಣರೂಪದಿಂದ ಬ್ರಾಹ್ಮಣನೆಂದು ಕರೆಸಿಕೊಳ್ಳುವನು. ಒಂದು ಲಕ್ಷವಾದರೂ ಗಾಯತ್ರಿಯ ಜಪವನ್ನು ಮಾಡದವನನ್ನು ವೈದಿಕ ಕಾರ್ಯದಲ್ಲಿ ತೊಡಗಿಸಬಾರದು. ಎಪ್ಪತ್ತು ವರ್ಷಗಳ ವರೆಗೂ ನಿಯಮಪಾಲನಪೂರ್ವಕ ಕಾರ್ಯಮಾಡಬೇಕು. ಅನಂತರ ಗೃಹವನ್ನು ತ್ಯಜಿಸಿ ಸಂನ್ಯಾಸವನ್ನು ಸ್ವೀಕರಿಸಬೇಕು. ಪರಿವ್ರಾಜಕ ಅಥವಾ ಸಂನ್ಯಾಸಿಯು ಪ್ರತಿನಿತ್ಯವೂ ಪ್ರಾತಃಕಾಲದಲ್ಲಿ ಹನ್ನೆರಡು ಸಾವಿರ ಪ್ರಣವದ ಜಪವನ್ನು ಮಾಡಬೇಕು. ಒಂದು ದಿನ ಈ ನಿಯಮದ ಉಲ್ಲಂಘನೆ ಯಾದರೆ ಮರುದಿನ ಅದರ ಬದಲಿಗೆ ಅಷ್ಟೇ ಮಂತ್ರ ಜಪವನ್ನು ಹೆಚ್ಚಾಗಿ ಮಾಡಬೇಕು. ಹೀಗೆ ಸದಾಕಾಲ ಜಪವನ್ನು ನಡೆಸುವ ಪ್ರಯತ್ನ ಮಾಡಬೇಕು. ಕ್ರಮದಲ್ಲಿ ಒಂದು ತಿಂಗಳು ಉಲ್ಲಂಘನೆಯಾದರೆ ಒಂದುವರೆ ಲಕ್ಷಜಪವನ್ನು ಮಾಡಿ ಅದರ ಪ್ರಾಯಶ್ಚಿತ್ತವನ್ನು ಮಾಡಬೇಕು. ಇದಕ್ಕಿಂತ ಹೆಚ್ಚು ಸಮಯದವರೆಗೆ ನಿಯಮೋಲ್ಲಂಘನೆಯಾದರೆ ಪುನಃ ಹೊಸದಾಗಿ ಗುರುವಿನಿಂದ ದೀಕ್ಷೆಯನ್ನು ಪಡೆಯಬೇಕು. ಹೀಗೆ ಮಾಡುವುದರಿಂದ ದೋಷದ ಶಾಂತಿಯಾಗುತ್ತದೆ. ಇಲ್ಲದಿದ್ದರೆ ಅವನು ರೌರವ ನರಕಕ್ಕೆ ಹೋಗುತ್ತಾನೆ. ಸಕಾಮ ಭಾವದಿಂದ ಯುಕ್ತನಾದ ಬ್ರಾಹ್ಮಣನು ಧರ್ಮ ಮತ್ತು ಅರ್ಥಕ್ಕಾಗಿ ಪ್ರಯತ್ನಿಸಬೇಕು. ಮುಮುಕ್ಷು ಬ್ರಾಹ್ಮಣನು ಸದಾಕಾಲ ಜ್ಞಾನವನ್ನೇ ಅಭ್ಯಾಸ ಮಾಡಬೇಕು. ಧರ್ಮದಿಂದ ಅರ್ಥದ ಪ್ರಾಪ್ತಿಯಾಗುತ್ತದೆ. ಅರ್ಥದಿಂದ ಭೋಗಗಳು ಸುಲಭವಾಗುತ್ತವೆ. ಮತ್ತೆ ಆ ಭೋಗದಿಂದ ವೈರಾಗ್ಯದ ಸಂಭವವಿರುತ್ತದೆ. ಧರ್ಮಪೂರ್ವಕ ಗಳಿಸಿದ ಧನದಿಂದ ಪ್ರಾಪ್ತವಾದ ಭೋಗದಿಂದ ಒಂದು ದಿನ ಅವಶ್ಯವಾಗಿ ವೈರಾಗ್ಯದ ಉದಯವಾಗುತ್ತದೆ. ಧರ್ಮಕ್ಕೆ ವಿಪರೀತವಾದ ಅಧರ್ಮದಿಂದ ಗಳಿಸಿದ ಧನದಿಂದ ಪ್ರಾಪ್ತವಾದ ಭೋಗಗಳಿಂದ ಭೋಗಗಳ ಕುರಿತು ಆಸಕ್ತಿ ಉಂಟಾಗುತ್ತದೆ. ಮನುಷ್ಯನು ಧರ್ಮದಿಂದ ಧನವನ್ನು ಪಡೆಯುತ್ತಾನೆ. ತಪಸ್ಸಿನಿಂದ ಅವನಿಗೆ ದಿವ್ಯ ಸ್ವರೂಪದ ಪ್ರಾಪ್ತಿಯಾಗುತ್ತದೆ. ಕಾಮನೆಗಳನ್ನು ತ್ಯಾಗಮಾಡುವ ಮನುಷ್ಯನ ಅಂತಃಕರಣವು ಶುದ್ಧವಾಗುತ್ತದೆ. ಆ ಶುದ್ಧಿಯಿಂದ ಜ್ಞಾನದ ಉದಯವಾಗುತ್ತದೆ ಇದರಲ್ಲಿ ಸಂಶಯವೇ ಇಲ್ಲ.

ಕೃತಯುಗವೇ ಮುಂತಾದವುಗಳಲ್ಲಿ ತಪಸ್ಸೇ ಪ್ರಶಸ್ತವೆಂದು ಹೇಳಲಾಗಿದೆ. ಆದರೆ ಕಲಿಯುಗದಲ್ಲಿ ದ್ರವ್ಯಸಾಧ್ಯ ಧರ್ಮ (ದಾನಾದಿಗಳು)ವನ್ನೇ ಉತ್ತಮವೆಂದು ತಿಳಿಯಲಾಗಿದೆ. ಕೃತಯುಗದಲ್ಲಿ ಧ್ಯಾನದಿಂದಲೂ, ತ್ರೇತಾಯುಗದಲ್ಲಿ ತಪಸ್ಸಿನಿಂದಲೂ, ದ್ವಾಪರಯುಗದಲ್ಲಿ ಯಜ್ಞಮಾಡುವುದರಿಂದಲೂ ಜ್ಞಾನದ ಸಿದ್ಧಿಯಾಗುತ್ತದೆ. ಆದರೆ ಕಲಿಯುಗದಲ್ಲಿ ಪ್ರತಿಮೆ (ಭಗವದ್ವಿಗ್ರಹ)ಯ ಪೂಜೆಯಿಂದ ಜ್ಞಾನಲಾಭ ವಾಗುತ್ತದೆ. ಅಧರ್ಮವು ಹಿಂಸೆ (ದುಃಖ)ಯ ರೂಪವಾಗಿದೆ ಮತ್ತು ಧರ್ಮವು ಸುಖರೂಪವಾಗಿದೆ. ಅಧರ್ಮದಿಂದ ಮನುಷ್ಯನು ದುಃಖವನ್ನು ಪಡೆಯುತ್ತಾನೆ ಹಾಗೂ ಧರ್ಮದಿಂದ ಸುಖ-ಅಭ್ಯುದಯಕ್ಕೆ ಭಾಗಿಯಾಗುತ್ತಾನೆ. ದುರಾಚಾರದಿಂದ ದುಃಖವುಂಟಾಗುತ್ತದೆ ಮತ್ತು ಸದಾಚಾರದಿಂದ ಸುಖ ವಾಗುತ್ತದೆ. ಆದ್ದರಿಂದ ಭೋಗ ಮತ್ತು ಮೋಕ್ಷದ ಸಿದ್ಧಿಗಾಗಿ ಧರ್ಮವನ್ನು ಗಳಿಸಬೇಕು. ಮನೆಯಲ್ಲಿ ಕನಿಷ್ಠ ನಾಲ್ಕು ಜನರಿರುವ ಕುಟುಂಬೀ ಬ್ರಾಹ್ಮಣನಿಗೆ ನೂರು ವರ್ಷಗಳವರೆಗೆ ಜೀವನ ನಿರ್ವಾಹದ ಸಾಮಗ್ರಿಯನ್ನು ಕೊಡುವವನಿಗೆ ಆ ದಾನವು ಬ್ರಹ್ಮಲೋಕವನ್ನು ದೊರಕಿಸಿ ಕೊಡುತ್ತದೆ. ಒಂದು ಸಾವಿರ ಚಾಂದ್ರಾಯಣ ವ್ರತದ ಅನುಷ್ಠಾನವು ಬ್ರಹ್ಮಲೋಕದಾಯಕವೆಂದು ತಿಳಿಯಲಾಗಿದೆ. ಕ್ಷತ್ರಿಯನಾದವನು ಒಂದು ಸಾವಿರ ಕುಟುಂಬಗಳಿಗೆ ಜೀವನ

ನಿರ್ವಾಹ ಮತ್ತು ಮನೆಗಳನ್ನು ಕೊಡುತ್ತಾನೋ, ಅವನ ಆ ಕರ್ಮವು ಇಂದ್ರಲೋಕವನ್ನು ಪ್ರಾಪ್ತಿಮಾಡಿಕೊಡುತ್ತದೆ. ಹತ್ತುಸಾವಿರ ಕುಟುಂಬಗಳಿಗೆ ಕೊಟ್ಟ ಆಶ್ರಯದಾನವು ಬ್ರಹ್ಮಲೋಕವನ್ನು ಕೊಡುವುದು. ದಾನಿಯಾದವನು ಯಾವ ದೇವತೆಯನ್ನು ಮುಂದಿರಿಸಿ ದಾನವನ್ನು ಕೊಡುತ್ತಾನೋ, ಅರ್ಥಾತ್ - ಆ ದಾನದ ಮೂಲಕ ಯಾವ ದೇವತೆಯನ್ನು ಪ್ರಸನ್ನಗೊಳಿಸಲು ಬಯಸುವನೋ, ಅದೇ ದೇವತೆಯ ಲೋಕವು ಅವನಿಗೆ ದೊರೆಯುತ್ತದೆ. ಇದನ್ನು ವೇದವೇತ್ತರಾದ ಪುರುಷರು ಚೆನ್ನಾಗಿ ತಿಳಿಯುತ್ತಾರೆ. ಧನಹೀನನಾದವನು ಸದಾ ತಪಸ್ಸನ್ನು ಗಳಿಸಬೇಕು. ಏಕೆಂದರೆ, ತಪಸ್ಸು ಮತ್ತು ತೀರ್ಥಸೇವನೆಯಿಂದ ಅಕ್ಷಯ ಸುಖವನ್ನು ಪಡೆದು, ಮನುಷ್ಯನು ಅದನ್ನು ಅನುಭವಿಸುತ್ತಾನೆ.

ಈಗ ನಾನು ನ್ಯಾಯವಾಗಿ ಧನವನ್ನು ಗಳಿಸುವ ವಿಧಿಯನ್ನು ಹೇಳುವೆನು. ಬ್ರಾಹ್ಮಣನು ಸದಾಕಾಲ ಎಚ್ಚರವಾಗಿದ್ದು ವಿಶುದ್ಧ ಪ್ರತಿಗ್ರಹ (ದಾನ ಪಡೆಯುವುದು) ಹಾಗೂ ಯಾಜನ (ಯಜ್ಞ ಮಾಡಿಸುವುದು) ಇವುಗಳಿಂದ ಧನವನ್ನು ಗಳಿಸಬೇಕು. ಅವನು ಇದಕ್ಕಾಗಿ ಎಲ್ಲಿಯೂ ದೀನತೆಯನ್ನು ತೋರಬಾರದು ಹಾಗೂ ಅತ್ಯಂತ ಕ್ಲೇಶದಾಯಕ ಕರ್ಮವನ್ನೂ ಮಾಡಬಾರದು. ಕ್ಷತ್ರಿಯನು ಬಾಹುಬಲದಿಂದ ಧನವನ್ನು ಗಳಿಸಬೇಕು. ವೈಶ್ಯನು ಕೃಷಿ ಹಾಗೂ ಗೋರಕ್ಷಣೆಯಿಂದ ಗಳಿಸಬೇಕು. ನ್ಯಾಯೋಪಾರ್ಜಿತ ಧನವನ್ನು ದಾನ ಕೊಡುವುದರಿಂದ ದಾನಿಗೆ ಜ್ಞಾನದ ಸಿದ್ಧಿಯಾಗುತ್ತದೆ. ಜ್ಞಾನದ ಸಿದ್ಧಿಯಿಂದ ಎಲ್ಲ ಪುರುಷರಿಗೂ ಗುರುಕೃಪೆ-ಮೋಕ್ಷಸಿದ್ಧಿಯು ಸುಲಭವಾಗುತ್ತದೆ. ಮೋಕ್ಷದಿಂದ ಸ್ವರೂಪದ ಸಿದ್ಧಿ (ಬ್ರಹ್ಮರೂಪದ ಸ್ಥಿತಿ) ಪ್ರಾಪ್ತವಾಗುತ್ತದೆ. ಇದರಿಂದ ಮುಕ್ತ ಪುರುಷನು ಪರಮಾನಂದವನ್ನು ಅನುಭವಿಸುತಾನೆ. ಗೃಹಸ್ಥನಾದವನು ಧನ-ಧಾನ್ಯಾದಿ ಎಲ್ಲ ವಸ್ತುಗಳನ್ನು ದಾನ ಮಾಡಬೇಕು. ಅವನು ತೃಷಾ ನಿವಾರಣೆಗಾಗಿ ನೀರನ್ನು, ಹಸಿವೆಯೆಂಬ ರೋಗವನ್ನು ಇಂಗಲು ಅನ್ನವನ್ನು ದಾನ ಮಾಡಬೇಕು. ಹೊಲ, ಧಾನ್ಯ, ಸಿದ್ಧೆ (ಬೇಯಿಸದೇ ಇರುವ ವಸ್ತುಗಳು), ಭಕ್ಷ್ಯ, ಭೋಜ್ಯ, ಲೇಹ್ಯ, ಚೋಷ್ಯ -- ಹೀಗೆ ಸಿದ್ಧಪಡಿಸಿದ ಅನ್ನ ದಾನಮಾಡಬೇಕು. ಯಾರ ಅನ್ನವನ್ನು ತಿಂದು ಮನುಷ್ಯನು ಕಥಾ-ಶ್ರವಣ ಮೊದಲಾದ ಸದ್ಧರ್ಮವನ್ನು ಪಾಲಿಸುವನೋ, ಅಷ್ಟು ಸಮಯದವರೆಗೆ ಗಳಿಸಿದ ಪುಣ್ಯ-ಫಲದಲ್ಲಿ ಅರ್ಧಭಾಗವು ದಾನಮಾಡಿದವನಿಗೆ ಸೇರುತ್ತದೆ. ಇದರಲ್ಲಿ ಸಂಶಯವೇ ಇಲ್ಲ. ದಾನ ಪಡೆದವನು ದಾನದಲ್ಲಿ ದೊರೆತ ವಸ್ತುಗಳನ್ನು ದಾನ ಮತ್ತು ತಪಸ್ಸುಗಳನ್ನು ಮಾಡಿ ಪ್ರತಿಗ್ರಹಜನಿತ ಪಾಪದ ಶುದ್ಧಿಯನ್ನು ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಅವನಿಗೆ ರೌರವ ನರಕದಲ್ಲಿ ಬೀಳಬೇಕಾಗುತ್ತದೆ. ತನ್ನ ಧನವನ್ನು ಮೂರು ಭಾಗಮಾಡಿ, ಒಂದು ಭಾಗವನ್ನು ಧರ್ಮಕ್ಕಾಗಿ, ಎರಡನೆಯ ಭಾಗವನ್ನು ವೃದ್ಧಿಗಾಗಿ ಹಾಗೂ ಮೂರನೆಯ ಭಾಗವನ್ನು ತನ್ನ ಉಪಭೋಗಕ್ಕಾಗಿ ವಿನಿಯೋಗಿಸಬೇಕು. ನಿತ್ಯ-ನೈಮಿತ್ತಿಕ-ಕಾಮ್ಯ- ಈ ಮೂರು ರೀತಿಯ ಕರ್ಮಗಳನ್ನು ಧರ್ಮಕ್ಕಾಗಿ ತೆಗೆದಿರಿಸಿದ ಧನದಿಂದ ಮಾಡಬೇಕು. ಸಾಧಕನು ವೃದ್ಧಿಗಾಗಿ ತೆಗೆದಿರಿಸಿದ ಧನದಿಂದ ಧನದ ವೃದ್ಧಿಯಾಗುವಂತಹ ವ್ಯಾಪಾರವನ್ನು ಮಾಡಬೇಕು. ಉಪಭೋಗಕ್ಕಾಗಿ ಇರುವ ಧನದಿಂದ ಹಿತಕರವಾದ, ಪರಿಮಿತವಾದ ಹಾಗೂ ಪವಿತ್ರ ಭೋಗಗಳನ್ನು ಅನುಭವಿಸಬೇಕು. ಹೊಲದಿಂದ ದೊರಕಿದ ಧಾನ್ಯದ ಹತ್ತನೆಯ ಒಂದು ಅಂಶವನ್ನು ದಾನ ಮಾಡಬೇಕು. ಇದರಿಂದ ಪಾಪದ ಶುದ್ಧಿಯಾಗುತ್ತದೆ. ಉಳಿದ ಧಾನ್ಯದಿಂದ ಧರ್ಮ, ವೃದ್ಧಿ ಉಪಭೋಗಗಳನ್ನು ಅನುಭವಿಸಬೇಕು. ಇಲ್ಲದಿದ್ದರೆ ಅವನು ರೌರವ ನರಕದಲ್ಲಿ ಬೀಳುವನು. ಅಥವಾ ಬುದ್ಧಿಯು ಪಾಪಪೂರ್ಣವಾಗುತ್ತದೆ, ಇಲ್ಲವೆ ಹೊಲ-ಬೇಸಾಯ ಕೆಟ್ಟುಹೋಗುತ್ತದೆ. ವೃದ್ಧಿಗಾಗಿ ಮಾಡಿದ ವ್ಯಾಪಾರದಿಂದ ದೊರೆತ ಧನದಲ್ಲಿ ಆರನೆಯ ಒಂದು ಭಾಗವನ್ನು ದಾನ ಮಾಡಲು ಯೋಗ್ಯವಾಗಿದೆ. ಬುದ್ಧಿವಂತನಾದವನು ಅವಶ್ಯವಾಗಿ ಅದನ್ನು ದಾನಮಾಡಬೇಕು.

ಬ್ರಾಹ್ಮಣರೇ ! ವಿದ್ವಾಂಸನಾದವನು ಬೇರೆಯವರ ದೋಷಗಳನ್ನು ಎತ್ತಿ ಹೇಳಬಾರದು. ಅಕಸ್ಮಾತ್ತಾಗಿ ಇತರರ ಛಿದ್ರ-ರಹಸ್ಯಗಳನ್ನು ಕಂಡು - ಕೇಳಿದರೂ ಪ್ರಕಟಿಸಬಾರದು. ಸಮಸ್ತ ಪ್ರಾಣಿಗಳಲ್ಲಿ ರೋಷವನ್ನುಂಟುಮಾಡುವ ಮಾತನ್ನು ವಿದ್ವಾಂಸನಾದವನು ಆಡಬಾರದು. ಐಶ್ವರ್ಯದ ಸಿದ್ಧಿಗಾಗಿ ಎರಡೂ ಸಂಧ್ಯೆಗಳಲ್ಲಿ ಅಗ್ನಿಹೋತ್ರ ಕರ್ಮವನ್ನು ಅವಶ್ಯವಾಗಿ ಮಾಡಬೇಕು. ಎರಡೂ ಹೊತ್ತು (ಪ್ರಾತಃಕಾಲ, ಸಾಯಂಕಾಲ) ಅಗ್ನಿಹೋತ್ರವನ್ನು ಮಾಡಲು ಅಸಮರ್ಥನಾದವನು ಒಂದೇ ಸಮಯದಲ್ಲಿ ಸೂರ್ಯ ಮತ್ತು ಅಗ್ನಿ ಇವರಿಗೆ ಆಹುತಿಗಳನ್ನು ಕೊಟ್ಟು ಸಂತುಷ್ಟಪಡಿಸಬೇಕು. ಅಕ್ಕಿ, ಧಾನ್ಯ, ತುಪ್ಪ, ಹಣ್ಣು, ಕಂದಮೂಲ ಹಾಗೂ ಹವಿಸ್ಸು - ಇವುಗಳಿಂದ ಸ್ಥಾಲಿಪಾಕವನ್ನು ಸಿದ್ಧಪಡಿಸಿ ಯಥೋಚಿತವಾಗಿ ಸೂರ್ಯ ಮತ್ತು ಅಗ್ನಿ ಇವರಿಗೆ ಅರ್ಪಿಸಬೇಕು. ಹವಿಸ್ಸಿನ ಅಭಾವವಿದ್ದರೆ ಪ್ರಧಾನ ಹೋಮವನ್ನು ಮಾತ್ರ ಮಾಡಬೇಕು. ಸದಾಕಾಲ ಸುರಕ್ಷಿತವಾಗಿರುವ ಅಗ್ನಿಗೆ ವಿದ್ವಾಂಸರು ಅಜಸ್ರವೆಂಬ ಸಂಜ್ಞೆಯನ್ನು ಕೊಡುತ್ತಾರೆ. ಇಲ್ಲವೇ

ಸಂಧ್ಯಾಕಾಲದಲ್ಲಿ ಜಪಮಾತ್ರ ಅಥವಾ ಸೂರ್ಯನಮಸ್ಕಾರ ಮಾಡಬೇಕು. ಆತ್ಮಜ್ಞಾನದ ಇಚ್ಛೆಯುಳ್ಳ ಹಾಗೂ ಧನಾರ್ಥಿಯಾದ ಮನುಷ್ಯರೂ ಈ ವಿಧವಾಗಿ ವಿಧಿಪೂರ್ವಕ ಉಪಾಸನೆ ಮಾಡಬೇಕು. ಯಾರು ಸದಾಕಾಲ ಬ್ರಹ್ಮ ಯಜ್ಞದಲ್ಲಿ ತತ್ಪರರಾಗಿರುವರೋ, ದೇವತೆಗಳ ಪೂಜೆಯಲ್ಲಿ ತೊಡಗುವರೋ, ಪ್ರತಿದಿನ ಅಗ್ನಿಪೂಜೆ-ಗುರು ಪೂಜೆಯಲ್ಲಿ ಅನುರಕ್ತರಾಗಿರುವರೋ, ಬ್ರಾಹ್ಮಣರನ್ನು ತೃಪ್ತಿಪಡಿಸು ವರೋ, ಅವರೆಲ್ಲರೂ ಸ್ವರ್ಗಲೋಕಕ್ಕೆ ಭಾಗಿಗಳಾಗುತ್ತಾರೆ.

(ಅಧ್ಯಾಯ - ೧೩)

❐ ❐ ❐

ಅಗ್ನಿಯಜ್ಞ, ದೇವಯಜ್ಞ, ಬ್ರಹ್ಮಯಜ್ಞ ಇವುಗಳ ವರ್ಣನೆ, ಭಗವಾನ್ ಶಿವನಿಂದ ಏಳುವಾರಗಳ ನಿರ್ಮಾಣ

ಋಷಿಗಳು ಕೇಳಿದರು - ಸ್ವಾಮಿ! ಅಗ್ನಿಯಜ್ಞ, ದೇವಯಜ್ಞ, ಬ್ರಹ್ಮಯಜ್ಞ, ಗುರುಪೂಜೆ ಹಾಗೂ ಬ್ರಹ್ಮ ತೃಪ್ತಿಯ ಕುರಿತು ನಮಗೆ ಕ್ರಮವಾಗಿ ವರ್ಣಿಸಿರಿ.

ಸೂತಪುರಾಣಿಕರು ಹೇಳುತ್ತಾರೆ - ಮಹರ್ಷಿಗಳೇ! ಗೃಹಸ್ಥನಾದವನು ಸಾಯಂಕಾಲ ಮತ್ತು ಪ್ರಾತಃಕಾಲಗಳಲ್ಲಿ ಅಕ್ಕಿಯೇ ಮೊದಲಾದ ದ್ರವ್ಯಗಳಿಂದ ಆಹುತಿಯನ್ನು ಕೊಡುವುದನ್ನು 'ಅಗ್ನಿಯಜ್ಞ' ವೆಂದು ಹೇಳುತ್ತಾರೆ. ಬ್ರಹ್ಮಚರ್ಯಾಶ್ರಮದಲ್ಲಿ ಇರುವ ಬ್ರಹ್ಮಚಾರಿಗಳಿಗೆ ಸಮಿಧಾ ಆಧಾನವೇ (ಹೋಮವೇ) ಅಗ್ನಿಯಜ್ಞವಾಗಿದೆ. ಅವರು ಸಮಿಧೆಯನ್ನು ಮಾತ್ರ ಹವನಮಾಡಬೇಕು. ಬ್ರಹ್ಮಚರ್ಯಾ ಶ್ರಮದಲ್ಲಿ ವಾಸಿಸುವ ದ್ವಿಜರು ವಿವಾಹವಾಗುವತನಕ ಔಪಾಸನಾಗ್ನಿಯನ್ನು ಪ್ರತಿಷ್ಠಿಸಬಾರದು. ಅಲ್ಲಿಯವರೆಗೆ ಅವರಿಗೆ ಅಗ್ನಿಯಲ್ಲಿ ಸಮಿಧೆಯ ಆಹುತಿ, ವ್ರತಾದಿಗಳ ಪಾಲನೆ ಹಾಗೂ ವಿಶೇಷ ಯಜನಾದಿಗಳೇ ಕರ್ತವ್ಯವಾಗಿದೆ. (ಇದೆ ಅವರಿಗೆ ಅಗ್ನಿಯಜ್ಞವಾಗಿದೆ) ದ್ವಿಜರಿರಾ! ಬಾಹ್ಯಅಗ್ನಿಯನ್ನು ವಿಸರ್ಜಿಸಿ, ತಮ್ಮ ಆತ್ಮನಲ್ಲೇ ಅಗ್ನಿಯನ್ನು ಆರೋಪಿಸಿಕೊಂಡ ವಾನಪ್ರಸ್ಥಗಳಿಗೆ ಹಾಗೂ ಸಂನ್ಯಾಸಿಗಳಿಗೆ, ಅವರು ವಿಹಿತ ಸಮಯದಲ್ಲಿ ಹಿತಕರವಾದ, ಪರಿಮಿತವಾದ ಪವಿತ್ರ ಭೋಜನ ಮಾಡುವುದೇ ಹವನ ಅಥವಾ ಅಗ್ನಿಯಜ್ಞವಾಗಿದೆ. ವಿಪ್ರರೇ! ಸಾಯಂಕಾಲ ಅಗ್ನಿಯಲ್ಲಿ ಸಮರ್ಪಿಸಿದ ಆಹುತಿಯಿಂದ ಸಂಪತ್ತು ಪ್ರಾಪ್ತವಾಗುತ್ತದೆ. ಪ್ರಾತಃಕಾಲದಲ್ಲಿ ಸೂರ್ಯನಿಗೆ ಅರ್ಪಿಸಿದ ಆಹುತಿಯು ಆಯುಸ್ಸಿನ ವೃದ್ಧಿಪಡಿಸುವುದು, ಎಂಬುದನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಹಗಲಿನಲ್ಲಿ ಅಗ್ನಿಯು ಸೂರ್ಯನಲ್ಲೇ ಪ್ರವಿಷ್ಟನಾಗಿರುವನು. ಆದ್ದರಿಂದ ಪ್ರಾತಃಕಾಲದಲ್ಲಿ ಸೂರ್ಯನಿಗೆ ಅರ್ಪಿಸಿದ ಆಹುತಿಯೂ ಅಗ್ನಿಯಜ್ಞದ ಅಂತರ್ಗತವೇ ಆಗಿದೆ. ಹೀಗೆ ಈ ಅಗ್ನಿಯಜ್ಞವನ್ನು ವರ್ಣಿಸಲಾಯಿತು.

ಇಂದ್ರಾದಿ ದೇವತೆಗಳನ್ನು ಉದ್ದೇಶಿಸಿ ಅಗ್ನಿಯಲ್ಲಿ ಕೊಡುವ ಆಹುತಿಯನ್ನು ದೇವಯಜ್ಞವೆಂದು ತಿಳಿಯಬೇಕು. ಸ್ಥಾಲೀಪಾಕ ಮುಂತಾದ ಯಜ್ಞಗಳನ್ನು ದೇವಯಜ್ಞವೆಂದೇ ಅರಿತುಕೊಳ್ಳಬೇಕು. ಉಪನಯನ, ಚೌಲ ಮುಂತಾದ ಸಂಸ್ಕಾರಗಳ ನಿಮಿತ್ತವಾಗಿ ಮಾಡುವ ಹವನ ಕರ್ಮವನ್ನು ದೇವಯಜ್ಞದ ಅಂತರ್ಗತವೆಂದೇ ತಿಳಿಯಬೇಕು. ಈಗ ಬ್ರಹ್ಮಯಜ್ಞದ ವರ್ಣನೆಯನ್ನು ಕೇಳಿರಿ. ದ್ವಿಜನು ದೇವತೆಗಳ ತೃಪ್ತಿಗಾಗಿ ನಿರಂತರ ಬ್ರಹ್ಮಯಜ್ಞವನ್ನು ಮಾಡಬೇಕು. ಪ್ರತಿದಿನವೂ ವೇದಗಳ ಅಧ್ಯಯನ ಅಥವಾ ಸ್ವಾಧ್ಯಾಯವನ್ನು ಬ್ರಹ್ಮಯಜ್ಞವೆಂದು ಹೇಳಲಾಗಿದೆ. ಪ್ರಾತಃಕಾಲ ನಿತ್ಯಕರ್ಮದ ಬಳಿಕ ಸಾಯಂಕಾಲದವರೆಗೆ ಬ್ರಹ್ಮಯಜ್ಞವನ್ನು ಮಾಡಬಹುದು. ಅನಂತರ ರಾತ್ರಿಯಲ್ಲಿ ಇದರ ವಿಧಾನವಿಲ್ಲ.

ಅಗ್ನಿಯಿಲ್ಲದೆ ದೇವಯಜ್ಞವು ಹೇಗೆ ಸಂಪನ್ನವಾಗುತ್ತದೆ ? ಎಂಬುದನ್ನು ನೀವುಗಳು ಶ್ರದ್ಧೆಯಿಂದ, ಆದರದಿಂದ ಕೇಳಿರಿ. ಸೃಷ್ಟಿಯ ಪ್ರಾರಂಭದಲ್ಲಿ ಸರ್ವಜ್ಞನೂ, ದಯಾಳುವೂ, ಸರ್ವಸಮರ್ಥನೂ ಆದ ಮಹಾದೇವನು ಸಮಸ್ತ ಲೋಕಗಳ ಉಪಕಾರಕ್ಕಾಗಿ, ವಾರಗಳನ್ನು ಕಲ್ಪಿಸಿರುವನು. ಆ ಭಗವಾನ್ ಶಿವನು ಸಂಸಾರರೂಪೀ ರೋಗವನ್ನು ದೂರಮಾಡುವ ವೈದ್ಯನಾಗಿರುವನು. ಅವನು ಎಲ್ಲರ ಜ್ಞಾತೃವೂ, ಸಮಸ್ತ ಔಷಧಿಗಳಿಗೂ ಪರಮೌಷಧವೂ ಆಗಿರುವನು. ಆ ಭಗವಂತನು ಮೊಟ್ಟಮೊದಲಿಗೆ ತನ್ನ ವಾರವನ್ನು ಕಲ್ಪಿಸಿದನು. ಅದು ಆರೋಗ್ಯವನ್ನು ಕೊಡುವುದು. ಅನಂತರ ತನ್ನ ಮಾಯಾಶಕ್ತಿಯ ವಾರವನ್ನು ನಿರ್ಮಿಸಿದನು. ಅದು ಸಂಪತ್ತನ್ನು ಪ್ರಧಾನ ಮಾಡುವುದಾಗಿದೆ. ಜನ್ಮಕಾಲದಲ್ಲಿ ದುರ್ಗತಿಗ್ರಸ್ತ ಬಾಲಕನನ್ನು ರಕ್ಷಿಸಲು ಕುಮಾರಸ್ವಾಮಿಯ ವಾರವನ್ನು ಕಲ್ಪಿಸಿದನು. ಬಳಿಕ ಸರ್ವಸಮರ್ಥ ಮಹಾದೇವನು ಆಲಸ್ಯ ಮತ್ತು ಪಾಪಗಳನ್ನು ನಿವೃತ್ತಿ ಹಾಗೂ

ಸಮಸ್ತ ಲೋಕಗಳ ಹಿತವನ್ನು ಮಾಡುವ ಇಚ್ಛೆಯಿಂದ ಲೋಕರಕ್ಷಕ ಭಗವಾನ್ ವಿಷ್ಣುವಿನ ವಾರವನ್ನು ರಚಿಸಿದನು. ಇದಾದ ಬಳಿಕ ಎಲ್ಲರ ಸ್ವಾಮಿಯಾದ ಭಗವಾನ್ ಶಿವನು ಪುಷ್ಟಿ ಮತ್ತು ರಕ್ಷೆಗಾಗಿ ಆಯುಸ್ಸು ಪ್ರದನಾದ ತ್ರಿಲೋಕಸ್ರಷ್ಟಾ ಪರಮೇಷ್ಠಿ ಬ್ರಹ್ಮದೇವರ ಆಯುಷ್ಯಕಾರಕ ವಾರವನ್ನು ರಚಿಸಿದನು. ಇದರಿಂದ ಸಮಸ್ತ ಜಗತ್ತಿನಲ್ಲಿ ಆಯುಷ್ಯದ ಸಿದ್ಧಿಯಾಗಬಲ್ಲದು. ಅನಂತರ ಮೂರೂ ಲೋಕಗಳ ವೃದ್ಧಿಗಾಗಿ ಮೊದಲಿಗೆ ಪುಣ್ಯ-ಪಾಪಗಳು ರಚನೆಯಾದಾಗ, ಅವನ್ನು ಮಾಡುವ ಜನರಿಗೆ ಶುಭಾಶುಭ ಫಲವನ್ನು ಕೊಡುವುದಕ್ಕಾಗಿ ಭಗವಾನ್ ಶಿವನು ಇಂದ್ರ ಮತ್ತು ಯಮ ಇವುಗಳ ವಾರಗಳನ್ನು ನಿರ್ಮಾಣಮಾಡಿದನು. ಇವೆರಡೂ ವಾರಗಳು ಕ್ರಮವಾಗಿ ಭೋಗವನ್ನು ಕೊಡುವುದು ಹಾಗೂ ಜನರ ಮರಣ ಭಯವನ್ನು ದೂರಗೊಳಿಸುವುದಾಗಿದೆ. ಬಳಿಕ ತಮ್ಮ ಸ್ವರೂಪಭೂತ ಹಾಗೂ ಪ್ರಾಣಿಗಳಿಗೆ ಸುಖ-ದುಃಖಸೂಚಕವಾದ ಸೂರ್ಯನೇ ಮೊದಲಾದ ಏಳು ಗ್ರಹರನ್ನು ಭಗವಾನ್ ಶಿವನು ಮೇಲಿನ ಏಳು ವಾರಗಳಿಗೆ ಒಡೆಯರನ್ನಾಗಿ ನಿಶ್ಚಿತಗೊಳಿಸಿದನು. ಇವರೆಲ್ಲರೂ ಗ್ರಹ-ನಕ್ಷತ್ರಗಳ ಜ್ಯೋತಿರ್ಮಯ ಮಂಡಲದಲ್ಲಿ ಪ್ರತಿಷ್ಠಿತವಾಗಿದ್ದಾರೆ. ಶಿವನ ವಾರ ಅಥವಾ ದಿನದ ಸ್ವಾಮಿಯು ಸೂರ್ಯನಾಗಿದ್ದಾನೆ. ಶಕ್ತಿಸಂಬಂಧೀ ವಾರದ ಸ್ವಾಮಿ ಸೋಮನಾಗಿರುವನು. ಕುಮಾರಸ್ವಾಮಿ ಸಂಬಂಧೀ ವಾರದ ಸ್ವಾಮಿ ಮಂಗಳನಾಗಿರುವನು, ವಿಷ್ಣುವಾರದ ಸ್ವಾಮಿ ಬುಧನಾಗಿದ್ದಾನೆ, ಬ್ರಹ್ಮದೇವರ ವಾರದ ಅಧಿಪತಿ ಬೃಹಸ್ಪತಿಯಾಗಿದ್ದಾನೆ, ಇಂದ್ರವಾರದ ಸ್ವಾಮಿ ಶುಕ್ರ ಮತ್ತು ಯಮನ ವಾರದ ಸ್ವಾಮಿ ಶನೈಶ್ಚರನಾಗಿದ್ದಾನೆ. ತಮ್ಮ-ತಮ್ಮ ವಾರದಲ್ಲಿ ಮಾಡಿದ ಆಯಾ ದೇವತೆಗಳ ಪೂಜೆಯು ಆಯಾ ಫಲವನ್ನು ಕೊಡುವುದು.

ಸೂರ್ಯನು ಆರೋಗ್ಯದ ಮತ್ತು ಚಂದ್ರನು ಸಂಪತ್ತಿನ ದಾತೃಗಳಾಗಿದ್ದಾರೆ. ಮಂಗಳನು ವ್ಯಾಧಿಗಳನ್ನು ನಿವಾರಿಸುತ್ತಾನೆ. ಬುಧನು, ಪುಷ್ಟಿಯನ್ನು ಕೊಡುವನು. ಬೃಹಸ್ಪತಿಯು ಆಯುಸ್ಸನ್ನು ಹೆಚ್ಚಿಸುವನು. ಶುಕ್ರನು ಭೋಗಗಳನ್ನು ಕೊಡುವನು ಮತ್ತು ಶನೈಶ್ಚರನು ಮೃತ್ಯುವನ್ನು ನಿವಾರಿಸುವನು. ಇವು ಏಳು ವಾರಗಳ ಫಲಗಳನ್ನು ಕ್ರಮಶಃ ತಿಳಿಸಲಾಗಿದೆ. ಅವು ಆಯಾಯಾ ದೇವತೆಗಳ ಪ್ರೀತಿಯಿಂದ ಪ್ರಾಪ್ತವಾಗುತ್ತವೆ. ಇತರ ದೇವತೆಗಳ ಪೂಜೆಯ ಫಲವನ್ನು ಕೊಡುವವನು ಭಗವಾನ್ ಶಿವನೇ ಆಗಿರುವನು. ದೇವತೆಗಳ ಪ್ರಸನ್ನತೆಗಾಗಿ ಪೂಜೆಯ ಐದು ವಿಧಾನಗಳನ್ನು ಮಾಡಲಾಗಿದೆ. ಆಯಾ ದೇವತೆಗಳ ಮಂತ್ರದ ಜಪವು ಮೊದಲನೆಯ ಪ್ರಕಾರವಾಗಿದೆ. ಆ ದೇವತೆಗಾಗಿ ಹೋಮ ಮಾಡುವುದು ಎರಡನೆಯದು, ದಾನ ಮಾಡುವುದು ಮೂರನೆಯದು, ತಪಸ್ಸು ಮಾಡುವುದು ನಾಲ್ಕನೆಯದಾಗಿದೆ. ಯಾವುದೇ ವೇದಿಯಲ್ಲಿ, ಪ್ರತಿಮೆಯಲ್ಲಿ, ಅಗ್ನಿಯಲ್ಲಿ ಅಥವಾ ಬ್ರಾಹ್ಮಣನ ಶರೀರದಲ್ಲಿ ಆರಾಧ್ಯ ದೇವತೆಯನ್ನು ಭಾವಿಸಿ, ಹದಿನಾರು ಉಪಚಾರಗಳಿಂದ ಪೂಜೆ ಮಾಡುವುದು ಅಥವಾ ಆರಾಧಿಸುವುದು ಐದನೆಯ ಪ್ರಕಾರವಾಗಿದೆ.

ಇವುಗಳಲ್ಲಿ ಪೂಜೆಗಿಂತ ಉತ್ತರೋತ್ತರ ಅಧಾರವು ಶ್ರೇಷ್ಠವಾಗಿದೆ. ಹಿಂದಿನದು ಅಭಾವವಾದರೆ ಮುಂದಿನ ಆಧಾರವನ್ನು ಅವಲಂಭಿಸಬೇಕು. ಎರಡೂ ಕಣ್ಣುಗಳು ಹಾಗೂ ಮಸ್ತಕದ ರೋಗಗಳಲ್ಲಿ ಮತ್ತು ಕುಷ್ಠರೋಗದ ಶಾಂತಿಗಾಗಿ ಭಗವಾನ್ ಸೂರ್ಯನನ್ನು ಪೂಜಿಸಿ, ಬ್ರಾಹ್ಮಣರಿಗೆ ಭೋಜನಮಾಡಿಸಬೇಕು. ಅನಂತರ ಒಂದು ದಿನ, ಒಂದು ತಿಂಗಳು, ಒಂದು ವರ್ಷ ಅಥವಾ ಮೂರು ವರ್ಷಗಳವರೆಗೆ ಸತತವಾಗಿ ಹೀಗೆ ಸಾಧನೆಯನ್ನು ಮಾಡಬೇಕು. ಇದರಿಂದ ಪ್ರಬಲ ಪ್ರಾರಬ್ಧವು ನಿರ್ಮಾಣಗೊಂಡರೆ ರೋಗ ಮತ್ತು ವೃದ್ಧಾಪ್ಯ ಮುಂತಾದ ರೋಗಗಳ ನಾಶವಾಗಿ ಹೋಗುತ್ತದೆ. ಇಷ್ಟದೇವತೆಯ ನಾಮ-ಮಂತ್ರಗಳ ಜಪವೇ ಮೊದಲಾದ ಸಾಧನೆಗಳು ವಾರಗಳಿಗನುಸಾರವಾಗಿ ಫಲವನ್ನು ನೀಡುವುದು. ಭಾನುವಾರದಲ್ಲಿ ಸೂರ್ಯನಿಗಾಗಿ, ಇತರ ದೇವತೆಗಳಿಗಾಗಿ, ಬ್ರಾಹ್ಮಣರಿಗಾಗಿ ವಿಶಿಷ್ಟ ವಸ್ತುವನ್ನು ಅರ್ಪಿಸಬೇಕು. ಈ ಸಾಧನೆಯು ವಿಶಿಷ್ಟ ಫಲವನ್ನು ಕೊಡುವುದು. ಇದರಿಂದ ವಿಶೇಷವಾಗಿ ಪಾಪಗಳ ಶಾಂತಿಯಾಗುತ್ತದೆ. ಸೋಮವಾರ ವಿದ್ವಾಂಸನಾದ ಪುರುಷನು ಸಂಪತ್ತಿನ ಪ್ರಾಪ್ತಿಗಾಗಿ ಲಕ್ಷ್ಮಿಯೇ ಮೊದಲಾದವರನ್ನು ಪೂಜಿಸಬೇಕು ಹಾಗೂ ಸಪತ್ನೀಕ ಬ್ರಾಹ್ಮಣರಿಗೆ ಮೃಷ್ಟಾನ್ನ ಭೋಜನ ಮಾಡಿಸಬೇಕು. ಮಂಗಳವಾರದಂದು ರೋಗಗಳ ಶಾಂತಿಗಾಗಿ ಕಾಳಿಯೇ ಮೊದಲಾದವರನ್ನು ಪೂಜಿಸಬೇಕು ಮತ್ತು ಉದ್ದು, ಹೆಸರು, ತೊಗರಿ ಬೇಳೆಗಳಿಂದ ಕೂಡಿದ ಅನ್ನವನ್ನು ಬ್ರಾಹ್ಮಣರಿಗೆ ಭೋಜನ ಮಾಡಿಸಬೇಕು. ಬುಧವಾರದಂದು ಹೊಸರನ್ನದಿಂದ ವಿಷ್ಣುವನ್ನು ಪೂಜಿಸಬೇಕು. ಹೀಗೆ ಮಾಡುವುದರಿಂದ ಸದಾಕಾಲ ಪುತ್ರ, ಮಿತ್ರ, ಕಳತ್ರ ಮೊದಲಾದವುಗಳ ಪುಷ್ಟಿಯಾಗುತ್ತದೆ. ದೀರ್ಘಾಯುವಾಗಿರಬೇಕೆಂದು ಬಯಸುವವನು ಗುರುವಾರ ದೇವತೆಗಳ ಪುಷ್ಟಿಗಾಗಿ ವಸ್ತ್ರ, ಯಜ್ಞೋಪವೀತ ಹಾಗೂ ಘೃತಮಿಶ್ರಿತ ಪಾಯಸದಿಂದ ಯಜನ-ಪೂಜನ ಮಾಡಬೇಕು. ಭೋಗಗಳ ಪ್ರಾಪ್ತಿಗಾಗಿ

ಶುಕ್ರವಾರದಂದು ಏಕಾಗ್ರಚಿತ್ತನಾಗಿ ದೇವತೆಗಳನ್ನು ಪೂಜಿಸಬೇಕು. ಬ್ರಾಹ್ಮಣರ ತೃಪ್ತಿಗಾಗಿ ಷಡ್ರಸೋಪೇತವಾದ ಅನ್ನವನ್ನು ದಾನ ಮಾಡಬೇಕು. ಹೀಗೆಯೇ ಸ್ತ್ರೀಯರ ಪ್ರಸನ್ನತೆಗಾಗಿ ಅವರಿಗೆ ಸುಂದರ ವಸ್ತ್ರಾದಿಗಳನ್ನು ಕೊಡಬೇಕು. ಶನೈಶ್ಚರನು ಅಪಮೃತ್ಯುವನ್ನು ನಿವಾರಿಸುವನು. ಅಂದು ಬುದ್ಧಿವಂತನಾದವನು ರುದ್ರಾದಿಗಳನ್ನು ಪೂಜಿಸಬೇಕು. ತಿಲ ಹವನದಿಂದ, ತಿಲ ದಾನದಿಂದ ದೇವತೆಗಳನ್ನು ಸಂತುಷ್ಟಗೊಳಿಸಿ ಬ್ರಾಹ್ಮಣರಿಗೆ ತಿಲಮಿಶ್ರಿತ ಅನ್ನವನ್ನು ಭೋಜನ ಮಾಡಿಸಬೇಕು. ಈ ಪ್ರಕಾರವಾಗಿ ದೇವತೆಗಳ ಪೂಜೆ ಮಾಡುವವರು ಆರೋಗ್ಯಾದಿ ಫಲಕ್ಕೆ ಭಾಗಿಯಾಗುತ್ತಾರೆ.

ದೇವತೆಗಳ ನಿತ್ಯಪೂಜೆ, ವಿಶೇಷಪೂಜೆ, ಸ್ನಾನ, ದಾನ, ಜಪ, ಹೋಮ ಹಾಗೂ ಬ್ರಾಹ್ಮಣ ತರ್ಪಣ ಇವುಗಳಲ್ಲಿ ಮತ್ತು ಭಾನುವಾರಾದಿ ವಾರಗಳಲ್ಲಿ ವಿಶೇಷ ತಿಥಿ-ನಕ್ಷತ್ರಗಳ ಯೋಗ ಪ್ರಾಪ್ತವಾದಾಗ ಬೇರೆ-ಬೇರೆ ದೇವತೆಗಳ ಪೂಜೆಯಲ್ಲಿ ಸರ್ವಜ್ಞನಾದ ಜಗದೀಶ್ವರ ಭಗವಾನ್ ಶಿವನೇ ಆಯಾಯಾ ದೇವತೆಗಳ ರೂಪದಲ್ಲಿ ಪೂಜಿತನಾಗಿ ಎಲ್ಲ ಜನರಿಗೆ ಆರೋಗ್ಯಾದಿ ಫಲಗಳನ್ನು ಕರುಣಿಸುವನು. ದೇಶ, ಕಾಲ, ಪಾತ್ರ, ದ್ರವ್ಯ, ಶ್ರದ್ಧೆ ಹಾಗೂ ಲೋಕಗಳಿಗನುಸಾರವಾಗಿ ಅವುಗಳ ತಾರತಮ್ಯವನ್ನು ಗಮನದಲ್ಲಿಟ್ಟುಕೊಂಡು ಮಹಾದೇವನೇ ಆರಾಧಿಸುವ ಜನರಿಗೆ ಆರೋಗ್ಯಾದಿ ಫಲಗಳನ್ನು ಕೊಡುವನು. ಶುಭಮಂಗಲಿಕ ಕಾರ್ಯಗಳ ಪ್ರಾರಂಭದಲ್ಲಿ ಮತ್ತು ಅಶುಭ (ಅಂತ್ಯೇಷ್ಟಿ ಮೊದಲಾದ) ಕರ್ಮಗಳ ಅಂತ್ಯದಲ್ಲಿ ಹಾಗೂ ಜನ್ಮನಕ್ಷತ್ರವು ಬಂದಾಗ ಗೃಹಸ್ಥನಾದವನು ತನ್ನ ಮನೆಯಲ್ಲಿ ಆರೋಗ್ಯಾದಿ ಸಮೃದ್ಧಿಗಾಗಿ ಸೂರ್ಯನೇ ಮೊದಲಾದ ಗ್ರಹರನ್ನು ಪೂಜಿಸಬೇಕು. ಇದರಿಂದ ದೇವತೆಗಳ ಪೂಜನವು ಸಂಪೂರ್ಣ ಅಭೀಷ್ಟ ವಸ್ತುಗಳನ್ನು ಕೊಡುವುದೆಂದು ಸಿದ್ಧವಾಗುತ್ತದೆ. ಬ್ರಾಹ್ಮಣರು ದೇವತೆಗಳ ಯಜನ ಕರ್ಮವನ್ನು ವೈದಿಕ ಮಂತ್ರಗಳಿಂದ ನಡೆಸಬೇಕು. (ಇಲ್ಲಿ ಬ್ರಾಹ್ಮಣ ಶಬ್ದವು ಕ್ಷತ್ರಿಯ ಮತ್ತು ವೈಶ್ಯರೂ ಉಪಲಕ್ಷಣವಾಗಿದೆ). ಶೂದ್ರಾದಿ ಇತರರು ದೇವಯಜ್ಞವನ್ನು ತಾಂತ್ರಿಕ ವಿಧಿಯಿಂದ ಆಚರಿಸಬೇಕು. ಶುಭ ಫಲವನ್ನು ಇಚ್ಛಿಸುವ ಮನುಷ್ಯನು ಏಳೂ ದಿನಗಳಲ್ಲಿ ತಮ್ಮ ಶಕ್ತಿಗನುಸಾರವಾಗಿ ಸದಾಕಾಲ ದೇವಪೂಜನವನ್ನು ಮಾಡಬೇಕು. ನಿರ್ಧನನಾದವನು ತಪಸ್ಸಿನ ಮೂಲಕ ಮತ್ತು ಶ್ರೀಮಂತನಾದವನು ಧನದ ಮೂಲಕ ದೇವತೆಗಳ ಆರಾಧನೆಯನ್ನು ಮಾಡಬೇಕು. ಪದೇ-ಪದೇ ಶ್ರದ್ಧಾಪೂರ್ವಕ ಈ ರೀತಿಯಿಂದ ಧರ್ಮವನ್ನು ಅನುಷ್ಠಾನ ಮಾಡುವವನು. ಮತ್ತೆ-ಮತ್ತೆ ಪುಣ್ಯಲೋಕಗಳಲ್ಲಿ ನಾನಾ ಪ್ರಕಾರದ ಭೋಗಗಳನ್ನು ಅನುಭವಿಸಿ ಪುನಃ ಈ ಪೃಥಿವಿಯಲ್ಲಿ ಹುಟ್ಟುವನು. ಶ್ರೀಮಂತನಾದ ಮನುಷ್ಯನು ಸದಾಕಾಲ ಭೋಗಸಿದ್ಧಿಗಾಗಿ ದಾರಿಬದಿಯಲ್ಲಿ ವೃಕ್ಷಗಳನ್ನು ನೆಟ್ಟು ಜನರಿಗೆ ನೆರಳಿನ ವ್ಯವಸ್ಥೆ ಮಾಡಬೇಕು. ಜನರಿಗಾಗಿ ಬಾವಿ-ಕೆರೆಗಳನ್ನು ಕಟ್ಟಿಸಬೇಕು. ವೇದ-ಶಾಸ್ತ್ರಗಳ ಪ್ರತಿಷ್ಠೆಗಾಗಿ ಪಾಠಶಾಲೆಗಳನ್ನು ನಿರ್ಮಿಸಬೇಕು ಹಾಗೂ ಬೇರೆ-ಬೇರೆ ವಿಧದಿಂದಲೂ ಧರ್ಮವನ್ನು ಸಂಗ್ರಹಿಸಬೇಕು. ಶ್ರೀಮಂತರು ಇದೆಲ್ಲ ಕಾರ್ಯವನ್ನು ಸದಾಕಾಲ ಮಾಡುತ್ತಾ ಇರಬೇಕು. ಸಮಯಾನುಸಾರ ಪುಣ್ಯಕರ್ಮಗಳ ಫಲದಿಂದ ಅಂತಃಕರಣವು ಶುದ್ಧವಾದಾಗ ಜ್ಞಾನದ ಸಿದ್ಧಿಯುಂಟಾಗುತ್ತದೆ. ದ್ವಿಜರಿರಾ! ಈ ಅಧ್ಯಾಯವನ್ನು ಕೇಳುವವನು, ಓದುವವನು, ಶ್ರವಣದ ವ್ಯವಸ್ಥೆ ಮಾಡುವವನು ದೇವ ಯಜ್ಞದ ಫಲವನ್ನು ಪಡೆಯುವನು.

(ಅಧ್ಯಾಯ - ೧೪)

❑ ❑ ❑

ದೇಶ, ಕಾಲ, ಪಾತ್ರ ಮತ್ತು ದಾನ ಮುಂತಾದವುಗಳ ವಿಚಾರ

ಋಷಿಗಳು ಕೇಳಿದರು - ಸಮಸ್ತ ಪದಾರ್ಥಗಳ ಜ್ಞಾನಿಗಳಲ್ಲಿ ಶ್ರೇಷ್ಠರಾದ ಸೂತ ಪುರಾಣಿಕರೇ! ಈಗ ತಾವು ಕ್ರಮವಾಗಿ ದೇಶ, ಕಾಲ ಮುಂತಾದವುಗಳನ್ನು ವರ್ಣಿಸಿರಿ.

ಸೂತಪುರಾಣಿಕರು ಹೇಳುತ್ತಾರೆ- ಮಹರ್ಷಿಗಳೇ! ದೇವಯಜ್ಞ ಮುಂತಾದ ಕರ್ಮಗಳಲ್ಲಿ ತಮ್ಮ ಶುದ್ಧ ಮನೆಯೇ ಸಮಾನವಾದ ಫಲವನ್ನು ಕೊಡುವುದು. ಅರ್ಥಾತ್ - ತಮ್ಮ ಮನೆಯಲ್ಲಿ ಮಾಡಿದ ದೇವಯಜ್ಞ ಮೊದಲಾದವುಗಳು ಶಾಸ್ತ್ರೋಕ್ತ ಫಲವನ್ನು ಸಮಾನವಾಗಿ ಕೊಡುವುದು. ಗೋಶಾಲೆಯ ಸ್ಥಾನವು ಮನೆಗಿಂದ ಹತ್ತು ಪಟ್ಟು ಫಲವನ್ನು ಕೊಡುವುದು. ಜಲಾಶಯದ ತಟವು ಅದಕ್ಕಿಂತಲೂ ಹತ್ತುಪಟ್ಟು ಮಹತ್ವದ್ದಾಗಿದೆ. ಬಿಲ್ವಪತ್ರೆ, ತುಳಸೀ, ಅಶ್ವತ್ಥ ಇವುಗಳ ಸನಿಹದ ಸ್ಥಳವು ಜಲಾಶಯದ ತಟಕ್ಕಿಂತಲೂ ಹತ್ತು ಪಟ್ಟು ಫಲವನ್ನು ಕೊಡುವುದು. ದೇವಾಲಯವು ಅದಕ್ಕಿಂತಲೂ ಹತ್ತುಪಟ್ಟು ಮಹತ್ವದ

ಸ್ಥಾನವೆಂದು ತಿಳಿಯಬೇಕು. ದೇವಾಲಯಕ್ಕಿಂತಲೂ ಹತ್ತುಪಟ್ಟು ಮಹತ್ವವು ತೀರ್ಥಕ್ಷೇತ್ರದ ಭೂಮಿಯಾಗಿದೆ. ಅದಕ್ಕಿಂತಲೂ ಹತ್ತುಪಟ್ಟು ಶ್ರೇಷ್ಠವು ನದಿಯ ತೀರವಾಗಿದೆ. ಅದಕ್ಕಿಂತಲೂ ಹತ್ತುಪಟ್ಟು ತೀರ್ಥನದಿಯ ತೀರ ಉತ್ಕೃಷ್ಟವಾಗಿದೆ. ಅದಕ್ಕಿಂತಲೂ ಹತ್ತು ಪಟ್ಟು ಮಹತ್ವ ಸಪ್ತಗಂಗೆ ಎಂಬ ನದಿಗಳ ತೀರ್ಥವಾಗಿದೆ. ಗಂಗೆ, ಗೋದಾವರಿ, ಕಾವೇರೀ, ತಾಮ್ರಪರ್ಣಿ, ಸಿಂಧು, ಸರಯೂ ಮತ್ತು ನರ್ಮದೆ ಈ ಏಳು ನದಿಗಳನ್ನು ಸಪ್ತಗಂಗೆ ಎಂದು ಹೇಳುವರು. ಸಮುದ್ರದ ತೀರವು ಇದರಿಂದಲೂ ಹತ್ತು ಪಟ್ಟು ಪವಿತ್ರವೆಂದು ಹೇಳಲಾಗಿದೆ. ಪರ್ವತ ಶಿಖರವನ್ನು ಸಮುದ್ರ ತೀರಕ್ಕಿಂತಲೂ ಹತ್ತು ಪಟ್ಟು ಪಾವನವಾಗಿದೆ. ಎಲ್ಲಕ್ಕಿಂತ ಮಹತ್ವದ ಸ್ಥಾನವು – ಎಲ್ಲಿ ಮನಸ್ಸು ತೊಡಗುವುದೋ ಅದೇ ಎಂದು ತಿಳಿಯಬೇಕು.

ಇಲ್ಲಿಯವರೆಗೆ ದೇಶದ ವರ್ಣನೆ ಆಯಿತು. ಈಗ ಕಾಲದ ತಾರತಮ್ಯವನ್ನು ಹೇಳಲಾಗುವುದು. ಕೃತಯುಗದಲ್ಲಿ ಯಜ್ಞ, ದಾನ ಇತ್ಯಾದಿ ಕರ್ಮಗಳು ಪೂರ್ಣಫಲವನ್ನು ನೀಡುವದು. ಎಂದು ತಿಳಿಯಬೇಕು. ತ್ರೇತಾಯುಗದಲ್ಲಿ ಅದರ ನಾಲ್ಕನೆಯ ಮೂರು ಫಲಸಿಗುತ್ತದೆ. ದ್ವಾಪರಯುಗದಲ್ಲಿ ಅರ್ಧವೇ ಫಲ ದೊರೆಯುತ್ತದೆ. ಕಲಿಯುಗದಲ್ಲಿ ಕಾಲುಭಾಗ ಮಾತ್ರ ಫಲದ ಪ್ರಾಪ್ತಿಯನ್ನು ತಿಳಿಯಬೇಕು. ಅರ್ಧ ಕಲಿಯುಗವು ಕಳೆದು ಹೋದಾಗ ಆ ಕಾಲು ಭಾಗದಲ್ಲಿಯೂ ಕಾಲುಭಾಗ ಕಡಿಮೆಯಾಗುತ್ತದೆ. ಶುದ್ಧಾಂತಃಕರಣವುಳ್ಳ ಪುರುಷನಿಗೆ ಶುದ್ಧ ಹಾಗೂ ಪವಿತ್ರ ದಿನವು ಸಮಫಲವನ್ನು ಕೊಡುವುದು.

ವಿದ್ವಾಂಸರಾದ ಬ್ರಾಹ್ಮಣರೇ! ಸೂರ್ಯಸಂಕ್ರಾತಿಯ ದಿನ ಮಾಡಿರುವ ಸತ್ಕರ್ಮವು ಹಿಂದೆ ಹೇಳಿದ ಶುದ್ಧ ದಿನಕ್ಕಿಂತ ಹತ್ತುಪಟ್ಟು ಫಲವನ್ನು ಕೊಡುವುದು ಎಂದು ತಿಳಿಯಬೇಕು. ಇದಕ್ಕಿಂತಲೂ ಹತ್ತು ಪಟ್ಟು ಮಹತ್ತ್ವ 'ವಿಷುವ'* ಎಂಬ ಯೋಗದಲ್ಲಿ ಮಾಡಿದ ಕರ್ಮದಾಗಿದೆ. ದಕ್ಷಿಣಾಯನ ಪ್ರಾರಂಭವಾಗುವ ದಿನ ಅರ್ಥಾತ್ ಕರ್ಕಾಟಕ ಸಂಕ್ರಾಂತಿಯಲ್ಲಿ ಮಾಡಿದ ಪುಣ್ಯಕರ್ಮದ ಮಹತ್ವವು ವಿಷುವ ದಿನಕ್ಕಿಂತಲೂ ಹತ್ತು ಪಟ್ಟು ಆಗಿದೆ. ಅದಕ್ಕಿಂತಲೂ ಹತ್ತು ಪಟ್ಟು ಮಕರ ಸಂಕ್ರಾತಿಯ ದಿನದಲ್ಲಿ ಮತ್ತು ಅದಕ್ಕಿಂತಲೂ ಹತ್ತು ಪಟ್ಟು ಚಂದ್ರಗ್ರಹಣದಲ್ಲಿ ಮಾಡಿದ ಪುಣ್ಯದ ಮಹತ್ವವಾಗಿದೆ. ಸೂರ್ಯಗ್ರಹಣದ ಸಮಯ ಎಲ್ಲಕ್ಕಿಂತ ಉತ್ತಮವಾಗಿದೆ. ಅದರಲ್ಲಿ ಮಾಡಿದ ಪುಣ್ಯಕರ್ಮದ ಫಲವು ಚಂದ್ರಗ್ರಹಣಕ್ಕಿಂತಲೂ ಹೆಚ್ಚಾಗಿ ಮತ್ತು ಪೂರ್ಣಪ್ರಮಾಣದಲ್ಲಿ ಉಂಟಾಗುತ್ತದೆ; ಎಂಬ ಮಾತನ್ನು ಜ್ಞಾನಿಗಳು ತಿಳಿಯುತ್ತಾರೆ. ಜಗದ್‌ರೂಪೀ ಸೂರ್ಯನೊಂದಿಗೆ ರಾಹುರೂಪೀ ವಿಷದ ಸಂಯೋಗವಾಗುತ್ತದೆ. ಅದಕ್ಕಾಗಿ ಸೂರ್ಯಗ್ರಹಣದ ಸಮಯವು ರೋಗವನ್ನು ಉಂಟುಮಾಡುವುದಾಗಿದೆ. ಆದ್ದರಿಂದ ಆ ವಿಷದ ಶಾಂತಿಗಾಗಿ ಆ ಸಮಯದಲ್ಲಿ ಸ್ನಾನ, ದಾನ, ಜಪ ಇವುಗಳನ್ನು ಮಾಡಬೇಕು. ಆ ಕಾಲವು ವಿಷದ ಶಾಂತಿಗಾಗಿ ಉಪಯೋಗವಾದ್ದರಿಂದ ಪುಣ್ಯಪ್ರದವೆಂದು ತಿಳಿಯಲಾಗಿದೆ. ಜನ್ಮ ನಕ್ಷತ್ರದ ದಿನ ಹಾಗೂ ವ್ರತ ಸಂಪೂರ್ಣದ ದಿನದ ಸಮಯ ಸೂರ್ಯಗ್ರಹಣದಂತೆ ಸಮಾನವೆಂದು ತಿಳಿಯಲಾಗಿದೆ. ಆದರೆ ಮಹಾಪುರುಷರ ಸಂಗದಲ್ಲಿರುವ ಕಾಲವನ್ನು ಕೋಟಿ ಸೂರ್ಯಗ್ರಹಣಕ್ಕೆ ಸಮಾನ ಪಾವನವಾಗಿದೆ. ಎಂದು ಜ್ಞಾನಿಗಳು ತಿಳಿಯುತ್ತಾರೆ-ಒಪ್ಪುತ್ತಾರೆ.

ತಪೋನಿಷ್ಠ ಯೋಗಿ ಮತ್ತು ಜ್ಞಾನನಿಷ್ಠ ಯತಿ ಇವರು ಪೂಜೆಗೆ ಪಾತ್ರರಾಗಿದ್ದಾರೆ; ಏಕೆಂದರೆ, ಇವರು ಪಾಪಗಳ ನಾಶಕ್ಕೆ ಕಾರಣರಾಗಿದ್ದಾರೆ. ಇಪ್ಪತ್ತನಾಲ್ಕು ಲಕ್ಷ ಗಾಯತ್ರೀ ಜಪ ಮಾಡಿರುವ ಬ್ರಾಹ್ಮಣನೂ ಕೂಡ ಪೂಜೆಗೆ ಉತ್ತಮ ಪಾತ್ರನಾಗಿದ್ದಾನೆ. ಅವನು ಸಮಸ್ತ ಫಲಗಳನ್ನು ಹಾಗೂ ಭೋಗಗಳನ್ನು ಕೊಡುವುದಕ್ಕೆ ಸಮರ್ಥನಾಗಿರುವನು. ಯಾರು ಪತನದಿಂದ ಎತ್ತುವನೋ, ಅರ್ಥಾತ್ ನರಕದಲ್ಲಿ ಬೀಳುವುದರಿಂದ ಕಾಪಾಡುವನೋ, ಅವನನ್ನು ಇದೇ ಗುಣದಿಂದಾಗಿ ಶಾಸ್ತ್ರಗಳಲ್ಲಿ 'ಪಾತ್ರ' ಶಬ್ದದ ಪ್ರಯೋಗವಾಗಿದೆ. ಅವನು ದಾತೃವನ್ನು ಪಾತಕದಿಂದ ತ್ರಾಣ-ಉದ್ಧರಿಸುವುದರಿಂದ 'ಪಾತ್ರ'ಈ ವೆಂದು ಹೇಳಲಾಗಿದೆ. ಗಾಯತ್ರಿಯು ತನ್ನನ್ನು ಹಾಡಿದವರನ್ನು ಪತನದಿಂದ ಉದ್ಧರಿಸುತ್ತಾಳೆ. ಆದಕ್ಕಾಗಿ ಅದು 'ಗಾಯತ್ರೀ' ಎಂದು ಹೇಳಲಾಗಿದೆ.

ಈ ಲೋಕದಲ್ಲಿ ಧನಹೀನನಾದವನು ಬೇರೆಯವರಿಗೆ

---

* ಜ್ಯೋತಿಷ್ಯದ ಅನುಸಾರವಾಗಿ ಸೂರ್ಯನು ವಿಷುವ ರೇಖೆಯಲ್ಲಿ ಬಂದಾಗ ಆ ದಿನದಲ್ಲಿ ಹಗಲು ರಾತ್ರಿಗಳು ಸಮಾನವಾಗಿರುತ್ತವೆ. ಇದು ವರ್ಷದಲ್ಲಿ ಎರಡುಬಾರಿ ಬರುತ್ತದೆ. ಒಂದು ಸೌರ ಚೈತ್ರದ ನವಮಿ ತಿಥಿಗೆ ಅಥವಾ ತಾರೀಖು ಮಾರ್ಚ ೨೧. ಇನ್ನೊಂದು ಸೌರ ಆಶ್ವಿನ ನವಮಿ ತಿಥಿ, ಅಥವಾ ತಾರೀಖು ೨೨ ಸಪ್ಟೆಂಬರ.

ಈ ಪತನಾತ್‌ತ್ರಾಯತ ಇತಿ ಪಾತ್ರಂ ಶಾಸ್ತ್ರೇ ಪ್ರಯುಜ್ಯತೇ । ದಾತುಶ್ಚ ಪಾತಕಾತ್ ತ್ರಾಣಾತ್ಪಾತ್ರಮಿತ್ಯಭಿಧೀಯತೇ ॥
(ಶಿವ-ಪು-ವಿದ್ಯೇ- ೧೫/೧೫)

ಧನವನ್ನು ಕೊಡಲಾರನು, ಧನವಂತನೇ ಇತರರಿಗೆ ಧನವನ್ನು ಕೊಡಬಲ್ಲನು; ಹಾಗೆಯೇ ಸ್ವಯಂ ಶುದ್ಧನೂ, ಪವಿತ್ರಾತ್ಮನೂ, ಆದವನೇ ಬೇರೆ ಮನುಷ್ಯರನ್ನು ಉದ್ಧಾರ ಮಾಡಬಲ್ಲನು. ಗಾಯತ್ರಿಯ ಜಪವನ್ನು ಮಾಡಿ ಶುದ್ಧನಾದವನೇ ಶುದ್ಧ ಬ್ರಾಹ್ಮಣನೆಂದು ಹೇಳಿಸಿಕೊಳ್ಳುವನು. ಅದಕ್ಕಾಗಿ ದಾನ, ಜಪ, ಹೋಮ ಮತ್ತು ಪೂಜೆ - ಎಲ್ಲ ಕರ್ಮಗಳಿಗೆ ಅವನೇ ಶುದ್ಧ ಪಾತ್ರನಾಗಿರುವನು. ಇಂತಹ ಬ್ರಾಹ್ಮಣನೇ ದಾನ ಹಾಗೂ ರಕ್ಷಣೆ ಮಾಡುವ ಪಾತ್ರತೆಯನ್ನು ಹೊಂದಿರುವನು. ಸ್ತ್ರೀ ಇರಲಿ, ಪುರುಷನಿರಲಿ ಹಸಿದವರೇ ಅನ್ನ ದಾನಕ್ಕೆ ಯೋಗ್ಯ ಪಾತ್ರರಾಗಿದ್ದಾರೆ. ಯಾರಿಗೆ ಯಾವ ವಸ್ತುವಿನ ಇಚ್ಛೆಯಿದೆಯೋ, ಅವನು ಅದನ್ನು ಕೇಳದೆಯೇ ಅವನಿಗೆ ದಾನ ಮಾಡಿದರೆ ದಾನ ಮಾಡಿದವನಿಗೆ ಆ ದಾನದ ಪೂರ್ಣಫಲ ಪ್ರಾಪ್ತವಾಗುತ್ತದೆ ಎಂದು ಮಹರ್ಷಿಗಳ ಮತವಾಗಿದೆ. ಬೇಡಿದ ಬಳಿಕ ಕೊಟ್ಟಿರುವ ದಾನವು ಅರ್ಧಫಲವನ್ನೇ ಕೊಡುವುದು. ತನ್ನ ಸೇವಕರಿಗೆ ಮಾಡಿದ ದಾನದಿಂದ ಕಾಲುಭಾಗ ಫಲ ದೊರೆಯುತ್ತದೆ. ವಿಪ್ರರಿರಾ ! ಜಾತಿಮಾತ್ರದಿಂದ ಬ್ರಾಹ್ಮಣನಾಗಿದ್ದು, ದೀನ ವೃತ್ತಿಯಿಂದ ಜೀವನ ನಡೆಸುವವನಿಗೆ ಕೊಟ್ಟಿರುವ ಧನದ ದಾನವು, ದಾನಿಗೆ ಈ ಭೂತಲದಲ್ಲಿ ಹತ್ತು ವರ್ಷಗಳವರೆಗೆ ಭೋಗವನ್ನು ಕರುಣಿಸುವುದು. ಅದೇ ದಾನವನ್ನು ವೇದವೇತ್ತರಾದ ಬ್ರಾಹ್ಮಣರಿಗೆ ಕೊಟ್ಟರೆ, ಅದು ಸ್ವರ್ಗಲೋಕದಲ್ಲಿ ದೇವತೆಗಳ ಮಾನದಿಂದ ಹತ್ತು ವರ್ಷಗಳವರೆಗೆ ದಿವ್ಯ ಭೋಗಗಳನ್ನು ಕೊಡುವುದು. ಶಿಲ ಮತ್ತು ಉಂಛ ವೃತ್ತಿಯಿಂದ* ತಂದಿರುವ ಮತ್ತು ಗುರುದಕ್ಷಿಣೆಯಿಂದ ದೊರೆತ ಅನ್ನ-ಧನವು ಶುದ್ಧ ದ್ರವ್ಯವೆಂದು ಹೇಳಲಾಗಿದೆ. ಅದರ ದಾನವು ದಾನಿಗೆ ಪೂರ್ಣಫಲವನ್ನು ನೀಡುವುದೆಂದು ಹೇಳಲಾಗಿದೆ. ಕ್ಷತ್ರಿಯರು ಪರಾಕ್ರಮದಿಂದ ಗಳಿಸಿರುವ, ವೈಶ್ಯರು ವ್ಯಾಪಾರದಿಂದ ಸಂಪಾದಿಸಿದ ಮತ್ತು ಶೂದ್ರರು ಸೇವಾವೃತ್ತಿಯಿಂದ ಕೂಡಿಟ್ಟ ಧನವು ಉತ್ತಮ ದ್ರವ್ಯವೆಂದು ಹೇಳಲಾಗಿದೆ. ಧರ್ಮದ ಇಚ್ಛೆಯುಳ್ಳ ಸ್ತ್ರೀಯರಿಗಾಗಿ ತಂದೆಯಿಂದ ಅಥವಾ ಪತಿಯಿಂದ ದೊರೆತ ಧನವು ಉತ್ತಮ ದ್ರವ್ಯವಾಗಿದೆ.

ಗೋವು, ಭೂಮಿ, ತಿಲ, ಸುವರ್ಣ, ಘೃತ, ವಸ್ತ್ರ, ಧಾನ್ಯ, ಗುಡ, ರಜತ, ಲವಣ, ಕುಷ್ಮಾಂಡ ಮತ್ತು ಕನ್ಯೆ – ಈ ಹನ್ನೆರಡು ವಸ್ತುಗಳನ್ನು ಚೈತ್ರಾದಿ ಹನ್ನೆರಡು ತಿಂಗಳುಗಳಲ್ಲಿ ಕ್ರಮವಾಗಿ ದಾನ ಮಾಡಬೇಕು. ಇವುಗಳಲ್ಲಿ ಗೋದಾನದಿಂದ ಕಾಯಿಕ, ವಾಚಿಕ, ಮಾನಸಿಕ ಪಾಪಗಳ ನಿವಾರಣೆ ಮತ್ತು ಕಾಯಿಕವೇ ಮೊದಲಾದ ಪುಣ್ಯಕರ್ಮಗಳ ಪುಷ್ಟಿಯಾಗುತ್ತದೆ. ಬ್ರಾಹ್ಮಣರಿರಾ ! ಭೂದಾನವು ಇಹ-ಪರಲೋಕಗಳಲ್ಲಿ ಪ್ರತಿಷ್ಠೆ (ಆಶ್ರಯ)ಯನ್ನು ದೊರಕಿಸಿ ಕೊಡುವುದು. ತಿಲದಾನವು ಬಲವರ್ಧಕ ಹಾಗೂ ಮೃತ್ಯುವಿನ ನಿವಾರಣೆ ಮಾಡುತ್ತದೆ. ಸುವರ್ಣದಾನವು ಜಠರಾಗ್ನಿಯನ್ನು ಹೆಚ್ಚಿಸುವುದು ಮತ್ತು ವೀರ್ಯದಾಯಕವಾಗಿದೆ. ತುಪ್ಪದ ದಾನವು ಪುಷ್ಟಿಕಾರಕವಾಗುತ್ತದೆ. ವಸ್ತ್ರದಾನವು ಆಯುಸ್ಸನ್ನು ವೃದ್ಧಿಪಡಿಸುತ್ತದೆ. ಎಂದು ತಿಳಿಯಬೇಕು. ಧಾನ್ಯದಾನವು ಅನ್ನ-ಧನದ ಸಮೃದ್ಧಿಗೆ ಕಾರಣವಾಗಿದೆ. ಬೆಲ್ಲದ ದಾನವು ಮೃಷ್ಟಾನ್ನವನ್ನು ಕೊಡುವುದು. ಬೆಳ್ಳಿಯ ದಾನದಿಂದ ವೀರ್ಯವೃದ್ಧಿಯಾಗುವುದು. ಲವಣದ (ಉಪ್ಪು) ದಾನವು ಷಡ್ರಸ ಭೋಜನವನ್ನು ನೀಡುವುದು. ಎಲ್ಲ ರೀತಿಯ ದಾನವು ಸಮಸ್ತ ಸಮೃದ್ಧಿಯ ಸಿದ್ಧಿಗಾಗಿ ಇರುತ್ತದೆ. ಕುಷ್ಮಾಂಡ ದಾನವನ್ನು ಪುಷ್ಟಿದಾಯವೆಂದು ಜ್ಞಾನಿಗಳು ತಿಳಿಸುತ್ತಾರೆ. ಕನ್ಯಾದಾನವು ಜೀವನವಿಡೀ ಭೋಗಗಳನ್ನು ಕೊಡುವುದು, ಎಂದು ಹೇಳಲಾಗಿದೆ. ಬ್ರಾಹ್ಮಣರೇ ! ಅದು ಲೋಕ-ಪರ ಲೋಕಗಳಲ್ಲಿಯೂ ಸಂಪೂರ್ಣ ಭೋಗಗಳನ್ನು ಕೊಡುವಂತಹುದಾಗಿದೆ.

ವಿದ್ವಾನ್ ಪುರುಷನು ಯಾವ ವಸ್ತುಗಳಿಂದ ಕಿವಿಯೇ ಮುಂತಾದ ಇಂದ್ರಿಯಗಳಿಗೆ ತೃಪ್ತಿ ಉಂಟಾಗುವುದೋ ಅದನ್ನು ದಾನಮಾಡಬೇಕು. ಶ್ರೋತ್ರಾದಿ ಹತ್ತು ಇಂದ್ರಿಯಗಳ ಶಬ್ದಾದಿ ಹತ್ತು ವಿಷಯಗಳನ್ನು ದಾನ ಮಾಡಿದರೆ, ಅದರಿಂದ ಭೋಗಗಳ ಪ್ರಾಪ್ತಿಯಾಗುತ್ತದೆ ಹಾಗೂ ದಿಕ್ಕೆಯೇ ಮುಂತಾದ ಇಂದ್ರಿಯ* ದೇವತೆಗಳು ಸಂತುಷ್ಟಗೊಳ್ಳುವುವು. ವೇದ ಮತ್ತು ಶಾಸ್ತ್ರವನ್ನು ಗುರುಮುಖದಿಂದ ಗ್ರಹಿಸಿಕೊಂಡು, ಗುರು ಉಪದೇಶದಿಂದ ಅಥವಾ ಸ್ವಯಂ ಬೋಧವನ್ನು ಪಡೆದು ಬಳಿಕ 'ಕರ್ಮಗಳ ಫಲವು ಅವಶ್ಯವಾಗಿ

* ಕೋಶಕಾರರು ಹೇಳುತ್ತಾರೆ- 'ಉಂಛಃ ಕಣಶ ಆದಾನಂ ಕಣೆಶಾದ್ಯರ್ಜನಂ ಶಿಲಮ್।' ಆರ್ಥಾತ್ - ಹೊಲವು ಕಟಾವಾದ ಬಳಿಕ ಅಥವಾ ಮಂಡಿಯು ಮುಚ್ಚಿದ ಬಳಿಕ ಅಲ್ಲಿ ಚೆಲ್ಲಿದ ಒಂದೊಂದು ಕಾಳನ್ನು ಹೆಕ್ಕಿ ತಂದು ಅದರಿಂದ ಜೀವನ ನಡೆಸುವುದು ಉಂಛ ವೃತ್ತಿಯಾಗಿದೆ. ಹೊಲವು ಕಟಾವಾದ ಬಳಿಕ ಅಲ್ಲಿ ಬಿದ್ದಿರುವ ಗೋದಿ-ಬತ್ತದ ತೆನೆಗಳನ್ನು ಹೆಕ್ಕಿತಂದು, ಅದರಿಂದ ಜೀವನ ನಡೆಸುವುದನ್ನು ಶಿಲವೃತ್ತಿ ಎಂದು ಹೇಳುತ್ತಾರೆ.

* ಶ್ರವಣೇಂದ್ರಿಯದ ದೇವತೆ ದಿಕ್ಕುಗಳು, ಕಣ್ಣುಗಳ ಸೂರ್ಯ, ಮೂಗಿನ ಅಶ್ವಿನೀ ಕುಮಾರರು, ನಾಲಿಗೆಗೆ ವರುಣ, ತ್ವಗೀಂದ್ರಿಯಕ್ಕೆ ವಾಯು, ವಾಕ್ ಇಂದ್ರಿಯಕ್ಕೆ ಅಗ್ನಿ, ಲಿಂಗಕ್ಕೆ ಪ್ರಜಾಪತಿ, ಗುದಕ್ಕೆ ಮಿತ್ರ, ಕೈಗಳಿಗೆ ಇಂದ್ರ ಮತ್ತು ಕಾಲುಗಳ ದೇವತೆ ವಿಷ್ಣು ಆಗಿದ್ದಾನೆ.

ದೊರೆಯುವುದು' ಎಂಬ ನಿಶ್ಚಯವಾಗುವುದನ್ನೇ ಉಚ್ಚಕೋಟಿಯ 'ಆಸ್ತಿಕತೆ'ಯಾಗಿದೆ. ಬಂಧು- ಬಾಂಧವರ, ಇಲ್ಲವೇ ರಾಜನ ಭಯದಿಂದ ಉಂಟಾಗುವ ಆಸ್ತಿಕತೆಯ ಬುದ್ಧಿ ಅಥವಾ ಶ್ರದ್ಧೆಯು ಕನಿಷ್ಠ ಶ್ರೇಣಿಯ 'ಆಸ್ತಿಕತೆ'ಯಾಗಿದೆ. ಸರ್ವಥಾ ದರಿದ್ರನಾದ್ದರಿಂದ ಯಾರ ಬಳಿಯಲ್ಲಿ ಎಲ್ಲ ವಸ್ತುಗಳ ಅಭಾವವಿದೆಯೋ, ಅವನು ವಾಣಿ ಅಥವಾ ಕರ್ಮ(ಶರೀರ) ಇವುಗಳಿಂದ ಪೂಜೆ ಮಾಡಬೇಕು. ಮಂತ್ರ, ಸ್ತೋತ್ರ, ಜಪ - ಇವುಗಳನ್ನು ವಾಣಿಯ ಮೂಲಕ ಮಾಡಿದ ಯಜನವೆಂದು ತಿಳಿಯಬೇಕು. ತೀರ್ಥಯಾತ್ರೆ ಹಾಗೂ ವ್ರತಾದಿಗಳನ್ನು ವಿದ್ವಾಂಸರು ಶಾರೀರಿಕ ಯಜನವೆಂದು ಹೇಳುತ್ತಾರೆ. ಯಾವುದೇ ಉಪಾಯದಿಂದ ಸ್ವಲ್ಪವಿರಲಿ, ಹೆಚ್ಚು ಇರಲಿ ದೇವತಾರ್ಪಣ ಬುದ್ಧಿಯಿಂದ ಮಾಡಿದ ಅಥವಾ ಕೊಟ್ಟಿರುವ ದಾನ ಅಥವಾ ಸತ್ಕರ್ಮಗಳು ಭೋಗಗಳನ್ನು ನೀಡುವುದರಲ್ಲಿ ಸಮರ್ಥವಾಗಿವೆ. ತಪಸ್ಸು ಮತ್ತು ದಾನ ಇವೆರಡೂ ಕರ್ಮಗಳನ್ನು ಮನುಷ್ಯನು ಸದಾಕಾಲ ಮಾಡಬೇಕು. ಯಾರು ವರ್ಣ ಮತ್ತು ಗುಣಗಳಿಂದ ಸುಶೋಭಿತ ರಾಗಿರುವರೋ, ಅವರಿಗೆ ಗೃಹವನ್ನು ದಾನಮಾಡಬೇಕು. ಬುದ್ಧಿವಂತನು ದೇವತೆಗಳ ತೃಪ್ತಿಗಾಗಿ ಏನನ್ನು ದಾನಮಾಡುವನೋ, ಅದು ಅತಿಶಯವಾದ ಮತ್ತು ಎಲ್ಲ ರೀತಿಯ ಭೋಗಗಳನ್ನು ಕೊಡುವುದು. ಆ ದಾನದಿಂದ ವಿದ್ವಾನ್ ಪುರುಷನು ಇಹಲೋಕ ಮತ್ತು ಪರಲೋಕದಲ್ಲಿ ಉತ್ತಮ ಜನ್ಮ ಮತ್ತು ಸದಾಕಾಲ ಸುಲಭಸಾಧ್ಯವಾದ ಭೋಗಗಳನ್ನು ಪಡೆಯುತ್ತಾನೆ. ಈಶ್ವರಾರ್ಪಣ ಬುದ್ಧಿಯಿಂದ ಯಜ್ಞ-ದಾನಾದಿ ಕರ್ಮಗಳನ್ನು ಆಚರಿಸಿ ಮನುಷ್ಯನು ಮೋಕ್ಷಫಲಕ್ಕೆ ಭಾಗಿಯಾಗುತ್ತಾನೆ.

(ಅಧ್ಯಾಯ -೧೫)

❑ ❑ ❑

ಪೃಥಿವೀ ಇತ್ಯಾದಿಗಳಿಂದ ನಿರ್ಮಿತ ದೇವಪ್ರತಿಮೆಗಳ ಪೂಜೆಯ ವಿಧಿ ಹಾಗೂ ಲಿಂಗದ ವೈಜ್ಞಾನಿಕ ಸ್ವರೂಪದ ವಿವೇಚನೆ

ಋಷಿಗಳು ಕೇಳಿದರು-ಸಾಧುಶಿರೋಮಣಿಗಳೇ ! ಈಗ ತಾವು ಸಮಸ್ತ ಅಭೀಷ್ಟ ವಸ್ತುಗಳು ಪ್ರಾಪ್ತಿಯಾಗುವಂತಹ ಪಾರ್ಥಿವ ಪ್ರತಿಮೆಯ ಪೂಜೆಯ ವಿಧಾನವನ್ನು ಹೇಳಿರಿ.

ಸೂತಪುರಾಣಿಕರು ಹೇಳುತ್ತಾರೆ - ಮಹರ್ಷಿಗಳೇ ! ನೀವೆಲ್ಲರೂ ಬಹಳ ಒಳ್ಳೆಯ ಮಾತನ್ನು ಕೇಳಿರುವಿರಿ. ಪಾರ್ಥಿವ ಪ್ರತಿಮೆಯ ಪೂಜೆಯು ಸದಾ ಸಂಪೂರ್ಣ ಮನೋರಥಗಳನ್ನು ಕೊಡುವುದು ಹಾಗೂ ತತ್ಕಾಲ ದುಃಖಿಗಳನ್ನು ನಿವಾರಿಸುವುದು. ನಾನು ಅದನ್ನು ವರ್ಣಿಸುವೆನು, ನೀವು ಅದನ್ನು ಗಮನವಿಟ್ಟು ಕೇಳಿರಿ. ಪೃಥಿವಿಯೇ ಮುಂತಾದವುಗಳಿಂದ ನಿರ್ಮಿಸಿದ ದೇವ ಪ್ರತಿಮೆಯ ಪೂಜೆಯು ಈ ಭೂಲೋಕದಲ್ಲಿ ಅಭೀಷ್ಟದಾಯಕವೆಂದು ತಿಳಿಯಲಾಗಿದೆ. ಇದರಲ್ಲಿ ಪುರುಷರಿಗೆ ಮತ್ತು ಸ್ತ್ರೀಯರಿಗೂ ನಿಶ್ಚಯವಾಗಿ ಅಧಿಕಾರವಿದೆ. ನದಿ, ಹಳ್ಳ, ಕೆರೆ, - ಇವುಗಳಲ್ಲಿ ಪ್ರವೇಶಿಸಿ ನೀರಿನ ತಳದ ಮಣ್ಣನ್ನು ತರಬೇಕು. ಮತ್ತೆ ಅದನ್ನು ನುಣ್ಣಗೆ ಗಾಳಿಸಿ, ಶುದ್ಧ ಮಂಟಪದಲ್ಲಿ ಇಟ್ಟು ಕೈಯಿಂದ ಅದರ ಪ್ರತಿಮೆಯನ್ನು ನಿರ್ಮಿಸಿ ಹಾಲಿನಿಂದ ಅದನ್ನು ಸಂಸ್ಕರಿಸಬೇಕು. ಆ ಪ್ರತಿಮೆಯಲ್ಲಿ ಅಂಗ-ಪ್ರತ್ಯಂಗಗಳು ಚೆನ್ನಾಗಿ ಪ್ರಕಟವಾಗಿರಬೇಕು. ಹಾಗೂ ಅದು ಎಲ್ಲ ವಿಧದ ಅಸ್ತ್ರ-ಶಸ್ತ್ರಗಳಿಂದ ಸಂಪನ್ನವಾಗಿರಬೇಕು. ಅನಂತರ ಅದನ್ನು ಪದ್ಮಾಸನದಲ್ಲಿ ಸ್ಥಾಪಿಸಿ, ಆದರದಿಂದ ಅದನ್ನು ಪೂಜಿಸಬೇಕು. ಗಣಪತಿ, ಸೂರ್ಯ, ವಿಷ್ಣು ದುರ್ಗಾ ಮತ್ತು ಶಿವನ ಪ್ರತಿಮೆಯನ್ನು ಅಥವಾ ಶಿವಲಿಂಗವನ್ನು ದ್ವಿಜರು ಸದಾಕಾಲ ಪೂಜಿಸಬೇಕು. ಷೋಡಶೋಪಚಾರ-ಪೂಜನಜನಿತ ಫಲದ ಸಿದ್ಧಿಗಾಗಿ ಹದಿನಾರು ಉಪಚಾರಗಳಿಂದ ಪೂಜೆ ಮಾಡಬೇಕು. ಪುಷ್ಪದಿಂದ ಪ್ರೋಕ್ಷಣ ಮತ್ತು ಮಂತ್ರಪಾಠ ದೊಂದಿಗೆ ಅಭಿಷೇಕವನ್ನು ಮಾಡಬೇಕು. ಅಕ್ಕಿಯಿಂದ ಒಂದು ಕುಡವ (ಒಂದು ಪಾವಿನಷ್ಟು) ನೈವೇದ್ಯವನ್ನು ಸಿದ್ಧಗೊಳಿಸಬೇಕು. ಮನೆಯ ಪಾರ್ಥಿವ ಪೂಜೆಗಾಗಿ ಒಂದು ಪಾವಿನ ಹಾಗೂ ಹೊರಗೆ ಯಾರೋ ಮನುಷ್ಯನಿಂದ ಸ್ಥಾಪಿತವಾದ ಶಿವಲಿಂಗ ಪೂಜೆಗಾಗಿ ಒಂದು ಸೇರು (ಪ್ರಸ್ಥ) ನೈವೇದ್ಯವು ಆವಶ್ಯಕವಾಗಿದೆ ಎಂದು ತಿಳಿಯಬೇಕು. ದೇವತೆಗಳಿಂದ ಸ್ಥಾಪಿತವಾದ ಶಿವಲಿಂಗಕ್ಕಾಗಿ ಮೂರು ಸೇರು ನೈವೇದ್ಯವನ್ನು ಅರ್ಪಿಸುವುದು ಉಚಿತವಾಗಿದೆ. ಸ್ವಯಂ ಪ್ರಕಟವಾದ ಸ್ವಯಂಭೂ ಲಿಂಗಕ್ಕಾಗಿ ಐದು ಸೇರು ನೈವೇದ್ಯವಿರಬೇಕು. ಹೀಗೆ ಮಾಡುವುದರಿಂದ ಪೂರ್ಣಫಲದ ಪ್ರಾಪ್ತಿಯಾಗುತ್ತದೆ ಎಂದು ತಿಳಿಯಬೇಕು. ಈ ಪ್ರಕಾರ ಸಾವಿರಬಾರಿ ಪೂಜೆ ಮಾಡುವುದರಿಂದ ದ್ವಿಜರು ಸತ್ಯಲೋಕವನ್ನು ಪಡೆದು ಕೊಳ್ಳುವರು.

ಹನ್ನೆರಡು ಅಂಗುಲ ಅಗಲ, ಇದರ ಎರಡರಷ್ಟು ಮತ್ತು

ಒಂದು ಅಂಗುಲ ಹೆಚ್ಚು ಅರ್ಥಾತ್ ಇಪ್ಪತ್ತೈದು ಅಂಗುಲ ಉದ್ದ ಹಾಗೂ ಹದಿನೈದು ಅಂಗುಲ ಅಗಲ ಕಬ್ಬಿಣದ ಅಥವಾ ಮರದಿಂದ ಮಾಡಿದ ಪಾತ್ರವನ್ನು ವಿದ್ವಾಂಸರು 'ಶಿವ' ಎಂದು ಹೇಳುತ್ತಾರೆ. ಅದರ ಎಂಟನೆಯ ಒಂದು ಭಾಗವನ್ನು ಪ್ರಸ್ಥವೆಂದು ಹೇಳುತ್ತಾರೆ. ಅದು ನಾಲ್ಕು ಕುಡವಗಳಿಗೆ ಸರಿಯೆಂದು ತಿಳಿಯಲಾಗಿದೆ. ಮನುಷ್ಯರಿಂದ ಸ್ಥಾಪಿತ ಶಿವಲಿಂಗಕ್ಕಾಗಿ ಹತ್ತು ಪ್ರಸ್ಥ ಋಷಿಗಳಿಂದ ಸ್ಥಾಪಿತವಾದ ಶಿವಲಿಂಗಕ್ಕೆ ನೂರು ಪ್ರಸ್ಥ ಹಾಗೂ ಸ್ವಯಂಭೂ ಶಿವಲಿಂಗಕ್ಕಾಗಿ ಒಂದು ಸಾವಿರ ಪ್ರಸ್ಥ ನೈವೇದ್ಯವನ್ನು ನಿವೇದಿಸಿದರೆ, ಹಾಗೂ ನೀರು, ಎಣ್ಣೆ ಗಂಧ ಮುಂತಾದ ದ್ರವ್ಯಗಳಿಂದಲೂ ಯಥಾಯೋಗ್ಯ ಪ್ರಮಾಣದಲ್ಲಿ ಇರಿಸಿದರೆ, ಇದು ಆ ಶಿವಲಿಂಗಗಳ ಮಹಾಪೂಜೆಯೆಂದು ತಿಳಿಸಲಾಗಿದೆ.

ದೇವತೆಯ ಅಭಿಷೇಕ ಮಾಡುವುದರಿಂದ ಆತ್ಮಶುದ್ಧಿಯಾಗುತ್ತದೆ. ಗಂಧದಿಂದ ಪುಣ್ಯದ ಪ್ರಾಪ್ತಿಯಾಗುತ್ತದೆ. ನೈವೇದ್ಯ ನೀಡುವುದರಿಂದ ಆಯುಸ್ಸು ಹೆಚ್ಚುತ್ತದೆ ಮತ್ತು ತೃಪ್ತಿ ಉಂಟಾಗುತ್ತದೆ. ಧೂಪವನ್ನು ನಿವೇದನೆ ಮಾಡುವದರಿಂದ ಧನದ ಪ್ರಾಪ್ತಿಯಾಗುತ್ತದೆ. ದೀಪವನ್ನು ಹಚ್ಚುವುದರಿಂದ ಜ್ಞಾನದ ಉದಯವಾಗುತ್ತದೆ ಮತ್ತು ತಾಂಬೂಲ ಸಮರ್ಪಣೆಯಿಂದ ಭೋಗಗಳು ದೊರೆಯುವವು. ಇದಕ್ಕಾಗಿ ಸ್ನಾನಾದಿ ಆರು ಉಪಚಾರಗಳನ್ನು ಪ್ರಯತ್ನಪೂರ್ವಕವಾಗಿ ಅರ್ಪಿಸಬೇಕು. ನಮಸ್ಕಾರ ಮತ್ತು ಜಪ ಇವೆರಡೂ ಸಂಪೂರ್ಣ ಅಭೀಷ್ಟ ಫಲವನ್ನು ಕೊಡುವುದು. ಆದ್ದರಿಂದ ಭೋಗ ಹಾಗೂ ಮೋಕ್ಷದ ಇಚ್ಛೆಯುಳ್ಳ ಜನರು ಪೂಜೆಯ ಕೊನೆಯಲ್ಲಿ ಸದಾ ಜಪ ಮತ್ತು ನಮಸ್ಕಾರಗಳನ್ನು ಮಾಡಬೇಕು. ಮನುಷ್ಯನು ಸದಾಕಾಲ ಮೊದಲಿಗೆ ಮಾನಸ ಪೂಜೆ ಮಾಡಿ ಮತ್ತೆ ಆಯಾಯಾ ಉಪಚಾರಗಳಿಂದ ಪೂಜಿಸಬೇಕು. ದೇವತೆಗಳ ಪೂಜೆಯಿಂದ ಆಯಾಯಾ ದೇವತೆಗಳ ಲೋಕಗಳು ಪ್ರಾಪ್ತವಾಗುತ್ತವೆ ಹಾಗೂ ಅವುಗಳ ಅವಾಂತರ ಲೋಕಗಳಲ್ಲಿಯೂ ಯಥೇಷ್ಟವಾದ ಭೋಗವಸ್ತುಗಳು ದೊರೆಯುತ್ತವೆ.

ಈಗ ನಾನು ದೇವಪೂಜೆಯಿಂದ ಪ್ರಾಪ್ತವಾಗುವ ವಿಶೇಷ ಫಲಗಳನ್ನು ವರ್ಣಿಸುವೆನು. ದ್ವಿಜರಿರಾ ! ಶ್ರದ್ಧೆಯಿಂದ ನೀವೆಲ್ಲರೂ ಕೇಳಿರಿ. ವಿಘ್ನರಾಜ ಗಣೇಶನ ಪೂಜೆಯಿಂದ ಭೂಲೋಕದಲ್ಲಿ ಉತ್ತಮ ಅಭೀಷ್ಟ ವಸ್ತುಗಳು ಪ್ರಾಪ್ತವಾಗುತ್ತವೆ. ಶ್ರಾವಣ ಮತ್ತು ಭಾದ್ರಪದ ತಿಂಗಳ ಶುಕ್ಲ ಚತುರ್ಥಿಯಂದು ಶುಕ್ರವಾರ ಬಂದರೆ, ಪೌಷಮಾಸದಲ್ಲಿ ಶತಭಿಷಾ ನಕ್ಷತ್ರವು ಬಂದಾಗ ವಿಧಿಪೂರ್ವಕ ಗಣಪತಿಯನ್ನು ಪೂಜಿಸಬೇಕು. ನೂರು ಅಥವಾ ಸಾವಿರ ದಿನಗಳಲ್ಲಿ ನೂರು ಅಥವಾ ಸಾವಿರ ಬಾರಿ ಪೂಜೆ ಮಾಡಬೇಕು. ದೇವತೆ ಮತ್ತು ಅಗ್ನಿಯಲ್ಲಿ ಶ್ರದ್ಧೆಯನ್ನಿರಿಸಿ ಮಾಡುವ ನಿತ್ಯಪೂಜೆಯಿಂದ ಮನುಷ್ಯರಿಗೆ ಪುತ್ರರು ಹಾಗೂ ಅಭೀಷ್ಟ ವಸ್ತುಗಳು ದೊರೆಯುತ್ತವೆ. ಅದು ಸಮಸ್ತ ಪಾಪಗಳನ್ನು ಶಮನಮಾಡಿ, ಬೇರೆ-ಬೇರೆ ದುಷ್ಕರ್ಮಗಳನ್ನು ವಿನಾಶ ಮಾಡುವವು. ಬೇರೆ-ಬೇರೆ ವಾರಗಳಲ್ಲಿ ಮಾಡಿರುವ ಶಿವನೇ ಮೊದಲಾದವರ ಪೂಜೆಯಿಂದ ಆತ್ಮಶುದ್ಧಿಯು ಪ್ರಾಪ್ತವಾಗುತ್ತದೆ ಎಂದು ತಿಳಿಯಬೇಕು. ವಾರ ಅಥವಾ ದಿನಗಳು ತಿಥಿ, ನಕ್ಷತ್ರ, ಮತ್ತು ಯೋಗಗಳ ಆಧಾರವಾಗಿದೆ. ಸಮಸ್ತ ಕಾಮನೆಗಳನ್ನು ಕೊಡುವುವು. ಅದರಲ್ಲಿ ವೃದ್ಧಿ-ಕ್ಷಯವಾಗುವುದಿಲ್ಲ. ಆದ್ದರಿಂದ ಅದನ್ನು ಪೂರ್ಣ ಬ್ರಹ್ಮಸ್ವರೂಪವೆಂದು ತಿಳಿಯಬೇಕು. ಸೂರ್ಯೋದಯದಿಂದ ಸೂರ್ಯೋದಯದವರೆಗೆ ಒಂದು ವಾರದ ಸ್ಥಿತಿಯೆಂದು ತಿಳಿಯಬೇಕು. ಅದು ಬ್ರಾಹ್ಮಣಾದಿ ಎಲ್ಲ ವರ್ಣದವರ ಕರ್ಮಗಳ ಆಧಾರವಾಗಿದೆ. ವಿಹಿತ ತಿಥಿಯ ಪೂರ್ವಭಾಗದಲ್ಲಿ ಮಾಡಿರುವ ದೇವರಪೂಜೆಯು ಮನುಷ್ಯರಿಗೆ ಪೂರ್ಣ ಭೋಗಗಳನ್ನು ನೀಡುವುದು.

ಮಧ್ಯಾಹ್ನದ ನಂತರ ತಿಥಿಯು ಪ್ರಾರಂಭವಾದರೆ ರಾತ್ರಿಯುಕ್ತ ತಿಥಿಯ ಪೂರ್ವಭಾಗವು ಪಿತೃಗಳ ಶ್ರಾದ್ಧಾದಿ ಕರ್ಮಕ್ಕಾಗಿ ಉತ್ತಮವೆಂದು ತಿಳಿಯಲಾಗಿದೆ. ಇಂತಹ ತಿಥಿಯ ಪರಭಾಗವೂ ಹಗಲಿನಿಂದ ಕೂಡಿರುವುದು, ಆದ್ದರಿಂದ ಅದನ್ನು ದೇವಕರ್ಮಕ್ಕಾಗಿ ಪ್ರಶಸ್ತವೆಂದು ತಿಳಿಯಲಾಗಿದೆ. ಮಧ್ಯಾಹ್ನ ಕಾಲದವರೆಗೆ ತಿಥಿಯಿದ್ದರೆ ಉದಯವ್ಯಾಪಿನಿ ತಿಥಿಯನ್ನೇ ದೇವಕಾರ್ಯದಲ್ಲಿ ಸ್ವೀಕರಿಸಬೇಕು. ಹೀಗೆಯೇ ಶುಭತಿಥಿ ಹಾಗೂ ಶುಭ ನಕ್ಷತ್ರ ಇವುಗಳು ದೇವಕಾರ್ಯದಲ್ಲಿ ಗ್ರಾಹ್ಯವಾಗುತ್ತವೆ. ವಾರ ಇತ್ಯಾದಿಗಳನ್ನು ಚೆನ್ನಾಗಿ ವಿಚಾರಮಾಡಿ ಪೂಜೆ-ಜಪ ಮುಂತಾದವುಗಳನ್ನು ಮಾಡಬೇಕು. ವೇದಗಳಲ್ಲಿ ಪೂಜಾ-ಶಬ್ದದ ಅರ್ಥವನ್ನು ಹೀಗೆ ಯೋಜಿಸಲಾಗಿದೆ – **ಪೂರ್ಜಾಯತೇ ಅನೇನ ಇತಿ ಪೂಜಾ** – ಇದು ಪೂಜಾ ಶಬ್ದದ ವ್ಯುತ್ಪತ್ತಿಯಾಗಿದೆ. **'ಪೂಃ'** ಇದರ ಅರ್ಥ ಭೋಗ ಮತ್ತು ಫಲದಸಿದ್ಧಿ ಎಂದಾಗಿದೆ. ಇದು ಯಾವ ಕರ್ಮದಿಂದ ಸಂಪನ್ನವಾಗುವುದೋ ಅದರ ಹೆಸರು ಪೂಜೆಯಾಗಿದೆ. ಮನೋವಾಂಛಿತ ವಸ್ತು ಹಾಗೂ ಜ್ಞಾನ ಇವೇ ಅಭೀಷ್ಟ ವಸ್ತುಗಳಾಗಿವೆ. ಸಕಾಮ ಭಾವವುಳ್ಳವರಿಗೆ ಭೋಗಗಳು ಅಪೇಕ್ಷಿತವಾಗಿವೆ ಮತ್ತು ನಿಷ್ಕಾಮ ಭಾವವುಳ್ಳವರಿಗೆ

ಪಾರಮಾರ್ಥಿಕ ಜ್ಞಾನವು ಅಪೇಕ್ಷಣೀಯವಾಗಿದೆ. ಇವೆರಡೂ ಪೂಜಾ ಶಬ್ದದ ಅರ್ಥವಾಗಿವೆ. ಇವುಗಳನ್ನು ಯೋಜಿಸುವುದರಿಂದಲೇ ಪೂಜಾ ಶಬ್ದದ ಸಾರ್ಥಕತೆ ಯಾಗುತ್ತದೆ. ಹೀಗೆ ವೇದ-ಶಾಸ್ತ್ರಗಳಲ್ಲಿ ಪೂಜಾ ಶಬ್ದದ ಅರ್ಥವು ವಿಖ್ಯಾತವಾಗಿದೆ. ನಿತ್ಯ ಮತ್ತು ನೈಮಿತ್ತಿಕ ಕರ್ಮಗಳು ಕಾಲಾಂತರದಲ್ಲಿ ಫಲವನ್ನು ಕೊಡುವುವು. ಆದರೆ ಕಾಮ್ಯಕರ್ಮವನ್ನು ಚೆನ್ನಾಗಿ ಅನುಷ್ಠಾನ ಮಾಡಿದರೆ, ಅದು ತತ್ಕಾಲದಲ್ಲೇ ಸಫಲವಾಗುವುದು. ಪ್ರತಿದಿನವೂ ಒಂದು ಪಕ್ಷ, ಒಂದು ತಿಂಗಳು, ಒಂದು ವರ್ಷದವರೆಗೆ ಸತತವಾಗಿ ಪೂಜೆ ಮಾಡುವುದರಿಂದ ಆಯಾಯಾ ಕರ್ಮಗಳ ಫಲಗಳು ಪ್ರಾಪ್ತಿಯಾಗುತ್ತದೆ ಹಾಗೂ ಅವುಗಳಿಂದ ಪಾಪಗಳು ಕ್ರಮವಾಗಿ ಕ್ಷಯವಾಗುತ್ತವೆ.

ಪ್ರತಿಯೊಂದು ತಿಂಗಳ ಕೃಷ್ಣಪಕ್ಷದ ಚತುರ್ಥಿ ತಿಥಿಯಂದು ಮಾಡಿದ ಮಹಾಗಣಪತಿಯ ಪೂಜೆಯು ಒಂದು ಪಕ್ಷದ ಪಾಪವನ್ನು ನಾಶಗೊಳಿಸುತ್ತದೆ ಮತ್ತು ಒಂದು ಪಕ್ಷದವರೆಗೆ ಉತ್ತಮ ಭೋಗರೂಪೀ ಫಲವನ್ನು ಕೊಡುತ್ತದೆ. ಚೈತ್ರಮಾಸದ ಚತುರ್ಥಿಗೆ ಮಾಡಿದ ಪೂಜೆಯು ಒಂದು ತಿಂಗಳವರೆಗೆ ಮಾಡಿದ ಪೂಜೆಯ ಫಲವನ್ನು ಕೊಡುವುದು. ಸೂರ್ಯನು ಸಿಂಹರಾಶಿಯಲ್ಲಿದ್ದಾಗ ಭಾದ್ರಪದಮಾಸದ ಚತುರ್ಥಿಯಂದು ಮಾಡಿದ ಶ್ರೀಗಣಪತಿಯ ಪೂಜೆಯು ಒಂದು ವರ್ಷದವರೆಗೆ ಮನೋವಾಂಛಿತ ಭೋಗಗಳನ್ನು ಕೊಡುವುದು ಎಂದು ತಿಳಿಯಬೇಕು. ಶ್ರಾವಣಮಾಸದ ಭಾನುವಾರದಂದು ಹಸ್ತನಕ್ಷತ್ರದಿಂದ ಕೂಡಿದ ಸಪ್ತಮಿ ತಿಥಿಗೆ ಹಾಗೂ ಮಾಘಶುದ್ಧ ಸಪ್ತಮಿಗೆ ಭಗವಾನ್ ಸೂರ್ಯನನ್ನು ಪೂಜಿಸಬೇಕು. ಜೇಷ್ಠ ಮತ್ತು ಭಾದ್ರಪದ ಮಾಸದ ಬುಧವಾರದಂದು ಶ್ರವಣ ನಕ್ಷತ್ರಯುಕ್ತ ದ್ವಾದಶೀ ತಿಥಿಗೆ ಭಗವಾನ್ ವಿಷ್ಣುವಿನ ಪೂಜೆಯು ಅಭೀಷ್ಟ ಸಂಪತ್ತನ್ನು ಕೊಡುವುದೆಂದು ತಿಳಿಯಲಾಗಿದೆ. ಶ್ರಾವಣಮಾಸದಲ್ಲಿ ಮಾಡಿದ ಶ್ರೀಹರಿಯ ಪೂಜೆಯು ಅಭೀಷ್ಟ ಮನೋರಥ ಮತ್ತು ಆರೋಗ್ಯವನ್ನು ಕೊಡುವುದಾಗಿರುತ್ತದೆ. ಅಂಗ ಮತ್ತು ಉಪಕರಣಗಳಸಹಿತ ಹಿಂದೆ ಹೇಳಿದ ಗೋ, ಭೂ ಇತ್ಯಾದಿ ಹನ್ನೆರಡು ವಸ್ತುಗಳನ್ನು ದಾನ ಮಾಡುವುದರಿಂದ ಪ್ರಾಪ್ತಿಯಾಗುವ ಫಲವೇ, ದ್ವಾದಶೀ ತಿಥಿಯಲ್ಲಿ ಶ್ರೀವಿಷ್ಣುವನ್ನು ಆರಾಧನೆಯಿಂದ ತೃಪ್ತಿಪಡಿಸಿದರೆ ಮನುಷ್ಯನು ಅದೇ ಫಲವನ್ನು ಪಡೆದುಕೊಳ್ಳುವನು. ದ್ವಾದಶೀ ತಿಥಿಯಂದು ಭಗವಾನ್ ವಿಷ್ಣುವಿನ ಹನ್ನೆರಡು ನಾಮಗಳ ಮೂಲಕ ಹನ್ನೆರಡು ಬ್ರಾಹ್ಮಣರನ್ನು ಷೋಡಶೋಪಚಾರಗಳಿಂದ ಪೂಜಿಸುವವನು ಮಹಾ ವಿಷ್ಣುವಿನ ಪ್ರಸನ್ನತೆಯನ್ನು ಪಡೆಯುವನು. ಹೀಗೆಯೇ ಸಮಸ್ತ ದೇವತೆಗಳ ಬೇರೆ-ಬೇರೆ ದ್ವಾದಶನಾಮಗಳಿಂದ ಮಾಡಿದ ಹನ್ನೆರಡು ಬ್ರಾಹ್ಮಣರ ಪೂಜೆಯು ಆಯಾಯಾ ದೇವತೆಗಳನ್ನು ಪ್ರಸನ್ನಗೊಳಿಸುತ್ತದೆ.

ಕರ್ಕಾಟಕ ಸಂಕ್ರಾಂತಿಯಿಂದ ಯುಕ್ತವಾದ ಶ್ರಾವಣಮಾಸದಲ್ಲಿ ನವಮಿ ತಿಥಿಯಂದು ಮೃಗಶಿರಾ ನಕ್ಷತ್ರದ ಯೋಗದಲ್ಲಿ ಅಂಬಿಕೆಯನ್ನು ಪೂಜಿಸಬೇಕು. ಅದು ಸಂಪೂರ್ಣ ಮನೋವಾಂಛಿತ ಭೋಗ ಮತ್ತು ಫಲಗಳನ್ನು ಕೊಡುವುದಾಗಿದೆ. ಐಶ್ವರ್ಯದ ಇಚ್ಛೆಯುಳ್ಳ ಮನುಷ್ಯನು ಆ ದಿನದಲ್ಲಿ ಅವಶ್ಯವಾಗಿ ಆಕೆಯ ಪೂಜೆಯನ್ನು ಮಾಡಬೇಕು.ಆಶ್ವಯುಜ ಮಾಸದ ಶುಕ್ಲ ನವಮಿ ತಿಥಿಯು ಸಮಸ್ತ ಅಭೀಷ್ಟ ಫಲಗಳನ್ನು ಕೊಡುವುದು. ಅದೇ ತಿಂಗಳ ಕೃಷ್ಣಪಕ್ಷದ ಚತುರ್ದಶಿಯಂದು ಭಾನುವಾರ ಬಂದರೆ, ಆ ದಿನದ ಮಹತ್ವವು ವಿಶೇಷವಾಗಿ ಹೆಚ್ಚುವುದು. ಅದರ ಜೊತೆಗೆ ಆರ್ದ್ರಾ ಮತ್ತು ಮಹಾರ್ದ್ರಾ (ಸೂರ್ಯ-ಸಂಕ್ರಾಂತಿಯಿಂದ ಯುಕ್ತವಾದ ಆರ್ದ್ರಾ) ನಕ್ಷತ್ರದ ಯೋಗ ಉಂಟಾದರೆ ಆ ಸಂದರ್ಭದಲ್ಲಿ ಮಾಡಿದ ಶಿವಪೂಜೆಯ ಮಹತ್ವ ವಿಶೇಷವಾಗಿ ತಿಳಿಯಲಾಗಿದೆ. ಮಾಘಕೃಷ್ಣ ಚತುರ್ದಶಿಗೆ ಮಾಡಿದ ಶಿವನ ಪೂಜೆಯು ಸಮಸ್ತ ಅಭೀಷ್ಟ ಫಲಗಳನ್ನು ಕೊಡುವುದು. ಅದು ಮನುಷ್ಯನ ಆಯುಷ್ಯವನ್ನು ಹೆಚ್ಚಿಸುವುದು, ಮೃತ್ಯು-ಕಷ್ಟವನ್ನು ದೂರ ತಳ್ಳುವುದು ಹಾಗೂ ಸಮಸ್ತ ಸಿದ್ಧಿಗಳನ್ನು ದೊರಕಿಸಿ ಕೊಡುವುದು. ಜೇಷ್ಠಮಾಸದಲ್ಲಿ ಚತುರ್ದಶಿಯಂದು ಮಹಾರ್ದ್ರಾ ಯೋಗವುಂಟಾದರೆ, ಅಥವಾ ಮಾರ್ಗಶಿರ ಮಾಸದಲ್ಲಿ ಯಾವುದೇ ತಿಥಿಯಂದು ಆರ್ದ್ರಾ ನಕ್ಷತ್ರ ಬಂದರೆ, ಆ ಸಮಯದಲ್ಲಿ ಬೇರೆ-ಬೇರೆ ವಸ್ತುಗಳಿಂದ ಮಾಡಿದ ಮೂರ್ತಿಯ ರೂಪದಲ್ಲಿ ಶ್ರೀಶಿವನನ್ನು ಷೋಡಶೋಪಚಾರ ಗಳಿಂದ ಪೂಜಿಸಿದ ಪುಣ್ಯಾತ್ಮನ ಚರಣಗಳನ್ನು ದರ್ಶಿಸಬೇಕು. ಭಗವಾನ್ ಶಿವನ ಪೂಜೆಯು ಮನುಷ್ಯರಿಗೆ ಭೋಗ ಮತ್ತು ಮೋಕ್ಷಗಳನ್ನು ಕೊಡುವುದು ಎಂದು ತಿಳಿಯಬೇಕು. ಕಾರ್ತಿಕಮಾಸದ ಪ್ರತಿಯೊಂದು ವಾರ-ತಿಥಿಗಳಲ್ಲಿ ಮಹಾದೇವನ ಪೂಜೆಯ ಮಹತ್ವ ವಿಶೇಷವಾಗಿದೆ. ಕಾರ್ತಿಕಮಾಸವು ಬಂದಾಗ ವಿದ್ವಾಂಸ ಮನುಷ್ಯನು ದಾನ, ತಪಸ್ಸು, ಹೋಮ, ಜಪ ಮತ್ತು ನಿಯಮಾದಿಗಳ ಮೂಲಕ ಸಮಸ್ತ ದೇವತೆಗಳನ್ನು ಷೋಡಶೋಪಚಾರಗಳಿಂದ ಪೂಜಿಸಬೇಕು. ಆ ಪೂಜೆಯಲ್ಲಿ ದೇವಪ್ರತಿಮೆ, ಬ್ರಾಹ್ಮಣ, ಮಂತ್ರ – ಇವುಗಳ ಉಪಯೋಗ ಆವಶ್ಯಕವಾಗಿದೆ. ಬ್ರಾಹ್ಮಣರಿಗೆ ಭೋಜನ ಮಾಡಿಸುವುದರಿಂದಲೂ

ಪೂಜನ-ಕರ್ಮ ಸಂಪನ್ನವಾಗುತ್ತದೆ. ಪೂಜಕನು ಕಾಮನೆಗಳನ್ನು ತ್ಯಜಿಸಿ, ಪೀಡಾರಹಿತ (ಶಾಂತನಾಗಿ) ದೇವತಾರಾಧನೆಯಲ್ಲಿ ತತ್ಪರನಾಗಿರಬೇಕು.

ಕಾರ್ತಿಕ ಮಾಸದಲ್ಲಿ ದೇವತೆಗಳ ಯಜನ-ಪೂಜೆ ಸಮಸ್ತ ಭೋಗಗಳನ್ನು ಕೊಡುವುದು. ವ್ಯಾಧಿಗಳನ್ನು ಹರಿಸುವುದು ಹಾಗೂ ಭೂತಗಳ ಮತ್ತು ಗ್ರಹರ ವಿನಾಶ ಮಾಡುವಂತಹುದಾಗಿದೆ. ಕಾರ್ತಿಕ ಮಾಸದ ಭಾನುವಾರದಂದು ಭಗವಾನ್ ಸೂರ್ಯನ ಪೂಜೆ ಮಾಡುವುದು, ಎಣ್ಣೆ ಮತ್ತು ಹತ್ತಿಯ ಬಟ್ಟೆಯನ್ನು ದಾನ ಮಾಡುವುದರಿಂದ ಮನುಷ್ಯರ ಕುಷ್ಠವೇ ಮುಂತಾದ ರೋಗಗಳು ನಾಶವಾಗುತ್ತವೆ. ಹರಡೆ, ಕಾಳುಮೆಣಸು, ವಸ್ತ್ರ, ಸೌತೆಕಾಯಿ ಮುಂತಾದವುಗಳ ದಾನ ಮತ್ತು ಬ್ರಾಹ್ಮಣರನ್ನು ಗೌರವಿಸುವುದರಿಂದ ಕ್ಷಯದಂತಹ ರೋಗಗಳು ನಾಶವಾಗುತ್ತವೆ. ದೀಪ ಮತ್ತು ಸಾಸಿವೆಯ ದಾನದಿಂದ ಮೂರ್ಛೆರೋಗ ವಾಸಿಯಾಗುತ್ತದೆ. ಕೃತ್ತಿಕಾ ನಕ್ಷತ್ರದಿಂದ ಕೂಡಿದ ಸೋಮವಾರದಂದು ಮಾಡಿದ ಶಿವನ ಪೂಜೆಯು ಮನುಷ್ಯರ ಮಹಾದಾರಿದ್ರ್ಯವು ಪರಿಹಾರವಾಗಿ, ಸಮಸ್ತ ಸಂಪತ್ತುಗಳು ಪ್ರಾಪ್ತವಾಗುವವು. ಮನೆಯ ಆವಶ್ಯಕ ಸಾಮಗ್ರಿಗಳೊಂದಿಗೆ ಮನೆಯನ್ನು ಹಾಗೂ ಕ್ಷೇತ್ರಾದಿ ದಾನ ಮಾಡುವುದರಿಂದಲೂ ಮೇಲೆ ಹೇಳಿದ ಫಲವು ದೊರೆಯುವುದು. ಕೃತ್ತಿಕಾಯುಕ್ತ ಮಂಗಳವಾರದಂದು ಶ್ರೀಸ್ಕಂದನ ಪೂಜೆ ಮಾಡುವುದರಿಂದ, ದೀಪ ಹಾಗೂ ಗಂಟೆಯನ್ನು ದಾನ ಕೊಡುವುದರಿಂದ ಮನುಷ್ಯನಿಗೆ ಬೇಗನೇ ವಾಕ್‌ಸಿದ್ಧಿಯು ಪ್ರಾಪ್ತವಾಗುತ್ತದೆ. ಅವನ ಬಾಯಿಂದ ಹೊರಟ ಪ್ರತಿಯೊಂದು ಮಾತೂ ಸತ್ಯವಾಗುತ್ತದೆ. ಕೃತ್ತಿಕಾಯುಕ್ತ ಬುಧವಾರದಂದು ಮಾಡಿದ ಶ್ರೀವಿಷ್ಣುವಿನ ಪೂಜೆ ಮತ್ತು ಮೊಸರನ್ನದ ದಾನದಿಂದ ಮನುಷ್ಯರಿಗೆ ಉತ್ತಮ ಸಂತಾನದ ಪ್ರಾಪ್ತಿಯಾಗುತ್ತದೆ. ಕೃತ್ತಿಕಾಯುಕ್ತ ಗುರುವಾರದಂದು ಧನದಿಂದ ಬ್ರಹ್ಮದೇವರ ಪೂಜೆ ಹಾಗೂ ಜೀನು, ಚಿನ್ನ, ತುಪ್ಪ ಇವುಗಳ ದಾನದಿಂದ ಮನುಷ್ಯರ ಭೋಗ-ವೈಭವಗಳ ವೃದ್ಧಿಯಾಗುತ್ತದೆ. ಕೃತ್ತಿಕಾಯುಕ್ತ ಶುಕ್ರವಾರದಂದು ಗಣಪತಿಯ ಪೂಜೆ ಮಾಡುವುದರಿಂದ ಹಾಗೂ ಗಂಧ, ಪುಷ್ಪ, ಅನ್ನದ ದಾನದಿಂದ ಮಾನವರ ಭೋಗ್ಯ ಪದಾರ್ಥಗಳ ವೃದ್ಧಿಯಾಗುತ್ತದೆ. ಆ ದಿನದಲ್ಲಿ ಚಿನ್ನ ಬೆಳ್ಳಿ ಮುಂತಾದವುಗಳ ದಾನದಿಂದ ಬಂಜೆಗೂ ಕೂಡ ಉತ್ತಮ ಪುತ್ರನ ಪ್ರಾಪ್ತಿಯಾಗುತ್ತದೆ. ಕೃತ್ತಿಕಾಯುಕ್ತ ಶನಿವಾರದಂದು ದಿಕ್ಪಾಲಕರ ವಂದನೆ, ದಿಗ್ಗಜಗಳ, ನಾಗಗಳ ಮತ್ತು ಸೇತುಪಾಲಕರ ಪೂಜೆ, ತ್ರಿನೇತ್ರಧಾರೀ ರುದ್ರ, ಪಾಪಹಾರೀ ವಿಷ್ಣು ಹಾಗೂ ಜ್ಞಾನದಾತೃನಾದ ಬ್ರಹ್ಮದೇವರ ಆರಾಧನೆ, ಧನ್ವಂತರಿ ಮತ್ತು ಎರಡೂ ಅಶ್ವಿನಿಕುಮಾರರನ್ನು ಪೂಜಿಸುವುದರಿಂದ ರೋಗಗಳು, ದುರ್ಮೃತ್ಯು ಹಾಗೂ ಅಕಾಲಮೃತ್ಯುವು ನಿವಾರಣೆಯಾಗುತ್ತದೆ. ತಾತ್ಕಾಲಿಕ ವ್ಯಾಧಿಗಳ ಶಾಂತಿಯಾಗುತ್ತದೆ. ಉಪ್ಪು, ಕಬ್ಬಿಣ, ಎಣ್ಣೆ, ಉದ್ದು, ತ್ರಿಕಟು (ಶುಂಠಿ, ಹಿಪ್ಪಲಿ, ಕಾಳುಮೆಣಸು), ಫಲ, ಗಂಧ, ಜಲ ಇತ್ಯಾದಿಗಳು ಹಾಗೂ ತುಪ್ಪವೇ ಮುಂತಾದ ದ್ರವ ಪದಾರ್ಥಗಳನ್ನು, ಚಿನ್ನ, ಮುತ್ತು ಮುಂತಾದ ಕಠೋರ ವಸ್ತುಗಳನ್ನು ದಾನ ಕೊಡುವುದರಿಂದ ಸ್ವರ್ಗಲೋಕದ ಪ್ರಾಪ್ತಿಯಾಗುತ್ತದೆ. ಇವುಗಳಲ್ಲಿ ಉಪ್ಪು ಮುಂತಾದವುಗಳ ಪ್ರಮಾಣ ಕನಿಷ್ಠ ಒಂದು ಸೇರು ಇರಬೇಕು ಮತ್ತು ಸುವರ್ಣವೇ ಮುಂತಾದವುಗಳು ಕನಿಷ್ಠ ಒಂದು ಪಲ ಇರಬೇಕು.

ಧನುಸಂಕ್ರಾಂತಿಯಿಂದ ಕೂಡಿದ ಪೌಷಮಾಸದ ಉಷಃಕಾಲದಲ್ಲಿ ಶಿವನೇ ಮೊದಲಾದ ಸಮಸ್ತ ದೇವತೆಗಳ ಪೂಜೆಯು ಕ್ರಮವಾಗಿ ಸಿದ್ಧಿಗಳನ್ನು ದೊರಕಿಸಿ ಕೊಡುತ್ತದೆ. ಈ ಪೂಜೆಯಲ್ಲಿ ಹೊಸ ಅಕ್ಕಿಯಿಂದ ಸಿದ್ಧಗೊಳಿಸಿದ ಹವಿಷ್ಯದ ನೈವೇದ್ಯವು ಉತ್ತಮವೆಂದು ಹೇಳಲಾಗುತ್ತದೆ. ಪೌಷಮಾಸದಲ್ಲಿ ನಾನಾ ರೀತಿಯ ಅನ್ನಗಳ ನೈವೇದ್ಯವು ವಿಶೇಷ ಮಹತ್ವವಿರುತ್ತದೆ. ಮಾರ್ಗಶಿರ ಮಾಸದಲ್ಲಿ ಕೇವಲ ಅನ್ನವನ್ನು ದಾನ ಮಾಡುವ ಮನುಷ್ಯರಿಗೆ ಸಂಪೂರ್ಣ ಅಭೀಷ್ಟ ಫಲಗಳ ಪ್ರಾಪ್ತಿಯಾಗುತ್ತದೆ. ಮಾರ್ಗಶಿರ ಮಾಸದಲ್ಲಿ ಅನ್ನದ ದಾನ ಮಾಡುವ ಮನುಷ್ಯನ ಎಲ್ಲ ಪಾಪಗಳು ನಾಶವಾಗಿ ಹೋಗುತ್ತವೆ. ಅದರಿಂದ ಅಭೀಷ್ಟಸಿದ್ಧಿ, ಆರೋಗ್ಯ, ಧರ್ಮ, ವೇದದ ಸಮ್ಯಕ್ ಜ್ಞಾನ, ಉತ್ತಮ ಅನುಷ್ಠಾನದ ಫಲ, ಇಹಲೋಕ-ಪರಲೋಕದಲ್ಲಿ ಮಹಾನ್ ಭೋಗ, ಅಂತ್ಯದಲ್ಲಿ ಸನಾತನಯೋಗ (ಮೋಕ್ಷ) ಹಾಗೂ ವೇದಾಂತ ಜ್ಞಾನದ ಸಿದ್ಧಿ ಪಡೆದುಕೊಳ್ಳುವನು. ಭೋಗದ ಇಚ್ಛೆಯುಳ್ಳ ಮನುಷ್ಯನು ಮಾರ್ಗಶಿರಮಾಸ ಬಂದಾಗ ಕನಿಷ್ಠ ಮೂರು ದಿನವಾದರೂ ಉಷಃಕಾಲದಲ್ಲಿ ಅವಶ್ಯವಾಗಿ ದೇವತೆಗಳನ್ನು ಪೂಜಿಸಬೇಕು. ಪೌಷಮಾಸದಲ್ಲಿ ಪೂಜೆಯಿಲ್ಲದೆ ದಿನವನ್ನು ಬರಿದಾಗಿ ಹೋಗಲು ಬಿಡಬಾರದು. ಉಷಃಕಾಲದಿಂದ ಸಂಗವಕಾಲದವರೆಗೂ ಪೌಷಮಾಸದಲ್ಲಿ ಪೂಜೆಯ ವಿಶೇಷ ಮಹತ್ವವನ್ನು ತಿಳಿಸಲಾಗಿದೆ. ಪುಷ್ಯಮಾಸದಲ್ಲಿ ಇಡೀ ತಿಂಗಳು ಜಿತೇಂದ್ರಿಯ ಮತ್ತು ನಿರಾಹಾರವಿದ್ದು, ದ್ವಿಜರು ಪ್ರಾತಃಕಾಲದಿಂದ ಮಧ್ಯಾಹ್ನಕಾಲದವರೆಗೆ ವೇದ-ಮಾತಾ ಗಾಯತ್ರಿಯ ಜಪವನ್ನು ಮಾಡಬೇಕು. ಬಳಿಕ ರಾತ್ರಿಯಲ್ಲಿ ಮಲಗುವವರೆಗೆ

ಪಂಚಾಕ್ಷರೀ ಮೊದಲಾದ ಮಂತ್ರಗಳನ್ನು ಜಪಿಸಬೇಕು. ಹೀಗೆ ಮಾಡುವ ಬ್ರಾಹ್ಮಣನು ಜ್ಞಾನವನ್ನು ಪಡೆದು, ಶರೀರಬಿಟ್ಟು ಹೋದಾಗ ಮೋಕ್ಷವನ್ನು ಪಡೆದುಕೊಳ್ಳುವನು. ದ್ವಿಜೇತರ ನರ-ನಾರಿಯರು ತ್ರಿಕಾಲಸ್ನಾನ ಹಾಗೂ ಪಂಚಾಕ್ಷರೀ ಮಂತ್ರದ ನಿರಂತರ ಜಪದಿಂದ ವಿಶುದ್ಧ ಜ್ಞಾನವನ್ನು ಹೊಂದುವರು. ಇಷ್ಟ ಮಂತ್ರಗಳನ್ನು ಸದಾ ಜಪಿಸುವುದರಿಂದ ದೊಡ್ಡ-ದೊಡ್ಡ ಪಾಪಗಳೂ ಕೂಡ ನಾಶವಾಗಿ ಹೋಗುತ್ತವೆ.

ಚರಾಚರ ಜಗತ್ತೆಲ್ಲವೂ ಬಿಂದು- ನಾದಸ್ವರೂಪವಾಗಿದೆ. ಬಿಂದು ಶಕ್ತಿಯಾಗಿದೆ, ನಾದ ಶಿವನಾಗಿರುವನು. ಹೀಗೆ ಈ ಜಗತ್ತು ಶಿವ-ಶಕ್ತಿ ಸ್ವರೂಪವೇ ಆಗಿದೆ. ನಾದ ಬಿಂದುವಿನ ಮತ್ತು ಬಿಂದುವು ಈ ಜಗತ್ತಿನ ಆಧಾರವಾಗಿದೆ. ಈ ಬಿಂದು-ನಾದ (ಶಕ್ತಿ ಮತ್ತು ಶಿವ) ಸಂಪೂರ್ಣ ಜಗತ್ತಿಗೆ ಆಧಾರಭೂತ ರೂಪದಿಂದ ಸ್ಥಿತವಾಗಿವೆ. ಬಿಂದು-ನಾದದಿಂದ ಕೂಡಿದ ಎಲ್ಲವೂ ಶಿವಸ್ವರೂಪವಾಗಿದೆ; ಏಕೆಂದರೆ, ಅದೇ ಎಲ್ಲರ ಆಧಾರವಾಗಿದೆ. ಆಧಾರದಲ್ಲೇ ಆಧೇಯದ ಸಮಾವೇಶ ಅಥವಾ ಲಯ ಹೊಂದುವುದು. ಇದೇ ಸಕಲೀಕರಣವಾಗಿದೆ. ಈ ಸಕಲೀಕರಣದ ಸ್ಥಿತಿಯಿಂದಲೇ ಸೃಷ್ಟಿಕಾಲದಲ್ಲಿ ಜಗತ್ತಿನ ಪ್ರಾದುರ್ಭಾವ ವಾಗುತ್ತದೆ. ಇದರಲ್ಲಿ ಸಂಶಯವೇ ಇಲ್ಲ. ಶಿವಲಿಂಗವು ಬಿಂದು-ನಾದಸ್ವರೂಪವಾಗಿದೆ. ಆದ್ದರಿಂದ ಅದನ್ನು ಜಗತ್ತಿನ ಕಾರಣವೆಂದು ಹೇಳಲಾಗಿದೆ. ಬಿಂದು ದೇವನಾಗಿರುವನು, ನಾದ ಶಿವನಾಗಿರುವನು. ಇವೆರಡರ ಸಂಯುಕ್ತರೂಪವೇ ಶಿವಲಿಂಗವೆಂದು ಹೇಳಿದೆ. ಆದ್ದರಿಂದ ಜನ್ಮದ ಸಂಕಟದಿಂದ ಬಿಡುಗಡೆ ಹೊಂದಲು ಶಿವಲಿಂಗವನ್ನು ಪೂಜಿಸಬೇಕು. ಬಿಂದುರೂಪೀ ದೇವೀ ಉಮೆಯು ತಾಯಿಯಾಗಿರುವಳು ಮತ್ತು ನಾದಸ್ವರೂಪೀ ಭಗವಾನ್ ಶಿವನು ತಂದೆಯಾಗಿರುವನು. ಈ ತಾಯಿ-ತಂದೆಯರನ್ನು ಪೂಜಿಸಿದರೆ ಪರಮಾನಂದದ ಪ್ರಾಪ್ತಿಯಾಗುತ್ತದೆ. ಆದ್ದರಿಂದ ಪರಮಾನಂದದ ಲಾಭ ಪಡೆಯಲು ಶಿವಲಿಂಗವನ್ನು ವಿಶೇಷವಾಗಿ ಪೂಜಿಸಬೇಕು. ದೇವೀ ಉಮೆಯು ಜಗತ್ತಿನ ತಾಯಿಯಾಗಿದ್ದಾಳೆ. ಭಗವಾನ್ ಶಿವನು ಜಗತ್ತಿನ ತಂದೆಯಾಗಿರುವನು. ಇವರ ಸೇವೆ ಮಾಡುವ ಪುತ್ರನ ಮೇಲೆ ತಂದೆ-ತಾಯಿಗಳಿಬ್ಬರ ಕೃಪೆಯೂ ನಿತ್ಯವೂ ಅಧಿಕಾಧಿಕವಾಗಿ ಬೆಳೆಯುತ್ತದೆ.* ಅವರು ಪೂಜಕನ ಮೇಲೆ ಕೃಪೆಮಾಡಿ, ಅವನಿಗೆ ತಮ್ಮ ಆಂತರಿಕ ಐಶ್ವರ್ಯವನ್ನು ಕರುಣಿಸುವರು. ಆದ್ದರಿಂದ ಮುನೀಶ್ವರರೇ! ಆಂತರಿಕ ಆನಂದದ ಪ್ರಾಪ್ತಿಗಾಗಿ ಶಿವಲಿಂಗವನ್ನು ತಂದೆ-ತಾಯಿಯರ ಸ್ವರೂಪವೆಂದು ತಿಳಿದು, ಅದನ್ನು ಪೂಜಿಸಬೇಕು. ಭರ್ಗ(ಶಿವ) ಪುರುಷ ರೂಪವಾಗಿದೆ ಮತ್ತು ಭರ್ಗಾ(ಶಿವಾ ಅಥವಾ ಶಕ್ತಿ) ಪ್ರಕೃತಿ ಎಂದು ಹೇಳುವರು. ಅವ್ಯಕ್ತ ಆಂತರಿಕ ಅಧಿಷ್ಠಾನರೂಪೀ ಗರ್ಭವನ್ನು ಪುರುಷನೆಂದೂ, ಸುವ್ಯಕ್ತ ಆಂತರಿಕ ಅಧಿಷ್ಠಾನಭೂತ ಗರ್ಭವನ್ನು ಪ್ರಕೃತಿ ಎಂದು ಹೇಳುವರು. ಪುರುಷನು ಆದಿಗರ್ಭನಾಗಿರುವನು, ಅವನು ಪ್ರಕೃತಿರೂಪೀ ಗರ್ಭದಿಂದಯುಕ್ತನಾದ ಕಾರಣ ಗರ್ಭವಂತನಾಗಿದ್ದಾನೆ; ಏಕೆಂದರೆ ಅವನೇ ಪ್ರಕೃತಿಯ ಜನಕನಾಗಿರುವನು. ಪ್ರಕೃತಿಯಲ್ಲಿ ಪುರುಷನ ಸಂಯೋಗವಾಗುವುದೇ, ಪುರುಷನಿಂದ ಅದರ ಪ್ರಥಮ ಜನ್ಮ ಎಂದು ಹೇಳುವರು. ಅವ್ಯಕ್ತ ಪ್ರಕೃತಿಯಿಂದ ಮಹತ್ತತ್ವಾದಿಗಳ ಕ್ರಮದಿಂದ ಜಗತ್ತು ವ್ಯಕ್ತವಾಗುವುದೇ ಆ ಪ್ರಕೃತಿಯ ಎರಡನೆಯ ಜನ್ಮವೆಂದು ಹೇಳಲಾಗಿದೆ. ಜೀವನು ಪುರುಷನಿಂದಲೇ ಪದೇ-ಪದೇ ಜನ್ಮ-ಮೃತ್ಯುವನ್ನು ಪಡೆಯುತ್ತಾನೆ. ಮಾಯೆಯ ಮೂಲಕ ಬೇರೆಯಾಗಿ ಪ್ರಕಟನಾಗುವುದೇ ಅವನ ಜನ್ಮವೆಂದು ಹೇಳುವರು. ಜೀವಿಯ ಶರೀರವು ಜನ್ಮಕಾಲದಿಂದಲೇ ಜೀರ್ಣ (ಆರು ಭಾವವಿಕಾರದಿಂದ ಕೂಡಿ) ವಾಗಲು ತೊಡಗುತ್ತದೆ, ಅದಕ್ಕಾಗಿ ಅವನನ್ನು 'ಜೀವ'ನೆಂಬ ಸಂಜ್ಞೆ ಕೊಡಲಾಗಿದೆ. ಯಾರು ಹುಟ್ಟಿ ಅನೇಕ ಪಾತಗಳಿಂದ ಬಂಧನದಲ್ಲಿ ಬೀಳುವನೋ, ಅವನ ಹೆಸರು 'ಜೀವ' ವಾಗಿದೆ. ಜನ್ಮ-ಬಂಧನ ಎಂಬುದು ಜೀವ ಶಬ್ದದ ಅರ್ಥವಾಗಿದೆ. ಆದ್ದರಿಂದ ಜನ್ಮ-ಮೃತ್ಯುರೂಪೀ ಬಂಧನದ ನಿವೃತ್ತಿಗಾಗಿ ಜನ್ಮದ ಅಧಿಷ್ಠಾನಭೂತ ಮಾತೃ-ಪಿತೃ ಸ್ವರೂಪೀ ಶಿವಲಿಂಗವನ್ನು ಪೂಜಿಸಬೇಕು.

ಹಸುವಿನ ಹಾಲು, ಮೊಸರು, ತುಪ್ಪ – ಇವನ್ನು ಪೂಜೆಗಾಗಿ ಜೇನು-ಸಕ್ಕರೆಯೊಂದಿಗೆ ಬೇರೆ-ಬೇರೆಯಾಗಿ ಇಡಬೇಕು. ಅಥವಾ ಇದೆಲ್ಲವನ್ನು ಸೇರಿಸಿ ಸಮ್ಮಿಲಿತ ರೂಪದಿಂದ ಪಂಚಾಮೃತವನ್ನು ಸಿದ್ಧಗೊಳಿಸಬೇಕು. (ಇದರಿಂದ ಶಿವಲಿಂಗದ ಅಭಿಷೇಕ ಮಾಡಬೇಕು) ಮತ್ತೆ ಹಸುವಿನ ಹಾಲು ಮತ್ತು ಅನ್ನವನ್ನು ಬೆರೆಸಿ ನೈವೇದ್ಯವನ್ನು ಸಿದ್ಧಗೊಳಿಸಿ, ಪ್ರಣವ ಮಂತ್ರದ ಉಚ್ಚಾರಪೂರ್ವಕ ಅದನ್ನು

---

* ಮಾತಾ ದೇವಿ ಬಿಂದುರೂಪಾ ನಾದರೂಪಃ ಶಿವಃ ಪಿತಾ ॥
ಪೂಜಿತಾಭ್ಯಾಂ ಪಿತೃಭ್ಯಾಂ ತು ಪರಮಾನಂದ ಏವ ಹಿ । ಪರಮಾನಂದಲಾಭಾರ್ಥಂ ಶಿವಲಿಂಗಂ ಪ್ರಪೂಜಯೇತ್ ॥
ಸಾ ದೇವೀ ಜಗತಾಂ ಮಾತಾ ಸ ಶಿವೋ ಜಗತಃ ಪಿತಾ । ಪಿತ್ರೋಃ ಶುಶ್ರೂಷಕೇ ನಿತ್ಯಂ ಕೃಪಾಧಿಕ್ಯಂ ಹಿ ವರ್ಧತೇ ॥
(ಶಿವಪುರಾಣ - ವಿದ್ಯೇ - ೧೬/೯೧-೯೩)

ಭಗವಾನ್ ಶಿವನಿಗೆ ಅರ್ಪಿಸಬೇಕು. ಸಂಪೂರ್ಣ ಪ್ರಣವವನ್ನು ಧ್ವನಿಲಿಂಗವೆಂದು ಹೇಳುತ್ತಾರೆ. ಸ್ವಯಂಭೂ ಲಿಂಗವು ನಾದ ಸ್ವರೂಪವಾದ್ದರಿಂದ ನಾದಲಿಂಗವೆಂದು ಹೇಳಲಾಗಿದೆ. ಯಂತ್ರವು ಅಥವಾ ಅರ್ಘಾ ಬಿಂದು ಸ್ವರೂಪವಾದ್ದರಿಂದ ಬಿಂದುಲಿಂಗದ ರೂಪದಲ್ಲಿ ವಿಖ್ಯಾತವಾಗಿದೆ. ಅದರಲ್ಲಿ ಅಚಲರೂಪದಿಂದ ಪ್ರತಿಷ್ಠಿತವಾದ ಶಿವಲಿಂಗವು ಮಕಾರ ಸ್ವರೂಪವಾಗಿದೆ. ಅದ್ದರಿಂದ ಅದು ಮಕಾರಲಿಂಗವೆಂದು ಹೇಳುತ್ತಾರೆ. ಉತ್ಸವಕ್ಕಾಗಿ ಇರುವ ಚರಲಿಂಗವು ಉಕಾರಸ್ವರೂಪವಾದ್ದರಿಂದ ಉಕಾರಲಿಂಗವೆಂದು ಹೇಳುತ್ತಾರೆ. ಪೂಜೆಯ ದೀಕ್ಷೆಯನ್ನು ಕೊಡುವ ಗುರು ಅಥವಾ ಆಚಾರ್ಯ ಇವರ ವಿಗ್ರಹ ಆಕಾರದ ಪ್ರತೀಕವಾದ್ದರಿಂದ ಅಕಾರಲಿಂಗವೆಂದು ತಿಳಿಯಲಾಗಿದೆ. ಹೀಗೆ ಅಕಾರ, ಉಕಾರ, ಮಕಾರ, ಬಿಂದು, ನಾದ ಮತ್ತು ಧ್ವನಿ – ರೂಪಗಳಲ್ಲಿ ಲಿಂಗದ ಆರು-ಭೇದಗಳಿವೆ. ಈ ಆರೂ ಲಿಂಗಗಳನ್ನು ನಿತ್ಯ ಪೂಜಿಸುವುದರಿಂದ ಸಾಧಕನು ಜೀವನ್ಮುಕ್ತನಾಗುವನು. ಇದರಲ್ಲಿ ಸಂಶಯವೇ ಇಲ್ಲ.

(ಅಧ್ಯಾಯ - ೧೬)

❐ ❐ ❐

ಷಡ್‌ಲಿಂಗ ಸ್ವರೂಪೀ ಪ್ರಣವದ ಮಾಹಾತ್ಮ್ಯ, ಅದರ ಸೂಕ್ಷ್ಮ-ಸ್ಥೂಲ ರೂಪಗಳ ವಿವೇಚನೆ, ಕಾರ್ಯಬ್ರಹ್ಮನಿಂದ ಹಿಡಿದು ಕಾರಣರುದ್ರನ ಲೋಕಗಳವರೆಗಿನ ವಿವೇಚನೆ ಮಾಡಿ ಕಾಲಾತೀತ, ಪಂಚಾವರಣವಿಶಿಷ್ಟ ಶಿವಲೋಕದ ನಿರೂಪಣೆ ಹಾಗೂ ಶಿವಭಕ್ತರ ಸತ್ಕಾರದ ಮಹಿಮೆ

ಋಷಿಗಳು ಕೇಳಿದರು - ಸ್ವಾಮಿ ! ಮಹಾಮುನಿಗಳೇ ! ತಾವು ಕ್ರಮವಾಗಿ ಷಡ್‌ಲಿಂಗ ಸ್ವರೂಪೀ ಪ್ರಣವದ ಮಾಹಾತ್ಮ್ಯ, ಹಾಗೂ ಶಿವಭಕ್ತರ ಪೂಜೆಯ ವಿಧಿಯನ್ನು ನಮಗೆ ತಿಳಿಸಿರಿ.

ಸೂತಪುರಾಣಿಕರು ಹೇಳುತ್ತಾರೆ - ಮಹರ್ಷಿಗಳೇ ! ನೀವೆಲ್ಲ ತಪಸ್ಸಿನ ನಿಧಿಯಾಗಿದ್ದೀರಿ. ತಾವು ಬಹಳ ಸುಂದರವಾದ ಈ ಪ್ರಶ್ನೆಯನ್ನು ಮುಂದಿಟ್ಟಿರುವಿರಿ. ಆದರೆ ಇದರ ಸರಿಯಾದ ಉತ್ತರವು ಮಹಾದೇವನೇ ಬಲ್ಲನು. ಬೇರೆಯಾರೂ ಅರಿಯರು. ಹೀಗಿದ್ದರೂ ಭಗವಾನ್ ಶಿವನ ಕೃಪೆಯಿಂದಲೇ ನಾನು ಈ ವಿಷಯವನ್ನು ವರ್ಣಿಸುವೆನು. ಆ ಭಗವಾನ್ ಶಿವನೇ ನಮ್ಮ ಮತ್ತು ನಿಮ್ಮ ರಕ್ಷಣೆಯ ಭಾರವನ್ನು ಪದೇ-ಪದೇ ಸ್ವತಃ ವಹಿಸಿಕೊಳ್ಳಲಿ.

'ಪ್ರ' ಎಂಬ ಹೆಸರು ಪ್ರಕೃತಿಯಿಂದ ಉತ್ಪನ್ನವಾದ ಪ್ರಪಂಚರೂಪೀ ಮಹಾಸಾಗರದ್ದಾಗಿದೆ. ಪ್ರಣವವು ಇದರಿಂದ ದಾಟಿಸಲಿಕ್ಕಾಗಿ (ನವ) ನಾವೆಯಂತಿದೆ. ಆದಕ್ಕಾಗಿ ಈ ಓಂಕಾರಕ್ಕೆ 'ಪ್ರಣವ' ಎಂಬ ಸಂಜ್ಞೆಯಿದೆ. ಓಂಕಾರವು ತನ್ನ ಜಪಮಾಡುವವರಿಗೆ ಹೇಳುತ್ತದೆ – ಪ್ರ-ಪ್ರಪಂಚ, ನ-ಇಲ್ಲ, ವಃ -ನಿಮಗಾಗಿ (ನಿಮಗಾಗಿ ಪ್ರಪಂಚವು ಇಲ್ಲ). ಆದ್ದರಿಂದ ಈ ಭಾವದಿಂದಲೂ ಜ್ಞಾನೀ ಜನರು 'ಓಂ' ಅನ್ನು ಪ್ರಣವವೆಂಬ ಹೆಸರಿನಿಂದ ತಿಳಿಯುತ್ತಾರೆ. ಇದರ ಇನ್ನೊಂದು ಭಾವ ಇಂತಿದೆ – **ಪ್ರ-ಪ್ರಕರ್ಷೇಣ, ನ-ನಯೇತ್, ವಃ-ಯುಷ್ಮಾನ್ ಮೋಕ್ಷಮ್ ಇತಿ ವಾ ಪ್ರಣವಃ ಅರ್ಥಾತ್** - ಇದು ಉಪಾಸಕರಾದ ನಿಮ್ಮೆಲ್ಲರನ್ನು ಬಲವಂತವಾಗಿ ಮೋಕ್ಷದವರೆಗೆ ತಲುಪಿಸಬಲ್ಲದು. ಈ ಅಭಿಪ್ರಾಯದಿಂದಲೂ ಇದನ್ನು ಋಷಿಮುನಿಗಳು 'ಪ್ರಣವ' ಎಂದು ಹೇಳುವರು. ತನ್ನನ್ನು ಜಪಿಸುವ ಯೋಗಿಗಳ ಹಾಗೂ ತನ್ನ ಮಂತ್ರದ ಪೂಜೆ ಮಾಡುವ ಉಪಾಸಕರ ಸಮಸ್ತ ಕರ್ಮಗಳನ್ನು ನಾಶಗೊಳಿಸಿ, ಇದು ದಿವ್ಯ ನೂತನ ಜ್ಞಾನವನ್ನು ಕೊಡುವುದು; ಅದಕ್ಕಾಗಿಯೂ ಇದರ ಹೆಸರು ಪ್ರಣವವಾಗಿದೆ.* ಆ ಮಾಯಾರಹಿತ ಮಹೇಶ್ವರನನ್ನೇ ನವ ಅರ್ಥಾತ್ - ನೂತನವೆಂದು ಹೇಳುತ್ತಾರೆ. ಆ ಪರಮಾತ್ಮನು ಪ್ರಕೃಷ್ಟರೂಪದಿಂದ ನವ ಅರ್ಥಾತ್-ಶುದ್ಧ ಸ್ವರೂಪನಾಗಿರುವನು, ಅದಕ್ಕಾಗಿ 'ಪ್ರಣವ'ವೆಂದು ಹೇಳುವರು. ಪ್ರಣವವು ಸಾಧಕರನ್ನು ನವ ಅರ್ಥಾತ್ ನವೀನ (ಶಿವಸ್ವರೂಪ) ವನ್ನಾಗಿಸುವುದು. ಇದಕ್ಕಾಗಿಯೂ ವಿದ್ವಾಂಸರು ಅದನ್ನು ಪ್ರಣವ ಎಂಬ ಹೆಸರಿನಿಂದ ತಿಳಿಯುತ್ತಾರೆ. ಅಥವಾ ಪ್ರಕೃಷ್ಟರೂಪದಿಂದ ನವ-ದಿವ್ಯ ಪರಮಾತ್ಮ ಜ್ಞಾನವನ್ನು ಪ್ರಕಟಿಸುವುದು, ಅದ್ದರಿಂದಲೂ ಅದು ಪ್ರಣವವಾಗಿದೆ.

ಸ್ಥೂಲ-ಸೂಕ್ಷ್ಮವೆಂಬ ಪ್ರಣವದ ಎರಡು ಭೇದಗಳನ್ನು ತಿಳಿಸಲಾಗಿದೆ. ಒಂದು ಅಕ್ಷರರೂಪೀ 'ಓಂ' ಆಗಿದೆ. ಇದನ್ನು ಸೂಕ್ಷ್ಮ ಪ್ರಣವವೆಂದು ತಿಳಿಯಬೇಕು. 'ನಮಃ ಶಿವಾಯ' ಈ

* ಪ್ರ (ಕರ್ಮಕ್ಷಯ ಪೂರ್ವಕ) ನವ (ನೂತನ ಜ್ಞಾನವನ್ನು ಕೊಡುವವ)

ಪಂಚಾಕ್ಷರೀ ಮಂತ್ರವನ್ನು ಸ್ಥೂಲ ಪ್ರಣವವೆಂದು ತಿಳಿಯಬೇಕು. ಯಾವುದರಲ್ಲಿ ಐದು ಅಕ್ಷರಗಳು ವ್ಯಕ್ತವಾಗಿಲ್ಲವೋ, ಅದು ಸೂಕ್ಷ್ಮವಾಗಿದೆ. ಯಾವುದರಲ್ಲಿ ಐದೂ ಅಕ್ಷರಗಳು ಸುಷ್ಪಷ್ಟರೂಪದಿಂದ ವ್ಯಕ್ತವಾಗಿವೆಯೋ ಅದು ಸ್ಥೂಲವಾಗಿದೆ. ಜೀವನ್ಮುಕ್ತ ಪುರುಷರಿಗಾಗಿ ಸೂಕ್ಷ್ಮ ಪ್ರಣವ ಜಪದ ವಿಧಾನವಿದೆ. ಅದೇ ಅವರಿಗೆ ಸಮಸ್ತ ಸಾಧನೆಗಳ ಸಾರವಾಗಿದೆ. (ಜೀವನ್ಮುಕ್ತನಿಗಾಗಿ ಯಾವುದೇ ಸಾಧನೆಯ ಆವಶ್ಯಕತೆಯಿಲ್ಲ. ಏಕೆಂದರೆ ಅವನು ಸಿದ್ಧರೂಪನಾಗಿರುವನು. ಆದರೂ ಇತರರ ದೃಷ್ಟಿಯಲ್ಲಿ ಅವರ ಶರೀರ ಇರುವತನಕ ಅವನಿಂದ ಪ್ರಣವ ಜಪದ ಸಾಧನೆಯು ತಾನಾಗಿ ಆಗುತ್ತಾ ಇರುತ್ತದೆ.) ಅವರು ತಮ್ಮ ದೇಹವು ವಿಲಯವಾಗುವತನಕ ಸೂಕ್ಷ್ಮ ಪ್ರಣವ ಮಂತ್ರದ ಜಪ ಮತ್ತು ಅದರ ಅರ್ಥಭೂತ ಪರಮಾತ್ಮ ತತ್ತ್ವದ ಅನುಸಂಧಾನ ಮಾಡುತ್ತಾ ಇರುತ್ತಾರೆ. ಶರೀರವು ನಷ್ಟವಾದಾಗ ಅವರು ಪೂರ್ಣಬ್ರಹ್ಮಸ್ವರೂಪ ಶಿವನನ್ನು ಹೊಂದುವರು. ಇದು ಸುನಿಶ್ಚಿತವಾಗಿದೆ. ಅರ್ಥಾನುಸಂಧಾನವಿಲ್ಲದೆ ಕೇವಲ ಮಂತ್ರದ ಜಪ ಮಾಡುವವನಿಗೂ ನಿಶ್ಚಯವಾಗಿ ಯೋಗದ ಪ್ರಾಪ್ತಿಯಾಗುತ್ತದೆ. ಮೂವತ್ತಾರು ಕೋಟಿ ಮಂತ್ರಜಪ ಮಾಡಿದವನಿಗೆ ಅವಶ್ಯವಾಗಿಯೇ ಯೋಗದ ಪ್ರಾಪ್ತಿಯಾಗಿ ಹೋಗುತ್ತದೆ. ಸೂಕ್ಷ್ಮ ಪ್ರಣವಕ್ಕೂ ಹ್ರಸ್ವ ಮತ್ತು ದೀರ್ಘ ಎಂಬ ಎರಡು ಭೇದಗಳನ್ನು ತಿಳಿಯಬೇಕು. ಅಕಾರ, ಉಕಾರ, ಮಕಾರ, ಬಿಂದು, ನಾದ, ಶಬ್ದ ಕಾಲ ಮತ್ತು ಕಲೆ – ಇವುಗಳಿಂದ ಯುಕ್ತವಾದ ಪ್ರಣವವನ್ನು 'ದೀರ್ಘಪ್ರಣವ'ವೆಂದು ಹೇಳುತ್ತಾರೆ. ಅದು ಯೋಗಿಗಳ ಹೃದಯದಲ್ಲೇ ಸ್ಥಿತವಾಗಿರುತ್ತದೆ. ಮಕಾರದವರೆಗಿನ ಪ್ರಣವವು ಅ-ಉ-ಮ್-ಈ ಮೂರು ತತ್ತ್ವಗಳಿಂದ ಕೂಡಿದ ಇದನ್ನೇ ಹ್ರಸ್ವ ಪ್ರಣವವೆಂದು ಹೇಳುತ್ತಾರೆ. ಅಕಾರವು ಶಿವನಾಗಿರುವನು. ಉಕಾರವು ಶಕ್ತಿಯಾಗಿದೆ. ಮಕಾರವು ಇವೆರಡರ ಏಕತೆಯಾಗಿದೆ. ಅದು ತ್ರಿತತ್ತ್ವರೂಪವಾಗಿದೆ ಎಂದು ತಿಳಿದುಕೊಂಡು ಹ್ರಸ್ವ ಪ್ರಣವದ ಜಪವನ್ನು ಮಾಡಬೇಕು. ತನ್ನ ಸಮಸ್ತ ಪಾಪಗಳನ್ನು ಕ್ಷಯಮಾಡಿಕೊಳ್ಳಲು ಬಯಸುವವನಿಗೆ ಈ ಹ್ರಸ್ವ ಪ್ರಣವದ ಜಪವು ಅತ್ಯಂತ ಆವಶ್ಯಕವಾಗಿದೆ.

ಪೃಥಿವೀ, ಜಲ, ತೇಜ, ವಾಯು, ಆಕಾಶ – ಇವು ಪಂಚಭೂತಗಳು ಹಾಗೂ ಶಬ್ದ, ಸ್ಪರ್ಶ, ರೂಪ, ರಸ, ಗಂಧ ಇವುಗಳು ಪಂಚಭೂತಗಳ ವಿಷಯಗಳಾಗಿವೆ. ಇವೆಲ್ಲ ಸೇರಿ ಹತ್ತು ವಸ್ತುಗಳು ಮನುಷ್ಯನ ಕಾಮನೆಯ ವಿಷಯವಾಗಿದೆ. ಇವುಗಳ ಆಸೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಕರ್ಮಗಳ ಅನುಷ್ಠಾನದಲ್ಲಿ ತೊಡಗುವ ಹತ್ತು ಪ್ರಕಾರದ ಪುರುಷರನ್ನು ಪ್ರವೃತ್ತ (ಅಥವಾ ಪ್ರವೃತ್ತಿಮಾರ್ಗೀ) ಎಂದು ಹೇಳುವರು. ನಿಷ್ಕಾಮಭಾವದಿಂದ ಶಾಸ್ತ್ರವಿಹಿತ ಕರ್ಮಗಳ ಅನುಷ್ಠಾನ ಮಾಡುವವರು ನಿವೃತ್ತ (ಅಥವಾ ನಿವೃತ್ತಿಮಾರ್ಗೀ)ರೆಂದು ಹೇಳಲಾಗಿದೆ. ಪ್ರವೃತ್ತ ಪುರುಷರು ಹ್ರಸ್ವ ಪ್ರಣವದ ಜಪವನ್ನೇ ಮಾಡಬೇಕು. ನಿವೃತ್ತ ಪುರುಷರು ದೀರ್ಘ ಪ್ರಣವವನ್ನು ಜಪಿಸಬೇಕು. ವ್ಯಾಹೃತಿಗಳು ಹಾಗೂ ಇತರ ಮಂತ್ರಗಳ ಆದಿಯಲ್ಲಿ ಇಚ್ಛಾನುಸಾರ ಶಬ್ದ ಮತ್ತು ಕಲೆಯಿಂದ ಯುಕ್ತವಾದ ಪ್ರಣವವನ್ನು ಉಚ್ಚರಿಸಬೇಕು. ವೇದದ ಆದಿಯಲ್ಲಿ ಮತ್ತು ಎರಡೂ ಸಂಧ್ಯೆಗಳ ಉಪಾಸನೆಯ ಸಮಯದಲ್ಲಿಯೂ ಓಂಕಾರವನ್ನು ಉಚ್ಚರಿಸಬೇಕು.

ಒಂಭತ್ತು ಕೋಟಿ ಪ್ರಣವದ ಜಪ ಮಾಡುವುದರಿಂದ ಮನುಷ್ಯನು ಶುದ್ಧನಾಗಿ ಹೋಗುವನು. ಮತ್ತೆ ಒಂಭತ್ತು ಕೋಟಿ ಜಪ ಮಾಡಿದರೆ ಅವನು ಪೃಥಿವೀ ತತ್ತ್ವವನ್ನು ಗೆದ್ದುಕೊಳ್ಳುವನು. ಅನಂತರ ಪುನಃ ಒಂಭತ್ತು ಕೋಟಿ ಜಪಮಾಡಿ ಅವನು ಜಲತತ್ತ್ವವನ್ನು ಗೆದ್ದುಕೊಳ್ಳುವನು. ಮತ್ತೆ ಒಂಭತ್ತು ಕೋಟಿ ಜಪದಿಂದ ಅಗ್ನಿತತ್ತ್ವದ ಮೇಲೆ ವಿಜಯವನ್ನು ಪಡೆಯುವನು. ಅನಂತರ ಪುನಃ ಒಂಭತ್ತು ಕೋಟಿ ಜಪವನ್ನು ಮಾಡಿ ವಾಯು ತತ್ತ್ವದ ಮೇಲೆ ವಿಜಯಿಯಾಗುವನು. ಬಳಿಕ ಒಂಭತ್ತು ಕೋಟಿ ಜಪದಿಂದ ಆಕಾಶವನ್ನು ತನ್ನ ಅಧಿಕಾರದಲ್ಲಿ ಮಾಡಿಕೊಳ್ಳುವನು. ಹೀಗೆ ಒಂಭತ್ತು -ಒಂಭತ್ತು ಕೋಟಿ ಜಪಮಾಡಿ ಅವನು ಕ್ರಮವಾಗಿ ಗಂಧ, ರಸ, ರೂಪ, ಸ್ಪರ್ಶ, ಶಬ್ದ ಇವುಗಳ ಮೇಲೆ ವಿಜಯವನ್ನು ಪಡೆಯುವನು. ಇದಾದ ಬಳಿಕ ಪುನಃ ಒಂಭತ್ತು ಕೋಟಿ ಜಪಮಾಡಿ ಅಹಂಕಾರವನ್ನೂ ಗೆದ್ದುಕೊಳ್ಳುವನು. ಹೀಗೆ ಒಂದು ನೂರು ಎಂಟು ಕೋಟಿ ಪ್ರಣವವನ್ನು ಜಪಿಸಿ ಉತ್ಕೃಷ್ಟ ಬೋಧವನ್ನು ಪಡೆದ ಪುರುಷನು ಶುದ್ಧ ಯೋಗದ ಲಾಭವನ್ನು ಪಡೆಯುವನು. ಶುದ್ಧಯೋಗದಿಂದ ಯುಕ್ತನಾದಾಗ ಅವನು ಜೀವನ್ಮುಕ್ತನಾಗಿ ಹೋಗುವನು; ಇದರಲ್ಲಿ ಸಂದೇಹವೇ ಇಲ್ಲ. ಸದಾಕಾಲ ಪ್ರಣವದ ಜಪ ಮತ್ತು ಪ್ರಣವರೂಪೀ ಶಿವನ ಧ್ಯಾನವನ್ನು ಮಾಡುತ್ತಾ -ಮಾಡುತ್ತಾ ಸಮಾಧಿಯಲ್ಲಿ ಸ್ಥಿತನಾದ ಮಹಾಯೋಗಿಯು ಸಾಕ್ಷಾತ್ ಶಿವನೇ ಆಗಿರುವನು; ಇದರಲ್ಲಿ ಸಂಶಯವೇ ಇಲ್ಲ. ಮೊದಲಿಗೆ ತನ್ನ ಶರೀರದಲ್ಲಿ ಪ್ರಣವದ ಋಷಿ, ಛಂದ, ದೇವತಾ ಇವುಗಳ ನ್ಯಾಸಮಾಡಿ ಮತ್ತೆ ಜಪವನ್ನು ಪ್ರಾರಂಭಿಸಬೇಕು. ಅಕಾರಾದಿ ಮಾತೃಕಾವರ್ಣದಿಂದ ಕೂಡಿದ ಪ್ರಣವವನ್ನು ತನ್ನ ಅಂಗಗಳಲ್ಲಿ ನ್ಯಾಸ ಮಾಡಿದ ಮನುಷ್ಯನು ಋಷಿಯಾಗುತ್ತಾನೆ. ಮಂತ್ರಗಳ

ದಶವಿಧ [೧]ಸಂಸ್ಕಾರ, ಮಾತೃಕಾನ್ಯಾಸ ಹಾಗೂ [೨] ಷಡಧ್ವ ಶೋಧನ ಮುಂತಾದವುಗಳ ಜೊತೆಗೆ ಸಂಪೂರ್ಣ ನ್ಯಾಸ ಫಲವು ಅವನಿಗೆ ಪ್ರಾಪ್ತವಾಗುತ್ತದೆ. ಪ್ರವೃತ್ತಿ ಹಾಗೂ ಪ್ರವೃತ್ತಿ-ನಿವೃತ್ತಿಯ ಮಿಶ್ರಭಾವವುಳ್ಳ ಪುರುಷರಿಗೆ ಸ್ಥೂಲ ಪ್ರಣವದ ಜಪವೇ ಅಭೀಷ್ಟ ಸಾಧಕವಾಗುತ್ತದೆ.

ಕ್ರಿಯಾ, ತಪ, ಜಪ ಇವುಗಳಿಂದ ಶಿವಯೋಗಿಗಳು ಮೂರು ಪ್ರಕಾರದವರಾಗಿರುತ್ತಾರೆ. ಕ್ರಮವಾಗಿ ಕ್ರಿಯಾಯೋಗೀ, ತಪ್ಪೋಯೋಗೀ, ಜಪಯೋಗೀ ಎಂದು ಕರೆಸಿಕೊಳ್ಳುವರು. ಧನವೇ ಮೊದಲಾದ ವೈಭವಗಳಿಂದ ಪೂಜಾಸಾಮಗ್ರಿಗಳನ್ನು ಸಂಗ್ರಹಿಸಿ, ಕೈಯೇ ಮೊದಲಾದ ಅವಯವಗಳಿಂದ ನಮಸ್ಕಾರಾದಿ ಕ್ರಿಯೆಗಳನ್ನು ಮಾಡುತ್ತಾ ಇಷ್ಟದೇವರ ಪೂಜೆಯಲ್ಲಿ ತೊಡಗಿರುವವರು 'ಕ್ರಿಯಾಯೋಗಿ'ಗಳೆಂದು ತಿಳಿಯ ಬೇಕು. ಪೂಜೆಯಲ್ಲಿ ಸಂಲಗ್ನವಾಗಿದ್ದು, ಪರಿಮಿತ ಭೋಜನವನ್ನು ಮಾಡುತ್ತಾ, ಬಾಹ್ಯ ಇಂದ್ರಿಯಗಳನ್ನು ವಶಪಡಿಸಿಕೊಂಡು, ಮನಸ್ಸನ್ನೂ ನಿಗ್ರಹಿಸಿಕೊಂಡು, ಪರದ್ರೋಹವೇ ಇತ್ಯಾದಿಗಳಿಂದ ದೂರ ಉಳಿಯುವವನನ್ನು 'ತಪ್ಪೋಯೋಗೀ' ಎಂದು ಹೇಳುತ್ತಾರೆ. ಇದೆಲ್ಲ ಸದ್ಗುಣಗಳಿಂದ ಕೂಡಿಕೊಂಡು ಸದಾಕಾಲ ಶುದ್ಧಭಾವದಿಂದ ಇರುತ್ತಾ, ಕಾಮಾದಿ ಸಮಸ್ತ ದೋಷಗಳಿಂದ ರಹಿತನಾಗಿ, ಶಾಂತಚಿತ್ತದಿಂದ ನಿರಂತರ ಜಪಮಾಡುತ್ತಾ ಇರುವವನನ್ನು ಮಹಾಪುರುಷರು 'ಜಪಯೋಗೀ' ಎಂದು ತಿಳಿಯುತ್ತಾರೆ. ಹದಿನಾರು ವಿಧದ

---

೧ ಮಂತ್ರದ-ಜನನ, ದೀಪನ, ಬೋಧನ, ತಾಡನ, ಅಭಿಷೇಚನ, ವಿಮಲೀಕರಣ, ಜೀವನ, ತರ್ಪಣ, ಗೋಪನ ಮತ್ತು ಆಪ್ಯಾಯನ – ಎಂಬ ಹತ್ತು ಸಂಸ್ಕಾರಗಳಿವೆ. ಅದರ ವಿಧಿ ಇಂತಿದೆ -

ಭೋಜಪತ್ರದ ಮೇಲೆ ಗೊರೋಚನ, ಕುಂಕುಮ, ಚಂದನಾದಿಗಳಿಂದ ಆತ್ಮಾಭಿಮುಖವಾಗಿ ತ್ರಿಕೋಣವನ್ನು ಬರೆದು, ಮೂರೂ ಕೋನಗಳಲ್ಲಿ ಆರಾರು ಸಮವಾದ ಗೆರೆಯನ್ನೆಳೆಯಬೇಕು. ಹೀಗೆ ಮಾಡುವುದರಿಂದ ೪೯ ಕೋಣೆಗಳು ಆಗುವುವು. ಇವುಗಳಲ್ಲಿ ಈಶಾನ ಕೋಣೆಯಿಂದ ಮಾತೃಕಾವರ್ಣಗಳನ್ನು ಬರೆದು ದೇವತೆಯ ಆವಾಹನ-ಪೂಜನ ಮಾಡಿ ಮಂತ್ರದ ಒಂದೊಂದು ವರ್ಣವನ್ನು ಉಚ್ಚರಿಸಿ ಮತ್ತೊಂದು ಪತ್ರದಲ್ಲಿ ಬರೆಯಬೇಕು. ಹೀಗೆ ಮಾಡಿದಾಗ 'ಜನನ' ಎಂಬ ಪ್ರಥಮ ಸಂಸ್ಕಾರವಾಗುವುದು.

'ಹಂಸಃ ರಾಮಾಯನಮಃ ಸೋಽಹಮ್' ಎಂಬ ಹಂಸ ಮಂತ್ರವನ್ನು ಸಂಪುಟಿತಗೊಳಿಸಿ ಒಂದು ಸಾವಿರ ಜಪದಿಂದ ಮಂತ್ರದ ಎರಡನೆಯ 'ದೀಪನ' ಸಂಸ್ಕಾರವಾಗುವುದು.

'ಹ್ರೂಂ ರಾಮಾಯ ನಮಃ ಹ್ರೂಂ' ಎಂದು ಹ್ರೂಂ ಬೀಜವನ್ನು ಸಂಪುಟಿತಗೊಳಿಸಿ ಐದು ಸಾವಿರ ಜಪ ಮಾಡುವುದರಿಂದ 'ಬೋಧನ' ಎಂಬ ಮೂರನೆಯ ಸಂಸ್ಕಾರವಾಗುತ್ತದೆ.

'ಫಟ್ ರಾಮಾಯ ನಮಃ ಫಟ್' ಎಂಬ ಫಟ್ ಬೀಜದಿಂದ ಸಂಪುಟಿತಗಳಿಸಿ ಒಂದು ಸಾವಿರ ಮಂತ್ರ ಜಪ ಮಾಡುವುದರಿಂದ 'ತಾಡನ' ಎಂಬ ನಾಲ್ಕನೆಯ ಸಂಸ್ಕಾರವಾಗುತ್ತದೆ.

ಭೂರ್ಜಪತ್ರದ ಮೇಲೆ ಮಂತ್ರವನ್ನು ಬರೆದು 'ರೊಂ ಹಂಸಃ ಓಂ' ಈ ಮಂತ್ರದಿಂದ ಜಲವನ್ನು ಅಭಿಮಂತ್ರಿಸಿ, ಆ ಜಲದಿಂದ ಅಶ್ವತ್ಥಪತ್ರಾದಿಗಳಿಂದ ಮಂತ್ರದ ಅಭಿಷೇಕ ಮಾಡಬೇಕು. ಹೀಗೆ ಮಾಡಿದಾಗ 'ಅಭಿಷೇಕ' ಎಂಬ ಐದನೆಯ ಸಂಸ್ಕಾರವು ಆಗುವುದು.

'ಓಂ ತ್ರೋಂ ವಷಟ್ ರಾಮಾಯ ನಮಃ ವಷಟ್ ತ್ರೋಂ ಓಂ' ಈ ವರ್ಣಗಳಿಂದ ಸಂಪುಟಿತ ಮಾಡಿ ಮಂತ್ರವನ್ನು ಒಂದು ಸಾವಿರ ಜಪ ಮಾಡುವುದರಿಂದ 'ವಿಮಲೀಕರಣ' ಎಂಬ ಆರನೆಯ ಸಂಸ್ಕಾರವಾಗುತ್ತದೆ.

'ಸ್ವಧಾ ವಷಟ್ ರಾಮಾಯ ನಮಃ ವಷಟ್ ಸ್ವಧಾ' ಹೀಗೆ ಸ್ವಧಾ-ವಷಟ್‌ನಿಂದ ಸಂಪುಟಿತಗೊಳಿಸಿ ಒಂದು ಸಾವಿರ ಜಪಮಾಡುವುದರಿಂದ 'ಜೀವನ' ಎಂಬ ಏಳನೆಯ ಸಂಸ್ಕಾರವಾಗುತ್ತದೆ.

ಹಾಲು, ನೀರು, ತುಪ್ಪ ಇವುಗಳಿಂದ ಮೂಲಮಂತ್ರದಿಂದ ನೂರುಬಾರಿ ತರ್ಪಣ ಕೊಡುವುದೇ 'ತರ್ಪಣ' ಸಂಸ್ಕಾರವಾಗಿದೆ. (ಎಂಟನೆಯ ಸಂಸ್ಕಾರವಾಗುತ್ತದೆ)

'ಹ್ರೀಂ ರಾಮಾಯ ನಮಃ ಹ್ರೀಂ' ಎಂಬ ಹ್ರೀಂ ಬೀಜಮಂತ್ರದಿಂದ ಸಂಪುಟಿತ ಒಂದು ಸಾವಿರ ಜಪ ಮಾಡುವುದರಿಂದ 'ಗೋಪನ' ಎಂಬ ಒಂಭತ್ತನೆಯ ಸಂಸ್ಕಾರವಾಗುವುದು.

'ಹ್ರೌಂ ರಾಮಾಯ ನಮಃ ಹ್ರೌಂ' ಎಂಬ ಹ್ರೌಂ ಬೀಜದಿಂದ ಸಂಪುಟಿತ ಒಂದು ಸಾವಿರ ಜಪ ಮಾಡುವುದರಿಂದ 'ಆಪ್ಯಾಯನ' ಎಂಬ ಹತ್ತನೆಯ ಸಂಸ್ಕಾರವಾಗುವುದು.

ಹೀಗೆ ಸಂಸ್ಕೃತಗೊಳಿಸಿದ ಮಂತ್ರವು ಶೀಘ್ರವಾಗಿ ಫಲಪ್ರದವಾಗುತ್ತದೆ.

೨ ಷಡಧ್ವ-ಶೋಧನದ ಕಾರ್ಯವು ಪೌತ್ರೀ ದೀಕ್ಷೆಯ ಅಂತರ್ಗತವಾಗಿದೆ. ಅದರಲ್ಲಿ ಮೊದಲಿಗೆ ಕುಂಡದಲ್ಲಿ ಅಥವಾ ವೇದಿಯಲ್ಲಿ ಅಗ್ನಿಸ್ಥಾಪನೆ ಮಾಡಿ, ಅಲ್ಲಿ ಷಡಧ್ವದ ಶೋಧನಮಾಡಿ ಹೋಮದಿಂದ ದೀಕ್ಷೆಯು ಸಂಪನ್ನವಾಗುತ್ತದೆ. ವಿಸ್ತಾರ ಭಯದಿಂದ ಹೆಚ್ಚಿನ ವಿವರಣೆಯನ್ನು ಕೊಡಲಿಲ್ಲ.

ಉಪಚಾರಗಳಿಂದ ಶಿವಯೋಗೀ ಮಹಾತ್ಮರನ್ನು ಪೂಜೆ ಮಾಡುವವನು ಶುದ್ಧನಾಗಿ ಸಾಲೋಕ್ಯ ಮುಂತಾದ ಕ್ರಮದಿಂದ ಉತ್ತರೋತ್ತರ ಉತ್ಕೃಷ್ಟ ಮುಕ್ತಿಯನ್ನು ಪಡೆದುಕೊಳ್ಳುವನು.

ದ್ವಿಜರಿರಾ! ಈಗ ನಾನು ಜಪಯೋಗವನ್ನು ವರ್ಣಿಸುವೆನು; ನೀವೆಲ್ಲರೂ ಗಮನವಿಟ್ಟು ಕೇಳಿರಿ. ತಪಸ್ಸು ಮಾಡುವವರಿಗೆ ಜಪದ ಉಪದೇಶ ಕೊಡಲಾಗಿದೆ; ಏಕೆಂದರೆ, ಅವನು ಜಪವನ್ನು ಮಾಡುತ್ತಾ-ಮಾಡುತ್ತಾ ತನ್ನನ್ನು ಸರ್ವಥಾ ಶುದ್ಧ (ನಿಷ್ಪಾಪ) ನಾಗಿಸಿಕೊಳ್ಳುವನು. ಬ್ರಾಹ್ಮಣರೇ! ಮೊದಲಿಗೆ 'ನಮಃ' ಪದವಿದ್ದು, ಅನಂತರ ಚತುರ್ಥಿ ವಿಭಕ್ತಿಯಲ್ಲಿ 'ಶಿವ' ಶಬ್ದವಿದ್ದರೆ ಪಂಚತತ್ತ್ವಾತ್ಮಕ 'ನಮಃ ಶಿವಾಯ' ಮಂತ್ರವಾಗುತ್ತದೆ. ಇದನ್ನು ಶಿವಪಂಚಾಕ್ಷರೀ ಎಂದು ಹೇಳುತ್ತಾರೆ. ಇದು ಸ್ಥೂಲ ಪ್ರಣವರೂಪವಾಗಿದೆ. ಈ ಪಂಚಾಕ್ಷರೀ ಜಪದಿಂದಲೇ ಮನುಷ್ಯನು ಸಮಸ್ತ ಸಿದ್ಧಿಗಳನ್ನು ಪಡೆದುಕೊಳ್ಳುವನು. ಪಂಚಾಕ್ಷರ ಮಂತ್ರದ ಆದಿಯಲ್ಲಿ ಓಂಕಾರವನ್ನು ಹಚ್ಚಿಯೇ ಸದಾ ಅದನ್ನು ಜಪಮಾಡಬೇಕು. ವಿಪ್ರರೇ! ಗುರುಮುಖದಿಂದ ಪಂಚಾಕ್ಷರೀ ಮಂತ್ರವನ್ನು ಉಪದೇಶಪಡೆದು, ಸುಖಪೂರ್ವಕ ನಿವಾಸ ಮಾಡಬಹುದಾದ ಉತ್ತಮ ಸ್ಥಳದಲ್ಲಿ ಶುಕ್ಲಪಕ್ಷದ ಪ್ರತಿಪದೆಯಿಂದ ಪ್ರಾರಂಭಿಸಿ ಕೃಷ್ಣ ಚತುರ್ದಶೀವರೆಗೆ ನಿರಂತರ ಜಪವನ್ನು ಮಾಡುತ್ತಾ ಇರಬೇಕು. ಮಾಘ ಮತ್ತು ಭಾದ್ರಪದ ತಿಂಗಳುಗಳಿಗೆ ತಮ್ಮದಾದ ವಿಶಿಷ್ಟ ಮಹತ್ವವಿರುತ್ತದೆ. ಈ ಸಮಯವನ್ನು ಎಲ್ಲ ಸಮಯಗಳಿಂದಲೂ ಉತ್ತಮೋತ್ತಮವೆಂದು ತಿಳಿಯಲಾಗಿದೆ. ಸಾಧಕನು ಪ್ರತಿದಿನವೂ ಒಮ್ಮೆ ಪರಿಮಿತ ಭೋಜನಮಾಡಬೇಕು. ಮೌನವಾಗಿದ್ದು, ಇಂದ್ರಿಯಗಳನ್ನು ವಶಪಡಿಸಿಕೊಳ್ಳಬೇಕು. ತನ್ನ ಸ್ವಾಮಿ ಹಾಗೂ ತಂದೆ-ತಾಯಂದಿರ ಸೇವೆಯನ್ನು ಪ್ರತಿದಿನ ಮಾಡಬೇಕು. ಇಂತಹ ನಿಯಮದಲ್ಲಿ ಇದ್ದುಕೊಂಡು ಜಪ ಮಾಡುವವನು ಒಂದು ಸಾವಿರ ಜಪದಿಂದಲೇ ಶುದ್ಧನಾಗಿ ಹೋಗುವನು. ಇಲ್ಲದಿದ್ದರೆ ಅವನು ಋಣಿಯಾಗುತ್ತಾನೆ. ಭಗವಾನ್ ಶಿವನನ್ನು ನಿರಂತರವಾಗಿ ಚಿಂತಿಸುತ್ತಾ ಐದು ಲಕ್ಷ ಪಂಚಾಕ್ಷರೀ ಮಂತ್ರವನ್ನು ಜಪಿಸಬೇಕು. ಜಪ ಕಾಲದಲ್ಲಿ ಹೀಗೆ ಧ್ಯಾನಮಾಡಬೇಕು – ಕಲ್ಯಾಣದಾತನಾದ ಭಗವಾನ್ ಶಿವನು ಕಮಲದ ಆಸನದಲ್ಲಿ ವಿರಾಜಮಾನನಾಗಿದ್ದಾನೆ. ಅವನ ಶಿರವು ಗಂಗೆ ಮತ್ತು ಚಂದ್ರನ ಕಲೆಗಳಿಂದ ಸುಶೋಭಿತವಾಗಿದೆ. ಅವನ ಎಡದ ತೊಡೆಯಲ್ಲಿ ಆದಿಶಕ್ತಿ ಉಮೆಯು ಕುಳಿತಿರುವಳು. ಅಲ್ಲಿ ಕೈಮುಗಿದುಕೊಂಡು ನಿಂತಿರುವ ದೊಡ್ಡ-ದೊಡ್ಡ ಗಣಗಳು ಭಗವಾನ್ ಶಿವನ ಶೋಭೆಯನ್ನು ಹೆಚ್ಚಿಸಿವೆ. ಮಹಾದೇವನು ತನ್ನ ನಾಲ್ಕು ಕೈಗಳಲ್ಲಿ ಮೃಗಮುದ್ರೆ, ಟಂಕ, ವರ ಮುದ್ರೆ ಮತ್ತು ಅಭಯ ಮುದ್ರೆಯನ್ನು ಧರಿಸಿರುವನು. ಈ ಪ್ರಕಾರವಾಗಿ ಸದಾಕಾಲ ಎಲ್ಲರಮೇಲೆ ಅನುಗ್ರಹವನ್ನು ತೋರುವ ಭಗವಾನ್ ಸದಾಶಿವನನ್ನು ಪದೇ-ಪದೇ ಸ್ಮರಿಸುತ್ತಾ ಇರಬೇಕು. ಮೊದಲಿಗೆ ಹೃದಯ ಅಥವಾ ಸೂರ್ಯಮಂಡಲದಲ್ಲಿ ಅವನ ಮಾನಸಿಕ ಪೂಜೆಯನ್ನು ಮಾಡಿ ಮತ್ತೆ ಪೂರ್ವಾಭಿಮುಖವಾಗಿ ಹಿಂದೆ ಹೇಳಿದ ಪಂಚಾಕ್ಷರೀ ವಿದ್ಯೆಯ ಜಪ ಮಾಡಬೇಕು. ಆ ದಿನಗಳಲ್ಲಿ ಸಾಧಕನು ಸದಾಕಾಲ ಶುದ್ಧಕರ್ಮಗಳನ್ನೇ ಮಾಡಬೇಕು. (ದುಷ್ಕರ್ಮಗಳಿಂದ ದೂರವುಳಿಯಬೇಕು.) ಕೃಷ್ಣಪಕ್ಷ ಚತುರ್ದಶಿಯಂದು ಜಪ ಸಮಾಪ್ತಿಯಲ್ಲಿ ಪ್ರಾತಃಕಾಲ ನಿತ್ಯಕರ್ಮಗಳನ್ನು ಮಾಡಿ ಶುದ್ಧ-ಸುಂದರ ಸ್ಥಾನದಲ್ಲಿ ಶೌಚ-ಸಂತೋಷಾದಿ ನಿಯಮಗಳಿಂದ ಯುಕ್ತನಾಗಿ ಶುದ್ಧ ಹೃದಯದಿಂದ ಪಂಚಾಕ್ಷರೀ ಮಂತ್ರವನ್ನು ಹನ್ನೆರಡು ಸಾವಿರ ಜಪ ಮಾಡಬೇಕು. ಅನಂತರ ಐದು ಬ್ರಾಹ್ಮಣ ದಂಪತಿಗಳನ್ನು ಹಾಗೂ ಶ್ರೇಷ್ಠ ಶಿವ ಭಕ್ತನನ್ನು ಆಮಂತ್ರಿಸಬೇಕು. ಇವರಲ್ಲದ ಒರ್ವ ಶ್ರೇಷ್ಠ ಆಚಾರ್ಯನನ್ನು ವರಣಮಾಡಿ ಅವನನ್ನು ಸಾಂಬಸದಾಶಿವನ ಸ್ವರೂಪವೆಂದು ತಿಳಿಯಬೇಕು. ಈಶಾನ, ತತ್ಪುರುಷ, ಅಘೋರ, ವಾಮದೇವ, ಸದ್ಯೋಜಾತ – ಇವರ ಪ್ರತೀಕವಾಗಿ ಐದು ಉತ್ತಮ ಶಿವಭಕ್ತ ಬ್ರಾಹ್ಮಣರನ್ನು ಆಮಂತ್ರಿಸಿ, ಬಳಿಕ ಪೂಜಾ ಸಾಮಗ್ರಿಗಳನ್ನು ಜೋಡಿಸಿಕೊಂಡು ಭಗವಾನ್ ಶಿವನ ಪೂಜೆಯನ್ನು ಪ್ರಾರಂಭಿಸಬೇಕು. ವಿಧಿವತ್ತಾಗಿ ಶಿವನ ಪೂಜೆಯನ್ನು ಮುಗಿಸಿ ಹೋಮವನ್ನು ಪ್ರಾರಂಭಿಸಬೇಕು.

ತಮ್ಮ ಗೃಹ್ಯಸೂತ್ರಕ್ಕನುಸಾರವಾಗಿ, ಪರಿಸಮೂಹನ, ಉಪಲೇಪನ, ಉಲ್ಲೇಖನ, ಮೃದ್ ಉದ್ಧರಣ, ಅಭ್ಯುಕ್ಷಣ – ಈ ಪಂಚ ಭೂ ಸಂಸ್ಕಾರದ ಬಳಿಕ ವೇದಿಯಲ್ಲಿ ಆತ್ಮಾಭಿಮುಖವಾಗಿ ಅಗ್ನಿಯನ್ನು ಪ್ರತಿಷ್ಠಾಪಿಸಬೇಕು. ಪ್ರಜ್ವಲಿತ ಅಗ್ನಿಯಲ್ಲಿ ಆಜ್ಯ ಭಾಗದವರೆಗೆ ಆಹುತಿಗಳನ್ನು ಕೊಟ್ಟು ಪ್ರಸ್ತುತ ಹೋಮವನ್ನು ಪ್ರಾರಂಭಿಸಬೇಕು. ಕಪಿಲಾ ಹಸುವಿನ ತುಪ್ಪದಿಂದ ಹನ್ನೊಂದು, ಒಂದುನೂರ ಒಂದು, ಅಥವಾ ಒಂದು ಸಾವಿರದ ಒಂದು ಆಹುತಿಗಳಿಂದ ಸ್ವತಃ ಹೋಮ ಮಾಡಬೇಕು. ಅಥವಾ ವಿದ್ವಾಂಸನಾದ ಶಿವಭಕ್ತ ಬ್ರಾಹ್ಮಣರಿಂದ ಒಂದು ನೂರ ಎಂಟು ಆಹುತಿಗಳಿಂದ ಹೋಮ ಮಾಡಿಸಬೇಕು. ಹೋಮವು ಸಮಾಪ್ತವಾದ ಮೇಲೆ ಆಚಾರ್ಯನಿಗೆ ದಕ್ಷಿಣೆಯ ರೂಪದಲ್ಲಿ ಒಂದು ಹಸು ಮತ್ತು

ಎತ್ತನ್ನು ಕೊಡಬೇಕು. ಈಶಾನ ಆದಿ ವರಣಮಾಡಿಕೊಂಡ ಐದು ಬ್ರಾಹ್ಮಣರನ್ನು ಈಶಾನ ಆದಿಸ್ವರೂಪರೆಂದು ತಿಳಿದು, ಆಚಾರ್ಯನನ್ನು ಸಾಂಬಸದಾಶಿವನ ಸ್ವರೂಪವೆಂದು ಭಾವಿಸಬೇಕು. ಇದೇ ಭಾವನೆಯಿಂದ ಅವರೆಲ್ಲರ ಕಾಲುಗಳನ್ನು ತೊಳೆದು ಆ ಚರಣೋದಕವನ್ನು ತನ್ನ ತಲೆಯಲ್ಲಿ ಚಿಮುಕಿಸಿಕೊಳ್ಳಬೇಕು. ಹೀಗೆ ಮಾಡುವುದರಿಂದ ಆ ಸಾಧಕನು ಅಗಣಿತ ತೀರ್ಥಗಳಲ್ಲಿ ಸ್ನಾನ ಮಾಡಿದ ಫಲವನ್ನು ತತ್ಕಾಲದಲ್ಲಿ ಪಡೆಯುವನು. ಹೋಮದ ದಶಾಂಶ ಬ್ರಾಹ್ಮಣರಿಗೆ ಭಕ್ತಿಯಿಂದ ಭೋಜನ ಮಾಡಿಸಬೇಕು. ಗುರುಪತ್ನಿಯನ್ನು ಪರಾಶಕ್ತಿ ಎಂದು ತಿಳಿದು ಆಕೆಯನ್ನು ಪೂಜಿಸಬೇಕು. ಈಶಾನಾದಿ ಕ್ರಮದಿಂದ ಆ ಎಲ್ಲ ಬ್ರಾಹ್ಮಣರನ್ನು ಉತ್ತಮ ರೀತಿಯಿಂದ ಪೂಜಿಸಿ, ತನ್ನ ವೈಭವ-ವಿಸ್ತಾರಕ್ಕನುಸಾರವಾಗಿ ರುದ್ರಾಕ್ಷ ವಸ್ತ್ರ, ಅಪೂಪ ಮೊದಲಾದುವನ್ನು ಅರ್ಪಿಸಬೇಕು. ಮತ್ತೆ ದಿಕ್ಪಾಲಕರಿಗೆ ಬಲಿಪ್ರದಾನ ಮಾಡಿ ಬ್ರಾಹ್ಮಣರಿಗೆ ಯಥೇಚ್ಛವಾಗಿ ಭೋಜನವನ್ನು ಮಾಡಿಸಬೇಕು. ಅನಂತರ ದೇವೇಶ್ವರ ಶಿವನಲ್ಲಿ ಪ್ರಾರ್ಥಿಸಿ, ತನ್ನ ಜಪವನ್ನು ಸಮಾಪ್ತಗೊಳಿಸಬೇಕು. ಈ ಪ್ರಕಾರವಾಗಿ ಪುರಶ್ಚರಣೆಯನ್ನು ಮಾಡಿ ಮನುಷ್ಯನು ಆ ಮಂತ್ರವನ್ನು ಸಿದ್ಧಿಗೊಳಿಸಿಕೊಳ್ಳುವನು. ಮತ್ತೆ ಐದು ಲಕ್ಷ ಜಪ ಮಾಡುವುದರಿಂದ ಸಮಸ್ತ ಪಾಪಗಳು ನಾಶವಾಗಿ ಹೋಗುವವು. ಅನಂತರ ಪುನಃ ಐದು ಲಕ್ಷ ಜಪಮಾಡಿದರೆ ಅತಲದಿಂದ ಹಿಡಿದು ಸತ್ಯಲೋಕದವರೆಗೆ ಹದಿನಾಲ್ಕು ಭುವನಗಳ ಆಧಿಕಾರವನ್ನು ಕ್ರಮವಾಗಿ ಪಡೆದುಕೊಳ್ಳುವನು.

ಅನುಷ್ಠಾನವು ಪೂರ್ಣಗೊಳ್ಳುವ ಮೊದಲೇ ಸಾಧಕನ ಮೃತ್ಯುವಾದರೆ, ಅವನು ಪರಲೋಕದಲ್ಲಿ ಉತ್ತಮ ಭೋಗಗಳನ್ನು ಅನುಭವಿಸಿ, ಪುನಃ ಪೃಥಿವಿಯಲ್ಲಿ ಹುಟ್ಟಿ ಪಂಚಾಕ್ಷರೀ ಮಂತ್ರದ ಜಪಾನುಷ್ಠಾನ ಮಾಡುವನು. ಸಮಸ್ತ ಲೋಕಗಳ ಐಶ್ವರ್ಯವನ್ನು ಪಡೆದು ಬಳಿಕ ಸಿದ್ಧಿಪಡಿಸಿಕೊಂಡ ಮಂತ್ರವನ್ನು ಅವನು ಪುನಃ ಐದು ಲಕ್ಷ ಜಪಮಾಡಿದರೆ ಬ್ರಹ್ಮದೇವರ ಸಾಮೀಪ್ಯವನ್ನು ಹೊಂದುವನು. ಪುನಃ ಐದು ಲಕ್ಷ ಜಪಮಾಡುವುದರಿಂದ ಸಾರೂಪ್ಯವೆಂಬ ಐಶ್ವರ್ಯವು ದೊರೆಯುತ್ತದೆ. ನೂರು ಲಕ್ಷ ಜಪ ಮಾಡುವುದರಿಂದ ಅವನು ಸಾಕ್ಷಾತ್ ಬ್ರಹ್ಮನಂತೇ ಆಗುವನು. ಹೀಗೆ ಕಾರ್ಯಬ್ರಹ್ಮ (ಹಿರಣ್ಯಗರ್ಭ)ನ ಸಾಯುಜ್ಯವನ್ನು ಪಡೆದು, ಅವನು ಆ ಬ್ರಹ್ಮನ ಪ್ರಳಯವಾಗುವತನಕ ಅದೇ ಲೋಕದಲ್ಲಿ ಯಥೇಚ್ಛವಾಗಿ ಭೋಗಗಳನ್ನು ಅನುಭವಿಸುವನು. ಮತ್ತೆ ಇನ್ನೊಂದು ಕಲ್ಪದ ಪ್ರಾರಂಭವಾದಾಗ ಅವನು ಬ್ರಹ್ಮದೇವರ ಪುತ್ರನಾಗುವನು. ಆಗಲೂ ಪುನಃ ತಪಸ್ಸು ಮಾಡಿ, ದಿವ್ಯ ತೇಜದಿಂದ ಪ್ರಕಾಶಿತನಾಗಿ ಕ್ರಮವಾಗಿ ಮುಕ್ತನಾಗುವನು. ಪೃಥಿವಿಯೇ ಆದಿ ಕಾರ್ಯಸ್ವರೂಪ ಭೂತಗಳ ಮೂಲಕ ಪಾತಾಳದಿಂದ ಹಿಡಿದು ಸತ್ಯಲೋಕದವರೆಗಿನ ಬ್ರಹ್ಮದೇವರ ಹದಿನಾಲ್ಕು, ಭುವನಗಳು ಕ್ರಮವಾಗಿ ನಿರ್ಮಾಣಗೊಂಡಿವೆ. ಸತ್ಯಲೋಕದ ಮೇಲೆ ಕ್ಷಮಾಲೋಕದವರೆಗೆ ಇರುವ ಹದಿನಾಲ್ಕು ಭುವನಗಳು ಭಗವಾನ್ ವಿಷ್ಣುವಿನದಾಗಿವೆ. ಕ್ಷಮಾಲೋಕದಿಂದ ಮೇಲೆ ಶುಚಿಲೋಕದವರೆಗೆ ಇಪ್ಪತ್ತೆಂಟು ಭುವನಗಳು ಸ್ಥಿತವಾಗಿವೆ. ಶುಚಿಲೋಕದ ಅಂತರ್ಗತ ಕೈಲಾಸದಲ್ಲಿ ಪ್ರಾಣಿಗಳನ್ನು ಸಂಹರಿಸುವ ರುದ್ರದೇವರು ವಿರಾಜಮಾನರಾಗಿದ್ದಾರೆ. ಶುಚಿಲೋಕದ ಮೇಲೆ ಅಹಿಂಸಾಲೋಕದವರೆಗೆ ಐವತ್ತಾರು ಭುವನಗಳ ಸ್ಥಿತಿಯಿದೆ. ಅಹಿಂಸಾಲೋಕದ ಆಶ್ರಯಪಡೆದು ಜ್ಞಾನಕೈಲಾಸವೆಂಬ ನಗರವು ಶೋಭಿಸುತ್ತದೆ. ಅದರಲ್ಲಿ ಕಾರ್ಯಭೂತ ಮಹೇಶ್ವರನು ಎಲ್ಲರಿಗೆ ಅದೃಶ್ಯನಾಗಿ ಇರುವನು. ಅಹಿಂಸಾಲೋಕದ ಅಂತ್ಯದಲ್ಲಿ ಕಾಲಚಕ್ರದ ಸ್ಥಿತಿಯಾಗಿದೆ. ಇಲ್ಲಿಯವರೆಗೆ ಮಹೇಶ್ವರನ ವಿರಾಟ್‌ಸ್ವರೂಪವನ್ನು ವರ್ಣಿಸಲಾಯಿತು. ಅಲ್ಲಿಯವರೆಗೆ ಲೋಕಗಳ ಲಯವಾಗುತ್ತದೆ. ಅದರ ಕೆಳಗೆ ಕರ್ಮಗಳ ಭೋಗವಿದೆ, ಮೇಲೆ ಜ್ಞಾನದ ಭೋಗವಿದೆ, ಅದರ ಕೆಳಗೆ ಕರ್ಮಮಾಯೆಯಿದೆ, ಅದರ ಮೇಲೆ ಜ್ಞಾನಮಾಯೆಯಿದೆ.

(ಈಗ ನಾನು ಕರ್ಮಮಾಯಾ ಮತ್ತು ಜ್ಞಾನಮಾಯಾ ಇವುಗಳ ತಾತ್ಪರ್ಯವನ್ನು ಹೇಳುತ್ತಿದ್ದೇನೆ.) 'ಮಾ' ಇದರ ಅರ್ಥ ಲಕ್ಷ್ಮೀ. ಅವಳಿಂದ ಕರ್ಮಭೋಗ 'ಯಾತ' ಪ್ರಾಪ್ತವಾಗುತ್ತದೆ. ಅದಕ್ಕಾಗಿ ಆಕೆಯನ್ನು ಮಾಯಾ ಅಥವಾ ಕರ್ಮಮಾಯಾವೆಂದು ಹೇಳುವರು. ಇದೇ ರೀತಿ ಮಾ ಅರ್ಥಾತ್ ಲಕ್ಷ್ಮೀಯಿಂದ ಜ್ಞಾನ ಭೋಗ ಯಾತ ಅರ್ಥಾತ್ ಪ್ರಾಪ್ತವಾಗುತ್ತದೆ. ಅದಕ್ಕಾಗಿ ಅವಳನ್ನು ಮಾಯಾ ಅಥವಾ ಜ್ಞಾನಮಾಯಾ ಎಂದು ಹೇಳುತ್ತಾರೆ. ಮೇಲೆ ಹೇಳಿದ ಸೀಮೆಯಿಂದ ಕೆಳಗೆ ನಶ್ವರ ಭೋಗಗಳಿವೆ ಮತ್ತು ಮೇಲೆ ನಿತ್ಯ ಭೋಗಗಳಿವೆ. ಅದರ ಕೆಳಗೆಯೇ ತಿಲೋಧಾನ ಅಥವಾ ಲಯವಿದೆ, ಮೇಲೆ ಇಲ್ಲ. ಅಲ್ಲಿಂದ ಕೆಳಗೆಯೇ ಕರ್ಮಮಯ ಪಾಶಗಳಿಂದ ಬಂಧನವಿದೆ. ಮೇಲೆ ಬಂಧನದ ಸರ್ವಥಾ ಅಭಾವವಿದೆ. ಅದಕ್ಕಿಂತ ಕೆಳಗೆಯೇ ಜೀವಿಯು ಸಕಾಮ ಕರ್ಮಗಳನ್ನು ಆಚರಿಸುತ್ತಾ ಬೇರೆ-ಬೇರೆ ಲೋಕಗಳಲ್ಲಿ ಮತ್ತು ಯೋನಿಗಳಲ್ಲಿ ಸುತ್ತುತ್ತಾ ಇರುತ್ತಾನೆ. ಅದರ ಮೇಲಿನ ಲೋಕಗಳಲ್ಲಿ ನಿಷ್ಕಾಮ ಕರ್ಮದ ಭೋಗವನ್ನೇ ಹೇಳಲಾಗಿದೆ. ಬಿಂದು ಪೂಜೆಯಲ್ಲಿ ತತ್ಪರರಾದ ಉಪಾಸಕರು

ಅಲ್ಲಿಂದ ಕೆಳಗಿನ ಲೋಕಗಳಲ್ಲೇ ಆಡ್ಡಾಡುವರು. ಅದರ ಮೇಲಿನ ಲೋಕಗಳಿಗೆ ನಿಷ್ಕಾಮಭಾವದಿಂದ ಶಿವಲಿಂಗವನ್ನು ಪೂಜಿಸುವ ಉಪಾಸಕರೇ ಹೋಗುತ್ತಾರೆ. ಏಕಮಾತ್ರ ಶಿವನದ್ದೇ ಉಪಾಸನೆಯಲ್ಲಿ ತತ್ಪರರಾದವರು ಅದರಿಂದ ಮೇಲಿನ ಲೋಕಗಳಿಗೆ ಹೋಗುತ್ತಾರೆ. ಅಲ್ಲಿಂದ ಕೆಳಗೆ ಜೀವಕೋಟಿ ಇದೆ. ಮೇಲೆ ಈಶ್ವರಕೋಟಿಯಿದೆ. ಕೆಳಗೆ ಸಂಸಾರೀ ಜೀವರು ವಾಸಿಸುತ್ತಾರೆ, ಮೇಲೆ ಮುಕ್ತರು ಇರುತ್ತಾರೆ. ಕೆಳಗೆ ಕರ್ಮಲೋಕವಿದೆ, ಮೇಲೆ ಜ್ಞಾನಲೋಕವಿದೆ. ಮೇಲೆ ಮದ-ಅಹಂಕಾರದ ನಾಶಮಾಡುವಂತಹ ನಮ್ರತೆಯಿದೆ. ಅಲ್ಲಿ ಜನ್ಮಜನಿತ ತಿರೋಧಾನವು ಇಲ್ಲ. ಅದನ್ನು ನಿವಾರಿಸದೆ ಅಲ್ಲಿ ಯಾರ ಪ್ರವೇಶವು ಸಂಭವವಿಲ್ಲ. ಹೀಗೆ ತಿರೋಧಾನವನ್ನು ನಿವಾರಿಸುವು ದರಿಂದ ಅಲ್ಲಿ ಜ್ಞಾನ ಶಬ್ದದ ಅರ್ಥವೇ ಪ್ರಕಾಶಿತ ವಾಗುತ್ತದೆ. ಆದಿಭೌತಿಕ ಪೂಜೆಯನ್ನು ಮಾಡುವವರು ಅದರಿಂದ ಕೆಳಗಿನ ಲೋಕಗಳಲ್ಲೇ ಆಲೆಯುತ್ತಾ ಇರುತ್ತಾರೆ. ಆಧ್ಯಾತ್ಮಿಕ ಉಪಾಸನೆ ಮಾಡುವವರೇ ಅದಕ್ಕಿಂತ ಮೇಲಿನ ಲೋಕಗಳಿಗೆ ಹೋಗುತ್ತಾರೆ.

ಸತ್ಯ-ಅಹಿಂಸೆ ಮೊದಲಾದ ಧರ್ಮಗಳಿಂದ, ಯುಕ್ತರಾದವರು, ಭಗವಾನ್ ಶಿವನ ಪೂಜೆಯಲ್ಲಿ ತತ್ಪರರಾದವರು ಕಾಲಚಕ್ರವನ್ನು ದಾಟಿಹೋಗುತ್ತಾರೆ. ಕಾಲಚಕ್ರೇಶ್ವರನ ಸೀಮೆಯವರೆಗೆ ತಿಳಿಸಿದ ವಿರಾಟ್ ಮಹೇಶ್ವರ ಲೋಕದಿಂದ ಮೇಲೆ ವೃಷಭದ ಆಕಾರದಲ್ಲಿ ಧರ್ಮದ ಸ್ಥಿತಿಯಿದೆ. ಅದು ಬ್ರಹ್ಮಚರ್ಯದ ಮೂರ್ತಿಮಂತ ಸ್ವರೂಪವಾಗಿದೆ. ಅದಕ್ಕೆ ಸತ್ಯ, ಶೌಚ, ಅಹಿಂಸಾ ಮತ್ತು ದಯೆ ಎಂಬ ನಾಲ್ಕು ಕಾಲುಗಳಿವೆ. ಅದು ಸಾಕ್ಷಾತ್ ಶಿವಲೋಕದ ಬಾಗಿಲಲ್ಲಿ ನಿಂತಿದೆ. ಕ್ಷಮೆ ಅದರ ಕೊಂಬುಗಳಾಗಿದೆ. ಶಮ ಕಿವಿಗಳಾಗಿದೆ. ಅದು ವೇದಧ್ವನಿರೂಪೀ ಶಬ್ದದಿಂದ ಭೂಷಿತವಾಗಿದೆ. ಆಸ್ತಿಕತೆಯೇ ಅದರ ಎರಡು ಕಣ್ಣುಗಳಾಗಿವೆ. ವಿಶ್ವಾಸವೇ ಅದರ ಶ್ರೇಷ್ಠ ಬುದ್ಧಿ ಹಾಗೂ ಮನಸ್ಸು ಆಗಿದೆ. ಕ್ರಿಯಾದಿ ಧರ್ಮರೂಪೀ ವೃಷಭವು ಕಾರಣಾದಿಗಳಲ್ಲಿ ಸ್ಥಿತವಾಗಿದೆ, ಎಂದು ತಿಳಿಯಬೇಕು. ಅಂತಹ ಕ್ರಿಯಾರೂಪೀ ವೃಷಭಾಕಾರ ಧರ್ಮದ ಮೇಲೆ ಕಾಲಾತೀತ ಶಿವನು ಆರೂಢನಾಗುವನು. ಬ್ರಹ್ಮಾ, ವಿಷ್ಣು, ಮಹೇಶ್ವರರ ತಮ್ಮ-ತಮ್ಮ ಆಯುಷ್ಯವನ್ನು ದಿನವೆಂದು ಹೇಳುವರು. ಧರ್ಮರೂಪೀ ವೃಷಭ ಸ್ಥಿತಿ ಇರುವಲ್ಲಿಂದ ಮೇಲೆ ದಿನವಾಗಲೀ, ರಾತ್ರಿಯಾಗಲೀ ಇಲ್ಲ. ಅಲ್ಲಿ ಜನ್ಮ-ಮರಣಾದಿಗಳೂ ಇಲ್ಲ. ಅಲ್ಲಿ ಪುನಃ ಕಾರಣಸ್ವರೂಪ ಬ್ರಹ್ಮನ ಕಾರಣ ಸತ್ಯಲೋಕದವರೆಗೆ ಹದಿನಾಲ್ಕು ಲೋಕಗಳು ಸ್ಥಿತವಾಗಿವೆ. ಅದು ಪಂಚಭೌತಿಕ ಗಂಧಾದಿಗಳಿಂದ ಅತೀತವಾಗಿದೆ. ಅವುಗಳ ಸನಾತನ ಸ್ಥಿತಿಯಾಗಿದೆ. ಸೂಕ್ಷ್ಮಗಂಧವೇ ಅದರ ಸ್ವರೂಪವಾಗಿದೆ. ಅದರಿಂದ ಮೇಲಕ್ಕೆ ಕಾರಣರೂಪೀ ವಿಷ್ಣುವಿನ ಹದಿನಾಲ್ಕು ಲೋಕಗಳಿವೆ. ಅದರಿಂದಲೂ ಮೇಲೆ ಪುನಃ ಕಾರಣಸ್ವರೂಪೀ ರುದ್ರನ ಇಪ್ಪತ್ತೆಂಟು ಲೋಕಗಳ ಸ್ಥಿತಿಯಿದೆ ಎಂದು ತಿಳಿಯಲಾಗಿದೆ. ಪುನಃ ಅದರ ಮೇಲೆ ಕಾರಣೇಶ ಶಿವನ ಐವತ್ತಾರು ಲೋಕಗಳು ವಿದ್ಯಮಾನವಾಗಿವೆ. ಅನಂತರ ಶಿವಸಮ್ಮತ ಬ್ರಹ್ಮಚರ್ಯಲೋಕವಿದೆ. ಅಲ್ಲಿ ಐದು ಆವರಣಗಳಿಂದ ಕೂಡಿದ ಜ್ಞಾನಮಯ ಕೈಲಾಸವಿದೆ. ಅಲ್ಲಿ ಐದು ಮಂಡಲಗಳು, ಐದು ಬ್ರಹ್ಮಕಲೆಗಳು ಮತ್ತು ಆದಿಶಕ್ತಿಯಿಂದ ಸಂಯುಕ್ತ ಆದಿಲಿಂಗವು ಪ್ರತಿಷ್ಠಿತವಾಗಿದೆ. ಅದನ್ನು ಪರಮಾತ್ಮ ಶಿವನ ಶಿವಾಲಯವೆಂದು ಹೇಳಲಾಗಿದೆ. ಅಲ್ಲಿ ಪರಾಶಕ್ತಿಯಿಂದ ಕೂಡಿದ ಪರಮೇಶ್ವರ ಶಿವನು ನಿವಾಸ ಮಾಡುತ್ತಾನೆ. ಅವನು ಸೃಷ್ಟಿ ಪಾಲನ, ಸಂಹಾರ, ತಿರೋಭಾವ ಮತ್ತು ಅನುಗ್ರಹ ಈ ಪಂಚ ಕೃತ್ಯಗಳಲ್ಲಿ ಪ್ರವೀಣನಾಗಿರುವನು. ಅವನ ಶ್ರೀವಿಗ್ರಹವು ಸಚ್ಚಿದಾನಂದ ಸ್ವರೂಪವಾಗಿದೆ. ಅವನು ಸದಾ ಧ್ಯಾನರೂಪೀ ಧರ್ಮದಲ್ಲೇ ಸ್ಥಿತನಾಗಿರುತ್ತಾನೆ ಹಾಗೂ ಸದಾಕಾಲ ಎಲ್ಲರ ಮೇಲೆ ಅನುಗ್ರಹವನ್ನು ಮಾಡುತ್ತಾ ಇರುತ್ತಾನೆ. ಅವನು ಸ್ವಾತ್ಮಾರಾಮನಾಗಿದ್ದು ಸಮಾಧಿರೂಪೀ ಆಸನದಲ್ಲಿ ಆಸೀನನಾಗಿ ನಿತ್ಯ ವಿರಾಜಮಾನನಾಗಿದ್ದಾನೆ. ಕರ್ಮ ಹಾಗೂ ಧ್ಯಾನ ಇತ್ಯಾದಿಗಳ ಅನುಷ್ಠಾನ ಮಾಡುವುದರಿಂದ ಕ್ರಮವಾಗಿ ಸಾಧನಾ ಪಥದಲ್ಲಿ ಮುಂದರಿದು ಅವನ ದರ್ಶನ ಸಾಧ್ಯವಾಗುತ್ತದೆ. ನಿತ್ಯ-ನೈಮಿತ್ತಿಕಾದಿ ಕರ್ಮಗಳ ಮೂಲಕ ದೇವತೆಗಳ ಯಜನ ಮಾಡುವುದರಿಂದ ಭಗವಾನ್ ಶಿವನ ಸಮಾರಾಧನ-ಕರ್ಮದಲ್ಲಿ ಮನಸ್ಸು ತೊಡಗುತ್ತದೆ. ಶಿವಸಂಬಂಧೀ ಇರುವ ಕ್ರಿಯಾದಿ ಕರ್ಮಗಳ ಮೂಲಕ ಶಿವಜ್ಞಾನವನ್ನು ಸಿದ್ಧಪಡಿಸಿಕೊಳ್ಳಬೇಕು. ಯಾರು ಶಿವತತ್ತ್ವವನ್ನು ಸಾಕ್ಷಾತ್ಕಾರ ಮಾಡಿಕೊಂಡಿರುವರೋ ಅಥವಾ ಯಾರ ಮೇಲೆ ಶಿವನ ಕೃಪಾದೃಷ್ಟಿಯು ಬಿದ್ದಿರುವುದೋ, ಅವರೆಲ್ಲರೂ ಮುಕ್ತರಾಗಿರುವರು; ಇದರಲ್ಲಿ ಸಂಶಯವೇ ಇಲ್ಲ. ಆತ್ಮಸ್ವರೂಪದಲ್ಲಿ ಇರುವ ಸ್ಥಿತಿಯೇ ಮುಕ್ತಿಯಾಗಿದೆ. ಏಕಮಾತ್ರ ತನ್ನ ಆತ್ಮನಲ್ಲಿ ರಮಣ ಅಥವಾ ಆನಂದವನ್ನು ಅನುಭವಿಸುವುದೇ ಮುಕ್ತಿಯ ಸ್ವರೂಪವಾಗಿದೆ. ಕ್ರಿಯಾ, ತಪಸ್ಸು, ಜಪ, ಜ್ಞಾನ ಮತ್ತು ಧ್ಯಾನರೂಪೀ ಧರ್ಮಗಳಲ್ಲಿ ಸ್ಥಿತನಾಗಿರುವವನೇ ಶಿವನ ಸಾಕ್ಷಾತ್ಕಾರ ಪಡೆದು ಸ್ವಾತ್ಮಾರಾಮತ್ವರೂಪೀ ಮೋಕ್ಷವನ್ನು

ಪಡೆದುಕೊಳ್ಳುವನು. ಸೂರ್ಯನು ತನ್ನ ಕಿರಣಗಳಿಂದ ಅಶುದ್ಧಿಯನ್ನು ದೂರ ಮಾಡಿಬಿಡುವಂತೆ, ಕೃಪೆ ಮಾಡುವುದರಲ್ಲಿ ಕುಶಲನಾದ ಭಗವಾನ್ ಶಿವನು ತನ್ನ ಭಕ್ತನ ಅಜ್ಞಾನವನ್ನು ಇಲ್ಲವಾಗಿಸುವನು. ಅಜ್ಞಾನವು ಇಲ್ಲವಾದಾಗ ಶಿವ ಜ್ಞಾನವು ತಾನಾಗಿ ಪ್ರಕಟವಾಗುವುದು. ಶಿವಜ್ಞಾನದಿಂದ ತನ್ನ ವಿಶುದ್ಧ ಸ್ವರೂಪವಾದ ಸ್ವಾತ್ಮಾರಾಮತ್ವವು ಪ್ರಾಪ್ತವಾಗುವುದು. ಸ್ವಾತ್ಮಾರಾಮತ್ವದ ಸಮ್ಯಕ್ ಸಿದ್ಧಿಯುಂಟಾದ ಮೇಲೆ ಮನುಷ್ಯನು ಕೃತಕೃತ್ಯನಾಗುತ್ತಾನೆ.

ಈ ರೀತಿಯಾಗಿ ಇಲ್ಲಿ ಹೇಳಿರುವುದೆಲ್ಲವೂ ಮೊದಲು ನನಗೆ ಗುರುಪರಂಪರೆಯಿಂದ ದೊರೆತಿದೆ. ಅನಂತರ ನಾನು ಪುನಃ ನಂದಿಕೇಶ್ವರನ ಮುಖದಿಂದ ಈ ವಿಷಯವನ್ನು ಕೇಳಿದ್ದೆ. ನಂದಿಸ್ಥಾನದಿಂದ ಅತೀತವಾದ ಸ್ವಸಂವೇದ್ಯ ಶಿವ ವೈಭವದ ಅನುಭವವು ಕೇವಲ ಭಗವಾನ್ ಶಿವನಿಗೇ ಇದೆ. ಸಾಕ್ಷಾತ್ ಶಿವಲೋಕದ ಆ ವೈಭವದ ಜ್ಞಾನವು ಎಲ್ಲರಿಗೂ ಶಿವನ ಕೃಪೆಯಿಂದಲೇ ಆಗಬಲ್ಲದು. ಅನ್ಯಥಾ ಇಲ್ಲ, ಹೀಗೆ ಆಸ್ತಿಕ ಪುರುಷರು ಹೇಳುತ್ತಾರೆ.

ಸಾಧಕನು ಐದು ಲಕ್ಷ ಜಪ ಮಾಡಿದ ಬಳಿಕ ಶಿವನ ಪ್ರಸನ್ನತೆಗಾಗಿ ಮಹಾಭಿಷೇಕ ಹಾಗೂ ನೈವೇದ್ಯವನ್ನು ನಿವೇದಿಸಿ, ಶಿವಭಕ್ತರನ್ನು ಪೂಜಿಸಬೇಕು. ಭಕ್ತನ ಪೂಜೆಯಿಂದ ಭಗವಾನ್ ಶಿವನು ಬಹಳ ಪ್ರಸನ್ನನಾಗುತ್ತಾನೆ. ಶಿವ ಮತ್ತು ಅವನ ಭಕ್ತರಲ್ಲಿ ಭೇದವೇ ಇಲ್ಲ. ಅವನು ಸಾಕ್ಷಾತ್ ಶಿವಸ್ವರೂಪನೇ ಆಗಿರುವನು. ಶಿವಸ್ವರೂಪ ಮಂತ್ರವನ್ನು ಧರಿಸಿಕೊಂಡು ಅವನು ಶಿವನೇ ಆಗಿ ಇರುತ್ತಾನೆ. ಶಿವಭಕ್ತನ ಶರೀರ ಶಿವರೂಪವೇ ಆಗಿದೆ. ಆದ್ದರಿಂದ ಅವನ ಸೇವೆಯಲ್ಲಿ ತತ್ಪರನಾಗಿ ಇರಬೇಕು. ಶಿವಭಕ್ತನಾದವನು ಲೋಕ(ಶಾಸ್ತ್ರ) ಮತ್ತು ವೇದಗಳ ಎಲ್ಲ ಕ್ರಿಯೆಗಳನ್ನು ತಿಳಿದಿರುತ್ತಾನೆ. ಕ್ರಮವಾಗಿ ಶಿವಮಂತ್ರದ ಜಪವನ್ನು ಮಾಡಿದಷ್ಟು ಅವನ ಶರೀರವು ಅಷ್ಟೇ ಶಿವನ ಸಾಮಿಪ್ಯ ಪ್ರಾಪ್ತವಾಗುತ್ತದೆ; ಇದರಲ್ಲಿ ಸಂಶಯವೇ ಬೇಡ. ಶಿವಭಕ್ತೆಯಾದ ಸ್ತ್ರೀಯ ರೂಪವು ಪಾರ್ವತೀದೇವಿಯ ಸ್ವರೂಪವೇ ಆಗಿದೆ. ಆಕೆಯು ಮಂತ್ರವನ್ನು ಜಪಿಸಿದಷ್ಟು ಆಕೆಗೆ ದೇವಿಯ ಸಾನ್ನಿಧ್ಯ ಹೆಚ್ಚು ಪ್ರಾಪ್ತವಾಗುತ್ತದೆ. ಸಾಧಕನು ಸ್ವಯಂ ಶಿವಸ್ವರೂಪನಾಗಿ ಪರಾಶಕ್ತಿಯ ಪೂಜೆಯನ್ನು ಮಾಡಬೇಕು. ಶಕ್ತಿ, ಮೂರ್ತಿ ಹಾಗೂ ಲಿಂಗದ ಚಿತ್ರವನ್ನು ರಚಿಸಿ ಅಥವಾ ಮೃತ್ತಿಕಾದಿಗಳಿಂದ ಇವುಗಳ ಆಕೃತಿಯನ್ನು ನಿರ್ಮಿಸಿ, ಪ್ರಾಣಪ್ರತಿಷ್ಠಾಪೂರ್ವಕ ನಿಷ್ಕಪಟಭಾವದಿಂದ ಅದನ್ನು ಪೂಜಿಸಬೇಕು. ಶಿವಲಿಂಗವನ್ನು ಶಿವನೆಂದು ಭಾವಿಸಿ, ತನ್ನನ್ನು ಶಕ್ತಿರೂಪನೆಂದು ತಿಳಿದುಕೊಳ್ಳಬೇಕು. ಶಕ್ತಿಲಿಂಗವನ್ನು ದೇವಿಯೆಂದು ಭಾವಿಸಿ, ತನ್ನನ್ನು ಶಿವರೂಪನೆಂದು ತಿಳಿದುಕೊಂಡು, ಶಿವಲಿಂಗವನ್ನು ನಾದರೂಪ ಹಾಗೂ ಶಕ್ತಿಯನ್ನು ಬಿಂದುರೂಪವೆಂದು ತಿಳಿದು, ಪರಸ್ಪರ ಸೇರಿಹೋದ ಶಕ್ತಿಲಿಂಗ ಮತ್ತು ಶಿವಲಿಂಗದ ಕುರಿತು ಉಪಪ್ರಧಾನ ಹಾಗೂ ಪ್ರಧಾನದ ಭಾವನೆಯನ್ನಿರಿಸಿ, ಶಿವ-ಶಕ್ತಿಯರ ಪೂಜೆಯನ್ನು ಮಾಡುವವನು ಮೂಲರೂಪದ ಭಾವನೆ ಮಾಡಿದ್ದರಿಂದ ಶಿವರೂಪನೇ ಆಗಿರುವನು. ಶಿವಭಕ್ತನು ಶಿವ-ಮಂತ್ರರೂಪವಾದ್ದರಿಂದ ಶಿವನ ಸ್ವರೂಪವೇ ಆಗಿರುವನು. ಅವನನ್ನು ಷೋಡಶೋಪಚಾರಗಳಿಂದ ಪೂಜಿಸುವವನಿಗೆ ಅಭೀಷ್ಟ ವಸ್ತುವಿನ ಪ್ರಾಪ್ತಿಯಾಗುತ್ತದೆ. ಶಿವಲಿಂಗೋಪಾಸಕನಾದ ಶಿವಭಕ್ತನನ್ನು ಸೇವಾದಿಗಳಿಂದ ಸಂತೋಷಪಡಿಸುವ ವಿದ್ವಾಂಸನ ಮೇಲೆ ಭಗವಾನ್ ಶಿವನು ಬಹಳ ಪ್ರಸನ್ನನಾಗುವನು. ಐದು, ಹತ್ತು ಅಥವಾ ನೂರು ಶಿವಭಕ್ತ ದಂಪತಿಗಳನ್ನು ಕರೆಸಿ ಭೋಜನಾದಿಗಳಿಂದ ಸಪತ್ನೀಕನಾಗಿ ಸದಾಕಾಲ ಆದರಿಸಬೇಕು. ಧನದಲ್ಲಿ, ದೇಹದಲ್ಲಿ, ಮಂತ್ರದಲ್ಲಿ ಶಿವನ ಭಾವನೆಯನ್ನಿರಿಸಿ, ಅವರನ್ನು ಶಿವ ಮತ್ತು ಶಕ್ತಿಯ ಸ್ವರೂಪವೆಂದು ತಿಳಿದು ನಿಷ್ಕಪಟ ಭಾವದಿಂದ ಅವರನ್ನು ಪೂಜಿಸಬೇಕು. ಹೀಗೆ ಮಾಡುವವನು ಈ ಭೂಮಿಯಲ್ಲಿ ಪುನಃ ಹುಟ್ಟುವುದಿಲ್ಲ, ಮುಕ್ತನಾಗಿ ಹೋಗುವನು.

(ಅಧ್ಯಾಯ - ೧೭)

❐ ❐ ❐

ಬಂಧನ ಮತ್ತು ಮೋಕ್ಷದ ವಿವೇಚನೆ, ಶಿವಪೂಜೆಯ ಉಪದೇಶ, ಲಿಂಗರೂಪೀ ಶಿವಪೂಜೆಯ ವಿಧಾನ, ಭಸ್ಮದ ಸ್ವರೂಪ ಮತ್ತು ಮಹತ್ವ, ಶಿವ ಹಾಗೂ ಗುರು ಶಬ್ದದ ವ್ಯುತ್ಪತ್ತಿ, ಶಿವನ ಭಸ್ಮಧಾರಣೆಯ ರಹಸ್ಯ

ಋಷಿಗಳು ಕೇಳಿದರು - ಸರ್ವಜ್ಞರಲ್ಲಿ ಶ್ರೇಷ್ಠರಾದ ಸೂತಪುರಾಣಿಕರೇ ! ಬಂಧನ ಮತ್ತು ಮೋಕ್ಷ ಇವುಗಳ ಸ್ವರೂಪವೇನು? ಇದನ್ನು ದಯವಿಟ್ಟು ನಮಗೆ ತಿಳಿಸಿರಿ.

ಸೂತಪುರಾಣಿಕರು ಹೇಳುತ್ತಾರೆ- ಮಹರ್ಷಿಗಳಿರಾ ! ಬಂಧನ ಹಾಗೂ ಮೋಕ್ಷ ಇವುಗಳ ಸ್ವರೂಪವನ್ನು ನಾನು ನಿಮಗೆ ತಿಳಿಸುವೆನು. ಜೊತೆಗೆ ಮೋಕ್ಷೋಪಾಯವನ್ನು ಹೇಳುವೆನು. ನೀವು ಆದರದಿಂದ ಕೇಳಿರಿ. ಪ್ರಕೃತಿಯ ಎಂಟು ಬಂಧನಗಳಿಂದ ಬಂಧಿತನಾದ ಜೀವಿಯು ಬದ್ಧನಾಗಿರುವನು; ಹಾಗೂ ಆ ಎಂಟು ಬಂಧನಗಳಿಂದ ಬಿಡಲ್ಪಟ್ಟವನು ಮುಕ್ತನಾಗಿದ್ದಾನೆ ಎಂದು ಹೇಳಬೇಕು. ಪ್ರಕೃತಿ ಮುಂತಾದುವನ್ನು ವಶಪಡಿಸಿಕೊಳ್ಳುವುದನ್ನು ಮೋಕ್ಷವೆಂದು ಹೇಳುತ್ತಾರೆ. ಬಂಧನವು ಆಗಂತುಕವಾಗಿದೆ, ಮೋಕ್ಷವು ಸ್ವತಃಸಿದ್ಧವಾಗಿದೆ. ಬದ್ಧ ಜೀವಿಯು ಬಂಧನದಿಂದ ಮುಕ್ತನಾದಾಗ ಅವನನ್ನು ಮುಕ್ತಜೀವಿ ಎಂದು ಹೇಳುತ್ತಾರೆ. ಪ್ರಕೃತಿ, ಬುದ್ಧಿ (ಮಹತ್ತತ್ವ), ತ್ರಿಗುಣಾತ್ಮಕ ಅಹಂಕಾರ ಮತ್ತು ಪಂಚ-ತನ್ಮಾತ್ರೆಗಳು - ಇವುಗಳನ್ನು ಜ್ಞಾನಿಗಳು ಪ್ರಕೃತ್ಯಾದ್ಯಷ್ಟಕವೆಂದು ತಿಳಿಯುತ್ತಾರೆ. ಪ್ರಕೃತಿಯೇ ಆದಿ ಎಂಟು ತತ್ತ್ವಸಮೂಹದಿಂದ ದೇಹದ ಉತ್ಪತ್ತಿಯಾಗುತ್ತದೆ. ದೇಹದಿಂದ ಕರ್ಮವು ಉಂಟಾಗುತ್ತದೆ ಮತ್ತೆ ಕರ್ಮದಿಂದ ಹೊಸದೇಹದ ಉತ್ಪತ್ತಿಯಾಗುತ್ತದೆ. ಹೀಗೆ ಪದೇ-ಪದೇ ಜನ್ಮ ಮತ್ತು ಕರ್ಮಗಳು ನಡೆಯುತ್ತಾ ಇರುತ್ತವೆ. ಶರೀರವನ್ನು ಸ್ಥೂಲ, ಸೂಕ್ಷ್ಮ ಕಾರಣ-ಎಂಬ ಭೇದದಿಂದ ಮೂರು ಪ್ರಕಾರದ್ದಾಗಿದೆ ಎಂದು ತಿಳಿಯಬೇಕು. ಸ್ಥೂಲ ಶರೀರವು (ಜಾಗ್ರತ್ ಅವಸ್ಥೆಯಲ್ಲಿ) ವ್ಯವಹಾರ ಮಾಡುವುದು, ಸೂಕ್ಷ್ಮ ಶರೀರವು (ಜಾಗ್ರತ್ ಮತ್ತು ಸ್ವಪ್ನಾವಸ್ಥೆಯಲ್ಲಿ) ಇಂದ್ರಿಯ ಭೋಗಗಳನ್ನು ಕೊಡುವಂತಹುದು. ಕಾರಣ ಶರೀರವು (ಸುಷುಪ್ತಿ ಅವಸ್ಥೆಯಲ್ಲಿ) ಆತ್ಮಾನಂದದ ಅನುಭೂತಿಯನ್ನು ತಂದುಕೊಡುತ್ತದೆ ಎಂದು ಹೇಳುವರು. ಜೀವಿಗೆ ಅವನ ಪ್ರಾರಬ್ಧ - ಕರ್ಮಕ್ಕನುಸಾರ ಸುಖ - ದುಃಖಿಗಳು ಪ್ರಾಪ್ತವಾಗುತ್ತವೆ. ಅವನು ತನ್ನ ಪುಣ್ಯಕರ್ಮಗಳ ಫಲಸ್ವರೂಪ ಸುಖವನ್ನು ಹಾಗೂ ಪಾಪಕರ್ಮಗಳ ಫಲಸ್ವರೂಪ ದುಃಖವನ್ನು ಅನುಭವಿಸುತ್ತಾನೆ. ಅದರಿಂದ ಕರ್ಮಪಾಶದಿಂದ ಬಂಧಿತನಾದ ಜೀವಿಯು ತನ್ನ ತ್ರಿವಿಧ ಶರೀರಗಳಿಂದ ಉಂಟಾಗುವ ಶುಭಾಶುಭ ಕರ್ಮಗಳ ಮೂಲಕ ಸದಾಕಾಲ ಚಕ್ರದಂತೆ ಸುತ್ತುತ್ತಾ ಇರುತ್ತಾನೆ. ಈ ಚಕ್ರದಂತಹ ಭ್ರಮಣದ ನಿವೃತ್ತಿಗಾಗಿ ಚಕ್ರಕರ್ತನ ಸ್ತೋತ್ರ ಹಾಗೂ ಆರಾಧನೆಯನ್ನು ಮಾಡಬೇಕು. ಪ್ರಕೃತಿಯ ಎಂಟು ಪಾಶಗಳ ಸಮುದಾಯವೇ ಮಹಾಚಕ್ರವಾಗಿದೆ, ಪರಮಾತ್ಮಾ ಶಿವನು ಪ್ರಕೃತಿಯಿಂದ ಅತೀತನಾಗಿದ್ದಾನೆ. ಭಗವಾನ್ ಮಹೇಶ್ವರನೇ ಪ್ರಕೃತ್ಯಾದಿ ಮಹಾಚಕ್ರದ ಕರ್ತೃನಾಗಿದ್ದಾನೆ; ಏಕೆಂದರೆ, ಅವನು ಪ್ರಕೃತಿಯಿಂದ ಅತೀತನಾಗಿರುವನು. ಶಿವನು ಪ್ರಕೃತಿಯನ್ನು ತನ್ನ ವಶದಲ್ಲಿರಿಸಿಕೊಂಡು, ಅದನ್ನು ನಿಯಮನಮಾಡುವನು. ಅವನು ಎಲ್ಲರನ್ನೂ ವಶಪಡಿಸಿಕೊಂಡಿರುವನು, ಅದಕ್ಕಾಗಿ ಅವನನ್ನು ಶಿವನೆಂದು ಹೇಳುತ್ತಾರೆ. ಶಿವನೇ ಸರ್ವಜ್ಞನೂ, ಪರಿಪೂರ್ಣನೂ, ನಿಸ್ಪೃಹನೂ ಆಗಿರುವನು. ಸರ್ವಜ್ಞತೆ, ತೃಪ್ತಿ, ಅನಾದಿಬೋಧ, ಸ್ವತಂತ್ರತೆ, ನಿತ್ಯ ಅಲುಪ್ತ ಶಕ್ತಿಯಿಂದ ಕೂಡಿರುವುದು, ತನ್ನೊಳಗೆ ಅನಂತ ಶಕ್ತಿಗಳನ್ನು ಧರಿಸಿಕೊಂಡಿರುವುದು ಮಹೇಶ್ವರನ ಮಾನಸಿಕ ಐಶ್ವರ್ಯಗಳಾದ ಈ ಆರು ಪ್ರಕಾರಗಳನ್ನು ಕೇವಲ ವೇದಗಳೇ ತಿಳಿಯುತ್ತವೆ. ಆದ್ದರಿಂದ ಭಗವಾನ್ ಶಿವನ ಅನುಗ್ರಹದಿಂದಲೇ ಪ್ರಕೃತಿಯ ಎಂಟು ತತ್ತ್ವಗಳೂ ವಶವಾಗುತ್ತವೆ. ಭಗವಾನ್ ಶಿವನ ಕೃಪಾ-ಪ್ರಸಾದವನ್ನು ಪಡೆಯಲು ಅವನನ್ನೇ ಪೂಜಿಸಬೇಕು.

ಶಿವನಾದರೋ ಪರಿಪೂರ್ಣನಾಗಿರುವನು. ನಿಸ್ಪೃಹನಾಗಿರುವನು. ಅವನ ಪೂಜೆ ಹೇಗಾಗಬಲ್ಲದು? ಎಂದು ಕೇಳಿದರೆ, ಅದರ ಉತ್ತರ ಹೀಗಿದೆ - ಶಿವನ ಉದ್ದೇಶದಿಂದ, ಅವನ ಪ್ರಸನ್ನತೆಗಾಗಿ ಮಾಡುವ ಸತ್ಕರ್ಮವು ಶಿವನ ಕೃಪಾಪ್ರಸಾದವನ್ನು ದೊರಕಿಸಿಕೊಡುತ್ತದೆ. ಶಿವ-ಲಿಂಗದಲ್ಲಿ, ಶಿವನ ಪ್ರತಿಮೆಯಲ್ಲಿ ಹಾಗೂ ಶಿವಭಕ್ತರಲ್ಲಿ ಶಿವನನ್ನು ಭಾವಿಸಿ, ಅವನ ಪ್ರಸನ್ನತೆಗಾಗಿ ಪೂಜೆ ಮಾಡಬೇಕು. ಆ ಪೂಜೆಯನ್ನು ಶರೀರದಿಂದ,ಮನಸ್ಸಿನಿಂದ, ವಾಣಿಯಿಂದ ಮತ್ತು ಧನದಿಂದ ಮಾಡಲಾಗುತ್ತದೆ. ಆ ಪೂಜೆಯಿಂದ ಪ್ರಕೃತಿಗೆ ಪರನಾದ ಮಹೇಶ್ವರ ಶಿವನು ಪೂಜಕನ ಮೇಲೆ ವಿಶೇಷ ಕೃಪೆಗೈಯ್ಯುವನು; ಅವನ ಆ ಕೃಪಾ-ಪ್ರಸಾದವು ಸತ್ಯವಾಗಿರುತ್ತದೆ. ಶಿವನ ಕೃಪೆಯಿಂದ ಕರ್ಮವೇ ಮುಂತಾದ ಎಲ್ಲ ಬಂಧನಗಳು ನಮ್ಮ ವಶವಾಗುತ್ತವೆ. ಕರ್ಮದಿಂದ ಹಿಡಿದು ಪ್ರಕೃತಿಯವರೆಗಿನ ಎಲ್ಲವೂ ವಶವಾದಾಗ ಆ ಜೀವಿಯನ್ನು ಮುಕ್ತನೆಂದು ಹೇಳುವರು ಮತ್ತು

ಸ್ವಾತ್ಮಾರಾಮರೂಪದಿಂದ ವಿರಾಜಿಸುವನು. ಪರಮೇಶ್ವರ ಶಿವನ ಕೃಪೆಯಿಂದ ಕರ್ಮಜನಿತ ಶರೀರವು ತನ್ನ ವಶವಾದಾಗ ಭಗವಾನ್ ಶಿವನ ಲೋಕದಲ್ಲಿ ವಾಸಿಸುವ ಸೌಭಾಗ್ಯವು ಪ್ರಾಪ್ತವಾಗುತ್ತದೆ. ಇದನ್ನೇ ಸಾಲೋಕ್ಯ ಮುಕ್ತಿ ಎಂದು ಹೇಳುವರು. ತನ್ಮಾತ್ರೆಗಳು ವಶವಾದಾಗ ಜೀವನು ಜಗದಂಬಾಸಹಿತ ಶಿವನ ಸಾಮೀಪ್ಯವನ್ನು ಪಡೆದು ಕೊಳ್ಳುವನು, ಇದು ಸಾಮೀಪ್ಯ ಮುಕ್ತಿಯಾಗಿದೆ. ಇದರಿಂದ ಅವನ ಆಯುಧಾದಿಗಳು ಮತ್ತು ಕ್ರಿಯೆಗಳಿಲ್ಲವೂ ಭಗವಾನ್ ಶಿವನಂತೆಯೇ ಆಗುವುವು. ಭಗವಂತನ ಮಹಾಪ್ರಸಾದವು ಪ್ರಾಪ್ತವಾದಾಗ ಬುದ್ಧಿಯೂ ವಶವಾಗುತ್ತದೆ. ಬುದ್ಧಿಯು ಪ್ರಕೃತಿಯ ಕಾರ್ಯವಾಗಿದೆ, ಅದು ವಶವಾಗುವುದನ್ನು ಸಾರ್ಷ್ಟಿಮುಕ್ತಿ ಎಂದು ಹೇಳಲಾಗಿದೆ. ಪುನಃ ಭಗವಂತನ ಮಹತ್ತರ ಅನುಗ್ರಹವು ಪ್ರಾಪ್ತವಾದಾಗ ಪ್ರಕೃತಿಯು ವಶವಾಗುತ್ತದೆ. ಆಗ ಭಗವಾನ್ ಶಿವನ ಮಾನಸಿಕ ಐಶ್ವರ್ಯವು ಪ್ರಯತ್ನವಿಲ್ಲದೆಯೇ ಪ್ರಾಪ್ತವಾದೀತು. ಸರ್ವಜ್ಞತೆ, ತೃಪ್ತಿಯೇ ಮುಂತಾದವುಗಳು ಶಿವನ ಐಶ್ವರ್ಯವಾಗಿದೆ. ಅವನ್ನು ಪಡೆದ ಮುಕ್ತ ಪುರುಷನು ತನ್ನ ಆತ್ಮನಲ್ಲೇ ವಿರಾಜಮಾನನಾಗುತ್ತಾನೆ. ವೇದ ಮತ್ತು ಶಾಸ್ತ್ರಗಳಲ್ಲಿ ವಿಶ್ವಾಸವುಳ್ಳ ವಿದ್ವಾಂಸರು ಇದನ್ನೇ ಸಾಯುಜ್ಯ ಮುಕ್ತಿ ಎಂದು ಹೇಳುತ್ತಾರೆ. ಹೀಗೆ ಲಿಂಗಾದಿಗಳಲ್ಲಿ ಶಿವನ ಪೂಜೆ ಮಾಡುವುದರಿಂದ ಕ್ರಮವಾಗಿ ಮುಕ್ತಿಯು ಸ್ವತಃ ಪ್ರಾಪ್ತವಾಗುತ್ತದೆ. ಅದಕ್ಕಾಗಿ ಶಿವನ ಕೃಪಾ-ಪ್ರಸಾದವನ್ನು ಪಡೆದುಕೊಳ್ಳಲು, ಅವನಿಗೆ ಸಂಬಂಧಿಸಿದ ಕ್ರಿಯಾದಿಗಳ ಮೂಲಕ ಅವನನ್ನೇ ಪೂಜಿಸಬೇಕು. ಶಿವಕ್ರಿಯೆ, ಶಿವತಪ, ಶಿವಮಂತ್ರ-ಜಪ, ಶಿವಜ್ಞಾನ ಮತ್ತು ಶಿವಧ್ಯಾನಕ್ಕಾಗಿ ಸದಾಕಾಲ ಉತ್ತರೋತ್ತರ ಅಭ್ಯಾಸವನ್ನು ಹೆಚ್ಚಿಸಬೇಕು. ಪ್ರತಿದಿನವೂ ಬೆಳಿಗ್ಗಿನಿಂದ ರಾತ್ರೆ ಮಲಗುವತನಕ ಮತ್ತು ಹುಟ್ಟಿನಿಂದ ಸಾಯುವತನಕ ಎಲ್ಲ ಸಮಯವನ್ನು ಭಗವಾನ್ ಶಿವನ ಚಿಂತನೆಯಲ್ಲೇ ಕಳೆಯಬೇಕು. ಸದ್ಯೋಜಾತಾದಿ ಮಂತ್ರಗಳಿಂದ ಹಾಗೂ ನಾನಾ ರೀತಿಯ ಪುಷ್ಪಗಳಿಂದ ಶಿವನನ್ನು ಪೂಜಿಸುವವನು ಶಿವನನ್ನೇ ಪಡೆದುಕೊಳ್ಳುವನು.

ಋಷಿಗಳು ಕೇಳಿದರು-ಉತ್ತಮ ವ್ರತಗಳನ್ನು ಪಾಲಿಸುವ ಸೂತಪುರಾಣಿಕರೇ ! ಲಿಂಗವೇ ಮೊದಲಾದುವುಗಳಲ್ಲಿ ಶಿವನ ಪೂಜೆಯ ವಿಧಾನವೇನು ? ಇದನ್ನು ನಮಗೆ ತಿಳಿಸಿರಿ.

ಸೂತಪುರಾಣಿಕರು ಹೇಳುತ್ತಾರೆ - ದ್ವಿಜರಿರಾ ! ನಾನು ಲಿಂಗದ ಕ್ರಮವನ್ನು ಯಥಾವತ್ತಾಗಿ ವರ್ಣಿಸುವೆನು, ನೀವೆಲ್ಲರೂ ದತ್ತಚಿತ್ತರಾಗಿ ಕೇಳಿರಿ. ಪ್ರಣವವೇ ಸರ್ವಾಭೀಷ್ಟ ವಸ್ತುಗಳನ್ನು ಕೊಡುವಂತಹ ಪ್ರಥಮ ಲಿಂಗವಾಗಿದೆ. ಅದನ್ನು ಸೂಕ್ಷ್ಮಪ್ರಣವವೆಂದು ತಿಳಿಯಿರಿ. ಸೂಕ್ಷ್ಮಲಿಂಗವು ನಿಷ್ಕಲ(ನಿರಾಕಾರ) ಮತ್ತು ಸ್ಥೂಲ ಲಿಂಗವು ಸಕಲ (ಸಾಕಾರ)ವಾಗಿರುತ್ತದೆ. ಪಂಚಾಕ್ಷರೀ ಮಂತ್ರವನ್ನೇ ಸ್ಥೂಲಲಿಂಗವೆಂದು ಹೇಳುವರು. ಇವೆರಡೂ ರೀತಿಯ ಲಿಂಗಗಳ ಪೂಜೆಯು ತಪಸ್ಸೆಂದು ಹೇಳುವರು. ಇವೆರಡೂ ಲಿಂಗಗಳು ಸಾಕ್ಷಾತ್ ಮೋಕ್ಷವನ್ನು ಕರುಣಿಸುವುದು. ಪೌರುಷಲಿಂಗ ಮತ್ತು ಪ್ರಕೃತಿಲಿಂಗ ಹೀಗೆ ಬಹಳಷ್ಟು ಲಿಂಗಗಳಿವೆ. ಅದನ್ನು ಭಗವಾನ್ ಶಿವನೇ ವಿಸ್ತಾರವಾಗಿ ಹೇಳಬಲ್ಲನು; ಬೇರೆಯಾರೂ ಅರಿಯರು. ಪೃಥಿವಿಯ ವಿಕಾರಭೂತ ಯಾವ-ಯಾವ ಲಿಂಗಗಳೆಂದು ತಿಳಿಯಲಾಗಿದೆಯೋ, ಅವೆಲ್ಲವನ್ನು ನಾನು ನಿಮಗೆ ಹೇಳುವೆನು. ಅವುಗಳಲ್ಲಿ ಸ್ವಯಂಭೂಲಿಂಗವು ಮೊದಲನೆಯದು, ಎರಡನೆಯದು ಬಿಂದುಲಿಂಗವು, ಮೂರನೆಯದು ಪ್ರತಿಷ್ಠಿತಲಿಂಗ, ನಾಲ್ಕನೆಯದು ಚರಲಿಂಗ ಮತ್ತು ಐದನೆಯದು ಗುರುಲಿಂಗವಾಗಿದೆ. ದೇವರ್ಷಿಗಳ ತಪಸ್ಸಿನಿಂದ ಸಂತುಷ್ಟನಾಗಿ, ಅವರ ಸಮೀಪದಲ್ಲಿ ಪ್ರಕಟನಾಗಲು, ಪೃಥಿವಿಯ ಒಳಗೆ ಬೀಜರೂಪದಿಂದ ವ್ಯಾಪ್ತನಾದ ಭಗವಾನ್ ಶಿವನು- ವೃಕ್ಷಗಳ ಚಿಗುರುಗಳಂತೆ ಭೂಮಿಯನ್ನು ಭೇದಿಸಿಕೊಂಡು ನಾದಲಿಂಗದ ರೂಪದಲ್ಲಿ ವ್ಯಕ್ತನಾಗುವನು. ಸ್ವತಃ ವ್ಯಕ್ತನಾದ ಶಿವನೇ ಸ್ವಯಂ ಪ್ರಕಟನಾದ ಕಾರಣ ಸ್ವಯಂಭೂ ಎಂಬ ಹೆಸರನ್ನು ಪಡೆಯುವನು. ಜ್ಞಾನಿಗಳು ಅವನನ್ನು ಸ್ವಯಂಭೂಲಿಂಗದ ರೂಪದಲ್ಲಿ ತಿಳಿಯುತ್ತಾರೆ. ಆ ಸ್ವಯಂಭೂಲಿಂಗದ ಪೂಜೆಯಿಂದ ಉಪಾಸಕನ ಜ್ಞಾನವು ತಾನಾಗಿ ಹೆಚ್ಚಿತ್ತೊಡಗುತ್ತದೆ. ಚಿನ್ನ-ಬೆಳ್ಳಿ ಮುಂತಾದ ಪತ್ರಗಳಮೇಲೆ, ಭೂಮಿಯ ಮೇಲೆ ವೇದಿಕೆಯ ಮೇಲೆ, ತನ್ನ ಕೈಯಿಂದ ಬರೆದ ಶುದ್ಧ ಪ್ರಣವ ಮಂತ್ರರೂಪ ಲಿಂಗದಲ್ಲಿ ಹಾಗೂ ಮಂತ್ರಲಿಂಗವನ್ನು ಅಲೇಖನ ಮಾಡಿ ಅದರಲ್ಲಿ ಭಗವಾನ್ ಶಿವನ ಪ್ರತಿಷ್ಠೆ ಮತ್ತು ಆವಾಹನೆಯನ್ನು ಮಾಡಬೇಕು. ಇಂತಹ ಬಿಂದುನಾದಮಯ ಲಿಂಗವು ಸ್ಥಾವರ ಮತ್ತು ಜಂಗಮ ಎರಡೂ ವಿಧದಿಂದ ಇರುತ್ತದೆ. ಇದರಲ್ಲಿ ಶಿವನ ದರ್ಶನವು ಭಾವನಾಮಯವೇ ಆಗಿದೆ ಎಂದು ನಿಃಸಂದೇಹವಾಗಿ ಹೇಳಬಹುದು. ಯಾರಿಗೆ ಎಲ್ಲಿ ಭಗವಾನ್ ಶಂಕರನು ಪ್ರಕಟನಾಗುವ ವಿಶ್ವಾಸವಿದೆಯೋ, ಅವನಿಗಾಗಿ ಅಲ್ಲೇ ಪ್ರಕಟನಾಗಿ ಶಿವನು ಅಭೀಷ್ಟಫಲವನ್ನು ಕರುಣಿಸುತ್ತಾನೆ. ತನ್ನ ಕೈಯಿಂದ ಬರೆದ ಯಂತ್ರದಲ್ಲಿ ಅಥವಾ ಅಕೃತ್ರಿಮವಾದ ಸ್ಥಾವರಾದಿಗಳಲ್ಲಿ ಭಗವಾನ್ ಶಿವನನ್ನು ಆವಾಹನೆ ಮಾಡಿ ಷೋಡಶೋಪಚಾರಗಳಿಂದ ಅವನನ್ನು ಪೂಜಿಸಬೇಕು. ಹೀಗೆ

ಮಾಡುವುದರಿಂದ ಸಾಧಕನು ಸ್ವಯಂ ಐಶ್ವರ್ಯವನ್ನು ಪಡೆದುಕೊಳ್ಳುವನು ಹಾಗೂ ಈ ಸಾಧನೆಯ ಅಭ್ಯಾಸದಿಂದ ಅವನಿಗೆ ಜ್ಞಾನವೂ ಉಂಟಾಗುತ್ತದೆ. ದೇವತೆಗಳು ಮತ್ತು ಋಷಿಗಳು ಆತ್ಮಸಿದ್ಧಿಗಾಗಿ ತನ್ನ ಕೈಯಿಂದ ವೈದಿಕ ಮಂತ್ರೋಚ್ಚಾರಪೂರ್ವಕ ಶುದ್ಧ ಮಂಡಲದಲ್ಲಿ ಶುದ್ಧ ಭಾವನೆಯಿಂದ ಉತ್ತಮ ಶಿವಲಿಂಗವನ್ನು ಸ್ಥಾಪಿಸಿರುವುದನ್ನು ಪೌರುಷಲಿಂಗವೆಂದು ಹೇಳುವರು. ಹಾಗೂ ಅದನ್ನೇ ಪ್ರತಿಷ್ಠಿತ ಲಿಂಗವೆಂದೂ ಹೇಳುವರು. ಆ ಲಿಂಗದ ಪೂಜೆ ಮಾಡುವುದರಿಂದ ಸದಾ ಪೌರುಷ ಐಶ್ವರ್ಯದ ಪ್ರಾಪ್ತಿಯಾಗುತ್ತದೆ. ಮಹಾನ್ ಬ್ರಾಹ್ಮಣ ಮತ್ತು ಶ್ರೀಮಂತನಾದ ರಾಜನು ಯಾರೋ ಶಿಲ್ಪಿಯಿಂದ ಶಿವಲಿಂಗವನ್ನು ನಿರ್ಮಿಸಿಕೊಂಡು, ಮಂತ್ರಪೂರ್ವಕ ಅದನ್ನು ಸ್ಥಾಪಿಸಿದರೆ ಅದನ್ನೂ ಕೂಡ ಪ್ರತಿಷ್ಠಿತ ಲಿಂಗವೆಂದು ಹೇಳುತ್ತಾರೆ. ಆದರೆ ಅದು ಪ್ರಾಕೃತಲಿಂಗವಾಗಿದೆ. ಅದ್ದರಿಂದ ಪ್ರಾಕೃತ ಐಶ್ವರ್ಯ-ಭೋಗಗಳನ್ನೇ ಕೊಡುವುದು. ಶಕ್ತಿಶಾಲಿಯೂ, ನಿತ್ಯವೂ ಆದ ಲಿಂಗವನ್ನು ಪೌರುಷವೆಂದು ಹೇಳುತ್ತಾರೆ. ದುರ್ಬಲವೂ, ಅನಿತ್ಯವೂ ಆದುದು ಪ್ರಾಕೃತವೆಂದು ಹೇಳುವರು.

ಲಿಂಗ, ನಾಭಿ, ಜಿಹ್ವೆ, ನಾಸಾಗ್ರ ಮತ್ತು ಶಿರೆಯ ಕ್ರಮದಿಂದ ಕಟಿ, ಹೃದಯ ಹಾಗೂ ಮಸ್ತಕ ಮೂರೂ ಸ್ಥಾನಗಳಲ್ಲಿ ಭಾವಿಸುವ ಆಧ್ಯಾತ್ಮಿಕ ಲಿಂಗವನ್ನು ಚರಲಿಂಗ ವೆಂದೇ ಹೇಳುತ್ತಾರೆ. ಪರ್ವತವನ್ನು ಪೌರುಷಲಿಂಗ ವೆಂದೂ, ಭೂತಲವನ್ನು ಪ್ರಾಕೃತಲಿಂಗವೆಂದೂ ವಿದ್ವಾಂಸರು ಭಾವಿಸರು. ವೃಕ್ಷಾದಿಗಳನ್ನು ಪೌರುಷಲಿಂಗವೆಂದು ತಿಳಿಯಬೇಕು. ಗಿಡ – ಪೊದೆಗಳನ್ನು ಪ್ರಾಕೃತಲಿಂಗವೆಂದು ಅರಿಯಬೇಕು. ಸಾಠಿ ಎಂಬ ಧಾನ್ಯವನ್ನು ಪ್ರಾಕೃತಲಿಂಗವೆಂದು ತಿಳಿಯಬೇಕು ಮತ್ತು ಅಕ್ಕಿ-ಗೋಧಿಗಳನ್ನು ಪೌರುಷಲಿಂಗ ವೆಂದು ತಿಳಿಯಬೇಕು. ಅಣಿಮಾದಿ ಅಷ್ಟಸಿದ್ಧಿಗಳನ್ನು ಕೊಡುವಂತಹ ಐಶ್ವರ್ಯವನ್ನು ಪುರುಷ-ಐಶ್ವರ್ಯವೆಂದು ತಿಳಿಯಬೇಕು. ಸುಂದರ ಪತ್ನೀ ಹಾಗೂ ಧನ ಮುಂತಾದ ವಿಷಯಗಳನ್ನು ಆಸ್ತಿಕರು ಪ್ರಾಕೃತ ಐಶ್ವರ್ಯವೆಂದು ಹೇಳುವರು. ಚರಲಿಂಗಗಳಲ್ಲಿ ಮೊಟ್ಟ ಮೊದಲಿಗೆ ರಸಲಿಂಗದ ವರ್ಣನೆ ಮಾಡಲಾಗುತ್ತದೆ. ರಸಲಿಂಗವು ಬ್ರಾಹ್ಮಣರ ಎಲ್ಲ ಅಭೀಷ್ಟ ವಸ್ತುಗಳನ್ನು ಕೊಡುವುದು. ಶುಭಕರವಾದ ಬಾಣಲಿಂಗವು ಕ್ಷತ್ರಿಯರಿಗೆ ಮಹಾನ್ ರಾಜ್ಯದ ಪ್ರಾಪ್ತಿಮಾಡಿ ಕೊಡುವುದು. ಸುವರ್ಣಲಿಂಗವು ವೈಶ್ಯರಿಗೆ ಮಹಾಧನಪತಿಯ ಸ್ಥಾನವನ್ನು ಕರುಣಿಸುವುದು. ಸುಂದರ ಶಿವಲಿಂಗವು ಶೂದ್ರರಿಗೆ ಮಹಾಶುದ್ಧಿಯನ್ನು ಕೊಡುವುದು. ಸ್ಫಟಿಕಮಯಲಿಂಗ ಹಾಗೂ ಬಾಣಲಿಂಗವು ಎಲ್ಲ ಜನರಿಗೆ ಅವರ ಕಾಮನೆಗಳನ್ನು ಕರುಣಿಸುವುದು. ತನ್ನದಲ್ಲದಿದ್ದರೂ ಬೇರೆಯವರ ಸ್ಫಟಿಕ ಅಥವಾ ಬಾಣಲಿಂಗವು ಪೂಜೆಗೆ ನಿಷಿದ್ಧವಿಲ್ಲ. ವಿಶೇಷವಾಗಿ ಮುತ್ತೈದೆಯರಿಗೆ ಪಾರ್ಥಿವ ಲಿಂಗಪೂಜೆಯ ವಿಧಾನವಿದೆ. ಪ್ರವೃತ್ತಿಮಾರ್ಗದಲ್ಲಿ ಸ್ಥಿತರಾದ ವಿಧವೆಯರಿಗೆ ಸ್ಫಟಿಕಲಿಂಗದ ಪೂಜೆ ಹೇಳಲಾಗಿದೆ. ಆದರೆ ವಿರಕ್ತ ವಿಧವೆಯರಿಗೆ ರಸಲಿಂಗದ ಪೂಜೆಯೇ ಶ್ರೇಷ್ಠವೆಂದು ಹೇಳಲಾಗಿದೆ. ಉತ್ತಮ ವ್ರತಗಳನ್ನು ಪಾಲಿಸುವ ಮಹರ್ಷಿಗಳೇ! ಬಾಲ್ಯದಲ್ಲಿ, ಯೌವನದಲ್ಲಿ, ವೃದ್ಧಾಪ್ಯ ದಲ್ಲಿಯೂ, ಶುದ್ಧ ಸ್ಫಟಿಕಮಯ ಶಿವಲಿಂಗದ ಪೂಜೆಯು ಸ್ತ್ರೀಯರಿಗೆ ಸಮಸ್ತ ಭೋಗಗಳನ್ನು ಕರುಣಿಸುವುದು. ಗೃಹಾಸಕ್ತ ಸ್ತ್ರೀಯರಿಗೆ ಪೀಠಪೂಜೆಯು ಭೂತಲದಲ್ಲಿ ಸಮಸ್ತ ಅಭೀಷ್ಟಗಳನ್ನು ಕೊಡುವುದು.

ಪ್ರವೃತ್ತಿಮಾರ್ಗದಲ್ಲಿ ನಡೆಯುವ ಪುರುಷನು ಸತ್ಪಾತ್ರ ಗುರುವಿನ ಸಹಯೋಗದಿಂದಲೇ ಸಮಸ್ತ ಪೂಜಾ ಕರ್ಮವನ್ನು ನೆರವೇರಿಸಬೇಕು. ಇಷ್ಟದೇವರ ಅಭಿಷೇಕದ ಬಳಿಕ ಹೊಸ ಅಕ್ಕಿಯಿಂದ ತಯಾರಿಸಿದ ಪಾಯಸಾದಿ ಪಕ್ವಾನ್ನಗಳ ನೈವೇದ್ಯವನ್ನು ಅರ್ಪಿಸಬೇಕು. ಪೂಜೆಯ ಕೊನೆಯಲ್ಲಿ ಶಿವಲಿಂಗವನ್ನು ಸಂಪುಷ್ಟ (ಕರಡಿಗೆ)ದಲ್ಲಿ ಇರಿಸಿ ಮನೆಯ ಒಳಗೆ ಬೇರೆಯಾಗಿ ಇಡಬೇಕು. ನಿವೃತ್ತಿಮಾರ್ಗದ ಪುರುಷನಿಗಾಗಿ ಕರದ ಮೇಲೆಯೇ ಶಿವಲಿಂಗದ ಪೂಜೆಯ ವಿಧಾನವಿದೆ. ಅವರು ಭಿಕ್ಷಾದಿಗಳಿಂದ ದೊರೆತ ಭೋಜನವನ್ನೇ ನೈವೇದ್ಯರೂಪದಲ್ಲಿ ನಿವೇದನೆ ಮಾಡಬೇಕು. ನಿವೃತ್ತ ಪುರುಷರಿಗಾಗಿ ಸೂಕ್ಷ್ಮಲಿಂಗವೇ ಶ್ರೇಷ್ಠವೆಂದು ಹೇಳಲಾಗಿದೆ. ಅವರು ವಿಭೂತಿಯಿಂದಲೇ ಪೂಜೆ ಮಾಡಿ, ವಿಭೂತಿಯನ್ನೇ ನೈವೇದ್ಯವಾಗಿ ನಿವೇದನೆ ಮಾಡಬೇಕು. ಪೂಜೆ ಮಾಡಿ ಆ ಲಿಂಗವನ್ನು ಸದಾಕಾಲ ತನ್ನ ಮಸ್ತಕದಲ್ಲಿ ಧರಿಸಿಕೊಂಡಿರಬೇಕು.

ವಿಭೂತಿಯನ್ನು ಲೋಕಾಗ್ನಿಜನಿತ, ವೇದಾಗ್ನಿಜನಿತ ಮತ್ತು ಶಿವಾಗ್ನಿಜನಿತ ಎಂದು ಮೂರು ಪ್ರಕಾರಗಳೆಂದು ಹೇಳಲಾಗಿದೆ. ಲೋಕಾಗ್ನಿಜನಿತ ಅಥವಾ ಲೌಕಿಕ ಭಸ್ಮವನ್ನು ದ್ರವ್ಯಗಳ ಶುದ್ಧಿಗಾಗಿ ತಂದಿಟ್ಟುಕೊಳ್ಳಬೇಕು. ಮಣ್ಣಿನ, ಮರದ ಕಬ್ಬಿಣದ ಪಾತ್ರೆಗಳು, ಧಾನ್ಯಗಳ, ತಿಲವೇ ಮುಂತಾದ ದ್ರವ್ಯಗಳ, ವಸ್ತ್ರಾದಿಗಳ, ಪರ್ಯುಷಿತ ವಸ್ತುಗಳ ಶುದ್ಧಿಯು ಭಸ್ಮದಿಂದ ಆಗುತ್ತದೆ. ನಾಯಿಯೇ ಮೊದಲಾದವುಗಳಿಂದ ದೂಷಿತವಾದ ಪಾತ್ರಗಳೂ ಭಸ್ಮದಿಂದಲೇ ಶುದ್ಧವಾಗುವು ದೆಂದು ತಿಳಿಯಲಾಗಿದೆ. ವಸ್ತು-ವಿಶೇಷದ ಶುದ್ಧಿಗಾಗಿ ಯಥಾಯೋಗ್ಯ ಸಜಲ ಅಥವಾ ನಿರ್ಜಲ ಭಸ್ಮವನ್ನು

ಉಪಯೋಗಿಸಬೇಕು. ವೇದಾಗ್ನಿಜನಿತ ಭಸ್ಮವನ್ನು ಆಯಾಯಾ ವೈದಿಕ ಕರ್ಮಗಳ ಅಂತ್ಯದಲ್ಲಿ ಧರಿಸಬೇಕು. ಮಂತ್ರ ಮತ್ತು ಕ್ರಿಯೆಗಳಿಂದ ಜನಿತ ಹೋಮಕರ್ಮವು ಅಗ್ನಿಯಲ್ಲಿ ಭಸ್ಮರೂಪವನ್ನು ಧರಿಸುವುದು. ಆ ಭಸ್ಮವನ್ನು ಧರಿಸುವುದರಿಂದ ಆ ಕರ್ಮವು ಆತ್ಮನಲ್ಲಿ ಆರೋಪಿತ ವಾಗುತ್ತದೆ. ಅಘೋರ-ಮೂರ್ತಿಧಾರೀ ಶಿವನ ಮಂತ್ರವನ್ನು ಹೇಳಿ ಬಿಲ್ವದ ಕಟ್ಟಿಗೆಯನ್ನು ಸುಡಬೇಕು. ಆ ಮಂತ್ರದಿಂದ ಅಭಿಮಂತ್ರಿತವಾದ ಅಗ್ನಿಯನ್ನು ಶಿವಾಗ್ನಿ ಎಂದು ಹೇಳಲಾಗಿದೆ. ಅದರಿಂದ ಸುಟ್ಟ ಕಟ್ಟಿಗೆಯ ಭಸ್ಮವು ಶಿವಾಗ್ನಿ ಜನಿತವಾಗಿದೆ. ಕಪಿಲಾ ಹಸುವಿನ ಸೆಗಣಿ ಅಥವಾ ಯಾವುದೇ ಹಸುವಿನ ಸೆಗಣಿಯನ್ನು ಹಾಗೂ ಶಮೀ, ಅಶ್ವತ್ಥ, ಪಾಲಾಶ, ವಟ, ನೆಲ್ಲಿ ಮತ್ತು ಬೊರೆ - ಇವುಗಳ ಕಟ್ಟಿಗೆಗಳನ್ನು ಶಿವಾಗ್ನಿಯಲ್ಲಿ ಸುಡಬೇಕು. ಆ ಶುದ್ಧ ಭಸ್ಮವನ್ನು ಶಿವಾಗ್ನಿಜನಿತ ಎಂದು ತಿಳಿಯಲಾಗಿದೆ, ಅಥವಾ ದರ್ಭೆಗಳ ಅಗ್ನಿಯಲ್ಲಿ ಶಿವಮಂತ್ರವನ್ನು ಉಚ್ಚರಿಸುತ್ತಾ ಕಟ್ಟಿಗೆಗಳನ್ನು ಸುಡಬೇಕು ಮತ್ತೆ ಆ ಭಸ್ಮವನ್ನು ಬಟ್ಟೆಯಲ್ಲಿ ಚೆನ್ನಾಗಿ ಗಾಳಿಸಿ ಹೊಸ ಮಣ್ಣಿನ ಮಡಕೆಯಲ್ಲಿ ತುಂಬಿಡಬೇಕು. ಅದನ್ನು ಆಗಾಗ ತನ್ನ ಕಾಂತಿ ಅಥವಾ ಶೋಭೆಯ ವೃದ್ಧಿಗಾಗಿ ಧರಿಸಬೇಕು. ಹೀಗೆ ಮಾಡುವವನು ಸಮ್ಮಾನಿತ ಹಾಗೂ ಪೂಜಿತನಾಗುತ್ತಾನೆ. ಹಿಂದೆ ಭಗವಾನ್ ಶಿವನು ಭಸ್ಮ ಶಬ್ದದ ಅರ್ಥವನ್ನು ಹೀಗೆ ಪ್ರಕಟಿಸಿದ್ದನು. ರಾಜನು ತನ್ನ ರಾಜ್ಯದಲ್ಲಿ ಸಾರಭೂತ ಕರ (ತೆರಿಗೆ)ವನ್ನು ಗ್ರಹಿಸುವನೋ, ಮನುಷ್ಯನು ಸಸ್ಯಾದಿಗಳನ್ನು ಬೇಯಿಸಿ ಅದರ ಸಾರವನ್ನು ಗ್ರಹಿಸುವನೋ, ಜಠರಾಗ್ನಿಯು ನಾನಾ ಭಕ್ಷ್ಯ-ಭೋಜ್ಯ ಪದಾರ್ಥಗಳನ್ನು ಜೀರ್ಣಿಸಿ ಸಾರವಸ್ತುವನ್ನು ಗ್ರಹಿಸಿ, ಆ ಸಾರವಸ್ತುವಿನಿಂದ ಸ್ವದೇಹವನ್ನು ಪೋಷಿಸುವಂತಯೇ ಪ್ರಪಂಚಕರ್ತಾ ಪರಮೇಶ್ವರ ಶಿವನೂ ಕೂಡ ತನ್ನಲ್ಲಿ ಅಧೇಯರೂಪದಲ್ಲಿದ್ದ ಪ್ರಪಂಚವನ್ನು ಸುಟ್ಟು ಭಸ್ಮರೂಪದಿಂದ ಅದರ ಸಾರತತ್ತ್ವವನ್ನು ಸ್ವೀಕರಿಸಿದನು. ಪ್ರಪಂಚವನ್ನು ದಹಿಸಿ ಶಿವನು ಅದರ ಭಸ್ಮವನ್ನು ತನ್ನ ಶರೀರದಲ್ಲಿ ಹಚ್ಚಿಕೊಂಡನು. ಭಸ್ಮವನ್ನು ಲೇಪಿಸಿಕೊಳ್ಳುವ ನೆಪದಿಂದ ಜಗತ್ತಿನ ಸಾರವನ್ನೇ ಗ್ರಹಣ ಮಾಡಿದನು. ತನ್ನ ಶರೀರದಲ್ಲಿ ತನಗಾಗಿ ರತ್ನಸ್ವರೂಪ ಭಸ್ಮವನ್ನು ಈ ಪ್ರಕಾರದಿಂದ ಸ್ಥಾಪಿಸಿಕೊಂಡಿರುವನು- ಆಕಾಶದ ಸಾರತತ್ತ್ವದಿಂದ ಕೇಶಗಳು, ವಾಯುವಿನ ಸಾರತತ್ತ್ವದಿಂದ ಮುಖ, ಅಗ್ನಿಯ ಸಾರತತ್ತ್ವದಿಂದ ಹೃದಯ, ಜಲದ ಸಾರತತ್ತ್ವದಿಂದ ಕಟಿಭಾಗ, ಪೃಥಿವಿಯ ಸಾರತತ್ತ್ವದಿಂದ ಮೊಣಕಾಲುಗಳನ್ನು ಧರಿಸಿರುವನು. ಇದೇ ರೀತಿ ಅವನ ಇಡೀ ಅಂಗವು ವಿಭಿನ್ನ ವಸ್ತುಗಳ ಸಾರರೂಪವಾಗಿದೆ. ಮಹೇಶ್ವರನು ತನ್ನ ಲಲಾಟದಲ್ಲಿ ತಿಲಕರೂಪದಿಂದ ಧರಿಸಿಕೊಂಡಿರುವ ತ್ರಿಪುಂಡ್ರವು ಬ್ರಹ್ಮಾ, ವಿಷ್ಣು, ರುದ್ರ - ಇವರ ಸಾರತತ್ತ್ವವಾಗಿದೆ. ಅವನು ಇವೆಲ್ಲ ವಸ್ತುಗಳನ್ನು ಧರಿಸಿದುದು ಜಗತ್ತಿನ ಅಭ್ಯುದಯದಕ್ಕಾಗಿ ಎಂದು ತಿಳಿಯುತ್ತಾರೆ. ಈ ಭಗವಾನ್ ಶಿವನೇ ಪ್ರಪಂಚದ ಸಾರ-ಸರ್ವಸ್ವವನ್ನು ತನ್ನ, ವಶದಲ್ಲಿ ಇರಿಸಿಕೊಂಡಿರುವನು. ಅದ್ದರಿಂದ ಇವುಗಳನ್ನು ತನ್ನ ವಶಮಾಡಿಕೊಳ್ಳುವವನು ಬೇರೆ ಯಾರೂ ಇಲ್ಲ. ಸಮಸ್ತ ಮೃಗಗಳ ಹಿಂಸಕವಾದ ಮೃಗವನ್ನು ಸಿಂಹವೆಂದು ಹೇಳುವರು. ಅದಕ್ಕೆ ಹಿಂಸೆ ಮಾಡುವ ಬೇರೆ ಯಾವ ಮೃಗವೂ ಇಲ್ಲ, ಆದ್ದರಿಂದ ಅದನ್ನು ಸಿಂಹ ಎಂದು ಹೇಳುತ್ತಾರೆ.

'ಶ' ಕಾರದ ಅರ್ಥವು ನಿತ್ಯಸುಖ ಹಾಗೂ ಆನಂದವಾಗಿದೆ. 'ಇ'ಕಾರದ ಅರ್ಥ-ಪುರುಷ ಎಂದಾಗಿದೆ. 'ವ'ಕಾರದ ಅರ್ಥ - ಅಮೃತಸ್ವರೂಪ ಶಕ್ತಿಯಾಗಿದೆ. ಇವೆಲ್ಲದರ ಸಮ್ಮಿಲಿತ ರೂಪವೇ 'ಶಿವ'ನೆಂದು ಹೇಳುವರು. ಆದ್ದರಿಂದ ಈ ರೂಪದಲ್ಲಿ ಭಗವಾನ್ ಶಿವನನ್ನು ತನ್ನ ಆತ್ಮನೆಂದು ಅವನ ಪೂಜೆ ಮಾಡಬೇಕು. ಇದಕ್ಕಾಗಿ ಮೊದಲಿಗೆ ತನ್ನ ಶರೀರದಲ್ಲಿ ಭಸ್ಮವನ್ನು ಧರಿಸಬೇಕು. ಮತ್ತೆ ಲಲಾಟದಲ್ಲಿ ಉತ್ತಮ ತ್ರಿಪುಂಡ್ರವನ್ನು ಧರಿಸಬೇಕು. ಪೂಜಾ ಕಾಲದಲ್ಲಿ ಸಜಲ ಭಸ್ಮದ ಉಪಯೋಗವಾಗುತ್ತದೆ. ದ್ರವ್ಯ ಶುದ್ಧಿಗಾಗಿ ನಿರ್ಜಲಭಸ್ಮವನ್ನು ಉಪಯೋಗಿಸಬೇಕು. ಗುಣಾತೀತ ಪರಮ ಶಿವನು ರಾಜಸಾದಿ ಸವಿಕಾರ ಗುಣಗಳನ್ನು ದೂರ ಸರಿಸುವನು. ಅದಕ್ಕಾಗಿ ಅವನು ಎಲ್ಲರ ಗುರುರೂಪವನ್ನು ಆಶ್ರಯಿಸಿ ಸ್ಥಿತನಾಗಿರುವನು. ಗುರುಗಳು ವಿಶ್ವಾಸೀ ಶಿಷ್ಯರ ತ್ರಿಗುಣಗಳನ್ನು ಮೊದಲಿಗೆ ದೂರಮಾಡಿ ಮತ್ತೆ ಅವರಿಗೆ ಶಿವತತ್ತ್ವದ ಬೋಧವನ್ನು ಮಾಡಿಸುವರು. ಅದಕ್ಕಾಗಿ ಅವರನ್ನು ಗುರು ಎಂದು ಹೇಳುತ್ತಾರೆ. ಗುರುವಿನ ಪೂಜೆಯು ಪರಮಾತ್ಮ ಶಿವನದೇ ಪೂಜೆಯಾಗಿದೆ. ಗುರುಗಳ ಉಪಯೋಗದಿಂದ ಉಳಿದ ಎಲ್ಲ ಪದಾರ್ಥಗಳು ಆತ್ಮಶುದ್ಧಿಯನ್ನು ಮಾಡುವುದಾಗಿದೆ. ಗುರುವಿನ ಆಜ್ಞೆಯಿಲ್ಲದೆ ಉಪಯೋಗಿಸಿದ ಎಲ್ಲವೂ - ಕಳ್ಳನು ಕಳ್ಳತನದಿಂದ ತಂದ ವಸ್ತುವಿನ ಉಪಯೋಗದಂತೆಯೇ ಇದೆ. ಗುರುವಿನಿಂದಲೂ ವಿಶೇಷಜ್ಞ ಜ್ಞಾನವುಳ್ಳ ಪುರುಷನು ದೊರೆತರೆ ಅವನನ್ನು ಪ್ರಯತ್ನಪೂರ್ವಕ ಗುರುವಾಗಿಸಿಕೊಳ್ಳಬೇಕು. ಅಜ್ಞಾನರೂಪೀ ಬಂಧನದಿಂದ ಬಿಡುಗಡೆ ಹೊಂದುವುದೇ ಜೀವ ಮಾತ್ರರಿಗಾಗಿ ಸಾಧ್ಯ ಪುರುಷಾರ್ಥವಾಗಿದೆ. ಅದ್ದರಿಂದ ವಿಶೇಷ ಜ್ಞಾನವುಳ್ಳವನೇ ಜೀವಿಯನ್ನು ಬಂಧನದಿಂದ ಬಿಡಿಸಬಲ್ಲನು.

ಜನ್ಮ-ಮರಣರೂಪೀ ದ್ವಂದ್ವವನ್ನು ಭಗವಾನ್ ಶಿವನ ಮಾಯೆಯೇ ಅರ್ಪಿಸಿರುವುದು. ಇವೆರಡನ್ನು ಶಿವನ ಮಾಯೆಗೇ ಅರ್ಪಿಸಿರುವವನು ಮತ್ತೆ ಶರೀರದ ಬಂಧನದಲ್ಲಿ ಬೀಳುವುದಿಲ್ಲ. ಶರೀರವಿರುವತನಕ ಕ್ರಿಯೆಗಳ ಅಧೀನನಾದ ಜೀವಿಯನ್ನೇ ಬದ್ಧನೆಂದು ಹೇಳುವರು. ಸ್ಥೂಲ, ಸೂಕ್ಷ್ಮ ಮತ್ತು ಕಾರಣ -ಮೂರೂ ಶರೀರಗಳನ್ನು ವಶಪಡಿಸಿಕೊಂಡ ಮೇಲೆ ಜೀವಿಗೆ ಮೋಕ್ಷವುಂಟಾಗುತ್ತದೆ; ಹೀಗೆ ಜ್ಞಾನಿಗಳು ಹೇಳುತ್ತಾರೆ. ಮಾಯಾಚಕ್ರದ ನಿರ್ಮಾತೃ ಭಗವಾನ್ ಶಿವನೇ ಪರಮ ಕಾರಣನಾಗಿರುವನು. ಅವನು ತನ್ನ ಮಾಯೆಯಿಂದ ಉಂಟಾದ ದ್ವಂದ್ವಗಳನ್ನು ಸ್ವಯಂ ಪರಿಮಾರ್ಜನ ಮಾಡುತ್ತಾನೆ. ಆದ್ದರಿಂದ ಶಿವನಿಂದ ಕಲ್ಪಿತವಾದ ದ್ವಂದ್ವಗಳನ್ನು ಅವನಿಗೇ ಸಮರ್ಪಿಸಿ ಬಿಡಬೇಕು. ಶಿವನ ಪೂಜೆಯಲ್ಲಿ ತತ್ಪರನಾದವನು ಮೌನವಾಗಿರಬೇಕು. ಸತ್ಯವೇ ಮೊದಲಾದ ಗುಣಗಳಿಂದ ಸಂಯುಕ್ತವಾಗಿರಬೇಕು. ಕ್ರಿಯಾ, ಜಪ, ತಪ, ಜ್ಞಾನ ಮತ್ತು ಧ್ಯಾನ ಇವುಗಳನ್ನು ಒಂದೊಂದಾಗಿ ಅನುಷ್ಠಾನ ಮಾಡುತ್ತಾ ಇರಬೇಕು. ಐಶ್ವರ್ಯ, ದಿವ್ಯ ಶರೀರದ ಪ್ರಾಪ್ತಿ, ಜ್ಞಾನದ ಉದಯ, ಅಜ್ಞಾನದ ನಿವಾರಣೆ ಮತ್ತು ಭಗವಾನ್ ಶಿವನ ಸಾಮಿಪ್ಯದ ಲಾಭ-ಇವು ಕ್ರಮವಾಗಿ ಕ್ರಿಯಾದಿಗಳ ಫಲವಾಗಿದೆ. ನಿಷ್ಕಾಮ ಕರ್ಮ ಮಾಡುವುದರಿಂದ ಅಜ್ಞಾನದ ನಿವಾರಣೆ ಆದ ಕಾರಣ ಶಿವಭಕ್ತ-ಪುರುಷನು ಅದರ ಯಥೋಕ್ತ ಫಲವನ್ನು ಪಡೆಯುವನು. ಶಿವಭಕ್ತನು ದೇಶ, ಕಾಲ, ಶರೀರ ಮತ್ತು ಧನ ಇವುಗಳಿಗನುಸಾರ ಯಥಾಯೋಗ್ಯ ಕ್ರಿಯಾದಿಗಳ ಅನುಷ್ಠಾನ ಮಾಡಬೇಕು. ನ್ಯಾಯೋಪಾರ್ಜಿತ ಉತ್ತಮ ಧನದಿಂದ ಜೀವನ ನಿರ್ವಾಹ ಮಾಡುತ್ತಾ ವಿದ್ವಾಂಸನಾದವನು ಶಿವನ ಸ್ಥಾನದಲ್ಲಿ ವಾಸಿಸಬೇಕು. ಜೀವ ಹಿಂಸಾದಿಗಳಿಂದ ರಹಿತವಾಗಿ, ಅತ್ಯಂತ ಕ್ಲೇಶಶೂನ್ಯ ಜೀವನವನ್ನು ನಡೆಸುತ್ತಾ, ಪಂಚಾಕ್ಷರೀ ಮಂತ್ರದ ಜಪದಿಂದ ಅಭಿಮಂತ್ರಿತ ಅನ್ನ-ನೀರು ಸೇವಿಸುವುದು ಸುಖಿಸ್ವರೂಪವೆಂದು ತಿಳಿಯಲಾಗಿದೆ ಅಥವಾ ದರಿದ್ರ ಪುರುಷನಿಗಾಗಿ ಭಿಕ್ಷೆಯಿಂದ ದೊರೆತ ಅನ್ನವು ಜ್ಞಾನವನ್ನು ಕೊಡುವುದು. ಶಿವಭಕ್ತನಿಗೆ ದೊರೆತ ಭಿಕ್ಷಾನ್ನವು ಶಿವಭಕ್ತಿಯನ್ನು ಹೆಚ್ಚಿಸುತ್ತದೆ. ಶಿವಯೋಗೀ ಪುರುಷರು ಭಿಕ್ಷಾನ್ನವನ್ನು ಶಂಭುಸತ್ರವೆಂದು ಹೇಳುತ್ತಾರೆ. ಯಾವುದೇ ಉಪಾಯದಿಂದ ಎಲ್ಲೇ ಆಗಲೀ ಭೂತಲದಲ್ಲಿ ಶುದ್ಧ ಅನ್ನದ ಭೋಜನವನ್ನು ಮಾಡುತ್ತಾ, ಸದಾಕಾಲ ಮೌನಭಾವದಿಂದ ಇರಬೇಕು. ತನ್ನ ಸಾಧನೆಯ ರಹಸ್ಯವನ್ನು ಯಾರಲ್ಲಿಯೂ ಪ್ರಕಟಿಸಬಾರದು. ಶಿವಭಕ್ತರ ಮುಂದೆಯೇ ಶಿವನ ಮಾಹಾತ್ಮ್ಯವನ್ನು ಪ್ರಕಾಶಿತಗೊಳಿಸಬೇಕು. ಶಿವಮಂತ್ರದ ರಹಸ್ಯವನ್ನು ಭಗವಾನ್ ಶಿವನೇ ತಿಳಿಯುತ್ತಾನೆ. ಬೇರೆಯಾರೂ ಅರಿಯರು.

(ಅಧ್ಯಾಯ - ೧೮)

❐ ❐ ❐

ಪಾರ್ಥಿವಲಿಂಗದ ನಿರ್ಮಾಣದ ರೀತಿ ಹಾಗೂ ವೇದ-ಮಂತ್ರಗಳ ಮೂಲಕ ಅದರ ಪೂಜೆಯ ವಿಸ್ತೃತ ಮತ್ತು ಸಂಕ್ಷಿಪ್ತ ವಿಧಿಯ ವರ್ಣನೆ

ಅನಂತರ ಪಾರ್ಥಿವ ಲಿಂಗದ ಶ್ರೇಷ್ಠತೆ ಹಾಗೂ ಮಹಿಮೆಯನ್ನು ವರ್ಣಿಸುತ್ತಾ ಸೂತಪುರಾಣಿಕರು ಹೇಳುತ್ತಾರೆ- ಮಹರ್ಷಿಗಳೇ! ಈಗ ನಾನು ವೈದಿಕ ಕರ್ಮದಲ್ಲಿ ಶ್ರದ್ಧಾ-ಭಕ್ತಿಯುಳ್ಳ ಜನರಿಗಾಗಿ ವೇದೋಕ್ತ ಮಾರ್ಗದ ಪಾರ್ಥಿವ ಪೂಜಾ ಪದ್ಧತಿಯನ್ನು ವರ್ಣಿಸುವೆನು. ಈ ಪೂಜೆಯು ಭೋಗ-ಮೋಕ್ಷ ಎರಡನ್ನು ಕೊಡುವಂತಹುದು. ಆಹ್ನಿಕ ಸೂತ್ರಗಳಲ್ಲಿ ತಿಳಿಸಿದ ವಿಧಿಗನುಸಾರವಾಗಿ ವಿಧ್ಯುಕ್ತವಾಗಿ ಸ್ನಾನ-ಸಂಧ್ಯೋಪಾಸನೆ ಮಾಡಿ ಮೊದಲಿಗೆ ಬ್ರಹ್ಮಯಜ್ಞವನ್ನು ಮಾಡಬೇಕು. ಬಳಿಕ ದೇವತೆಗಳಿಗೆ, ಋಷಿಗಳಿಗೆ, ಸನಕಾದಿಗಳಿಗೆ, ಮನುಷ್ಯರಿಗೆ, ಪಿತೃಗಳಿಗೆ ತರ್ಪಣಗಳನ್ನು ಕೊಡಬೇಕು. ತನ್ನ ಅಭಿರುಚಿಗನುಸಾರವಾಗಿ ಸಂಪೂರ್ಣ ನಿತ್ಯಕರ್ಮವನ್ನು ಪೂರ್ಣಗೊಳಿಸಿ, ಶಿವಸ್ಮರಣಪೂರ್ವಕ ಭಸ್ಮ ಮತ್ತು ರುದ್ರಾಕ್ಷಗಳನ್ನು ಧರಿಸಬೇಕು. ಅನಂತರ ಸಂಪೂರ್ಣ ಮನೋವಾಂಛಿತ ಫಲದ ಸಿದ್ಧಿಗಾಗಿ ಶ್ರೇಷ್ಠಭಕ್ತಿಭಾವನೆಯ ಜೊತೆಗೆ ಉತ್ತಮ ಪಾರ್ಥಿವಲಿಂಗವನ್ನು ವೇದೋಕ್ತವಿಧಿಯಿಂದ ಚೆನ್ನಾಗಿ ಪೂಜೆ ಮಾಡಬೇಕು. ನದೀತೀರ ಅಥವಾ ಕೆರೆಯ ತೀರದಲ್ಲಿ, ಪರ್ವತದ ಮೇಲೆ, ವನದಲ್ಲಿ, ಶಿವಾಲಯದಲ್ಲಿ ಅಥವಾ ಯಾವುದೇ ಪವಿತ್ರ ಸ್ಥಾನದಲ್ಲಿ ಪಾರ್ಥಿವ ಪೂಜೆಮಾಡುವ ವಿಧಾನವಿದೆ. ಬ್ರಾಹ್ಮಣರೇ! ಶುದ್ಧ ಸ್ಥಾನದಿಂದ ತೆಗೆದಿರುವ ಮಣ್ಣನ್ನು ತಂದು, ಜಾಗರೂಕವಾಗಿ ಶಿವಲಿಂಗವನ್ನು ನಿರ್ಮಿಸಬೇಕು.

ಬ್ರಾಹ್ಮಣರಿಗಾಗಿ ಶ್ವೇತ, ಕ್ಷತ್ರಿಯರಿಗಾಗಿ ಕೆಂಪು, ವೈಶ್ಯರಿಗಾಗಿ ಹಳದಿ, ಶೂದ್ರರಿಗಾಗಿ ಕಪ್ಪು ಮಣ್ಣಿನಿಂದ ಶಿವಲಿಂಗವನ್ನು ನಿರ್ಮಿಸುವ ವಿಧಾನವಿದೆ. ಇಲ್ಲವೇ ಎಲ್ಲಿ ಯಾವ ಮಣ್ಣು ದೊರಕುವುದೋ ಅದರಿಂದಲೇ ಶಿವಲಿಂಗವನ್ನು ಮಾಡಬೇಕು.

ಶಿವಲಿಂಗವನ್ನು ಮಾಡಲು ಪ್ರಯತ್ನಪೂರ್ವಕ ಮಣ್ಣನ್ನು ಸಂಗ್ರಹಿಸಿ, ಆ ಶುಭ ಮೃತ್ತಿಕೆಯನ್ನು ಅತ್ಯಂತ ಶುದ್ಧ ಸ್ಥಾನದಲ್ಲಿ ಇರಿಸಬೇಕು. ಮತ್ತೆ ಅದನ್ನು ಶುದ್ಧಗೊಳಿಸಿ ನೀರಿನಿಂದ ನಾದಿ ಪಿಂಡಿಯನ್ನು ತಯಾರಿಸಿ, ವೇದೋಕ್ತ ಮಾರ್ಗದಿಂದ ನಿಧಾನವಾಗಿ ಸುಂದರ ಪಾರ್ಥಿವ ಲಿಂಗವನ್ನು ರಚಿಸಬೇಕು. ಬಳಿಕ ಭೋಗ-ಮೋಕ್ಷರೂಪೀ ಫಲದ ಪ್ರಾಪ್ತಿಗಾಗಿ ಭಕ್ತಿಪೂರ್ವಕ ಅದನ್ನು ಪೂಜಿಸಬೇಕು. ಆ ಪಾರ್ಥಿವಲಿಂಗದ ಪೂಜೆಯ ವಿಧಿಯನ್ನು ನಾನು ವಿಧಾನಸಹಿತ ಹೇಳುವೆನು; ನೀವೆಲ್ಲರೂ ಕೇಳಿರಿ. 'ಓಂ ನಮಃ ಶಿವಾಯ' ಈ ಮಂತ್ರವನ್ನು ಉಚ್ಚರಿಸಿ ಸಮಸ್ತ ಪೂಜಾ-ಸಾಮಗ್ರಿಯನ್ನು ಪ್ರೋಕ್ಷಿಸಬೇಕು. ಅನಂತರ **'ಭೂರಸಿ'** ಮುಂತಾದ ಮಂತ್ರಗಳಿಂದ ಕ್ಷೇತ್ರಸಿದ್ಧಿಯನ್ನು ಮಾಡಬೇಕು. ಮತ್ತೆ **'ಅಪೋಽಸ್ಮಾನ್'** ಈ ಮಂತ್ರದಿಂದ ಜಲದ ಸಂಸ್ಕಾರ ಮಾಡಬೇಕು. ಬಳಿಕ **'ನಮಸ್ತೇ ರುದ್ರ'** ಈ ಮಂತ್ರದಿಂದ ಸ್ಫಾಟಿಕಾಬಂಧ (ಸ್ಫಟಿಕ ಶಿಲೆಯ ವೃತ್ತ) ಮಾಡುವ ಮಾತು ಹೇಳಲಾಗಿದೆ. **'ನಮಃ ಶಂಭವಾಯ'** ಈ ಮಂತ್ರದಿಂದ ಕ್ಷೇತ್ರಶುದ್ಧಿ ಮತ್ತು ಪಂಚಾಮೃತವನ್ನು ಪ್ರೋಕ್ಷಿಸಬೇಕು. ಮತ್ತೆ ಶಿವಭಕ್ತನಾದವನು **'ನಮೋಽಸ್ತು ನೀಲಗ್ರೀವಾಯ'** ಈ ಮಂತ್ರದಿಂದ ಶಿವಲಿಂಗವನ್ನು ಪ್ರತಿಷ್ಠಾಪಿಸಬೇಕು. ವೈದಿಕ ರೀತಿಯಿಂದ ಪೂಜಾ-ಕರ್ಮ ಮಾಡುವ ಉಪಾಸಕನು ಭಕ್ತಿಪೂರ್ವಕವಾಗಿ **'ಏತತ್ತೇರುದ್ರಾವಸಂ'** ಈ ಮಂತ್ರದಿಂದ ರಮಣೀಯ ಆಸನವನ್ನು ಅರ್ಪಿಸಬೇಕು. **'ಮಾನೋಮಹಾಂತ'** ಇದರಿಂದ ಆವಾಹನೆ ಮಾಡಬೇಕು. **'ಯಾ ತೇ ರುದ್ರ'** ಇದರಿಂದ ಭಗವಾನ್ ಶಿವನನ್ನು ಆಸನದಲ್ಲಿ ಕುಳ್ಳಿರಿಸಬೇಕು. **'ಯಾಮಿಷುಂ'** ಇದರಿಂದ ಶಿವನ ಅಂಗಗಳಲ್ಲಿ ನ್ಯಾಸವನ್ನು ಮಾಡಬೇಕು. **'ಅಧ್ಯವೋಚ-ದಧಿ'** ಇದರಿಂದ ಪ್ರೇಮಪೂರ್ವಕ ಅಧಿವಾಸವನ್ನು ಮಾಡಬೇಕು. **'ಅಸೌಯಸ್ತಾಮ್ರೋ'** ಈ ಮಂತ್ರದಿಂದ ಶಿವಲಿಂಗದಲ್ಲಿ ಇಷ್ಟದೇವತೆ ಶಿವನನ್ನು ನ್ಯಾಸಮಾಡಬೇಕು. **'ಅಸೌಯೋಽವಸರ್ಪತಿ'** ಇದರಿಂದ ಉಪಸರ್ಪಣ (ದೇವತೆಯ ಸಮೀಪ ಗಮನ) ಮಾಡಬೇಕು. **'ನಮೋಽಸ್ತು ನೀಲಗ್ರೀವಾಯ'** ಇದರಿಂದ ಇಷ್ಟದೇವತೆಗೆ ಪಾದ್ಯವನ್ನು ಸಮರ್ಪಿಸುವುದು. **ರುದ್ರಗಾಯತ್ರೀ-'ತತ್ಪುರುಷಾಯ'** ಇದರಿಂದ ಅರ್ಘ್ಯವನ್ನು ಕೊಡುವುದು. **'ತ್ರ್ಯಂಬಕಂ'** ಮಂತ್ರದಿಂದ ಆಚಮನವನ್ನು ಅರ್ಪಿಸುವುದು. **'ಪಯಃ ಪೃಥಿವ್ಯಾಂ'** ಈ ಮಂತ್ರದಿಂದ ಕ್ಷೀರಸ್ನಾನ ಮಾಡಿಸುವುದು. **'ದಧಿಕ್ರಾವ್ಣೋ'** ಇದರಿಂದ ದಧಿ ಸ್ನಾನ ಮಾಡಿಸುವುದು. **'ಘೃತಂ ಘೃತಪಾವಾ'** ಇದರಿಂದ ಘೃತಸ್ನಾನ ಮಾಡಿಸುವುದು. **'ಮಧುವಾತಾ' 'ಮಧುನಕ್ತಂ' 'ಮಧುಮಾನ್ನೋ'** ಈ ಮೂರು ಋಚೆಗಳಿಂದ ಮಧುಸ್ನಾನ ಮತ್ತು **'ಸ್ವಾದುಃಪವಸ್ವದಿವ್ಯಾಯ'** ಇದರಿಂದ ಶರ್ಕರಾಸ್ನಾನ ಮಾಡಿಸುವುದು. ಈ ಹಾಲು ಮೊದಲಾದ ಐದು ವಸ್ತುಗಳನ್ನು ಪಂಚಾಮೃತವೆಂದು ಹೇಳುವರು.

ಅಥವಾ ಪಾದ್ಯ-ಸಮರ್ಪಣಕ್ಕಾಗಿ ಹೇಳಿರುವ **'ನಮೋಽಸ್ತು ನೀಲಗ್ರೀವಾಯ'** ಮುಂತಾದ ಮಂತ್ರಗಳ ಮೂಲಕ ಪಂಚಾಮೃತದಿಂದ ಸ್ನಾನ ಮಾಡಿಸಬೇಕು. ಅನಂತರ **'ಮಾನಸ್ತೋಕೆ'** ಇದರಿಂದ ಪ್ರೇಮಪೂರ್ವಕ ಭಗವಾನ್ ಶಿವನಿಗೆ ಕಟಿಬಂಧ (ಕಟಿಸೂತ್ರ) ಅರ್ಪಿಸಬೇಕು. **'ನಮೋಧೃಷ್ಣವೇ'** ಈ ಮಂತ್ರವನ್ನು ಉಚ್ಚರಿಸಿ ಆರಾಧ್ಯ ದೇವರಿಗೆ ಉತ್ತರೀಯವನ್ನು ಅರ್ಪಿಸುವುದು. **'ಯಾ ತೇ ಹೇತಿಃ'** ಇತ್ಯಾದಿ ನಾಲ್ಕು ಋಚೆಗಳನ್ನು ಪಠಿಸಿ ವೇದಜ್ಞನಾದ ಭಕ್ತನು ಪ್ರೇಮದಿಂದ ವಿಧಿಪೂರ್ವಕ ಭಗವಾನ್ ಶಿವನಿಗೆ ವಸ್ತ್ರ- ಯಜ್ಞೋಪವೀತಗಳನ್ನು ಸಮರ್ಪಿಸುವುದು. ಮತ್ತೆ **'ನಮಃಶ್ವಭ್ಯಃ'** ಇತ್ಯಾದಿ ಮಂತ್ರಗಳನ್ನು ಹೇಳಿ ಶುದ್ಧಬುದ್ಧಿಯುಳ್ಳ ಭಕ್ತನು ಭಗವಂತನಿಗೆ ಪ್ರೇಮಪೂರ್ವಕ ಗಂಧವನ್ನು ಏರಿಸಬೇಕು. **'ನಮಸ್ತಕ್ಷಭ್ಯೋ'** ಇದರಿಂದ ಅಕ್ಷತೆಗಳನ್ನು ಅರ್ಪಿಸುವುದು. **'ನಮಃ ಪಾರ್ಯಾಯ'** ಇದರಿಂದ ಹೂವುಗಳನ್ನು ಏರಿಸಬೇಕು. **'ನಮಃ ಪರ್ಣಾಯ'** ಇದರಿಂದ ಬಿಲ್ವಪತ್ರವನ್ನು ಅರ್ಪಿಸುವುದು. **'ನಮಃ ಕಪರ್ದಿನೇ'** ಇತ್ಯಾದಿ ಮಂತ್ರಗಳಿಂದ ಧೂಪವನ್ನು ತೋರಿಸುವುದು. **'ನಮಃ ಆಶವೇ'** ಈ ಋಚೆಯಿಂದ ಶಾಸ್ತ್ರೋಕ್ತ ವಿಧಿಯಿಂದ ದೀಪವನ್ನು ಅರ್ಪಿಸುವುದು. ಬಳಿಕ (ಕೈತೊಳೆದುಕೊಂಡು) **'ನಮೋಜೇಷ್ಠಾಯ'** ಈ ಮಂತ್ರದಿಂದ ಉತ್ತಮ ನೈವೇದ್ಯ ಸಮರ್ಪಿಸುವುದು. ಪುನಃ ಹಿಂದೆ ಹೇಳಿದ ತ್ರ್ಯಂಬಕ ಮಂತ್ರದಿಂದ ಆಚಮನೆಯನ್ನು ಅರ್ಪಿಸುವುದು. **'ಇಮಾರುದ್ರಾಯ'** ಇದರಿಂದ ಫಲವನ್ನು ಸಮರ್ಪಿಸುವುದು. ಮತ್ತೆ **'ನಮೋ ವೃಜ್ಯಾಯ'** ಈ ಮಂತ್ರದಿಂದ ಭಗವಾನ್ ಶಿವನಿಗೆ ತನ್ನೆಲ್ಲವನ್ನು ಸಮರ್ಪಿಸುವುದು. **'ಮನೋಮಹಾಂತ'** ಹಾಗೂ **'ಮಾನಸ್ತೋಕೆ'** ಹಿಂದೆ ಹೇಳಿದ ಈ ಎರಡು ಮಂತ್ರಗಳಿಂದ ಕೇವಲ ಅಕ್ಷತೆಗಳಿಂದ ಹನ್ನೊಂದು ರುದ್ರರನ್ನು ಪೂಜಿಸಬೇಕು. **'ಹಿರಣ್ಯಗರ್ಭಃ'** ಇತ್ಯಾದಿ ಮಂತ್ರಗಳಿಂದ ದಕ್ಷಿಣೆಯನ್ನು

ಅರ್ಪಿಸುವುದು. **'ದೇವಸ್ಯ ತ್ವಾ'** ಈ ಮಂತ್ರದಿಂದ ವಿದ್ವಾಂಸರು ಆರಾಧ್ಯ ದೇವರಿಗೆ ಅಭಿಷೇಕ ಮಾಡಬೇಕು. ದೀಪಕ್ಕಾಗಿ ಹೇಳಿದ **'ನಮ ಆಶವೇ'** ಇತ್ಯಾದಿ ಮಂತ್ರಗಳಿಂದ ಭಗವಾನ್ ಶಿವನಿಗೆ ಮಂಗಳ ನೀರಾಜನವನ್ನು ಬೆಳಗಬೇಕು. ಬಳಿಕ **'ಇಮಾ ರುದ್ರಾಯ'** ಮೊದಲಾದ ಮೂರು ಮಂತ್ರಗಳಿಂದ ಭಕ್ತಿಪೂರ್ವಕ ರುದ್ರದೇವನಿಗೆ ಪುಷ್ಪಾಂಜಲಿಯನ್ನು ಅರ್ಪಿಸುವುದು. **'ಮಾನೋ ಮಹಾಂತ'** ಈ ಮಂತ್ರದಿಂದ ದೇವರ ಪ್ರದಕ್ಷಿಣೆ ಮಾಡುವುದು. ಮತ್ತೆ ಉತ್ತಮ ಬುದ್ಧಿಯುಳ್ಳ ಉಪಾಸಕನು **'ಮಾ ನಸ್ತೋಕೆ'** ಈ ಮಂತ್ರದಿಂದ ಭಗವಂತನಿಗೆ ಸಾಷ್ಟಾಂಗ ನಮಸ್ಕಾರ ಮಾಡುವುದು. **'ಏಷ ತೇ'** ಇದರಿಂದ ಶಿವಮುದ್ರೆಯನ್ನು ಪ್ರದರ್ಶಿಸುವುದು. **'ಯತೋಯತ'** ಈ ಮಂತ್ರದಿಂದ ಅಭಯವೆಂಬ ಮುದ್ರೆಯನ್ನು **'ತ್ರ್ಯಂಬಕಂ'** ಮಂತ್ರದಿಂದ ಜ್ಞಾನವೆಂಬ ಮುದ್ರೆಯನ್ನು **'ನಮಃ ಸೇನಾ'** ಇತ್ಯಾದಿ ಮಂತ್ರಗಳಿಂದ ಮಹಾಮುದ್ರೆಯನ್ನು ಪ್ರದರ್ಶಿಸಬೇಕು. **'ನಮೋ ಗೋಭ್ಯಃ'** ಈ ಋಚೆಯಿಂದ ಧೇನುಮುದ್ರೆಯನ್ನು ತೋರಿಸುವುದು. ಹೀಗೆ ಪಂಚಮುದ್ರೆಯನ್ನು ಪ್ರದರ್ಶಿಸಿ, ಶಿವಸಂಬಂಧೀ ಮಂತ್ರಗಳನ್ನು ಜಪಿಸಬೇಕು. ಅಥವಾ ವೇದಜ್ಞ ಪುರುಷನು ರುದ್ರಾಧ್ಯಾಯದ ಆವೃತ್ತಿಯನ್ನು ಮಾಡಬೇಕು. ಅನಂತರ ವೇದಜ್ಞನಾದವನು ಪಂಚಾಂಗವನ್ನು ಪಠಿಸಬೇಕು. ಕೊನೆಗೆ **'ದೇವಾಗಾತು'** ಇತ್ಯಾದಿ ಮಂತ್ರಗಳಿಂದ ಭಗವಾನ್ ಶಂಕರನ ವಿಸರ್ಜನೆಯನ್ನು ಮಾಡುವುದು. ಈ ಪ್ರಕಾರವಾಗಿ ಶಿವಪೂಜೆಯ ವೈದಿಕ ವಿಧಿಯನ್ನು ವಿಸ್ತಾರವಾಗಿ ಪ್ರತಿಪಾದಿಸಲಾಯಿತು.

ಮಹರ್ಷಿಗಳೇ! ಈಗ ಸಂಕ್ಷೇಪವಾಗಿ ಪಾರ್ಥಿವಪೂಜೆಯ ವೈದಿಕವಿಧಿಯ ವರ್ಣನೆಯನ್ನು ಕೇಳಿರಿ. **'ಸದ್ಯೋಜಾತಂ'** ಈ ಋಚೆಯಿಂದ ಪಾರ್ಥಿವಲಿಂಗವನ್ನು ನಿರ್ಮಿಸಲು ಮಣ್ಣನ್ನು ತರುವುದು. **'ವಾಮದೇವಾಯ'** ಈ ಮಂತ್ರದಿಂದ ಮಣ್ಣಿನಲ್ಲಿ ನೀರನ್ನು ಹಾಕುವುದು. (ಅದು ಚೆನ್ನಾಗಿ ನೆನೆದಾಗ) **'ಅಘೋರೇಭ್ಯೋ'** ಇದರಿಂದ ಲಿಂಗವನ್ನು ನಿರ್ಮಿಸುವುದು. ಮತ್ತೆ **'ತತ್ಪುರುಷಾಯ'** ಈ ಮಂತ್ರದಿಂದ ವಿಧಿವತ್ತಾಗಿ ಅದರಲ್ಲಿ ಶಿವನನ್ನು ಆವಾಹಿಸುವುದು. **'ಈಶಾನಃ'** ಮಂತ್ರದಿಂದ ಭಗವಾನ್ ಶಿವನನ್ನು ವೇದಿಯಲ್ಲಿ ಸ್ಥಾಪಿಸುವುದು. ಇದಲ್ಲದೆ ಬೇರೆ ಎಲ್ಲ ವಿಧಾನಗಳನ್ನು ಶುದ್ಧಬುದ್ಧಿಯುಳ್ಳ ಉಪಾಸಕನು ಸಂಕ್ಷೇಪವಾಗಿ ಮುಗಿಸಬೇಕು. ಅನಂತರ ವಿದ್ವಾಂಸನಾದವನು ಪಂಚಾಕ್ಷರೀ ಮಂತ್ರದಿಂದ ಅಥವಾ ಗುರುಗಳು ಉಪದೇಶಿಸಿದ ಬೇರೆ ಯಾವುದೇ ಶಿವಸಂಬಂಧೀ ಮಂತ್ರದಿಂದ ಷೋಡಶೋಪಚಾರಗಳಿಂದ ವಿಧಿವತ್ತಾಗಿ ಪೂಜಿಸಲಿ, ಅಥವಾ

ಭವಾಯ ಭವನಾಶಾಯ ಮಹಾದೇವಾಯ ಧೀಮಹಿ ।
ಉಗ್ರಾಯ ಉಗ್ರನಾಶಾಯ ಶರ್ವಾಯ ಶಶಿಮೌಲಿನೇ ॥
(೨೦/೪೩)

ಈ ಮಂತ್ರದಿಂದ ವಿದ್ವಾಂಸ ಉಪಾಸಕನು ಭಗವಾನ್ ಶಂಕರನ ಪೂಜೆ ಮಾಡಲಿ. ಅವನು ಭ್ರಮೆಯನ್ನು ಬಿಟ್ಟು, ಉತ್ತಮ ಭಾವ-ಭಕ್ತಿಯಿಂದ ಶಿವನನ್ನು ಆರಾಧಿಸಲಿ; ಏಕೆಂದರೆ, ಭಗವಾನ್ ಶಿವನು ಭಕ್ತಿಗೇ ಮನೋವಾಂಛಿತ ಫಲವನ್ನು ಕೊಡುತ್ತಾನೆ.

ಬ್ರಾಹ್ಮಣರೇ! ಇಲ್ಲಿ ಹೇಳಿರುವ ವೈದಿಕ ವಿಧಿಯ ಪೂಜಾಕ್ರಮವನ್ನು ಪೂರ್ಣರೂಪದಿಂದ ಆದರಿಸುತ್ತಾ ಪೂಜೆಯ ಇನ್ನೊಂದು ವಿಧಿಯನ್ನು ನಾನು ಹೇಳುವವನಿದ್ದೇನೆ. ಅದು ಉತ್ತಮವಾಗಿದ್ದು ಜೊತೆಗೆ ಸರ್ವ-ಸಾಧಾರಣರಿಗಾಗಿಯೂ ಉಪಯೋಗಿಯಾಗಿದೆ. ಮುನಿವರ್ಯರೇ! ಪಾರ್ಥಿವ -ಲಿಂಗದ ಪೂಜೆಯನ್ನು ಭಗವಾನ್ ಶಿವನ ನಾಮಗಳಿಂದ ಹೇಳಲಾಗಿದೆ. ಆ ಪೂಜೆಯು ಸಮಸ್ತ ಅಭೀಷ್ಟಗಳನ್ನು ಕೊಡುವಂತಹುದು. ಅದನ್ನು ನಾನು ಹೇಳುವೆನು, ಕೇಳಿರಿ. ಹರ, ಮಹೇಶ್ವರ, ಶಂಭೂ, ಶೂಲಪಾಣಿ, ಪಿನಾಕಧೃಕ್, ಶಿವ, ಪಶುಪತಿ ಮತ್ತು ಮಹಾದೇವ – ಇವು ಕ್ರಮವಾಗಿ ಶಿವನ ಎಂಟು ನಾಮಗಳೆಂದು ಹೇಳಲಾಗಿದೆ. ಇವುಗಳಲ್ಲಿ ಮೊದಲನೆಯ **'ಓಂ ಹರಾಯ ನಮಃ'** ಈ ನಾಮವನ್ನು ಉಚ್ಚರಿಸಿ, ಪಾರ್ಥಿವಲಿಂಗವನ್ನು ನಿರ್ಮಿಸಲು ಮಣ್ಣನ್ನು ತರುವುದು. ಎರಡನೆಯ ನಾಮವಾದ **'ಓಂ ಮಹೇಶ್ವರಾಯ ನಮಃ'** ಇದನ್ನು ಉಚ್ಚರಿಸಿ ಲಿಂಗವನ್ನು ನಿರ್ಮಿಸಬೇಕು. **'ಓಂ ಶಂಭವೇ ನಮಃ'** ಎಂದು ಹೇಳುತ್ತಾ ಆ ಪಾರ್ಥಿವ ಲಿಂಗವನ್ನು ಪ್ರತಿಷ್ಠಾಪಿಸಬೇಕು. **'ಓಂ ಶೂಲಪಾಣಯೇ ನಮಃ'** ಎಂದು ಹೇಳಿ ಆ ಪಾರ್ಥಿವ ಲಿಂಗದಲ್ಲಿ ಭಗವಾನ್ ಶಿವನನ್ನು ಆವಾಹಿಸಬೇಕು. **'ಓಂ ಪಿನಾಕಧೃಷೇ ನಮಃ'** ಹೇಳಿ ಶಿವಲಿಂಗಕ್ಕೆ ಅಭಿಷೇಕ ಮಾಡುವುದು. **'ಓಂ ಶಿವಾಯ ನಮಃ'** ಎಂದು ಹೇಳಿ ಅದನ್ನು ಪೂಜಿಸುವುದು. **'ಓಂ ಪಶುಪತಯೇ ನಮಃ'** ಹೇಳಿ ಕ್ಷಮಾ-ಪ್ರಾರ್ಥನೆ ಮಾಡುವುದು. ಕೊನೆಗೆ **'ಓಂ ಮಹಾದೇವಾಯ ನಮಃ'** ಎಂದು ಹೇಳಿ ಆರಾಧ್ಯ ದೇವರನ್ನು ವಿಸರ್ಜಿಸುವುದು. ಪ್ರತಿಯೊಂದು ನಾಮದ ಮೊದಲಿಗೆ ಓಂಕಾರ ಮತ್ತು ಕೊನೆಗೆ ಚತುರ್ಥಿ ವಿಭಕ್ತಿಯೊಂದಿಗೆ 'ನಮಃ' ಪದವನ್ನು ಸೇರಿಸಿ, ಬಹಳ

ಆನಂದದಿಂದ ಹಾಗೂ ಭಕ್ತಿಭಾವದಿಂದ ಪೂಜನ ಸಂಬಂಧಿ ಎಲ್ಲ ಕಾರ್ಯವನ್ನು ಮಾಡಬೇಕು.*

ಷಡಕ್ಷರ – ಮಂತ್ರದಿಂದ ಅಂಗನ್ಯಾಸ ಮತ್ತು ಕರನ್ಯಾಸದ ವಿಧಿಯನ್ನು ಚೆನ್ನಾಗಿ ಮಾಡಿಕೊಂಡು, ಕೆಳಗೆ ಬರೆದಂತೆ ಧ್ಯಾನ ಮಾಡಬೇಕು. ಭಗವಾನ್ ಶಿವನು ಕೈಲಾಸ ಪರ್ವತದಲ್ಲಿ ಒಂದು ಸುಂದರ ಸಿಂಹಾಸನದಲ್ಲಿ ವಿರಾಜಮಾನನಾಗಿದ್ದಾನೆ. ಅವನ ಎಡಭಾಗದಲ್ಲಿ ಭಗವತಿ ಉಮೆಯು ಅವನಿಗೆ ತಾಗಿ ಕುಳಿತಿರುವಳು. ಸನಕ-ಸನಂದನಾದಿ ಭಕ್ತಜನರು ಅವನನ್ನು ಪೂಜಿಸುತ್ತಿದ್ದಾರೆ. ಅವನು ಭಕ್ತರ ದುಃಖರೂಪೀ ದಾವಾನಲವನ್ನು ನಾಶಮಾಡುವ ಅಪ್ರಮೇಯ ಶಕ್ತಿಶಾಲಿಯು. ಅಂತಹ ವಿಶ್ವವಿಭೂಷಣ ಭಗವಾನ್ ಶಿವನನ್ನು ಚಿಂತಿಸಬೇಕು. ಭಗವಾನ್ ಮಹೇಶ್ವರನನ್ನು ಪ್ರತಿದಿನವು ಹೀಗೆ ಧ್ಯಾನಮಾಡಬೇಕು – ಅವನ ಅಂಗ ಕಾಂತಿಯು ಬೆಳ್ಳಿಯ ಬೆಟ್ಟದಂತೆ ಬೆಳ್ಳಗಾಗಿದೆ. ಅವನ ಶಿರದಲ್ಲಿ ಮನೋಹರ ಚಂದ್ರಚೂಡವಿದೆ. ನವರತ್ನಗಳ ಆಭೂಷಣಗಳನ್ನು ಧರಿಸಿದ್ದರಿಂದ ಅವನ ಶ್ರೀಅಂಗವು ಇನ್ನೂ ಶೋಭಾಯಮಾನವಾಗಿದೆ. ಅವನ ನಾಲ್ಕು ಕೈಗಳಲ್ಲಿ ಕ್ರಮವಾಗಿ ಪರಶು, ಮೃಗಮುದ್ರೆ, ವರದಾನ ಹಾಗೂ ಅಭಯಮುದ್ರೆ ಸುಶೋಭಿತವಾಗಿವೆ. ಅವನು ಸದಾ ಪ್ರಸನ್ನನಾಗಿರುವನು. ಕಮಲಾಸನದಲ್ಲಿ ಮಂಡಿಸಿದ್ದು, ದೇವತೆಗಳು ಸುತ್ತಲೂ ನಿಂತು ಸ್ತುತಿಸುತ್ತಿರುವರು. ಅವನು ವಸ್ತ್ರದ ಬದಲಿಗೆ ವ್ಯಾಘ್ರಚರ್ಮವನ್ನು ಧರಿಸಿರುವನು. ಅವನೇ ಈ ವಿಶ್ವದ ಆದಿಬೀಜ (ಕಾರಣ) ರೂಪನಾಗಿದ್ದಾನೆ. ಎಲ್ಲರ ಸಮಸ್ತ ಭಯವನ್ನು ಹರಿಸುವವನೂ, ಪಂಚಮುಖಿನಾಗಿದ್ದು, ಒಂದೊಂದು ಮುಖದಲ್ಲಿ ಮೂರು ಮೂರು ನೇತ್ರಗಳಿವೆ.*

ಈ ಪ್ರಕಾರವಾಗಿ ಧ್ಯಾನ ಹಾಗೂ ಉತ್ತಮ ಪಾರ್ಥಿವ ಲಿಂಗದ ಪೂಜೆಮಾಡಿ ಗುರುಗಳು ಉಪದೇಶಿಸಿದ ಪಂಚಾಕ್ಷರ ಮಂತ್ರವನ್ನು ಜಪಿಸಬೇಕು. ವಿಪ್ರರಿರಾ ! ವಿದ್ವಾನ್ ಪುರುಷನು ದೇವೇಶ್ವರ ಶಿವನನ್ನು ನಮಸ್ಕರಿಸಿ, ನಾನಾ ವಿಧದ ಸ್ತುತಿಗಳಿಂದ ಅವನನ್ನು ಸ್ತೋತ್ರಮಾಡಿ ಯಜುರ್ವೇದದ ರುದ್ರಾಧ್ಯಾಯವನ್ನು ಪಠಿಸಬೇಕು. ಬಳಿಕ ಅಂಜಲಿಯಲ್ಲಿ ಪುಷ್ಪಾಕ್ಷತೆಗಳನ್ನು ಹಿಡಿದುಕೊಂಡು ಕೆಳಗಿನ ಮಂತ್ರಗಳನ್ನು ಹೇಳುತ್ತಾ ಪ್ರೇಮದಿಂದ ಭಗವಾನ್ ಶಿವನಲ್ಲಿ ಈ ರೀತಿ ಪ್ರಾರ್ಥಿಸಬೇಕು.

'ಎಲ್ಲರಿಗೆ ಸುಖವನ್ನೀಯುವ ಕೃಪಾನಿಧಾನ ಭೂತನಾಥ ಶಿವನೇ ! ನಾನು ನಿನ್ನವನಾಗಿರುವೆನು. ನಿನ್ನ ಗುಣಗಳಲ್ಲೇ ನನ್ನ ಪ್ರಾಣಗಳು ನೆಲೆಸಿವೆ. ಅಥವಾ ನಿನ್ನ ಗುಣಗಳೇ ನನ್ನ ಪ್ರಾಣಗಳು, ನನ್ನ ಜೀವನ ಸರ್ವಸ್ವವಾಗಿದೆ. ನನ್ನ ಮನಸ್ಸು ಸದಾ ನಿನ್ನ ಚಿಂತನೆಯಲ್ಲೇ ತೊಡಗಿದೆ. ಇದನ್ನು ತಿಳಿದು ನೀನು

---

* ಹರೋ ಮಹೇಶ್ವರಃ ಶಂಭುಃ ಶೂಲಪಾಣಿಃ ಪಿನಾಕಧೃಕ್ । ಶಿವಃ ಪಶುಪತಿಶ್ಚೈವ ಮಹಾದೇವ ಇತಿ ಕ್ರಮಾತ್ ॥
ಮೃದಾಹರಣಸಂಘಟ್ಟ ಪ್ರತಿಷ್ಠಾಹ್ವಾನಮೇವ ಚ । ಸ್ನಪನಂ ಪೂಜನಂ ಚೈವ ಕ್ಷಮಸ್ವೇತಿ ವಿಸರ್ಜನಮ್ ॥
ಓಂಕಾರಾದಿ ಚತುರ್ಥ್ಯಂ ತೈರ್ನಮೋಽಂತೈರ್ನಾಮಭಿಃ ಕ್ರಮಾತ್। ಕರ್ತವ್ಯಾಶ್ಚ ಕ್ರಿಯಾಃ ಸರ್ವಾ ಭಕ್ತ್ಯಾ ಪರಮಯಾಮುದಾ ॥
(ಶಿ - ಪು - ವಿ - ೨೦/೪೭-೪೯

* ಅಂಗನ್ಯಾಸ ಮತ್ತು ಕರನ್ಯಾಸ ಇವುಗಳ ಪ್ರಯೋಗ ಇಂತಿದೆ - ಓಂ ಓಂ ಅಂಗುಷ್ಠಾಭ್ಯಾಂ ನಮಃ ॥೧॥
ಓಂ ನಂ ತರ್ಜನೀಭ್ಯಾಂ ನಮಃ ॥೨॥ ಓಂ ಮಂ ಮಧ್ಯಮಾಭ್ಯಾಂ ನಮಃ ॥೩॥ ಓಂ ಶಿಂ ಅನಾಮಿಕಾಭ್ಯಾಂ ನಮಃ ॥೪॥
ಓಂ ವಾಂ ಕನಿಷ್ಠಿತಾಭ್ಯಾಂ ನಮಃ ॥೫॥ ಓಂ ಯಂ ಕರತಲಕರಪೃಷ್ಠಾಭ್ಯಾಂ ನಮಃ ॥೬॥ ಇತಿ ಕರನ್ಯಾಸಃ ಓಂ ಓಂ ಹೃದಯಾಯ ನಮಃ
ಓಂ ನಂ ಶಿರಸೇ ಸ್ವಾಹಾ ॥ ಓಂ ಮಂ ಶಿಖಾಯೈ ವಷಟ್ ॥ ಓಂ ಶಿಂ ಕವಚಾಯ ಹುಮ್ ॥
ಓಂ ವಾಂ ನೇತ್ರತ್ರಯಾಯ ವೌಷಟ್ ॥ ಓಂ ಯಂ ಅಸ್ತ್ರಾಯಫಟ್ ॥ ಇತಿ ಹೃದಯಾದಿ ಷಡಂಗನ್ಯಾಸಃ ॥
ಧ್ಯಾನಸಂಬಂಧೀ ಶ್ಲೋಕಗಳು ಇಂತಿವೆ -
ಕೈಲಾಸಪೀಠಾಸನಮಧ್ಯಸಂಸ್ಥಂ ಭಕ್ತೈಃ ಸನಂದಾದಿ ಭಿರರ್ಚ್ಯಮಾನಮ್ ।
ಭಕ್ತಾರ್ತಿದಾವಾನಲಹಾಪ್ರಮೇಯಂ ಧ್ಯಾಯೇದುಮಾಲಿಂಗಿತ ವಿಶ್ವಭೂಷಣಮ್ ॥
ಧ್ಯಾಯೇನ್ನಿತ್ಯಂ ಮಹೇಶಂ ರಜತಗಿರಿನಿಭಂ ಚಾರುಚಂದ್ರಾವತಂಸಂ
ರತ್ನಾಕಲ್ಪೋಜ್ವಲಾಂಗಂ ಪರಶುಮೃಗವರಾಭೀತಿ ಹಸ್ತಂ ಪ್ರಸನ್ನಮ್ ।
ಪದ್ಮಾಸೀನಂ ಸಮಂತಾತ್ ಸ್ತುತಮಮರಗಣೈರ್ವ್ಯಾಘ್ರಕೃತ್ತಿಂ ವಸಾನಂ
ವಿಶ್ವಾದ್ಯಂ ವಿಶ್ವಬೀಜಂ ನಿಖಿಲಭಯಹರಂ ಪಂಚವಕ್ತ್ರಂ ತ್ರಿನೇತ್ರಮ್ ॥
(ಶಿ - ಪು - ವಿದ್ಯೇ - ೨೦/೫೧-೫

ನನ್ನ ಮೇಲೆ ಪ್ರಸನ್ನನಾಗು; ಕೃಪೆ ಮಾಡು. ಶಂಕರನೇ ! ನಾನು ತಿಳಿದೋ, ತಿಳಿಯದೆಯೋ ಎಂದಾದರು ನಿನ್ನ ಪೂಜನಾದಿಗಳನ್ನು ಮಾಡಿದ್ದರೆ, ನಿನ್ನ ಕೃಪೆಯಿಂದ ಅದು ಸಫಲವಾಗಲೀ, ಗೌರೀನಾಥನೇ ! ನಾನು ಅಧುನಿಕ ಯುಗದ ಮಹಾಪಾಪಿಯಾಗಿರುವೆನು, ಪತಿತನಾಗಿರುವೆನು. ನೀನು ಎಂದೆಂದಿಗೂ ಪತಿತಪಾವನನಾಗಿರುವೆ. ಇದನ್ನು ಗಮನಿಸಿ ಹೇಗೆ ಬೇಕೋ ಹಾಗೆಯೇ ಮಾಡು. ಮಹಾದೇವನೇ ! ಸದಾಶಿವನೇ ! ವೇದಗಳು, ಪುರಾಣಗಳು, ನಾನಾ ವಿಧದ ಶಾಸ್ತ್ರಗಳು, ಸಿದ್ಧಾಂತಗಳು ಮತ್ತು ಮಹರ್ಷಿಗಳೂ ಕೂಡ ಇಂದಿನವರೆಗೆ ನಿನ್ನನ್ನು ಪೂರ್ಣವಾಗಿ ತಿಳಿದಿಲ್ಲ, ಹಾಗಿರುವಾಗ ಅಲ್ಪನಾದ ನಾನು ಹೇಗೆ ತಿಳಿಯಬಲ್ಲೆನು ? ಮಹೇಶ್ವರನೇ ! ನಾನು ಹೇಗಿರುವೆನೋ, ಹಾಗೆಯೇ, ಅದೇ ರೂಪದಲ್ಲಿ ಸಂಪೂರ್ಣಭಾವದಿಂದ ನಿನ್ನವನಾಗಿರುವೆನು. ನಿನ್ನಲ್ಲಿ ಆಶ್ರಿತನಾಗಿರುವೆನು. ಅದಕ್ಕಾಗಿ ರಕ್ಷಣೆಯನ್ನು ಪಡೆಯಲು ಯೋಗ್ಯನಾಗಿರುವೆನು. ಪರಮೇಶ್ವರನೇ! ನೀನು ನನ್ನ ಮೇಲೆ ಪ್ರಸನ್ನನಾಗು.*

ಮುನಿಗಳೇ ! ಈ ಪ್ರಕಾರ ಪ್ರಾರ್ಥನೆಮಾಡಿ ಕೈಯೆಲ್ಲಿತ್ತಿಕೊಂಡ ಪುಷ್ಪಾಕ್ಷತೆಗಳನ್ನು ಭಗವಾನ್ ಶಿವನಿಗೆ ಏರಿಸಿ, ಶಂಭುವಿಗೆ ವಿಧಿವತ್ತಾಗಿ ಸಾಷ್ಟಾಂಗ ನಮಸ್ಕಾರ ಮಾಡಬೇಕು. ಅನಂತರ ಶುದ್ಧಬುದ್ಧಿಯುಳ್ಳ ಉಪಾಸಕನು ಶಾಸ್ತ್ರೋಕ್ತ ವಿಧಿಯಿಂದ ಇಷ್ಟದೇವರ ಪ್ರದಕ್ಷಿಣೆ ಮಾಡಬೇಕು. ಮತ್ತೆ ಶ್ರದ್ಧಾಪೂರ್ವಕ ಸ್ತೋತ್ರಗಳಿಂದ ದೇವೇಶ್ವರ ಶಿವನನ್ನು ಸ್ತುತಿಸಬೇಕು. ಬಳಿಕ ಗಲ್ಲ ತಟ್ಟಿಕೊಂಡು ವಿನೀತನಾದ ಸಾಧಕನು ಭಗವಂತನಿಗೆ ಪ್ರಣಾಮ ಮಾಡಬೇಕು. ಕೊನೆಗೆ ಆದರದಿಂದ ಕ್ಷಮಾ ಪ್ರಾರ್ಥನೆಗೈದು ವಿಸರ್ಜನೆ ಮಾಡಬೇಕು. ಮುನಿವರ್ಯರೇ ! ಹೀಗೆ ವಿಧಿವತ್ತಾಗಿ ಪ್ರಾರ್ಥಿವ ಪೂಜೆ ಹೇಳಲಾಯಿತು. ಅದು ಭೋಗ-ಮೋಕ್ಷಗಳನ್ನು ಕೊಡುವುದು ಹಾಗೂ ಭಗವಾನ್ ಶಿವನ ಕುರಿತು ಭಕ್ತಿಭಾವವನ್ನು ಹೆಚ್ಚಿಸುವುದು.

(ಅಧ್ಯಾಯ - ೧೯-೨೦)

❑ ❑ ❑

ಪಾರ್ಥಿವಪೂಜೆಯ ಮಹಿಮೆ, ಶಿವನೈವೇದ್ಯಭಕ್ಷಣದ ವಿಷಯದಲ್ಲಿ ನಿರ್ಣಯ ಹಾಗೂ ಬಿಲ್ವಪತ್ರೆಯ ಮಾಹಾತ್ಮ್ಯ

(ಋಷಿಗಳು ಕೇಳಿದಾಗ ಯಾವ ಕಾಮನೆ ಪೂರ್ತಿಗಾಗಿ ಎಷ್ಟು ಪಾರ್ಥಿವಲಿಂಗಗಳ ಪೂಜೆ ಮಾಡಬೇಕು ? ಇದನ್ನು ವರ್ಣಿಸುತ್ತಾ)

ಸೂತಪುರಾಣಿಕರು ಹೇಳುತ್ತಾರೆ - ಮಹರ್ಷಿಗಳೇ ! ಪಾರ್ಥಿವಲಿಂಗಗಳ ಪೂಜೆಯು ಕೋಟಿ-ಕೋಟಿ ಯಜ್ಞಗಳ ಫಲವನ್ನೀಡುವುದು. ಕಲಿಯುಗದಲ್ಲಿ ಜನರಿಗಾಗಿ ಶಿವಪೂಜೆಯಂತಹ ಇನ್ನೊಂದು ಶ್ರೇಷ್ಠ ಸಾಧನೆಯೇ ಇಲ್ಲ; ಇದು ಸರ್ವಶಾಸ್ತ್ರಗಳ ನಿಶ್ಚಿತ ಸಿದ್ಧಾಂತವಾಗಿದೆ. ಶಿವಲಿಂಗವು ಭೋಗ-ಮೋಕ್ಷಗಳನ್ನು ಕರುಣಿಸುವಂತಹುದು. ಲಿಂಗಗಳಲ್ಲಿ ಉತ್ತಮ, ಮಧ್ಯಮ ಮತ್ತು ಅಧಮವೆಂದು ಮೂರು ವಿಧವಾಗಿ ಹೇಳಲಾಗಿದೆ. ನಾಲ್ಕು ಅಂಗುಲ ಎತ್ತರವಾಗಿದ್ದು, ನೋಡಲು ಸುಂದರವಾಗಿದ್ದು, ವೇದಿಯಿಂದ ಕೂಡಿದ ಶಿವಲಿಂಗವನ್ನು ಶಾಸ್ತ್ರಜ್ಞ ಮಹರ್ಷಿಗಳು ಉತ್ತಮವೆಂದು ಹೇಳಿರುವರು. ಅದರ ಅರ್ಧವನ್ನು ಮಧ್ಯಮವೆಂದೂ, ಅದಕ್ಕೂ ಅರ್ಧವನ್ನು ಅಧಮವೆಂದು ತಿಳಿಯಲಾಗಿದೆ. ಈ ವಿಧವಾಗಿ ಶಿವಲಿಂಗಕ್ಕೆ ಮೂರು ಪ್ರಕಾರಗಳೆಂದು ಹೇಳಲಾಗಿದೆ. ಅದರಲ್ಲಿ ಉತ್ತರೋತ್ತರ ಶ್ರೇಷ್ಠವಾಗಿದೆ. ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರು ಇಲ್ಲವೇ

---

* ತಾವಕಸ್ತ್ವದ್‌ಗುಣಪ್ರಾಣಸ್ತ್ವಚ್ಚಿತ್ತೋಽಹಂ ಸದಾ ಮೃಡ । ಕೃಪಾನಿಧೇ ಇತಿ ಜ್ಞಾತ್ವಾ ಭೂತನಾಥ ಪ್ರಸೀದ ಮೇ ॥
ಅಜ್ಞಾನಾದ್ಯದಿ ವಾ ಜ್ಞಾನಾದ್ಭಪೂಜಾದಿಕಂ ಮಯಾ । ಕೃತಂ ತದಸ್ತು ಸಫಲಂ ಕೃಪಯಾ ತವ ಶಂಕರ ॥
ಅಹಂ ಪಾಪೀ ಮಹಾನದ್ಯ ಪಾನನಶ್ಚ ಭವಾನ್ಮಹಾನ್ । ಇತಿ ವಿಜ್ಞಾಯ ಗೌರೀಶ ಯದಿಚ್ಛಸಿ ತಥಾ ಕುರು ॥
ವೇದೈಃ ಪುರಾಣೈಃ ಸಿದ್ಧಾಂತೈರ್ಋಷಿಭಿರ್ವಿದ್ಧೈರಪಿ । ನ ಜ್ಞಾತೋಽಸಿ ಮಹಾದೇವ ಕುತೋಽಹಂ ತ್ವಾಂ ಸದಾಶಿವ ॥
ಯಥಾ ತಥಾ ತವೀಯೋಽಸ್ಮಿ ಸರ್ವಭಾವೈರ್ಮಹೇಶ್ವರ । ರಕ್ಷಣೀಯಸ್ತ್ವಯಾಹಂ ವೈ ಪ್ರಸೀದ ಪರಮೇಶ್ವರ ॥
(ಶಿ - ಪು - ವಿದ್ಯೇ - ೨೦/೫೬-೬೦)

ಸೂಚನೆ : ಈ ಅಧ್ಯಾಗಳಲ್ಲಿ ಬಂದಿರುವ ವೇದ ಮಂತ್ರಗಳನ್ನು ವೈದಿಕ ವಿದ್ವಾಂಸರಿಂದ ಸರಿಯಾಗಿ ಕಲಿತುಕೊಂಡು ಪ್ರಯೋಗಿಸಬೇಕು.

ವಿಲೋಮ ಸಂಕರರು, ಹೀಗೆ ಯಾರೇ ಆಗಿದ್ದರೂ ಅವರು ತಮ್ಮ ಅಧಿಕಾರಕ್ಕನುಸಾರವಾಗಿ ವೈದಿಕ ಅಥವಾ ತಾಂತ್ರಿಕ ಮಂತ್ರಗಳಿಂದ ಸದಾಕಾಲ ಆದರಪೂರ್ವಕ ಶಿವಲಿಂಗವನ್ನು ಪೂಜಿಸಬೇಕು. ಬ್ರಾಹ್ಮಣರೇ! ಮಹರ್ಷಿಗಳೇ! ಹೆಚ್ಚಿಗೆ ಹೇಳುವುದರಿಂದ ಏನು ಲಾಭ? ಶಿವಲಿಂಗವನ್ನು ಪೂಜಿಸುವುದಲ್ಲಿ ಸ್ತ್ರೀಯರಿಗೂ, ಇತರ ಎಲ್ಲ ಜನರಿಗೂ ಅಧಿಕಾರವಿದೆ* ದ್ವಿಜರಿಗಾಗಿ ವೈದಿಕ ಪದ್ಧತಿಯಿಂದಲೇ ಶಿವಲಿಂಗವನ್ನು ಪೂಜಿಸುವುದು ಶ್ರೇಷ್ಠವಾಗಿದೆ. ಆದರೆ ಇತರ ಜನರಿಗಾಗಿ ವೈದಿಕಪದ್ಧತಿಯಿಂದ ಪೂಜಿಸಲು ಅನುಮತಿ ಇಲ್ಲ. ವೇದಜ್ಞ ದ್ವಿಜರು ವೈದಿಕಪದ್ಧತಿಯಿಂದಲೇ ಪೂಜಿಸಬೇಕು. ಬೇರೆ ಪದ್ಧತಿಯಿಂದ ಅಲ್ಲ; ಎಂದು ಭಗವಾನ್ ಶಿವನು ಹೇಳಿರುವನು. ದಧೀಚಿ ಮತ್ತು ಗೌತಮಾದಿಗಳ ಶಾಪದಿಂದ ಚಿತ್ತವು ದಗ್ಧವಾಗಿ ಹೋಗಿರುವ ದ್ವಿಜರಿಗೆ ವೈದಿಕ ಕರ್ಮದಲ್ಲಿ ಶ್ರದ್ಧೆ ಇರುವುದಿಲ್ಲ. ವೇದಗಳು ಮತ್ತು ಸ್ಮೃತಿಗಳಲ್ಲಿ ಹೇಳಿರುವ ಸತ್ಕರ್ಮಗಳನ್ನು ಅವಹೇಳನ ಮಾಡಿ, ಬೇರೆಯೇ ಕರ್ಮಗಳನ್ನು ಮಾಡತೊಡಗಿದರೆ ಅವನ ಮನೋರಥವು ಎಂದಿಗೂ ಸಫಲವಾಗಲಾರದು.※

ಈ ಪ್ರಕಾರವಾಗಿ ವಿಧ್ಯುಕ್ತವಾಗಿ ಭಗವಾನ್ ಶಂಕರನ ನೈವೇದ್ಯಾಂತ ಪೂಜೆ ಮಾಡಿ, ಅವನ ತ್ರಿಭುವನಮಯ ಅಷ್ಟ ಮೂರ್ತಿಗಳನ್ನು ಪೂಜಿಸಬೇಕು. ಪೃಥಿವಿ, ಜಲ, ಅಗ್ನಿ, ವಾಯು, ಆಕಾಶ, ಸೂರ್ಯ, ಚಂದ್ರ ಹಾಗೂ ಯಜಮಾನ – ಇವು ಭಗವಾನ್ ಶಿವನ ಎಂಟು ಮೂರ್ತಿಗಳೆಂದು ಹೇಳಲಾಗಿವೆ. ಈ ಮೂರ್ತಿಗಳೊಡನೆ ಶರ್ವ, ಭವ, ರುದ್ರ, ಉಗ್ರ, ಭೀಮ, ಈಶ್ವರ, ಮಹಾದೇವ, ಪಶುಪತಿ – ಈ ನಾಮಗಳನ್ನು ಅರ್ಚಿಸಬೇಕು. ಅನಂತರ ಚಂದನ, ಅಕ್ಷತೆ, ಬಿಲ್ವಪತ್ರೆ ಹಿಡಿದುಕೊಂಡು ಅಲ್ಲಿ ಈಶಾನಾದಿ ಕ್ರಮದಿಂದ ಭಗವಾನ್ ಶಿವನ ಪರಿವಾರವನ್ನು ಶ್ರೇಷ್ಠ ಭಕ್ತಿಭಾವದಿಂದ ಪೂಜಿಸಬೇಕು. ಈಶಾನ, ನಂದೀ, ಚಂಡ, ಮಹಾಕಾಲ, ಭೃಂಗೀ, ವೃಷ, ಸ್ಕಂದ, ಕಪರ್ದೀಶ್ವರ, ಸೋಮ ಹಾಗೂ ಶುಕ್ರ – ಇವರು ಹತ್ತು ಮಂದಿ ಶಿವನ ಪರಿವಾರವಾಗಿದೆ. ಇವರು ಕ್ರಮವಾಗಿ ಈಶಾನಾದಿ ಹತ್ತು ದಿಕ್ಕುಗಳಲ್ಲಿ ಪೂಜನೀಯರಾಗಿದ್ದಾರೆ. ಅನಂತರ ಭಗವಾನ್ ಶಿವನ ಸಮಕ್ಷಮದಲ್ಲಿ ವೀರಭದ್ರನನ್ನು ಮತ್ತು ಹಿಂದೆ ಕೀರ್ತಿಮುಖವನ್ನು ಪೂಜಿಸಿ, ವಿಧಿವತ್ತಾಗಿ ಹನ್ನೊಂದು ರುದ್ರರನ್ನು ಪೂಜಿಸಬೇಕು. ಅನಂತರ ಪಂಚಾಕ್ಷರಿಯ ಜಪವನ್ನು ಮಾಡಿ, ರುದ್ರಾಧ್ಯಾಯವನ್ನು, ನಾನಾ ವಿಧದ ಸ್ತೋತ್ರಗಳನ್ನು ಹಾಗೂ ಶಿವಪಂಚಾಂಗವನ್ನು ಪಾರಾಯಣ ಮಾಡಬೇಕು. ಬಳಿಕ ಪ್ರದಕ್ಷಿಣೆ ಬಂದು ನಮಸ್ಕಾರ ಮಾಡಿ ಶಿವಲಿಂಗವನ್ನು ವಿಸರ್ಜಿಸಬೇಕು. ಹೀಗೆ ಶಿವಪೂಜೆಯ ಸಂಪೂರ್ಣ ವಿಧಿಯನ್ನು ಆದರದಿಂದ ನಾನು ವರ್ಣಿಸಿರುವೆನು. ರಾತ್ರಿಯಲ್ಲಿ ದೇವತಾಕಾರ್ಯವನ್ನು ಯಾವಾಗಲೂ ಉತ್ತರಾಭಿಮುಖವಾಗಿಯೇ ಮಾಡಬೇಕು. ಹೀಗೆಯೇ ಶಿವಪೂಜೆಯನ್ನು ಪವಿತ್ರಭಾವದಿಂದ ಸದಾಕಾಲ ಉತ್ತರಾಭಿಮುಖವಾಗಿಯೇ ಮಾಡುವುದು ಉಚಿತವಾಗಿದೆ. ಸ್ಥಾಪನೆಗೊಂಡ ಶಿವಲಿಂಗದ ಪೂರ್ವದ ದಿಕ್ಕನ್ನು ಆಶ್ರಯಿಸಿ ಕುಳಿತಿರುವುದು ಅಥವಾ ನಿಂತುಕೊಳ್ಳುವುದು ಕೂಡದು; ಏಕೆಂದರೆ ಆ ದಿಕ್ಕು ಭಗವಾನ್ ಶಿವನಿಗೆ ಮುಂದುಗಡೆ ಇರುತ್ತದೆ. (ಇಷ್ಟದೇವರ ಎದುರು ತಡೆಯುವುದು ಸರಿಯಲ್ಲ.) ಶಿವಲಿಂಗದ ಉತ್ತರದಲ್ಲಿಯೂ ಕುಳಿತಿರಬಾರದು. ಏಕೆಂದರೆ ಆ ಭಾಗ ಶಂಕರನ ವಾಮಾಂಗವಾಗಿದೆ. ಅಲ್ಲಿ ಶಕ್ತಿ ಸ್ವರೂಪಿಣೀ ಉಮಾದೇವಿಯು ವಿರಾಜಿಸುತ್ತಿರುವಳು. ಪೂಜಕನು ಶಿವಲಿಂಗದ ಪಶ್ಚಿಮ ದಿಕ್ಕಿನಲ್ಲಿಯೂ ಕುಳಿತಿರಬಾರದು. ಏಕೆಂದರೆ, ಅದು ಆರಾಧ್ಯದೇವರ ಬೆನ್ನು ಆಗಿರುತ್ತದೆ. (ಬೆನ್ನ ಹಿಂದಿನಿಂದ ಪೂಜೆ ಮಾಡುವುದು ಉಚಿತವಲ್ಲ.) ಆದ್ದರಿಂದ ಉಳಿದ ದಕ್ಷಿಣ ದಿಕ್ಕೇ ಗ್ರಾಹ್ಯವಾಗಿದೆ. ಅದನ್ನೇ ಆಶ್ರಯಿಸಬೇಕು. ತಾತ್ಪರ್ಯ – ಶಿವಲಿಂಗದ ದಕ್ಷಿಣದಲ್ಲಿ ಉತ್ತರಾಭಿಮುಖವಾಗಿ ಕುಳಿತು ಪೂಜೆ ಮಾಡಬೇಕು. ವಿದ್ವಾಂಸನಾದವನು ಭಸ್ಮದ ತ್ರಿಪುಂಡ್ರವನ್ನು ಹಚ್ಚಿಕೊಂಡು, ರುದ್ರಾಕ್ಷಿಯ ಮಾಲೆಯನ್ನು ಧರಿಸಿ, ಬಿಲ್ವಪತ್ರೆಗಳನ್ನು ಸಂಗ್ರಹಿಸಿಕೊಂಡು ಭಗವಾನ್ ಶಂಕರನನ್ನು ಪೂಜಿಸಬೇಕು. ಮುನಿವರ್ಯರೇ! ಶಿವಪೂಜೆಯನ್ನು ಪ್ರಾರಂಭಿಸುವಾಗ ಭಸ್ಮವು ದೊರಕದಿದ್ದರೆ ಮೃತ್ತಿಕೆಯಿಂದಲಾದರೂ ತ್ರಿಪುಂಡ್ರವನ್ನು ಅವಶ್ಯವಾಗಿ ಹಚ್ಚಿಕೊಳ್ಳಬೇಕು.

ಋಷಿಗಳು ಕೇಳಿದರು – ಮುನಿವರ್ಯರೇ! ಭಗವಾನ್ ಶಿವನ ನೈವೇದ್ಯವನ್ನು ಗ್ರಹಿಸಬಾರದು ಎಂದು ನಾವು

---

* ಬ್ರಾಹ್ಮಣ ಕ್ಷತ್ರಿಯೋ ವೈಶ್ಯಃ ಶೂದ್ರೋ ವಾ ಪ್ರತಿಲೋಮಜಃ । ಪೂಜಯೇತ್ ಸತತಂ ಲಿಂಗಂ ತತ್ತನ್ಮಂತ್ರೇಣ ಸಾದರಮ್ ।
ಕಿಂ ಬಹೂಕ್ತೇನ ಮುನಯಃ ಸ್ತ್ರೀಕಾಮಪಿ ತಥಾನ್ಯತಃ । ಅಧಿಕಾರೋಽಸ್ತಿ ಸರ್ವೇಷಾಂ ಶಿವಲಿಂಗಾರ್ಚನೇ ದ್ವಿಜಾಃ ॥
(ಶಿ - ಪು - ವಿ - ೨೧/೩೯-೪೦)

※ ಯೋ ವೈದಿಕ ಮನಾದೃತ್ಯ ಕರ್ಮ ಸ್ಮಾರ್ತಮಥಾಪಿ ವಾ । ಅನ್ಯತ್ ಸಮಾಚರೇನ್ಮರ್ತ್ಯೋ ನ ಸಂಕಲ್ಪ ಫಲಂ ಲಭೇತ್ ॥
(ಶಿ - ಪು - ವಿ - ೨೧/೪೪)

ಮೊದಲು ಕೇಳಿರುವೆವು. ಈ ವಿಷಯದಲ್ಲಿ ಶಾಸ್ತ್ರದ ನಿರ್ಣಯವೇನು ? ಜೊತೆಗೆ ಬಿಲ್ವದ ಮಾಹಾತ್ಮ್ಯವನ್ನೂ ನಿರೂಪಿಸಿರಿ.

ಸೂತಪುರಾಣಿಕರು ಹೇಳುತ್ತಾರೆ - ಮುನಿಗಳೇ ! ನೀವು ಶಿವನ ಸಂಬಂಧೀ ವ್ರತಗಳನ್ನು ಪಾಲಿಸುವವರಾಗಿರುವಿರಿ. ಆದ್ದರಿಂದ ನಿಮಗೆಲ್ಲರಿಗೂ ಶತ-ಶತ ಧನ್ಯವಾದಗಳು. ಸಂತೋಷವಾಗಿ ನಾನು ಎಲ್ಲವನ್ನೂ ತಿಳಿಸುವೆನು, ಸಾವಧಾನವಾಗಿ ಕೇಳಿರಿ. ಭಗವಾನ್ ಶಿವನ ಭಕ್ತಿಯುಳ್ಳನೂ, ಅಂತರ್ಬಾಹ್ಯಗಳಲ್ಲಿ ಪವಿತ್ರನೂ, ಶುದ್ಧನೂ, ಉತ್ತಮ ವ್ರತಗಳನ್ನು ಪಾಲಿಸುವವನೂ, ದೃಢನಿಶ್ಚಯವುಳ್ಳವನೂ, ಆದ ಭಕ್ತನು ಶಿವನ ನೈವೇದ್ಯವನ್ನು ಅವಶ್ಯವಾಗಿ ಸೇವಿಸಬೇಕು. ಭಗವಾನ್ ಶಿವನ ನೈವೇದ್ಯವು ಅಗ್ರಾಹ್ಯವಾದುದು ಎಂಬುದನ್ನು ಮನಸ್ಸಿನಿಂದ ತೆಗೆದು ಹಾಕಿಬಿಡಿ. ಶಿವನ ನೈವೇದ್ಯವನ್ನು ದರ್ಶಿಸುವ ಮಾತ್ರದಿಂದಲೇ ಎಲ್ಲ ಪಾಪಗಳು ದೂರ ಓಡಿಹೋಗುವವು. ಅದನ್ನು ಭಕ್ಷಣ ಮಾಡಿದನಾದರೆ ಕೋಟಿ-ಕೋಟಿ ಪುಣ್ಯಗಳು ನಮ್ಮೊಳಗೆ ಸೇರಿ ಹೋಗುತ್ತವೆ. ದೊರಕಿರುವ ಶಿವನ ನೈವೇದ್ಯವನ್ನು ತಲೆಬಾಗಿ ಸಂತೋಷವಾಗಿ ಸ್ವೀಕರಿಸಿ, ಪ್ರಯತ್ನಪೂರ್ವಕವಾಗಿ, ಶಿವಸ್ಮರಣೆಯೊಂದಿಗೆ ಆ ಪ್ರಸಾದವನ್ನು ಸೇವಿಸಬೇಕು. ದೊರಕಿರುವ ಶಿವನ ಪ್ರಸಾದವನ್ನು ನಾನು ಮತ್ತೆ ಯಾವಾಗಲಾದರೂ ತಿನ್ನುವೆನು ಎಂದು ವಿಳಂಬ ಮಾಡುವವನು ನಿಶ್ಚಯವಾಗಿ ಪಾಪಗಳಿಂದ ಬಂಧಿತನಾಗುತ್ತಾನೆ. ಶಿವದೀಕ್ಷೆಯನ್ನು ಕೈಗೊಂಡ ಶಿವಭಕ್ತನಿಗಾಗಿ ಈ ಶಿವನೈವೇದ್ಯವು ಅವಶ್ಯವಾಗಿ ಭಕ್ಷಣೀಯವಾಗಿದೆ. ಎಂದು ಹೇಳಲಾಗುತ್ತದೆ. ಶಿವದೀಕ್ಷೆಯಿಂದ ಕೂಡಿದ ಶಿವನ ಭಕ್ತನಿಗಾಗಿ ಎಲ್ಲ ಶಿವಲಿಂಗಗಳ ನೈವೇದ್ಯವು ಶುಭ ಮತ್ತು 'ಮಹಾಪ್ರಸಾದ' ವಾಗಿದೆ. ಆದ್ದರಿಂದ ಆವನು ಅದನ್ನು ಅವಶ್ಯವಾಗಿ ಭಕ್ಷಿಸಬೇಕು. ಆದರೆ ಇತರ ದೇವತೆಗಳ ದೀಕ್ಷೆಯಿಂದ ಕೂಡಿದವನಾಗಿದ್ದು, ಶಿವಭಕ್ತಿಯಲ್ಲಿಯೂ ಮನಸ್ಸನ್ನು ತೊಡಗಿಸಿರುವವನಿಗೆ ಶಿವನ ನೈವೇದ್ಯ ಭಕ್ಷಣೆಯ ವಿಷಯದಲ್ಲಿ ಇರುವ ನಿರ್ಣಯವನ್ನು ನೀವೆಲ್ಲರೂ ಪ್ರೇಮದಿಂದ ಆಲಿಸಿರಿ. ದ್ವಿಜೋತ್ತಮರೇ! ಸಾಲಿಗ್ರಾಮ ಶಿಲೆಯು ಉತ್ಪತ್ತಿಯಾಗುವಲ್ಲೇ ಉತ್ಪನ್ನವಾದ ಲಿಂಗದಲ್ಲಿ, ರಸ-ಲಿಂಗ (ಪಾದರಸ) ದಲ್ಲಿ ಕಲ್ಲಿನ, ಚಿನ್ನ-ಬೆಳ್ಳಿಯ ನಿರ್ಮಿತ ಲಿಂಗದಲ್ಲಿ ದೇವತೆಗಳಿಂದ ಹಾಗೂ ಸಿದ್ಧರಿಂದ ಪ್ರತಿಷ್ಠಾಪಿತವಾದ ಲಿಂಗದಲ್ಲಿ ಕೇಸರ ನಿರ್ಮಿತ ಲಿಂಗದಲ್ಲಿ, ಸ್ಫಟಿಕ ಲಿಂಗದಲ್ಲಿ, ರತ್ನನಿರ್ಮಿತ ಲಿಂಗದಲ್ಲಿ ಮತ್ತು ಸಮಸ್ತ ಜ್ಯೋತಿರ್ಲಿಂಗಗಳಲ್ಲಿ ವಿರಾಜಮಾನನಾದ ಭಗವಾನ್ ಶಿವನ ನೈವೇದ್ಯದ ಭಕ್ಷಣೆಯು ಚಾಂದ್ರಾಯಣ ವ್ರತದಂತೆ ಪುಣ್ಯಕರವಾಗಿದೆ. ಬ್ರಹ್ಮಹತ್ಯೆಯನ್ನು ಮಾಡಿದವನು ಕೂಡ ಪವಿತ್ರನಾಗಿ ಶಿವನ ನಿರ್ಮಾಲ್ಯವನ್ನು ಭಕ್ಷಿಸಿದರೆ, ಅದನ್ನು ಶಿರದಲ್ಲಿ ಮುಡಿದುಕೊಂಡರೆ ಅವನ ಎಲ್ಲ ಪಾಪಗಳು ಶೀಘ್ರವಾಗಿ ನಾಶವಾಗಿ ಹೋಗುತ್ತವೆ. ಆದರೆ ಚಂಡೀಕೇಶ್ವರನ ಅಧಿಕಾರವಿರುವಲ್ಲಿಯ ಶಿವನ ನಿರ್ಮಾಲ್ಯವನ್ನು ಸಾಧಾರಣ ಮನುಷ್ಯರು ಭಕ್ಷಿಸಬಾರದು. ಚಂಡಿಕೇಶ್ವರನ ಅಧಿಕಾರವಿಲ್ಲದಿರುವಲ್ಲಿಯ ಶಿವನಿರ್ಮಾಲ್ಯವನ್ನು ಎಲ್ಲರೂ ಭಕ್ತಿಯಿಂದ ಸೇವಿಸಬಹುದು. ಬಾಣಲಿಂಗ (ನರ್ಮದೇಶ್ವರ), ಲೋಹನಿರ್ಮಿತ (ಸ್ವರ್ಣಾದಿ ಧಾತುಮಯ) ಲಿಂಗ, ಸಿದ್ಧಲಿಂಗ (ಅದರಿಂದ ಯಾರಿಗಾದರೂ ಸಿದ್ಧಿಯಾಗಿದ್ದರೆ, ಅಥವಾ ಸಿದ್ಧರಿಂದ ಸ್ಥಾಪಿತವಾದ ಲಿಂಗ), ಸ್ವಯಂಭೂಲಿಂಗ - ಇವೆಲ್ಲ ಶಿವಲಿಂಗಗಳಲ್ಲಿ ಹಾಗೂ ಶಿವನ ಪ್ರತಿಮೆಯಲ್ಲಿ ಚಂಡಿಕೇಶ್ವರನ ಅಧಿಕಾರವಿಲ್ಲ. ಶಿವಲಿಂಗಕ್ಕೆ ವಿದ್ಯುಕ್ತವಾಗಿ ಅಭಿಷೇಕಮಾಡಿ,ಆ ತೀರ್ಥವನ್ನು ಮೂರು ಬಾರಿ ಕುಡಿದವನ ಕಾಯಿಕ, ವಾಚಿಕ, ಮಾನಸಿಕ ಮೂರು ವಿಧದ ಪಾಪಗಳು ಇಲ್ಲೇ ಬೇಗನೇ ನಾಶವಾಗಿಹೋಗುವವು. ಅಗ್ರಾಹ್ಯವಾದ ಶಿವನ ನೈವೇದ್ಯ, ಪತ್ರ, ಪುಷ್ಪ, ಫಲ, ಜಲ ಇವೆಲ್ಲವು ಸಾಲಿಗ್ರಾಮ ಶಿಲೆಯ ಸ್ಪರ್ಶದಿಂದ ಪವಿತ್ರವಾಗಿ ಗ್ರಾಹ್ಯವಾಗುತ್ತವೆ. ಮುನೀಶ್ವರರೇ! ಶಿವಲಿಂಗದ ಮೇಲೆ ಏರಿಸಿದ ದ್ರವ್ಯವು ಅಗ್ರಾಹ್ಯವಾಗಿದೆ. ಶಿವಲಿಂಗದ ಸ್ಪರ್ಶದಿಂದ ರಹಿತವಾದ, ಅರ್ಥಾತ್ - ಬೇರೆಯಾಗಿಟ್ಟು ಶಿವನಿಗೆ ನಿವೇದಿಸಿದ, ಲಿಂಗದ ಮೇಲೇ ಏರಿಸದೇ ಇರುವುದನ್ನು ಅತ್ಯಂತ ಪವಿತ್ರವೆಂದು ತಿಳಿಯಬೇಕು. ಮುನಿವರ್ಯರೇ ! ಹೀಗೆ ಶಿವ ನೈವೇದ್ಯದ ವಿಷಯದಲ್ಲಿ ಶಾಸ್ತ್ರದ ನಿರ್ಣಯವನ್ನು ತಿಳಿಸಲಾಗಿದೆ.

ಈಗ ತಾವೆಲ್ಲರೂ ಸಾವಧಾನರಾಗಿ, ಆದರದಿಂದ ಬಿಲ್ವಪತ್ರೆಯ ಮಾಹಾತ್ಮ್ಯವನ್ನು ಕೇಳಿರಿ. ಈ ಬಿಲ್ವ ವೃಕ್ಷವು ಮಹಾದೇವನ ಸ್ವರೂಪವೇ ಆಗಿದೆ. ದೇವತೆಗಳೂ ಕೂಡ ಇದನ್ನು ಸ್ತುತಿಸಿರುವರು. ಹಾಗಿರುವಾಗ ಇದರ ಮಹಿಮೆಯನ್ನು ಹೇಗೆ ತಿಳಿಯಬಲ್ಲದು? ಮೂರು ಲೋಕಗಳಲ್ಲಿರುವ ಪ್ರಸಿದ್ಧವಾದ ಎಲ್ಲ ಪುಣ್ಯತೀರ್ಥಗಳು ಬಿಲ್ವವೃಕ್ಷದ ಮೂಲದಲ್ಲಿ ವಾಸಿಸುತ್ತಿರುವವು. ಪುಣ್ಯಾತ್ಮನಾದವನು ಬಿಲ್ವದ ಮೂಲದಲ್ಲಿ ಲಿಂಗಸ್ವರೂಪೀ ಅವಿನಾಶೀ ಮಹಾದೇವನ ಪೂಜೆಯನ್ನು ಮಾಡಿದರೆ, ಅವನು ನಿಶ್ಚಯವಾಗಿಯೂ ಶಿವಪದವನ್ನು ಪಡೆದುಕೊಳ್ಳುವನು. ಬಿಲ್ವವೃಕ್ಷದ ಬುಡದಲ್ಲಿ ನೀರಿನಿಂದ ತಲೆಯನ್ನು ಪ್ರೋಕ್ಷಿಸಿಕೊಂಡವನು ಸಮಸ್ತ ತೀರ್ಥಸ್ನಾನದ

ಫಲವನ್ನು ಪಡೆಯುವನು. ಅವನೇ ಈ ಭೂಲೋಕದಲ್ಲಿ ಪಾವನನೆಂದು ತಿಳಿಯಲಾಗಿದೆ. ಬಿಲ್ವದ ಬೇರುಗಳಿಗೆ ಚಿನ್ನಾಗಿ ನೀರನ್ನುಣಿಸಿದರೆ ಮಹಾದೇವನು ಪೂರ್ಣವಾಗಿ ಸಂತುಷ್ಟನಾಗುವನು. ಗಂಧ-ಪುಷ್ಪಾದಿಗಳಿಂದ ಬಿಲ್ವ ವೃಕ್ಷವನ್ನು ಪೂಜಿಸಿದ ಮನುಷ್ಯನು ಶಿವಲೋಕವನ್ನು ಪಡೆಯುವನು ಹಾಗೂ ಈ ಲೋಕದಲ್ಲಿಯೂ ಅವನ ಸುಖ-ಸಂಪತ್ತುಗಳು ಹೆಚ್ಚುವವು. ಬಿಲ್ವ ವೃಕ್ಷದ ಬುಡದಲ್ಲಿ ಆದರದಿಂದ ದೀಪಗಳನ್ನು ಉರಿಸುವವನು ತತ್ತ್ವಜ್ಞಾನದಿಂದ ಸಂಪನ್ನನಾಗಿ ಭಗವಾನ್ ಮಹೇಶ್ವರನನ್ನು ಹೊಂದುವನು. ಬಿಲ್ವದ ಟೊಂಗೆಯನ್ನು ಹಿಡಿದು ಅದರಿಂದ ಎಳೆಯದಾದ ಬಿಲ್ವ ಪತ್ರೆಗಳನ್ನು ಕಿತ್ತು, ಅದರಿಂದ ಆ ವೃಕ್ಷದ ಪೂಜೆಯನ್ನು ಮಾಡುವವನು ಎಲ್ಲ ಪಾಪಗಳಿಂದ ಮುಕ್ತನಾಗಿ ಹೋಗುವನು. ಬಿಲ್ವ ವೃಕ್ಷದ ಬುಡದಲ್ಲಿ ಭಗವಾನ್ ಶಿವನ ಅನುರಾಗೀ ಭಕ್ತನಿಗೆ ಭಕ್ತಿಯಿಂದ ಭೋಜನ ಮಾಡಿಸುವವನಿಗೆ ಕೋಟಿ-ಪಟ್ಟು ಪುಣ್ಯವು ದೊರೆಯುತ್ತದೆ. ಬಿಲ್ವ ವೃಕ್ಷದ ಬುಡದಲ್ಲಿ ಶಿವಭಕ್ತನಿಗೆ ಪಾಯಸ ಮತ್ತು ತುಪ್ಪದನ್ನವನ್ನು ಬಡಿಸುವವನು ಎಂದಿಗೂ ದರಿದ್ರನಾಗುವುದಿಲ್ಲ. ಬ್ರಾಹ್ಮಣರೇ! ಹೀಗೆ ಸಾಂಗೋಪಾಂಗವಾಗಿ ಶಿವಲಿಂಗದ ಪೂಜೆಯನ್ನು ನಾನು ವರ್ಣಿಸಿರುವೆನು. ಇದರಲ್ಲಿ ಪ್ರವೃತ್ತಿಮಾರ್ಗಿಗಳ ಹಾಗೂ ನಿವೃತ್ತಿಮಾರ್ಗಿಗಳ ಎರಡು ಪ್ರಕಾರಗಳಿವೆ. ಪ್ರವೃತ್ತಿಮಾರ್ಗಿ ಜನರಿಗಾಗಿ ಪೀಠಪೂಜೆಯೇ ಈ ಭೂಲೋಕದಲ್ಲಿ ಸಮಸ್ತ ಅಭೀಷ್ಟ ವಸ್ತುಗಳನ್ನು ಕರುಣಿಸುವಂತಹುದು. ಪ್ರವೃತ್ತಮಾರ್ಗಿ ಪುರುಷನು ಯೋಗ್ಯರಾದ ಗುರು-ಆಚಾರ್ಯರಿಂದಲೇ ಎಲ್ಲ ಪೂಜೆಯನ್ನು ಮಾಡಿಸಿಕೊಳ್ಳಬೇಕು. ಅಭಿಷೇಕದ ಬಳಿಕ ಹವಿಷ್ಯಾನ್ನವನ್ನು ನೈವೇದ್ಯ ಮಾಡಬೇಕು. ಪೂಜಾಂತ್ಯದಲ್ಲಿ ಶಿವಲಿಂಗವನ್ನು ಶುದ್ಧ ಸಂಪುಷ್ಟದಲ್ಲಿರಿಸಿ ಮನೆಯೊಳಗೆ ಪವಿತ್ರ ಜಾಗದಲ್ಲಿ ಇರಿಸಬೇಕು. ನಿವೃತ್ತಿಮಾರ್ಗಿಯಾದ ಸಾಧಕನಿಗಾಗಿ ಕೈಯ ಮೇಲೆಯೇ ಶಿವಪೂಜೆಯ ವಿಧಾನವಿದೆ. ಅವರು ಭಿಕ್ಷೆಯಿಂದ ದೊರೆತ ತನ್ನ ಊಟವನ್ನೇ ನೈವೇದ್ಯರೂಪದಲ್ಲಿ ಅರ್ಪಿಸಬೇಕು. ನಿವೃತ್ತ ಪುರುಷರಿಗೆ ಸೂಕ್ಷ್ಮಲಿಂಗವೇ ಶ್ರೇಷ್ಠವೆಂದು ಹೇಳಲಾಗಿದೆ. ಅವರು ವಿಭೂತಿಯಿಂದಲೇ ಪೂಜಿಸಿ, ವಿಭೂತಿಯನ್ನೇ ನೈವೇದ್ಯವಾಗಿ ನಿವೇದಿಸಬೇಕು. ಪೂಜೆ ಮಾಡಿ ಆ ಲಿಂಗವನ್ನು ಸದಾಕಾಲ ತನ್ನ ಮಸ್ತಕದಲ್ಲೇ ಧರಿಸಿಕೊಂಡಿರಬೇಕು.

(ಅಧ್ಯಾಯ ೨೧-೨೨)

❐ ❐ ❐

ಶಿವನಾಮ-ಜಪ ಹಾಗೂ ಭಸ್ಮಧಾರಣೆಯ ಮಹಿಮೆ, ತ್ರಿಪುಂಡ್ರದ ದೇವತೆಗಳು ಮತ್ತು ಸ್ಥಾನಗಳ ಪ್ರತಿಪಾದನೆ

ಋಷಿಗಳು ಕೇಳಿದರು - ಮಹಾನುಭಾವರೂ, ವ್ಯಾಸ ಶಿಷ್ಯರೂ ಆದ ಸೂತಪುರಾಣಿಕರೇ ! ನಿಮಗೆ ನಮಸ್ಕಾರಗಳು. ಈಗ ತಾವು ಪರಮೋತ್ತಮ ಭಸ್ಮದ ಮಾಹಾತ್ಮ್ಯವನ್ನು ವರ್ಣಿಸಿರಿ. ಭಸ್ಮ-ಮಾಹಾತ್ಮ್ಯ , ರುದ್ರಾಕ್ಷ-ಮಾಹಾತ್ಮ್ಯ ಹಾಗೂ ಉತ್ತಮ ನಾಮ ಮಾಹಾತ್ಮ್ಯ – ಇವುಗಳನ್ನು ಪ್ರಸನ್ನತೆಯಿಂದ ಪ್ರತಿಪಾದಿಸಿರಿ ಹಾಗೂ ನಮ್ಮ ಹೃದಯಗಳಿಗೆ ಆನಂದವನ್ನು ಕರುಣಿಸಿರಿ.

ಸೂತಪುರಾಣಿಕರು ಹೇಳುತ್ತಾರೆ - ಮಹರ್ಷಿಗಳೇ ! ನೀವು ಬಹಳ ಒಳ್ಳೆಯ ಮಾತನ್ನೇ ಕೇಳಿರುವಿರಿ. ಇದು ಸಮಸ್ತ ಜನರಿಗಾಗಿ ಹಿತಕಾರಕವಾಗಿದೆ. ಭಗವಾನ್ ಶಿವನನ್ನು ಉಪಾಸನೆ ಮಾಡುವವರು ಧನ್ಯರೂ, ಕೃತಾರ್ಥರೂ ಆಗಿದ್ದಾರೆ. ಅವರು ದೇಹ ಧರಿಸಿದುದು ಸಫಲವಾಗಿದೆ ಮತ್ತು ಅವರ ಸಮಸ್ತ ಕುಲದ ಉದ್ಧಾರವಾಗಿ ಹೋಗಿದೆ. ಯಾರ ಮುಖದಲ್ಲಿ ಶಿವನನಾಮವಿದೆಯೋ, ಯಾರು ಸದಾಶಿವ, ಶಿವ, ಶಂಕರ ಮುಂತಾದ ನಾಮಗಳನ್ನು ಉಚ್ಚರಿಸುವನೋ – ಮುತ್ತುಗದ ಕೆಂಡವನ್ನು ಯಾರೂ ಮುಟ್ಟಲಾರರು – ಹಾಗೆಯೇ ಪಾಪಗಳು ಅವನಿಗೆ ಮುಟ್ಟಲಾರವು. ಓ ಶಿವನೇ ! ನಿನಗೆ ನಮಸ್ಕಾರವು **(ಶ್ರೀಶಿವಾಯ ನಮಸ್ತುಭ್ಯಮ್)** ಹೀಗೆ ಬಾಯಿಂದ ಹೊರಟಾಗ, ಆ ಮುಖವು ಸಮಸ್ತ ಪಾಪಗಳನ್ನು ವಿನಾಶಗೊಳಿಸುವ ಪಾವನ ತೀರ್ಥವಾಗಿ ಹೋಗುತ್ತದೆ. ಅಂತಹ ಮುಖವನ್ನು ಸಂತೋಷವಾಗಿ ದರ್ಶಿಸುವವನು ನಿಶ್ಚಯವಾಗಿಯೂ ತೀರ್ಥಸೇವನ ಜನಿತ ಫಲವನ್ನು ಪಡೆಯುವನು. ಬ್ರಾಹ್ಮಣರೇ! ಶಿವನ ನಾಮ, ವಿಭೂತಿ (ಭಸ್ಮ), ರುದ್ರಾಕ್ಷಿ – ಇವು ಮೂರು ತ್ರಿವೇಣಿಯಂತೆ ಪರಮ ಪುಣ್ಯಮಯವೆಂದು ತಿಳಿಯಲಾಗಿದೆ. ಶುಭಪ್ರದವಾದ ಇವು ಮೂರು ವಸ್ತುಗಳು ಸದಾಕಾಲ ಧರಿಸಿಕೊಂಡಿರುವವರ ದರ್ಶನದಿಂದ ತ್ರಿವೇಣಿ ಸ್ನಾನದ ಫಲವನ್ನು ಹೊಂದುವನು. ಭಗವಾನ್ ಶಿವನ ನಾಮವು 'ಗಂಗೆ'ಯಾಗಿದೆ, ವಿಭೂತಿ 'ಯಮುನೆ' ಎಂದು ತಿಳಿಯಲಾಗಿದೆ, ರುದ್ರಾಕ್ಷವನ್ನು 'ಸರಸ್ವತಿ' ಎಂದು ಹೇಳಲಾಗಿದೆ. ಇವು ಮೂರರ ತ್ರಿವೇಣೀ ಸಂಗಮವು ಸಮಸ್ತ ಪಾಪಗಳನ್ನು ನಾಶ ಮಾಡುವಂತಹುದು. ವಿಪ್ರ ಶ್ರೇಷ್ಠರೇ ! ಈ ಮೂರರ ಮಹಿಮೆಯ ಸದಸದ್ವಿಲಕ್ಷಣವು ಭಗವಾನ್ ಮಹೇಶ್ವರನಲ್ಲದೆ ಬೇರೆ ಯಾರು ಚೆನ್ನಾಗಿ ತಿಳಿಯಬಲ್ಲರು ? ಈ ಬ್ರಹ್ಮಾಂಡ ದೊಳಗೆ ಇರುವುದೆಲ್ಲವನ್ನು ಕೇವಲ ಮಹೇಶ್ವರನೇ ತಿಳಿಯುವನು.

ವಿಪ್ರರೇ ! ನಿಮ್ಮ ಶ್ರದ್ಧಾಭಕ್ತಿಗನುಸಾರವಾಗಿ ಸಂಕ್ಷೇಪವಾಗಿ ಭಗವನ್ನಾಮಗಳ ಮಹಿಮೆಯನ್ನು ನಾನು ವರ್ಣಿಸುವೆನು; ನೀವೆಲ್ಲರೂ ಪ್ರೇಮಪೂರ್ವಕವಾಗಿ ಕೇಳಿರಿ. ಈ ನಾಮ ಮಾಹಾತ್ಮ್ಯವು ಸಮಸ್ತ ಪಾಪಗಳನ್ನು ಕಳೆಯುವ ಸರ್ವೋತ್ತಮ ಸಾಧನೆಯಾಗಿದೆ. 'ಶಿವ' ಈ ನಾಮರೂಪೀ ದಾವಾನಲದಿಂದ ಮಹಾನ್ ಪಾಪರೂಪೀ ಪರ್ವತವು ಅಯಾಸವಿಲ್ಲದೆ ಭಸ್ಮವಾಗಿ ಹೋಗುವುದು. ಇದು ತ್ರಿವಾರ ಸತ್ಯವಾಗಿದೆ, ಇದರಲ್ಲಿ ಸಂಶಯವೇ ಇಲ್ಲ. ಶೌನಕರೇ ! ಪಾಪಮೂಲಕವಾದ ದುಃಖಗಳು ಏಕಮಾತ್ರ ಶಿವನಾಮ (ಭಗವನ್ನಾಮ) ದಿಂದಲೇ ನಾಶವಾಗುವವು. ಇತರ ಸಾಧನೆಗಳಿಂದ ಪ್ರಯತ್ನ ಮಾಡಿದರೂ ಪೂರ್ಣವಾಗಿ ನಾಶವಾಗುವುದಿಲ್ಲ. ಈ ಭೂಮಂಡಲದಲ್ಲಿ ಸದಾ ಭಗವಾನ್ ಶಿವನ ನಾಮಜಪದಲ್ಲೇ ತೊಡಗಿರುವವನು, ವೇದಗಳನ್ನು ತಿಳಿದವನೂ, ಪುಣ್ಯಾತ್ಮನೂ, ಧನ್ಯವಾದಕ್ಕೆ ಪಾತ್ರನೂ, ಆಗಿರುವನು ಮತ್ತು ಅವನನ್ನು ವಿದ್ವಾಂಸನೆಂದು ಭಾವಿಸಲಾಗಿದೆ. ಮುನಿಗಳೇ ! ಶಿವನಾಮದಲ್ಲಿ ವಿಶ್ವಾಸ ವಿರುವವನು ಆಚರಿಸಿದ ನಾನಾ ಪ್ರಕಾರದ ಧರ್ಮಗಳು ತತ್ಕಾಲವೇ ಫಲವನ್ನು ಕೊಡಲು ಉತ್ಸುಕರಾಗಿರುತ್ತವೆ. ಮಹರ್ಷಿಗಳೇ ! ಭಗವಾನ್ ಶಿವನ ನಾಮದಿಂದ ನಾಶವಾಗುವಷ್ಟು ಪಾಪಗಳನ್ನು ಮನುಷ್ಯನು ಈ ಭೂಮಿಯಲ್ಲಿ ಮಾಡಲು ಸಾಧ್ಯವಿಲ್ಲ.* ಶಿವನಾಮರೂಪೀ ಹಡಗಿನಲ್ಲಿ ಕುಳಿತು ಸಂಸಾರರೂಪೀ ಸಮುದ್ರವನ್ನು ದಾಟುವವನ ಜನ್ಮ-ಮರಣರೂಪವಾದ ಸಂಸಾರದ ಮೂಲಭೂತ ಎಲ್ಲ ಪಾಪಗಳು ನಿಶ್ಚಯವಾಗಿಯೂ ನಾಶವಾಗುತ್ತವೆ. ಮಹಾಮುನಿಗಳೇ! ಸಂಸಾರದ ಮೂಲಭೂತ ಪಾತಕರೂಪೀ ವೃಕ್ಷಗಳು ಶಿವನಾಮರೂಪೀ ಕೊಡಲಿಯಿಂದ ನಿಶ್ಚಯವಾಗಿ ನಾಶವಾಗುತ್ತವೆ. ಪಾಪರೂಪೀ ದಾವಾನಲದಿಂದ ಪೀಡಿತನಾದವನು

---

* ಭವಂತಿ ವಿವಿಧಾ ಧರ್ಮಾಸ್ತೇಷಾಂಸದ್ಯಃ ಫಲೋನ್ಮುಖಾಃ । ಯೇಷಾಂ ಭವತಿ ವಿಶ್ವಾಸಃ ಶಿವನಾಮಜಪೇ ಮುನೇ॥
ಪಾತಕಾನಿ ವಿನಶ್ಯಂತಿ ಯಾವಂತಿ ಶಿವನಾಮತಃ । ಭುವಿ ತಾವಂತಿ ಪಾಪಾನಿ ಕ್ರಿಯಂತೇ ನ ನರೈರ್ಮುನೇ ॥
(ಶಿ - ಪು - ವಿ - ೨೩/೨೬-೨೭)

ಶಿವ-ನಾಮರೂಪೀ ಅಮೃತವನ್ನು ಪಾನಮಾಡಬೇಕು. ಪಾಪಗಳ ದಾವಾನಲದಿಂದ ದಗ್ಧರಾದ ಜನರಿಗೆ ಶಿವ-ನಾಮಾಮೃತವಲ್ಲದೆ ಶಾಂತಿ ಸಿಗಲಾರದು. ಯಾರು ಶಿವನಾಮರೂಪೀ ಸುಧೆಯ ಪ್ರವಾಹದಲ್ಲಿ ಈಜುವರೋ, ಅವರು ಸಂಸಾರರೂಪೀ ದಾವಾನಲದ ನಡುವೆ ನಿಂತಿದ್ದರೂ ಎಂದಿಗೂ ಶೋಕಭಾಗಿಗಳಾಗುವುದಿಲ್ಲ. ಯಾವ ಮಹಾತ್ಮರ ಮನಸ್ಸಿನಲ್ಲಿ ಶಿವನಾಮದ ಕುರಿತು ಬಹಳ ಭಕ್ತಿಯಿದೆಯೋ, ಇಂತಹವರು ಸರ್ವಥಾ ಮುಕ್ತರಾಗುತ್ತಾರೆ.[೫] ಮುನೀಶ್ವರರೇ ! ಅನೇಕ ಜನ್ಮಗಳವರೆಗೆ ತಪಸ್ಸು ಮಾಡಿದವರಿಗೇ ಶಿವನಾಮದ ಕುರಿತು ಭಕ್ತಿ ಉಂಟಾಗುತ್ತದೆ. ಅದು ಸಮಸ್ತ ಪಾಪಗಳನ್ನು ನಾಶಮಾಡುವುದಾಗಿದೆ.

ಭಗವಾನ್ ಶಿವನಾಮದ ಕುರಿತು ಮನಸ್ಸಿನಲ್ಲಿ ಎಂದಿಗೂ ಖಂಡಿತವಾಗದಿರುವ ಅಸಾಧಾರಣ ಭಕ್ತಿಯು ಪ್ರಕಟವಾದವನಿಗೆ ಮೋಕ್ಷವು ಸುಲಭವಾಗಿದೆ – ಇದು ನನ್ನ ಮತವಾಗಿದೆ. ಅನೇಕ ಪಾಪಗಳನ್ನು ಮಾಡಿಯೂ ಭಗವಾನ್ ಶಿವನ ನಾಮ ಜಪದಲ್ಲಿ ಆದರದಿಂದ ತೊಡಗಿರುವವನು ಸಮಸ್ತ ಪಾಪಗಳಿಂದ ಮುಕ್ತನಾಗಿಯೇ ಆಗುವನು – ಇದರಲ್ಲಿ ಸಂಶಯವಿಲ್ಲ. ಕಾಡ್ಗಿಚ್ಚಿನಿಂದ ಕಾಡಿನಲ್ಲಿ ಮರಗಳು ಸುಟ್ಟುಹೋಗುವಂತೆಯೇ, ಶಿವನಾಮರೂಪೀ ದಾವಾಲನದಿಂದ ಅಂದಿನವರೆಗಿನ ಎಲ್ಲ ಪಾಪಗಳು ಭಸ್ಮವಾಗಿ ಹೋಗುವವು. ಶೌನಕಾದಿಗಳೇ! ಯಾರ ಶರೀರವು ನಿತ್ಯವು ಭಸ್ಮವನ್ನು ಹಚ್ಚುವುದರಿಂದ ಪವಿತ್ರವಾಗಿದೆಯೋ ಹಾಗೂ ಶಿವನಾಮ ಜಪವನ್ನು ಆದರಿಸ ತೊಡಗಿರುವನೋ, ಅವನು ಘೋರ ಸಂಸಾರ-ಸಾಗರವನ್ನು ದಾಟಿ ಹೋಗುತ್ತಾನೆ. ಭಗವಾನ್ ಶಿವನ ನಾಮಜಪವು ಸಂಸಾರ-ಸಾಗರವನ್ನು ದಾಟಿ ಹೋಗಲು ಸರ್ವೋತ್ತಮ ಉಪಾಯವಾಗಿದೆ ಎಂದು ಸಂಪೂರ್ಣ ವೇದಗಳನ್ನು ಅವಲೋಕಿಸಿದ ಹಿಂದಿನ ಮಹರ್ಷಿಗಳು ನಿಶ್ಚಯಿಸಿರುವರು. ಮುನಿವರರೇ! ಹೆಚ್ಚು ಹೇಳುವುದರಿಂದ ಏನು ಲಾಭ? ಸರ್ವಪಾಪಾಪಹಾರಿ ಶಿವನಾಮದ ಮಾಹಾತ್ಮ್ಯವನ್ನು ಒಂದೇ ಶ್ಲೋಕದಲ್ಲಿ ನಾನು ವರ್ಣಿಸುವೆನು. ಭಗವಾನ್ ಶಂಕರನ ಒಂದೇ ನಾಮದಲ್ಲಿಯೂ ಪಾಪಹರಣದ ಎಷ್ಟು ಶಕ್ತಿಯಿದೆಯೋ, ಅಷ್ಟು ಪಾಪವನ್ನು ಮನುಷ್ಯನು ಎಂದೂ ಮಾಡಲಾರನು.*

ಮುನಿಗಳೇ! ಹಿಂದಿನಕಾಲದಲ್ಲಿ ಮಹಾಪಾಪೀ ಇಂದ್ರದ್ಯುಮ್ನ ರಾಜನು ಶಿವನಾಮದ ಪ್ರಭಾವದಿಂದಲೇ ಉತ್ತಮ ಸದ್ಗತಿಯನ್ನು ಹೊಂದಿದ್ದನು. ಹೀಗೆಯೇ ಬಹಳ ಪಾಪಗಳನ್ನು ಮಾಡಿದ್ದ ಓರ್ವ ಬ್ರಾಹ್ಮಣ ಯುವತಿಯೂ ಶಿವನಾಮದ ಪ್ರಭಾವದಿಂದಲೇ ಉತ್ತಮ ಗತಿಯನ್ನು ಹೊಂದಿದ್ದಳು. ಹೀಗೆ ನಾನು ನಿಮಗೆ ಭಗವನ್ನಾಮದ ಉತ್ತಮ ಮಾಹಾತ್ಮ್ಯವನ್ನು ವರ್ಣಿಸಿರುವೆನು. ಇನ್ನು ನೀವು ಭಸ್ಮದ ಮಾಹಾತ್ಮ್ಯವನ್ನು ಕೇಳಿರಿ. ಅದು ಸಮಸ್ತ ಪಾವನ ವಸ್ತುಗಳನ್ನು ಕೂಡ ಪಾವನಗೊಳಿಸುವಂತಹುದು.

ಮಹರ್ಷಿಗಳೇ ! ಭಸ್ಮವು ಸಮಸ್ತ ಮಂಗಲಗಳನ್ನು ಕೊಡುವುದು ಹಾಗೂ ಉತ್ತಮವಾಗಿದೆ. ಅವರ ಎರಡು ಭೇದಗಳನ್ನು ನಾನು ವರ್ಣಿಸುವೆನು. ಸಾವಧಾನರಾಗಿ ಕೇಳಿರಿ. ಒಂದನ್ನು 'ಮಹಾಭಸ್ಮ'ವೆಂದು ತಿಳಿಯಬೇಕು, ಇನ್ನೊಂದನ್ನು 'ಸ್ವಲ್ಪಭಸ್ಮ' ವೆಂದು ಹೇಳುತ್ತಾರೆ. ಮಹಾಭಸ್ಮದ ಕೂಡ ಅನೇಕ ಭೇದಗಳಿವೆ, ಅದನ್ನು ಶ್ರೌತ, ಸ್ಮಾರ್ತ, ಲೌಕಿಕವೆಂದು ಮೂರು ಪ್ರಕಾರದಿಂದ ಹೇಳಲಾಗಿದೆ. ಸ್ವಲ್ಪ ಭಸ್ಮದ ಕೂಡ ಬಹಳಷ್ಟು ಭೇದಗಳನ್ನು ವರ್ಣಿಸಲಾಗಿದೆ. ಶ್ರೌತ ಮತ್ತು ಸ್ಮಾರ್ತ ಭಸ್ಮವು ಕೇವಲ ದ್ವಿಜರಿಗೇ ಉಪಯೋಗಿಸಲು ಯೋಗ್ಯವಾಗಿದೆ ಎಂದು ಹೇಳಲಾಗಿದೆ. ಮೂರನೆಯದಾದ ಲೌಕಿಕ ಭಸ್ಮವು ಇತರ ಎಲ್ಲ ಜನರಿಗೂ ಉಪಯೋಗವಾಗಬಲ್ಲದು. ದ್ವಿಜರು ವೈದಿಕ ಮಂತ್ರೋಚ್ಚಾರಣೆಯಿಂದ ಭಸ್ಮವನ್ನು ಧರಿಸ ಬೇಕೆಂದು ಶ್ರೇಷ್ಠ ಮಹರ್ಷಿಗಳು ತಿಳಿಸಿರುವರು. ಇತರ ಜನರಿಗೆ ಮಂತ್ರವಿಲ್ಲದೆಯೇ ಧರಿಸುವ ವಿಧಾನವಿದೆ. ಸುಟ್ಟ ಸೆಗಣೀ (ಬೆರಣಿ)ಯಿಂದ ದೊರೆಯುವ ಭಸ್ಮವನ್ನು ಆಗ್ನೇಯವೆಂದು ಹೇಳಲಾಗಿದೆ. ಮಹಾ ಮುನಿಗಳೇ! ಅದೂ ತ್ರಿಪುಂಡ್ರದ ದ್ರವ್ಯವಾಗಿದೆ, ಎಂದು ಹೇಳಲಾಗಿದೆ. ಅಗ್ನಿಹೋತ್ರದಿಂದ ದೊರೆಯುವ ಭಸ್ಮವನ್ನು

---

೫ ಶಿವನಾಮತರೀಂ ಪ್ರಾಪ್ಯ ಸಂಸಾರಾಬ್ಧಿಂ ತರಂತಿ ತೇ । ಸಂಸಾರಮೂಲಪಾಪಾನಿ ತಾನಿ ನಶ್ಯಂತ್ಯಸಂಶಯಮ್ ॥ ಸಂಸಾರಮೂಲಭೂತಾನಾಂ ಪಾತಕಾನಾಂ ಮಹಾಮುನೇ । ಶಿವನಾಮಕುಠಾರೇಣ ವಿನಾಶೋ ಜಾಯತೇ ಧ್ರುವಮ್ ॥ ಶಿವನಾಮಾಮೃತಂ ಪೇಯಂ ಪಾಪದಾವಾನಲಾರ್ದಿತೈಃ । ಪಾಪದಾವಾಗ್ನಿತಪ್ತಾನಾಂ ಶಾಂತಿಸ್ತೇನ ವಿನಾ ನ ಹಿ ॥ ಶಿವೇತಿ ನಾಮಪೀಯೂಷವರ್ಷಾಧಾರಾಪರಿಪ್ಲುತಾಃ । ಸಂಸಾರದವಮಧ್ಯೇಽಪಿ ನ ಶೋಚಂತಿ ಕದಾಚನ ॥ ಶಿವನಾಮ್ನಿ ಮಹದ್ಭಕ್ತಿರ್ಯಾತಾಯೇಷಾಂ ಮಹಾತ್ಮನಾಮ್ । ತದ್ವಿಧಾನಾಂ ತು ಸಹಸಾ ಮುಕ್ತಿರ್ಭವತಿ ಸರ್ವಥಾ ॥

(ಶ - ಪು - ವಿ - ೨೩/೨೯-೩೩)

* ಪಾಪಾನಾಂ ಹರಣೇ ಶಂಭೋರ್ನಾಮ್ನಿ ಶಕ್ತಿರ್ಹಿ ಯಾವತೀ । ಶಕ್ನೋತಿ ಪಾತಕಂ ತಾವತ್ ಕರ್ತುಂ ನಾಪಿ ನರಃ ಕ್ವಚಿತ್ ॥

(ಶ - ಪು - ವಿ - ೨೩/೪೨)

ಜ್ಞಾನೀ ಪುರುಷರು ಸಂಗ್ರಹಿಸಬೇಕು. ಇತರ ಯಜ್ಞಗಳಿಂದ ಸಿಗುವ ಭಸ್ಮವೂ ತ್ರಿಪುಂಡ್ರಧಾರಣೆಯಲ್ಲಿ ಬಳಸಬಹುದು. ಜಾಬಾಲೋಪನಿಷತ್‌ನಲ್ಲಿ ಬಂದಿರುವ **'ಅಗ್ನಿರಿತಿ'** ಇತ್ಯಾದಿ ಏಳು ಮಂತ್ರಗಳಿಂದ ಅಭಿಮಂತ್ರಿಸಿ, ಜಲಮಿಶ್ರಿತ ಭಸ್ಮವನ್ನು ಬೇರೆ-ಬೇರೆ ಅಂಗಗಳಲ್ಲಿ ಧರಿಸಬೇಕು. ಜಾಬಾಲ ಮಹರ್ಷಿಗಳು ಸರ್ವವರ್ಣ ಮತ್ತು ಆಶ್ರಮಗಳಿಗೆ ಮಂತ್ರದಿಂದ ಅಥವಾ ಮಂತ್ರವಿಲ್ಲದೆಯೂ ಆದರದಿಂದ ಭಸ್ಮದ ತ್ರಿಪುಂಡ್ರ ಹಚ್ಚುವ ಆವಶ್ಯಕತೆಯನ್ನು ಹೇಳಿರುವರು. ಸಮಸ್ತ ಅಂಗಗಳಲ್ಲಿ ಸಜಲ ಭಸ್ಮವನ್ನು ಹಚ್ಚುವುದು ಅಥವಾ ಬೇರೆ-ಬೇರೆ ಅಂಗಗಳಲ್ಲಿ ಅಡ್ಡವಾಗಿ ತ್ರಿಪುಂಡ್ರವನ್ನು ಧರಿಸುವುದು. ಇದನ್ನು ಮೋಕ್ಷಾರ್ಥಿ ಪುರುಷನು ಪ್ರಮಾದದಿಂದಲೂ ಬಿಡಬಾರದು ಎಂದು ಶ್ರುತಿಯ ಆದೇಶವಿದೆ. ಭಗವಾನ್ ಶಿವ ಮತ್ತು ವಿಷ್ಣುವೂ ಕೂಡ ತಿರ್ಯಕ್ ತ್ರಿಪುಂಡ್ರ ಧಾರಣಮಾಡಿರುವರು. ಇತರ ದೇವಿಯರಸಹಿತ ಭಗವತಿ ಉಮೆ ಮತ್ತು ಲಕ್ಷ್ಮೀದೇವಿಯೂ ವಾಣಿಯಿಂದ ಇದನ್ನು ಪ್ರಶಂಸಿಸಿದ್ದಾರೆ. ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರೂ, ವರ್ಣಸಂಕರರು, ಜಾತಿಭ್ರಷ್ಟ ಪುರುಷರೂ ಕೂಡ ತ್ರಿಪುಂಡ್ರರೂಪದಲ್ಲಿ ಭಸ್ಮವನ್ನು ಧರಿಸಿರುವರು.

ಸೂತಪುರಾಣಿಕರು ಹೇಳುತ್ತಾರೆ - ಮಹರ್ಷಿಗಳೇ ! ಈ ಪ್ರಕಾರ ಭಸ್ಮ-ಧಾರಣೆ ಹಾಗೂ ತ್ರಿಪುಂಡ್ರದ ಮಾಹಾತ್ಮ್ಯವನ್ನು ಸಂಕ್ಷೇಪವಾಗಿ ತಿಳಿಸಿರುವೆನು. ಇದು ಸಮಸ್ತ ಪ್ರಾಣಿಗಳಿಗೆ ಗೋಪನೀಯ ರಹಸ್ಯವಾಗಿದೆ. ಆದ್ದರಿಂದ ನೀವೂ ಕೂಡ ಇದನ್ನು ಗುಪ್ತವಾಗಿಯೇ ಇಡಬೇಕು. ಮುನಿವರ್ಯರೇ ! ಹಣೆಯೇ ಮೊದಲಾದ ನಿರ್ದಿಷ್ಟ ಸ್ಥಾನಗಳಲ್ಲಿ ಅಡ್ಡವಾಗಿ ಭಸ್ಮದ ಮೂರು ರೇಖೆಗಳನ್ನು ಹಚ್ಚುವುದನ್ನೇ ವಿದ್ವಾಂಸರು ತ್ರಿಪುಂಡ್ರವೆಂದು ಹೇಳಿರುವರು. ಭ್ರೂಮಧ್ಯಭಾಗದಿಂದ ಹುಬ್ಬುಗಳ ತುದಿಗಳವರೆಗೆ ಹಣೆಯಲ್ಲಿ ತ್ರಿಪುಂಡ್ರವನ್ನು ಧರಿಸಬೇಕು. ಮಧ್ಯಮಾ ಮತ್ತು ಅನಾಮಿಕಾ ಬೆರಳುಗಳಿಂದ ಎರಡು ಗೆರೆಗಳನ್ನೆಳೆದು ನಡುವಿನಲ್ಲಿ ಅಂಗುಷ್ಠದಿಂದ ಪ್ರತಿಲೋಮಭಾವದಿಂದ ಎಳೆದ ಗೆರೆಯನ್ನು ತ್ರಿಪುಂಡ್ರವೆಂದು ಹೇಳಲಾಗಿದೆ. ಅಥವಾ ನಡುವಿನ ಮೂರು ಬೆರಳುಗಳಿಂದ ಭಸ್ಮವನ್ನು ಭಕ್ತಿಭಾವದಿಂದ ಲಲಾಟದಲ್ಲಿ ತ್ರಿಪುಂಡ್ರವನ್ನು ಧರಿಸಬೇಕು. ತ್ರಿಪುಂಡ್ರವು ಅತ್ಯಂತ ಉತ್ತಮವೂ, ಭೋಗ-ಮೋಕ್ಷವನ್ನೂ ಕೊಡುವುದಾಗಿದೆ. ತ್ರಿಪುಂಡ್ರದ ಮೂರು ರೇಖೆಗಳ ಪ್ರತಿಯೊಂದರಲ್ಲಿಯೂ, ಒಂಭತ್ತು-ಒಂಭತ್ತು ದೇವತೆಗಳಿವೆ, ಅವು ಎಲ್ಲ ಅಂಗಗಳಲ್ಲಿಯೂ ಸ್ಥಿತವಾಗಿದ್ದಾರೆ. ಅವರನ್ನು ನಿಮಗೆ ಪರಿಚಯಿಸುತ್ತೇನೆ, ದತ್ತ ಚಿತ್ತರಾಗಿ ಕೇಳಿರಿ. ಮುನಿವರ್ಯರೇ! ಪ್ರಣವದ ಪ್ರಥಮಾಕ್ಷರ ಅಕಾರ, ಗಾರ್ಹಪತ್ಯಅಗ್ನಿ, ಪೃಥಿವೀ, ಧರ್ಮ, ರಜೋಗುಣ, ಋಗ್ವೇದ, ಕ್ರಿಯಾಶಕ್ತಿ, ಪ್ರಾತಃಸವನ ಹಾಗೂ ಮಹಾದೇವ – ಇವು ತ್ರಿಪುಂಡ್ರದ ಪ್ರಥಮ ರೇಖೆಯಲ್ಲಿರುವ ಒಂಭತ್ತು ದೇವತೆಗಳು. ಇದನ್ನು ಶಿವದೀಕ್ಷಾಪರಾಯಣ ಪುರುಷರು ಚೆನ್ನಾಗಿ ತಿಳಿದುಕೊಳ್ಳಬೇಕು. ಪ್ರಣವದ ಎರಡನೆಯ ಅಕ್ಷರ ಉಕಾರ, ದಕ್ಷಿಣಾಗ್ನಿ, ಆಕಾಶ, ಸತ್ತ್ವಗುಣ, ಯಜುರ್ವೇದ, ಮಧ್ಯಂದಿನ ಸವನ, ಇಚ್ಛಾಶಕ್ತಿ, ಅಂತರಾತ್ಮಾ, ಮಹೇಶ್ವರ – ಇವು ಎರಡನೆಯ ರೇಖೆಯ ಒಂಭತ್ತು ದೇವತೆಗಳು, ಪ್ರಣವದ ಮೂರನೆಯ ಅಕ್ಷರ ಮಕಾರ, ಆಹವನೀಯ ಅಗ್ನಿ, ಪರಮಾತ್ಮಾ, ತಮೋಗುಣ, ದ್ಯುಲೋಕ, ಜ್ಞಾನಶಕ್ತಿ, ಸಾಮವೇದ, ತೃತೀಯಸವನ, ಶಿವ – ಇವು ಮೂರನೆಯ ರೇಖೆಯ ಒಂಭತ್ತು ದೇವತೆಗಳು. ಹೀಗೆ ದೇವತೆಗಳನ್ನು ಉತ್ತಮ ಭಕ್ತಿಭಾವದಿಂದ ನಿತ್ಯ ನಮಸ್ಕಾರಮಾಡಿ ಸ್ನಾನಾದಿಗಳಿಂದ ಶುದ್ಧರಾದ ಪುರುಷರು ತ್ರಿಪುಂಡ್ರವನ್ನು ಹಚ್ಚಿಕೊಂಡರೆ, ಭೋಗ-ಮೋಕ್ಷಗಳನ್ನು ಪಡೆದು ಕೊಳ್ಳುವನು. ಮುನಿಶ್ವರರೇ ! ಇವು ಸಂಪೂರ್ಣ ಅಂಗಗಳಲ್ಲಿ ಸ್ಥಾನ-ದೇವತೆಗಳನ್ನು ಹೇಳಲಾಗಿದೆ. ಈಗ ಅದರ ಸಂಬಂಧೀ ಸ್ಥಾನಗಳನ್ನು ಹೇಳುವೆನು, ಭಕ್ತಿಯಿಂದ ಕೇಳಿರಿ. ಮೂವತ್ತೆರಡು, ಹದಿನಾರು, ಎಂಟು, ಅಥವಾ ಐದು ಸ್ಥಾನಗಳಲ್ಲಿ ತ್ರಿಪುಂಡ್ರವನ್ನು ಹಚ್ಚಬೇಕು. ಮಸ್ತಕ, ಲಲಾಟ, ಎರಡೂ ಕಿವಿಗಳು, ಎರಡೂ ಕಣ್ಣುಗಳು, ಎರಡೂ ಮೂಗು, ಮುಖ, ಕಂಠ, ಎರಡೂ ಭುಜಗಳು, ಎರಡೂ ಮೊಣಕೈಗಳು, ಎರಡೂ ಮಣಿಗಂಟುಗಳು, ಹೃದಯ, ಎರಡೂ ಪಕ್ಕೆಗಳು, ನಾಭಿ, ಎರಡೂ ಅಂಡಕೋಶಗಳು, ಎರಡೂ ತೊಡೆ, ಎರಡೂ ಮೊಣಕಾಲು, ಎರಡೂ ಕಣಕಾಲು, ಎರಡೂ ಮೀನಖಂಡ, ಎರಡೂ ಕಾಲುಗಳು – ಇವು ಮೂವತ್ತೆರಡು ಉತ್ತಮ ಸ್ಥಾನಗಳಾಗಿವೆ. ಇವುಗಳಲ್ಲಿ ಕ್ರಮವಾಗಿ ಅಗ್ನಿ, ಜಲ, ಪೃಥಿವೀ, ವಾಯು, ಹತ್ತು ದಿಕ್ಕುಗಳು, ಹತ್ತು ದಿಕ್ಪಾಲಕರು, ಎಂಟು ವಸುಗಳು ಇವರುಗಳು ವಾಸಿಸುತ್ತಾರೆ. ಧರ, ಧ್ರುವ, ಸೋಮ, ಅಪ, ಅನಿಲ, ಅನಲ, ಪ್ರತ್ಯೂಷ ಮತ್ತು ಪ್ರಭಾಸ – ಇವು ಅಷ್ಟವಸುಗಳು ಎಂದು ಹೇಳಲಾಗಿದೆ. ಇವರೆಲ್ಲರ ನಾಮಗಳನ್ನು ಉಚ್ಚರಿಸಿ ಇವುಗಳ ಸ್ಥಾನಗಳಲ್ಲಿ ವಿದ್ವಾಂಸರು ತ್ರಿಪುಂಡ್ರವನ್ನು ಧರಿಸಬೇಕು.

ಅಥವಾ ಏಕಾಗ್ರಚಿತ್ತನಾಗಿ ಹದಿನಾರು ಸ್ಥಾನಗಳಲ್ಲೇ ತ್ರಿಪುಂಡ್ರವನ್ನು ಧರಿಸಲಿ. ಮಸ್ತಕ, ಲಲಾಟ, ಕಂಠ, ಎರಡೂ ಹೆಗಲುಗಳು, ಎರಡು ಭುಜಗಳು, ಎರಡು ಮೊಣಕೈಗಳು, ಎರಡು ಮಣಿಗಂಟುಗಳು, ಹೃದಯ, ನಾಭಿ, ಎರಡು

ಪಕ್ಕೆಗಳು ಹಾಗೂ ಪೃಷ್ಠಭಾಗ ಇವುಗಳಲ್ಲಿ ತ್ರಿಪುಂಡ್ರವನ್ನು ಹಚ್ಚಿ ಅಲ್ಲಿ- ಎರಡೂ ಅಶ್ವಿನೀಕುಮಾರರು, ಶಿವ, ಶಕ್ತಿ, ರುದ್ರ, ಈಶ, ನಾರದ ಮತ್ತು ವಾಮಾ ಮೊದಲಾದ ಒಂಭತ್ತು ಶಕ್ತಿಗಳನ್ನು ಪೂಜಿಸಬೇಕು. ಇವರೆಲ್ಲರೂ ಸೇರಿ ಹದಿನಾರು ದೇವತೆಗಳೂ, ಅಶ್ವಿನೀಕುಮಾರರು ಇಬ್ಬರೆಂದು ಹೇಳಲಾಗಿದೆ. ಮಸ್ತಕ, ಕೇಶ, ಎರಡೂ ಕಿವಿಗಳು, ಮುಖ, ಎರಡು ಭುಜಗಳು, ಹೃದಯ, ನಾಭಿ, ಎರಡೂ ತೊಡೆಗಳು, ಎರಡೂ ಮೊಣಕಾಲು, ಎರಡೂ ಕಾಲು, ಮತ್ತು ಬೆನ್ನು – ಈ ಹದಿನಾರು ಸ್ಥಾನಗಳಲ್ಲಿ ತ್ರಿಪುಂಡ್ರವನ್ನು ನ್ಯಾಸ ಮಾಡಬೇಕು. ಮಸ್ತಕದಲ್ಲಿ ಶಿವ, ಕೇಶಗಳಲ್ಲಿ ಚಂದ್ರ, ಎರಡೂ ಕಿವಿಗಳಲ್ಲಿ ರುದ್ರ ಮತ್ತು ಬ್ರಹ್ಮಾ, ಮುಖದಲ್ಲಿ ವಿಘ್ನರಾಜ ಗಣಪತಿ, ಎರಡೂ ಭುಜಗಳಲ್ಲಿ ವಿಷ್ಣು ಮತ್ತು ಲಕ್ಷ್ಮೀ, ಹೃದಯದಲ್ಲಿ ಶಂಭು, ನಾಭಿಯಲ್ಲಿ ಪ್ರಜಾಪತಿ, ಎರಡೂ ತೊಡೆಗಳಲ್ಲಿ ನಾಗ ಮತ್ತು ನಾಗಕನ್ಯೆಯರು, ಎರಡೂ ಕಣಕಾಲುಗಳಲ್ಲಿ ಋಷಿಪತ್ನಿಯರು, ಎರಡೂ ಕಾಲುಗಳಲ್ಲಿ ಸಮುದ್ರ ಹಾಗೂ ವಿಶಾಲ ಪೃಷ್ಠಭಾಗದಲ್ಲಿ ಸಮಸ್ತ ತೀರ್ಥಗಳ ದೇವತೆಗಳು ವಿರಾಜಮಾನರಾಗಿದ್ದಾರೆ. ಹೀಗೆ ಹದಿನಾರು ಸ್ಥಾನಗಳ ಪರಿಚಯ ಕೊಡಲಾಯಿತು. ಇನ್ನು ಎಂಟು ಸ್ಥಾನಗಳನ್ನು ಹೇಳುವೆನು. ಗುಹ್ಯಸ್ಥಾನ, ಲಲಾಟ, ಪರಮೋತ್ತಮ ಕರ್ಣದ್ವಯ, ಎರಡೂ ಭುಜಗಳು, ಹೃದಯ ಮತ್ತು ನಾಭಿ – ಇವು ಎಂಟು ಸ್ಥಾನಗಳು. ಇವುಗಳಲ್ಲಿ ಬ್ರಹ್ಮಾ ಹಾಗೂ ಸಪ್ತರ್ಷಿಗಳು ಎಂಟು ದೇವತೆಗಳನ್ನು ಹೇಳಲಾಗಿದೆ. ಮುನೀಶ್ವರರೇ! ಭಸ್ಮದ ಸ್ಥಾನಗಳನ್ನು ಬಲ್ಲ ವಿದ್ವಾಂಸರು ಹೀಗೆ ಎಂಟು ಸ್ಥಾನಗಳ ಪರಿಚಯವನ್ನು ಕೊಟ್ಟಿರುವರು. ಅಥವಾ ಮಸ್ತಕ, ಎರಡೂ ಭುಜಗಳು, ಹೃದಯ, ನಾಭಿ – ಈ ಐದು ಸ್ಥಾನಗಳನ್ನು ಭಸ್ಮವೇತ್ತಾ ಪುರುಷರು ಭಸ್ಮಧಾರಣೆಗೆ ಯೋಗ್ಯವೆಂದು ಹೇಳಿರುವರು. ಸಾಧ್ಯವಾದಷ್ಟು ದೇಶ, ಕಾಲ, ಮುಂತಾದುವನ್ನು ನೋಡಿ ಭಸ್ಮವನ್ನು ಅಭಿಮಂತ್ರಿಸುವುದು, ನೀರನ್ನು ಸೇರಿಸುವುದು ಮುಂತಾದ ಕಾರ್ಯಗಳನ್ನು ಮಾಡಬೇಕು. ಅಭಿಮಂತ್ರಿಸಲು ಅಸಮರ್ಥನಾದರೂ ತ್ರಿಪುಂಡ್ರಾದಿಗಳನ್ನು ಹಚ್ಚಿಕೊಳ್ಳಬೇಕು. ತ್ರಿನೇತ್ರಧಾರೀ, ಮೂರು ಗುಣಗಳ ಆಧಾರ ಹಾಗೂ ಮೂರು ದೇವತೆಗಳ ಜನಕ ಭಗವಾನ್ ಶಿವನನ್ನು ಸ್ಮರಿಸುತ್ತಾ **'ನಮಃ ಶಿವಾಯ'** ಎಂದು ಹೇಳಿ ಲಲಾಟದಲ್ಲಿ ತ್ರಿಪುಂಡ್ರವನ್ನು ಹಚ್ಚಬೇಕು. **'ಈಶಾಭ್ಯಾಂ ನಮಃ'** ಎಂದು ಹೇಳಿ ಎರಡೂ ಪಕ್ಕೆಗಳಲ್ಲಿ ತ್ರಿಪುಂಡ್ರಗಳನ್ನು ಧರಿಸಬೇಕು. **'ಬೀಜಾಭ್ಯಾಂ ನಮಃ'** ಎಂದು ಹೇಳಿ ಎರಡೂ ಮಣಿಗಂಟುಗಳಲ್ಲಿ ಭಸ್ಮವನ್ನು ಹಚ್ಚಬೇಕು. **'ಪಿತೃಭ್ಯಾಂ ನಮಃ'** ಎಂದು ಹೇಳಿ ಕೆಳಗಿನ ಅಂಗಗಳಲ್ಲಿ, **'ಉಮೇಶಾಭ್ಯಾಂ ನಮಃ'** ಎಂದು ಹೇಳಿ ಮೇಲಿನ ಅಂಗಗಳಲ್ಲಿ ಹಾಗೂ **'ಭೀಮಾಯ ನಮಃ'** ಎಂದು ಹೇಳಿ ಬೆನ್ನಿನಲ್ಲಿ ಮತ್ತು ತಲೆಯ ಹಿಂಭಾಗದಲ್ಲಿ ತ್ರಿಪುಂಡ್ರವನ್ನು ಹಚ್ಚಬೇಕು.

(ಅಧ್ಯಾಯ ೨೩-೨೪)

❐ ❐ ❐

ರುದ್ರಾಕ್ಷ ಧಾರಣದ ಮಹಿಮೆ ಹಾಗೂ ಅದರ ವಿವಿಧ ಭೇದಗಳ ವರ್ಣನೆ

ಸೂತಪುರಾಣಿಕರು ಹೇಳುತ್ತಾರೆ – ಮಹಾಪ್ರಾಜ್ಞರೇ! ಮಹಾಮತಿಗಳಾದ ಶಿವರೂಪೀ ಶೌನಕರೇ! ಈಗ ನಾನು ಸಂಕ್ಷೇಪವಾಗಿ ರುದ್ರಾಕ್ಷದ ಮಾಹಾತ್ಮ್ಯವನ್ನು ಹೇಳುವೆನು, ಕೇಳಿರಿ. ರುದ್ರಾಕ್ಷವು ಶಿವನಿಗೆ ಬಹಳ ಪ್ರಿಯವಾದುದು. ಇದನ್ನು ಪರಮ ಪಾವನವೆಂದು ತಿಳಿಯಬೇಕು. ರುದ್ರಾಕ್ಷದ ದರ್ಶನದಿಂದ, ಸ್ಪರ್ಶದಿಂದ ಹಾಗೂ ಅದರಿಂದ ಜಪ ಮಾಡುವುದರಿಂದ ಸಮಸ್ತ ಪಾಪಗಳನ್ನು ಹರಣಮಾಡುವುದೆಂದು ತಿಳಿಯಲಾಗಿದೆ. ಮುನಿಗಳೇ! ಹಿಂದೆ ಪರಮಾತ್ಮಾ ಶಿವನು ಸಮಸ್ತ ಲೋಕಗಳಿಗೆ ಉಪಕಾರ ಮಾಡಲಿಕ್ಕಾಗಿ ಪಾರ್ವತೀದೇವಿಯಲ್ಲಿ ರುದ್ರಾಕ್ಷದ ಮಹಿಮೆಯನ್ನು ವರ್ಣಿಸಿದ್ದನು.

ಭಗವಾನ್ ಶಿವನು ಹೇಳುತ್ತಾನೆ – ಮಹೇಶ್ವರೀ ಶಿವೇ! ನಾನು ನಿನ್ನ ಪ್ರೇಮಕ್ಕೆ ವಶನಾಗಿ ಭಕ್ತರ ಹಿತಕ್ಕಾಗಿ ರುದ್ರಾಕ್ಷದ ಮಹಿಮೆಯನ್ನು ವರ್ಣಿಸುವೆನು, ಕೇಳು. ಮಹೇಶಾನೀ! ಹಿಂದೆ ನಾನು ಮನಸ್ಸನ್ನು ಸಂಯಮಿಸಿ ಸಾವಿರಾರು ದಿವ್ಯ ವರ್ಷಗಳವರೆಗೆ ಘೋರವಾದ ತಪಸ್ಸಿನಲ್ಲಿ ತೊಡಗಿದೆ. ಒಂದು ದಿನ ಇದ್ದಕ್ಕಿದ್ದಂತೆ ನನ್ನ ಮನಸ್ಸು ಕ್ಷುಬ್ಧವಾಯಿತು. ಪರಮೇಶ್ವರೀ! ನಾನು ಸಮಸ್ತ ಲೋಕಗಳ ಉಪಕಾರ ಮಾಡುವ ಸ್ವತಂತ್ರ ಪರಮೇಶ್ವರನಾಗಿರುವೆ. ಆದ್ದರಿಂದ ಆಗ ನಾನು ಲೀಲಾವಶ ನನ್ನ ಎರಡೂ ಕಣ್ಣುಗಳನ್ನು ತೆರೆದೆ. ತೆರೆಯುತ್ತಲೇ ನನ್ನ ಮನೋಹರ ನೇತ್ರಗಳಿಂದ ಕೆಲವು ಜಲದ ಬಿಂದುಗಳು ಉದುರಿದವು. ಕಣ್ಣೀರಿನ ಆ ಬಿಂದುಗಳಿಂದ ಅಲ್ಲಿ ರುದ್ರಾಕ್ಷ ಎಂಬ ಮರವು ಹುಟ್ಟಿಕೊಂಡಿತು. ಭಕ್ತರ ಮೇಲೆ ಅನುಗ್ರಹವನ್ನು ತೋರಲು ಆ ಆಶ್ರುಬಿಂದುಗಳು ಸ್ಥಾವರ ಭಾವವನ್ನು ಪಡೆದವು. ಆ ರುದ್ರಾಕ್ಷಗಳನ್ನು ನಾನು ವಿಷ್ಣುಭಕ್ತರಿಗೆ ಹಾಗೂ ನಾಲ್ಕು ವರ್ಣದ ಜನರಿಗೂ

ಹಂಚಿಬಿಟ್ಟೆ ಭೂಮಂಡಲದಲ್ಲಿ ನನ್ನ ಪ್ರಿಯ ರುದ್ರಾಕ್ಷಗಳನ್ನು ನಾನು ಗೌಡ ದೇಶದಲ್ಲಿ ಉತ್ಪನ್ನಮಾಡಿದೆ. ಮಥುರಾ, ಅಯೋಧ್ಯಾ, ಲಂಕಾ, ಮಲಯಾಚಲ, ಸಹ್ಯಾದ್ರಿ, ಕಾಶೀ ಮತ್ತು ಇತರ ದೇಶಗಳಲ್ಲಿಯೂ ಅದು ಅಂಕುರಿಸಿತು. ಆ ಉತ್ತಮ ರುದ್ರಾಕ್ಷಗಳು ಅಸಹ್ಯ ಪಾಪಸಮೂಹಗಳನ್ನು ಭೇದಿಸುವುದಾಗಿವೆ ಹಾಗೂ ಶ್ರುತಿಗಳಿಗೂ ಪ್ರೇರಕವಾಗಿವೆ. ನನ್ನ ಆಜ್ಞೆಯಂತೆ ಅವು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂಬ ಜಾತಿಭೇದದಿಂದ ಈ ಭೂತಳದಲ್ಲಿ ಪ್ರಸಿದ್ಧಗೊಂಡವು. ರುದ್ರಾಕ್ಷದ ಜಾತಿಯವೇ ಶುಭಾಕ್ಷಗಳೂ ಇವೆ. ಆ ಬ್ರಾಹ್ಮಣಾದಿ ಜಾತಿಯ ರುದ್ರಾಕ್ಷಗಳ ವರ್ಣ-ಶ್ವೇತ, ರಕ್ತ, ಪೀತ, ಕೃಷ್ಣ ಎಂದು ತಿಳಿಯಬೇಕು. ಮನುಷ್ಯರು ಕ್ರಮವಾಗಿ ವರ್ಣಕ್ರನುಸಾರವಾಗಿ ತನ್ನ ಜಾತಿಯ ರುದ್ರಾಕ್ಷಗಳನ್ನೇ ಧರಿಸಬೇಕು. ಭೋಗ-ಮೋಕ್ಷಗಳನ್ನು ಬಯಸುವ ನಾಲ್ಕು ವರ್ಣಗಳ ಜನರು ಮತ್ತು ವಿಶೇಷವಾಗಿ ಶಿವಭಕ್ತರು ಶಿವ-ಪಾರ್ವತಿಯರ ಸಂತೋಷಕ್ಕಾಗಿ ರುದ್ರಾಕ್ಷದ ಫಲಗಳನ್ನು ಅವಶ್ಯವಾಗಿ ಧರಿಸಬೇಕು. ನೆಲ್ಲಿಕಾಯಿ ಗಾತ್ರದ ರುದ್ರಾಕ್ಷವನ್ನು ಶ್ರೇಷ್ಠವೆಂದು ಹೇಳಲಾಗಿದೆ. ಬೋರೆಹಣ್ಣಿನ ಗಾತ್ರದಷ್ಟನ್ನು ಮಧ್ಯಮ ಶ್ರೇಣಿಯದೆಂದು ಹೇಳಲಾಗಿದೆ. ಕಡ್ಲೆ ಗಾತ್ರದ ರುದ್ರಾಕ್ಷವನ್ನು ನಿಮ್ನಕೋಟಿಯಲ್ಲಿ ಎಣಿಸಲಾಗಿದೆ. ಇನ್ನು ಇದರ ಉತ್ತಮತೆಯನ್ನು ಪರೀಕ್ಷಿಸಲು ಇದು ಮತ್ತೊಂದು ಉತ್ತಮ ಪ್ರಕ್ರಿಯೆಯೆಂದು ಹೇಳಲಾಗುತ್ತದೆ. ಇದನ್ನು ತಿಳಿಸುವ ಉದ್ದೇಶವು ಭಕ್ತರ ಹಿತಕಾಮನೆಯೇ ಆಗಿದೆ. ಪಾರ್ವತೀ! ನೀನು ಚೆನ್ನಾಗಿ ಪ್ರೇಮಪೂರ್ವಕ ಈ ವಿಷಯವನ್ನು ಕೇಳು,

ಮಹೇಶ್ವರೀ! ಬೋರೆ ಹಣ್ಣಿನ ಗಾತ್ರದ ರುದ್ರಾಕ್ಷವು ಇಷ್ಟು ಸಣ್ಣದಾಗಿದ್ದರೂ ಲೋಕದಲ್ಲಿ ಉತ್ತಮ ಫಲವನ್ನು ಕೊಡುವಂತಹುದು ಹಾಗೂ ಸುಖ-ಸೌಭಾಗ್ಯಗಳನ್ನು ವೃದ್ಧಿ ಮಾಡುವುದಾಗಿದೆ. ನೆಲ್ಲಿಕಾಯಿ ಗಾತ್ರದ ರುದ್ರಾಕ್ಷವು ಸಮಸ್ತ ಅರಿಷ್ಟಗಳನ್ನು ನಾಶಮಾಡುವುದಾಗಿದೆ ಮತ್ತು ಗುಲುಗುಂಜಿ ಗಾತ್ರದ ಸಣ್ಣ ರುದ್ರಾಕ್ಷವು ಸಮಸ್ತ ಮನೋರಥಗಳನ್ನು ಫಲಗಳನ್ನು ಸಿದ್ಧಿಮಾಡಿಕೊಡುತ್ತದೆ. ರುದ್ರಾಕ್ಷವು ಸಣ್ಣದಾದಷ್ಟು ಹೆಚ್ಚು ಫಲವನ್ನು ಕೊಡುವುದು. ದೊಡ್ಡ ರುದ್ರಾಕ್ಷಕ್ಕಿಂತ ಸಣ್ಣ ರುದ್ರಾಕ್ಷವು ಹತ್ತುಪಟ್ಟು ಫಲವನ್ನು ಕೊಡುವುದು. ಎಂದು ವಿದ್ವಾಂಸರು ಹೇಳಿರುವರು. ಪಾಪಗಳನ್ನು ನಾಶಮಾಡಲು ರುದ್ರಾಕ್ಷವನ್ನು ಧರಿಸುವುದು ಆವಶ್ಯಕವೆಂದು ಹೇಳಲಾಗಿದೆ. ಅದು ನಿಶ್ಚಯವಾಗಿಯೂ ಸಂಪೂರ್ಣ ಅಭೀಷ್ಟ ಮನೋರಥಗಳ ಸಾಧಕವಾಗಿದೆ. ಆದ್ದರಿಂದ ಅವಶ್ಯವಾಗಿಯೇ ಅದನ್ನು ಧರಿಸಬೇಕು. ಪರಮೇಶ್ವರೀ! ಲೋಕದಲ್ಲಿ ಮಂಗಲಮಯ ರುದ್ರಾಕ್ಷದ ಮಾಲೆ ಫಲವನ್ನು ಕೊಡುವಂತೆ, ಇನ್ನೊಂದು ಫಲದಾಯಿನಿ ಮಾಲೆಯು ಕಂಡುಬರುವುದಿಲ್ಲ. ದೇವೀ! ಒಂದೇ ರೀತಿಯ ಆಕಾರ-ಪ್ರಕಾರವುಳ್ಳ, ಸ್ನಿಗ್ಧ, ಗಟ್ಟಿಯಾದ, ಸ್ಥೂಲವಾದ, ಕಂಟಕಯುಕ್ತ, ಸುಂದರ ರುದ್ರಾಕ್ಷಗಳು ಬಯಸಿದ ಪದಾರ್ಥಗಳನ್ನು ಕೊಡುವುದು ಹಾಗೂ ಸದಾಕಾಲ ಭೋಗ-ಮೋಕ್ಷಗಳನ್ನು ಕೊಡುವುದಾಗಿವೆ. ಕ್ರಿಮಿಗಳಿಂದ ದೂಷಿತವಾದ, ಒಡೆದುಹೋದ, ಮುಳ್ಳುಗಳಿಲ್ಲದ, ಗಾಯಗಳುಳ್ಳ ಹಾಗೂ ಗೋಲಾಕಾರವಲ್ಲದ – ಈ ಐದು ಪ್ರಕಾರದ ರುದ್ರಾಕ್ಷಗಳನ್ನು ತ್ಯಜಿಸಬೇಕು. ಯಾವ ರುದ್ರಾಕ್ಷದಲ್ಲಿ ನೂಲನ್ನು ಪೋಣಿಸಲು ತಾನಾಗಿಯೇ ಛಿದ್ರವಾಗಿದ್ದರೆ, ಅದು ಉತ್ತಮವೆಂದು ತಿಳಿಯಲಾಗಿದೆ. ಯಾವುದರಲ್ಲಿ ಮನುಷ್ಯನು ಪ್ರಯತ್ನದಿಂದ ತೂತು ಮಾಡಿರುವನೋ, ಅದನ್ನು ಮಧ್ಯಮ ಶ್ರೇಣಿಯದಾಗಿದೆ. ರುದ್ರಾಕ್ಷ ಧಾರಣವು ದೊಡ್ಡ-ದೊಡ್ಡ ಪಾತಕಗಳನ್ನು ನಾಶಮಾಡುವಂತಹುದು. ಈ ಜಗತ್ತಿನಲ್ಲಿ ಹನ್ನೊಂದುನೂರು ರುದ್ರಾಕ್ಷಗಳನ್ನು ಧರಿಸುವ ಮನುಷ್ಯನಿಗೆ ಸಿಗುವ ಫಲವನ್ನು ನೂರಾರು ವರ್ಷಗಳಲ್ಲಿಯೂ ವರ್ಣಿಸಲು ಸಾಧ್ಯವಿಲ್ಲ. ಭಕ್ತಿಯುಳ್ಳ ಮನುಷ್ಯನು ಐದುನೂರ ಐವತ್ತು ರುದ್ರಾಕ್ಷಗಳ ಸುಂದರ ಮುಕುಟವನ್ನು ತಯಾರಿಸಿ ತಲೆಯಲ್ಲಿ ಧರಿಸಿಕೊಳ್ಳಬೇಕು. ಮುನ್ನೂರ ಅರವತ್ತು ರುದ್ರಾಕ್ಷಿಗಳನ್ನು ದಾರದಲ್ಲಿ ಪೋಣಿಸಿ ಒಂದು ಮಾಲೆಯನ್ನು ಮಾಡಿಕೊಳ್ಳಬೇಕು. ಅಂತಹ ಮೂರು ಹಾರಗಳನ್ನು ತಯಾರಿಸಿ ಭಕ್ತಿಪರಾಯಣ ಪುರುಷನು ಅದನ್ನು ಯಜ್ಞೋಪವೀತದಂತೆ ಧರಿಸಿಕೊಂಡಿರಬೇಕು.

ಸೂತಪುರಾಣಿಕರು ಹೇಳುತ್ತಾರೆ - ಮಹರ್ಷಿಗಳೇ! ಯಾವ ಅಂಗದಲ್ಲಿ ಎಷ್ಟು ರುದ್ರಾಕ್ಷಗಳನ್ನು ಧರಿಸಬೇಕೆಂಬುದನ್ನು ಕೇಳಿರಿ. ತಲೆಯಲ್ಲಿ ಈಶಾನ ಮಂತ್ರದಿಂದ, ಕಿವಿಗಳಲ್ಲಿ ತತ್ಪುರುಷ ಮಂತ್ರದಿಂದ ಹಾಗೂ ಕತ್ತಿನಲ್ಲಿ, ಹೃದಯದಲ್ಲಿ ಅಘೋರಮಂತ್ರದಿಂದ ರುದ್ರಾಕ್ಷವನ್ನು ಧರಿಸಬೇಕು. ವಿದ್ವಾಂಸರು ಎರಡೂ ಕೈಗಳಲ್ಲಿ ಅಘೋರ ಬೀಜಮಂತ್ರದಿಂದ ರುದ್ರಾಕ್ಷವನ್ನು ಧರಿಸಬೇಕು. ಉದರದಲ್ಲಿ ವಾಮದೇವ ಮಂತ್ರದಿಂದ ಹದಿನೈದು ರುದ್ರಾಕ್ಷಗಳ ಮಾಲೆಯನ್ನು ಧರಿಸಬೇಕು. ಅಥವಾ ಅಂಗಗಳ ಸಹಿತ ಪ್ರಣವವನ್ನು ಐದು ಬಾರಿ ಜಪಮಾಡಿ ರುದ್ರಾಕ್ಷಗಳ ಮೂರು, ಐದು ಅಥವಾ ಏಳು ಮಾಲೆಗಳನ್ನು ಧರಿಸಬೇಕು. ಅಥವಾ ಮೂಲಮಂತ್ರ (**ನಮಃ ಶಿವಾಯ**) ದಿಂದಲೇ ಸಮಸ್ತ ರುದ್ರಾಕ್ಷಗಳನ್ನು ಧರಿಸಬೇಕು. ರುದ್ರಾಕ್ಷಧಾರೀ

ಮನುಷ್ಯನು ತನ್ನ ಊಟ-ತಿಂಡಿಯಲ್ಲಿ ಮಾಂಸ, ಮದಿರೆ, ಬೆಳ್ಳುಳ್ಳಿ, ಈರುಳ್ಳಿ, ಮೂಲಂಗಿ ಮುಂತಾದವನ್ನು ತ್ಯಜಿಸಬೇಕು. ಗಿರಿರಾಜನಂದಿನೀ ಉಮೆ! ಶ್ವೇತ ರುದ್ರಾಕ್ಷವನ್ನು ಕೇವಲ ಬ್ರಾಹ್ಮಣರೇ ಧರಿಸಬೇಕು, ಕೆಂಪು ಬಣ್ಣದ ರುದ್ರಾಕ್ಷಿಗಳನ್ನು ಕ್ಷತ್ರಿಯರಿಗಾಗಿ ಹಿತಕರವೆಂದು ಹೇಳಲಾಗಿದೆ. ವೈಶ್ಯರು ಪ್ರತಿದಿನ ಹಳದಿ ರುದ್ರಾಕ್ಷಗಳನ್ನು ಧರಿಸಬೇಕು, ಶೂದ್ರರು ಕಪ್ಪು ರುದ್ರಾಕ್ಷಿಗಳನ್ನು ಧರಿಸಬೇಕು. ಇದು ವೇದೋಕ್ತ ಮಾರ್ಗವಾಗಿದೆ. ಬ್ರಹ್ಮಚಾರೀ, ವಾನಪ್ರಸ್ಥ, ಗೃಹಸ್ಥ, ಸಂನ್ಯಾಸಿ – ಎಲ್ಲರೂ ನಿಯಮಪೂರ್ವಕ ರುದ್ರಾಕ್ಷಗಳನ್ನು ಧರಿಸುವುದು ಉಚಿತವಾಗಿದೆ. ಇದನ್ನು ಧರಿಸುವ ಸೌಭಾಗ್ಯವು ಬಹಳ ಪುಣ್ಯದಿಂದ ದೊರೆಯುತ್ತದೆ. ಉಮೆ! ಮೊದಲಿಗೆ ನೆಲ್ಲಿಕಾಯಿ ಗಾತ್ರದ ಹಾಗೂ ಮತ್ತೆ ಅದರಿಂದ ಸಣ್ಣ ರುದ್ರಾಕ್ಷಗಳನ್ನು ಧರಿಸಬೇಕು. ರೋಗ ತಗುಲಿದ, ಮುಖಗಳಿಲ್ಲದ, ಕ್ರಿಮಿಗಳು ತಿಂದಿರುವ, ಪೋಣಿಸಲು ತೂತು ಇಲ್ಲದ ರುದ್ರಾಕ್ಷಗಳನ್ನು ಮಂಗಲಕಾರೀ ಪುರುಷರು ಧರಿಸಬಾರದು. ರುದ್ರಾಕ್ಷವು ನನ್ನ ಮಂಗಲಮಯ ಲಿಂಗ-ವಿಗ್ರಹವಾಗಿದೆ. ಅದು ಕನಿಷ್ಠ ಕಡ್ಲೆಕಾಳಿನಷ್ಟು ಸಣ್ಣದಿರುತ್ತದೆ. ಸಣ್ಣ ರುದ್ರಾಕ್ಷವನ್ನೇ ಸದಾ ಪ್ರಶಸ್ತವೆಂದು ತಿಳಿಯಲಾಗಿದೆ. ಎಲ್ಲ ಆಶ್ರಮದವರು, ಸಮಸ್ತ ವರ್ಣದವರು, ಸ್ತ್ರೀಯರು, ಶೂದ್ರರೂ ಕೂಡ ಭಗವಾನ್ ಶಿವನ ಆಜ್ಞೆಗನುಸಾರವಾಗಿ ಸದಾಕಾಲ ರುದ್ರಾಕ್ಷಗಳನ್ನು ಧರಿಸಬೇಕು.* ಯತಿಗಳಿಗೆ ಪ್ರಣವದ ಉಚ್ಚಾರದೊಂದಿಗೆ ರುದ್ರಾಕ್ಷಧಾರಣದ ವಿಧಾನವಿದೆ. ಯಾರ ಲಲಾಟದಲ್ಲಿ ತ್ರಿಪುಂಡ್ರವು ಹಚ್ಚಲಾಗಿದೆಯೋ, ಎಲ್ಲ ಅಂಗಗಳು ರುದ್ರಾಕ್ಷಗಳಿಂದ ವಿಭೂಷಿತವಾಗಿದೆಯೋ, ಮತ್ತು ಮೃತ್ಯುಂಜಯ ಮಂತ್ರವನ್ನು ಜಪಿಸುತ್ತಿರುವನೋ, ಅವನ ದರ್ಶನ ಮಾಡುವುದರಿಂದ ಸಾಕ್ಷಾತ್ ರುದ್ರನ ದರ್ಶನದ ಫಲ ಪ್ರಾಪ್ತವಾಗುತ್ತದೆ.

ಪಾರ್ವತಿ! ಅನೇಕ ಪ್ರಕಾರದ ರುದ್ರಾಕ್ಷಗಳನ್ನು ತಿಳಿಸಲಾಗಿದೆ. ನಾನು ಅವುಗಳ ಭೇದಗಳನ್ನು ವರ್ಣಿಸುವೆನು. ಆ ಭೇದಗಳು ಭೋಗ, ಮೋಕ್ಷರೂಪೀ ಫಲವನ್ನು ಕೊಡುವುದಾಗಿದೆ. ನೀನು ಉತ್ತಮ ಭಕ್ತಿಭಾವದಿಂದ ಅವುಗಳ ಪರಿಚಯವನ್ನು ಕೇಳು. ಒಂದು ಮುಖವುಳ್ಳ ರುದ್ರಾಕ್ಷವು ಸಾಕ್ಷಾತ್ ಶಿವನ ಸ್ವರೂಪವಾಗಿದೆ. ಅದು ಭೋಗ ಮತ್ತು ಮೋಕ್ಷರೂಪೀ ಫಲವನ್ನು ಕೊಡುವುದು. ರುದ್ರಾಕ್ಷದ ಪೂಜೆ ನಡೆಯುವಲ್ಲಿಂದ ಲಕ್ಷ್ಮಿಯು ದೂರ ಹೋಗುವುದಿಲ್ಲ. ಆ ಸ್ಥಾನದ ಎಲ್ಲ ಉಪದ್ರವಗಳು ನಾಶವಾಗುತ್ತವೆ. ಹಾಗೂ ಅಲ್ಲಿ ಇರುವ ಜನರ ಸಂಪೂರ್ಣ ಕಾಮನೆಗಳು ಪೂರ್ಣವಾಗುತ್ತವೆ. ಎರಡು ಮುಖವುಳ್ಳ ರುದ್ರಾಕ್ಷವು ದೇವದೇವೇಶ್ವರನೆಂದು ಹೇಳಲಾಗಿದೆ. ಅದು ಸಮಸ್ತ ಕಾಮನೆಗಳನ್ನು ಮತ್ತು ಫಲಗಳನ್ನು ಕೊಡುವುದಾಗಿದೆ. ಮೂರು ಮುಖವುಳ್ಳ ರುದ್ರಾಕ್ಷಿಯು ಸದಾ ಸಾಕ್ಷಾತ್ ಸಾಧನದ ಫಲ ಕೊಡುವುದಾಗಿದೆ; ಅದರ ಪ್ರಭಾವದಿಂದ ಎಲ್ಲ ವಿದ್ಯೆಗಳು ಪ್ರತಿಷ್ಠಿತವಾಗುತ್ತವೆ. ನಾಲ್ಕು ಮುಖವುಳ್ಳ ರುದ್ರಾಕ್ಷವು ಸಾಕ್ಷಾತ್ ಬ್ರಹ್ಮನ ಸ್ವರೂಪವಾಗಿದೆ. ಅದರ ದರ್ಶನದಿಂದ, ಸ್ಪರ್ಶದಿಂದ ಶೀಘ್ರವಾಗಿಯೇ ಧರ್ಮ, ಅರ್ಥ, ಕಾಮ, ಮೋಕ್ಷ – ಈ ನಾಲ್ಕು ಪುರುಷಾರ್ಥಗಳು ದೊರೆಯುವವು. ಐದು ಮುಖವುಳ್ಳ ರುದ್ರಾಕ್ಷವು ಸಾಕ್ಷಾತ್ ಕಾಲಾಗ್ನಿ ರುದ್ರರೂಪವಾಗಿದೆ. ಅದು ಎಲ್ಲವನ್ನು ಮಾಡುವುದರಲ್ಲಿ ಸಮರ್ಥವಾಗಿದೆ. ಎಲ್ಲರಿಗೆ ಮುಕ್ತಿಯನ್ನು ಕೊಡುವುದು ಹಾಗೂ ಸಮಸ್ತ ಮನೋವಾಂಛಿತ ಫಲಗಳನ್ನು ಕರುಣಿಸುವಂತಹುದು. ಪಂಚಮುಖೀ ರುದ್ರಾಕ್ಷವು ಸಮಸ್ತ ಪಾಪಗಳನ್ನು ದೂರಮಾಡಿ ಬಿಡುತ್ತದೆ. ಆರು ಮುಖವುಳ್ಳ ರುದ್ರಾಕ್ಷವು ಕಾರ್ತಿಕೇಯನ ಸ್ವರೂಪವಾಗಿದೆ. ಬಲತೋಳಿನಲ್ಲಿ ಅದನ್ನು ಧರಿಸಿದರೆ, ಧಾರಣಮಾಡುವ ಮನುಷ್ಯನು ಬ್ರಹ್ಮಹತ್ಯಾದಿ ಪಾಪಗಳಿಂದ ಮುಕ್ತನಾಗುತ್ತಾನೆ. ಇದರಲ್ಲಿ ಸಂಶಯವೇ ಇಲ್ಲ ಮಹೇಶ್ವರೀ! ಏಳು ಮುಖವುಳ್ಳ ರುದ್ರಾಕ್ಷವು ಅನಂಗಸ್ವರೂಪ ಮತ್ತು ಅನಂಗ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ದೇವೇಶಿ! ಅದನ್ನು ಧರಿಸುವುದರಿಂದ ದರಿದ್ರನೂ ಐಶ್ವರ್ಯಶಾಲಿಯಾಗುತ್ತಾನೆ. ಎಂಟುಮುಖವುಳ್ಳ ರುದ್ರಾಕ್ಷವು ಅಷ್ಟಮೂರ್ತಿ ಭೈರವ ಸ್ವರೂಪವಾಗಿದೆ. ಅದನ್ನು ಧರಿಸಿದವನು ಪೂರ್ಣಾಯುವಾಗುತ್ತಾನೆ. ಮತ್ತು ಸತ್ತಮೇಲೆ ಶೂಲಧಾರೀ ಶಂಕರನೇ ಆಗಿ ಹೋಗುತ್ತಾನೆ. ಒಂಭತ್ತು ಮುಖವುಳ್ಳ ರುದ್ರಾಕ್ಷವನ್ನು ಭೈರವ ಹಾಗೂ ಕಪಿಲಮುನಿಯ ಪ್ರತೀಕವೆಂದು ತಿಳಿಯಲಾಗಿದೆ. ಅಥವಾ ಒಂಭತ್ತು ರೂಪಗಳನ್ನು ಧರಿಸುವ ಮಹೇಶ್ವರೀ ದುರ್ಗೆಯು ಅದರ ಅಧಿಷ್ಠಾತ್ರಿ ದೇವಿ ಎಂದು ತಿಳಿಯಲಾಗಿದೆ. ಭಕ್ತಿಪರಾಯಣನಾದ ಮನುಷ್ಯನು ತನ್ನ ಎಡಗೈಯಲ್ಲಿ ನಮಮುಖೀ ರುದ್ರಾಕ್ಷವನ್ನು ಧರಿಸುವನೋ, ಅವನು ನಿಶ್ಚಯವಾಗಿಯೂ ನನ್ನಂತೆಯೇ ಸರ್ವೇಶ್ವರನಾಗುತ್ತಾನೆ. ಇದರಲ್ಲಿ ಸಂಶಯವೇ ಇಲ್ಲ ಮಹೇಶ್ವರೀ! ಹತ್ತು

* ಸರ್ವಾಶ್ರಮಾಣಾಂ ವರ್ಣಾನಾಂ ಸ್ತ್ರೀಶೂದ್ರಾಣಾಂ ಶಿವಾಜ್ಞಯಾ । ಧಾರ್ಯಾಃ ಸದೈವ ರುದ್ರಾಕ್ಷಾ ॥
(ಶಿ -ಪು - ವಿ - ೨೫/೪೭)

ಮುಖವುಳ್ಳ ರುದ್ರಾಕ್ಷವು ಸಾಕ್ಷಾತ್ ಭಗವಾನ್ ವಿಷ್ಣುವಿನ ರೂಪವಾಗಿದೆ. ದೇವೇಶಿ! ಅದನ್ನು ಧರಿಸುವುದರಿಂದ ಮನುಷ್ಯನು ಸಮಸ್ತ ಕಾಮನೆಗಳು ಪೂರ್ಣವಾಗುತ್ತವೆ. ಪರಮೇಶ್ವರೀ! ಹನ್ನೊಂದು ಮುಖವುಳ್ಳ ರುದ್ರಾಕ್ಷವು ರುದ್ರರೂಪವಾಗಿದೆ. ಅದನ್ನು ಧರಿಸಿದವನು ಸರ್ವತ್ರ ವಿಜಯಿಯಾಗುತ್ತಾನೆ. ಹನ್ನೆರಡು ಮುಖವುಳ್ಳ ರುದ್ರಾಕ್ಷವನ್ನು ತಲೆಯಲ್ಲಿ ಧರಿಸಬೇಕು. ಅದನ್ನು ಧರಿಸುವುದರಿಂದ ಮಸ್ತಕದ ಮೇಲೆ ಹನ್ನೆರಡು ಆದಿತ್ಯರನ್ನು ಧರಿಸಿದಂತೆಯೇ. ಹದಿಮೂರು ಮುಖವುಳ್ಳ ರುದ್ರಾಕ್ಷವು ವಿಶ್ವೇದೇವರ ಸ್ವರೂಪವಾಗಿದೆ. ಅದನ್ನು ಧರಿಸುವುದರಿಂದ ಮನುಷ್ಯನು ಸಂಪೂರ್ಣ ಅಭೀಷ್ಟಗಳನ್ನು ಪಡೆಯುವನು ಮತ್ತು ಸೌಭಾಗ್ಯ ಹಾಗೂ ಮಂಗಲಗಳ ಲಾಭವಾಗುತ್ತದೆ. ಹದಿನಾಲ್ಕು ಮುಖವುಳ್ಳ ರುದ್ರಾಕ್ಷವು ಪರಮಶಿವರೂಪವಾಗಿದೆ. ಅದನ್ನು ಭಕ್ತಿಪೂರ್ವಕ ಮಸ್ತಕದಲ್ಲಿ ಧರಿಸಬೇಕು. ಇದರಿಂದ ಸಮಸ್ತ ಪಾಪಗಳ ನಾಶವಾಗುತ್ತವೆ.

ಗಿರಿರಾಜ ಕುಮಾರಿಯೇ! ಈ ಪ್ರಕಾರ ಮುಖಗಳ ಭೇದದಿಂದ ರುದ್ರಾಕ್ಷಗಳ ಹದಿನಾಲ್ಕು ಭೇದಗಳನ್ನು ತಿಳಿಸಲಾಗಿದೆ. ಈಗ ನೀನು ಕ್ರಮವಾಗಿ ಆ ರುದ್ರಾಕ್ಷಗಳನ್ನು ಧರಿಸುವ ಮಂತ್ರಗಳನ್ನು ಕೇಳು.

೧. ಓಂ ಹ್ರೀಂ ನಮಃ। ೨. ಓಂ ನಮಃ। ೩. ಓಂ ಕ್ಲೀಂ ನಮಃ। ೪. ಓಂ ಹ್ರೀಂ ನಮಃ। ೫. ಓಂ ಹ್ರೀಂ ನಮಃ। ೬. ಓಂ ಹ್ರೀಂ ಹುಂ ನಮಃ। ೭. ಓಂ ಹುಂ ನಮಃ। ೮. ಓಂ ಹುಂ ನಮಃ। ೯. ಓಂ ಹ್ರೀಂ ಹುಂ ನಮಃ। ೧೦. ಓಂ ಹ್ರೀಂ ನಮಃ। ೧೧. ಓಂ ಹ್ರೀಂ ಹುಂ ನಮಃ। ೧೨. ಕ್ರೌಂ ಕ್ಷ್ರೌಂ ರ್ಕ್ರೌಂ ನಮಃ। ೧೩. ಓಂ ಹ್ರೀಂ ನಮಃ। ೧೪. ಓಂ ನಮಃ।

ಈ ಹದಿನಾಲ್ಕು ಮಂತ್ರಗಳಿಂದ ಕ್ರಮವಾಗಿ ಒಂದರಿಂದ ಹಿಡಿದು ಹದಿನಾಲ್ಕು ಮುಖವುಳ್ಳ ರುದ್ರಾಕ್ಷಗಳನ್ನು ಧರಿಸುವ ವಿಧಾನವಿದೆ. ಸಾಧಕನು ನಿದ್ದೆ, ಆಲಸ್ಯಗಳನ್ನು ತ್ಯಜಿಸಿ ಶ್ರದ್ಧಾ-ಭಕ್ತಿಯಿಂದ ಕೂಡಿ ಸಮಸ್ತ ಮನೋರಥಗಳ ಸಿದ್ಧಿಗಾಗಿ ಮೇಲೆ ಹೇಳಿದ ಮಂತ್ರಗಳಿಂದ ಆಯಾಯಾ ರುದ್ರಾಕ್ಷಗಳನ್ನು ಧರಿಸಬೇಕು. ರುದ್ರಾಕ್ಷದ ಮಾಲೆಯನ್ನು ಧರಿಸಿದವನನ್ನು ನೋಡಿ ಭೂತ, ಪ್ರೇತ, ಪಿಶಾಚಿ, ಶಾಕಿನೀ, ಡಾಕಿನೀ ಹಾಗೂ ಇತರ ದ್ರೋಹಕಾರೀ ರಾಕ್ಷಸಾದಿಗಳೆಲ್ಲರೂ ದೂರ ಓಡಿ ಹೋಗುತ್ತವೆ. ಕೃತ್ರಿಮ ಅಭಿಚಾರಾದಿ ಎಲ್ಲವೂ ರುದ್ರಾಕ್ಷಧಾರಿಯನ್ನು ಕಂಡು ಹಿಂದೆ ಸರಿಯುವುದು. ಪಾರ್ವತೀ! ರುದ್ರಾಕ್ಷಮಾಲಾಧಾರೀ ಪುರುಷನನ್ನು ನೋಡಿ, ರುದ್ರನಾದ ನಾನು, ಭಗವಾನ್ ವಿಷ್ಣು ದೇವೀದುರ್ಗಾ, ಗಣೇಶ, ಸೂರ್ಯ ಹಾಗೂ ಇತರ ದೇವತೆಗಳೂ ಪ್ರಸನ್ನರಾಗುತ್ತೇವೆ. ಮಹೇಶ್ವರೀ! ಈ ಪ್ರಕಾರ ರುದ್ರಾಕ್ಷದ ಮಹಿಮೆಯನ್ನು ಅರಿತುಕೊಂಡು ಧರ್ಮದ ವೃದ್ಧಿಗಾಗಿ ಭಕ್ತಿಪೂರ್ವಕ ಹಿಂದೆ ಹೇಳಿದ ಮಂತ್ರಗಳಿಂದ ವಿಧಿವತ್ತಾಗಿ ಅದನ್ನು ಧರಿಸಬೇಕು.

ಮುನೀಶ್ವರರೇ! ಭಗವಾನ್ ಶಿವನು ದೇವಿ ಪಾರ್ವತಿಗೆ ಹೇಳಿದುದೆಲ್ಲವನ್ನೂ ನಿಮ್ಮ ಪ್ರಶ್ನೆಗನುಸಾರವಾಗಿ ನಾನು ತಿಳಿಸಿರುವೆನು. ಮುನೀಶ್ವರರೇ! ನಾನು ನಿಮ್ಮ ಮುಂದೆ ಈ ವಿದ್ಯೇಶ್ವರ ಸಂಹಿತೆಯನ್ನು ವರ್ಣಿಸಿದೆ. ಈ ಸಂಹಿತೆಯು ಸಂಪೂರ್ಣ ಸಿದ್ಧಿಗಳನ್ನು ಕೊಡುವುದು ಹಾಗೂ ಭಗವಾನ್ ಶಿವನ ಅಜ್ಞೆಯಿಂದ ನಿತ್ಯ ಮೋಕ್ಷವನ್ನು ಕರುಣಿಸುವಂತಹುದಾಗಿದೆ.

(ಅಧ್ಯಾಯ ೨೫)

॥ ವಿದ್ಯೇಶ್ವರ ಸಂಹಿತೆಯು ಸಮಾಪ್ತವಾಯಿತು ॥

❐ ❐ ❐

ರುದ್ರಸಂಹಿತೆ, ಪ್ರಥಮ (ಸೃಷ್ಟಿ) ಖಂಡ

ನಾರದ-ಬ್ರಹ್ಮಸಂವಾದವನ್ನು ಉದಾಹರಿಸಿ ಸೂತಪುರಾಣಿಕರು ಋಷಿಗಳಿಗೆ ನಾರದರ ಮೋಹ ಪ್ರಸಂಗವನ್ನು ಹೇಳುವುದು, ಕಾಮವಿಜಯದ ಗರ್ವದಿಂದ ಕೂಡಿದ ನಾರದರು ಶಿವ, ಬ್ರಹ್ಮಾ ವಿಷ್ಣು ಇವರ ಬಳಿಗೆ ಹೋಗಿ ತಮ್ಮ ತಪಸ್ಸಿನ ಪ್ರಭಾವವನ್ನು ತಿಳಿಸುವುದು

ವಿಶ್ವೋದ್ಭವಸ್ಥಿತಿಲಯಾದಿಷು ಹೇತುಮೇಕಂ
ಗೌರೀಪತಿಂ ವಿದಿತ ತತ್ತ್ವಮನಂತ ಕೀರ್ತಿಮ್ ।
ಮಾಯಾಶ್ರಯಂ ವಿಗತಮಾಯಮಚಿಂತ್ಯರೂಪಂ
ಬೋಧಸ್ವರೂಪಮಮಲಂ ಹಿ ಶಿವಂ ನಮಾಮಿ ॥

ವಿಮಲಬೋಧಸ್ವರೂಪ ಭಗವಾನ್ ಶಿವನಿಗೆ ನಮಸ್ಕರಿಸುತ್ತೇನೆ. ಅವನು ವಿಶ್ವದ ಉತ್ಪತ್ತಿ, ಸ್ಥಿತಿ ಮತ್ತು ಲಯ ಮುಂತಾದವುಗಳ ಏಕಮಾತ್ರ ಕಾರಣನಾಗಿದ್ದು, ಗಿರಿರಾಜಕುಮಾರೀ ಗೌರಿಯ ಪತಿಯೂ, ತತ್ತ್ವಜ್ಞನೂ ಆಗಿರುವನು. ಅವನ ಕೀರ್ತಿಗೆ ಅಂತ್ಯವೇ ಇಲ್ಲ. ಮಾಯೆಗೆ ಆಶ್ರಯನಾಗಿದ್ದರೂ ಅದರಿಂದ ಅತ್ಯಂತ ದೂರನಾಗಿರುವನು. ಅಚಿಂತ್ಯ ಸ್ವರೂಪನಾದ ಭಗವಂತನಿಗೆ ನಾನು ವಂದಿಸುತ್ತೇನೆ.

ವಂದೇ ಶಿವಂ ತಂ ಪ್ರಕೃತೇರನಾದಿಂ
ಪ್ರಶಾಂತಮೇಕಂ ಪುರುಷೋತ್ತಮಂ ಹಿ ।
ಸ್ವಮಾಯಯಾ ಕೃತ್ಸ್ನಮಿದಂ ಹಿ ಸೃಷ್ಟ್ವಾ
ನಭೋವದಂತರ್ಬಹಿರಾಸ್ಥಿತೋ ಯಃ ॥

ಸ್ವಭಾವದಿಂದಲೇ ಅನಾದಿಯೂ, ಶಾಂತ ಸ್ವರೂಪನೂ, ಏಕಮಾತ್ರ ಪುರುಷೋತ್ತಮನೂ ಆದ ಶಿವನನ್ನು ನಾನು ವಂದಿಸುತ್ತೇನೆ. ಅವನು ತನ್ನ ಮಾಯೆಯಿಂದ ಈ ಸಮಸ್ತ ವಿಶ್ವವನ್ನು ಸೃಷ್ಟಿಮಾಡಿ ಆಕಾಶದಂತೆ ಇದರ ಒಳಗೂ-ಹೊರಗೂ ಸ್ಥಿತನಾಗಿರುವನು.

ವಂದೇಽಂತರಸ್ಥಂ ನಿಜಗೂಢರೂಪಂ
ಶಿವಂ ಸ್ವತಸ್ಸೃಷ್ಟಮಿದಂ ವಿಚಷ್ಟೇ ।
ಜಗಂತಿ ನಿತ್ಯಂ ಪರಿತೋ ಭ್ರಮಂತಿ
ಯತ್ಸನ್ನಿಧೌ ಚುಂಬಕಲೋಹವತ್ತಮ್ ॥

ಕಬ್ಬಿಣವು ಚುಂಬಕದಿಂದ ಆಕೃಷ್ಟವಾಗಿ ಅದರ ಸಮೀಪದಲ್ಲೇ ಇರುವಂತೆಯೇ, ಈ ಸಮಸ್ತ ಜಗತ್ತು ಸದಾಕಾಲ ಎಲ್ಲ ಕಡೆಯಿಂದ ಶಿವನ ಬಳಿಯಲ್ಲೇ ಸುತ್ತುತ್ತಿರುವುದು. ಅವನೇ ಈ ಪ್ರಪಂಚದ ರಚನೆಯ ವಿಧಿಯನ್ನು ತಿಳಿಸಿದ್ದನು. ಅವನು ಎಲ್ಲರ ಒಳಗೆ ಅಂತರ್ಯಾಮಿ ರೂಪದಿಂದ ವಿರಾಜಮಾನನಾಗಿದ್ದಾನೆ. ಅತ್ಯಂತ ಗೂಢ ಸ್ವರೂಪವುಳ್ಳ ಆ ಭಗವಾನ್ ಶಿವನನ್ನು ನಾನು ಆದರದಿಂದ ವಂದಿಸುತ್ತೇನೆ.

ಶ್ರೀವ್ಯಾಸರು ಹೇಳುತ್ತಾರೆ - ಜಗತ್ಪಿತಾ ಭಗವಾನ್ ಶಿವನಿಗೂ ಜಗನ್ಮಾತೆಯಾದ ಕಲ್ಯಾಣಮಯೀ ಪಾರ್ವತಿಗೂ ಹಾಗೂ ಅಕೆಯ ಪುತ್ರ ಗಣಪತಿಗೂ ನಮಸ್ಕಾರಮಾಡಿ ನಾನು ಈ ಶಿವಪುರಾಣವನ್ನು ವರ್ಣಿಸುವೆನು. ಒಮ್ಮೆ ನೈಮಿಷಾರಣ್ಯದಲ್ಲಿ ವಾಸಿಸುವ ಶೌನಕಾದಿ ಎಲ್ಲ ಮುನಿಗಳು ಉತ್ತಮ ಭಕ್ತಿ-ಭಾವದೊಂದಿಗೆ ಸೂತಪುರಾಣಿಕರಲ್ಲಿ ಕೇಳಿದರು.

ಋಷಿಗಳು ಕೇಳುತ್ತಾರೆ - ಮಹಾನುಭಾವರಾದ ಸೂತಪುರಾಣಿಕರೇ ! ವಿದ್ಯೇಶ್ವರ ಸಂಹಿತೆಯ ಸಾಧ್ಯ-ಸಾಧನ ಖಂಡವೆಂಬ ಶುಭವಾದ ಉತ್ತಮ ಕಥೆಯನ್ನು ನಾವು ಕೇಳಿಕೊಂಡೆವು. ಅದರ ಮೊದಲಭಾಗವು ಅತ್ಯಂತ ರಮಣೀಯವಾಗಿದ್ದು, ಶಿವ-ಭಕ್ತರ ಮೇಲೆ ಭಗವಾನ್ ಶಿವನ ವಾತ್ಸಲ್ಯ- ಸ್ನೇಹವನ್ನು ಪ್ರಕಟಗೊಳಿಸುವಂತಹುದು. ವಿದ್ವಾಂಸರೇ ! ಈಗ ತಾವು ಭಗವಾನ್ ಶಿವನ ಪರಮೋತ್ತಮ ಸ್ವರೂಪವನ್ನು ವರ್ಣಿಸಿರಿ. ಜೊತೆಗೆ ಶಿವ-ಪಾರ್ವತಿಯರ ದಿವ್ಯ ಚರಿತ್ರೆಗಳನ್ನು ಪೂರ್ಣರೂಪದಿಂದ ಶ್ರವಣ ಮಾಡಿಸಿರಿ. ನಿರ್ಗುಣನಾದ ಮಹೇಶ್ವರನು ಲೋಕದಲ್ಲಿ ಸಗುಣರೂಪವನ್ನು ಹೇಗೆ ಧರಿಸುತ್ತಾನೆ ? ನಾವೆಲ್ಲರೂ ವಿಚಾರಮಾಡಿದರೂ ಶಿವನ ತತ್ತ್ವವನ್ನು ತಿಳಿಯಲಾರೆವು. ಸೃಷ್ಟಿಯ ಮೊದಲು ಭಗವಾನ್ ಶಿವನು ಯಾವ ವಿಧದಿಂದ ತನ್ನ ಸ್ವರೂಪದಲ್ಲಿ ಸ್ಥಿತನಾಗಿರುವನು ? ಮತ್ತೆ ಸೃಷ್ಟಿಯಾದ ಬಳಿಕ ಆ ಭಗವಂತನು ಕ್ರೀಡಿಸುತ್ತಾ ಸಮ್ಯಕ್ ರೀತಿಯಿಂದ ಹೇಗೆ ವ್ಯವಹಾರ ಮಾಡುವನು ? ಸೃಷ್ಟಿಕಲ್ಪದ ಅಂತ್ಯವಾದಾಗ ಆ ಮಹೇಶ್ವರ ದೇವನು ಯಾವ ರೂಪದಲ್ಲಿ ಸ್ಥಿತನಾಗಿರುತ್ತಾನೆ ? ಲೋಕಕಲ್ಯಾಣಕಾರೀ ಶಂಕರನು ಹೇಗೆ ಪ್ರಸನ್ನ ನಾಗುವನು ? ಪ್ರಸನ್ನನಾದ ಮಹೇಶ್ವರನು ತನ್ನ ಭಕ್ತರಿಗೆ ಹಾಗೂ ಇತರರಿಗೆ ಯಾವ ಉತ್ತಮ ಫಲವನ್ನು ನೀಡುವನು ? ಇದೆಲ್ಲವನ್ನು ನಮಗೆ ಹೇಳಿರಿ. ಭಗವಾನ್

ಶಿವನು ಬೇಗನೇ ಪ್ರಸನ್ನನಾಗುವನು ಎಂದು ನಾವು ಕೇಳಿರುವೆವು. ಅವನು ಅತ್ಯಂತ ದಯಾಳುವಾದ್ದರಿಂದ ತನ್ನ ಭಕ್ತರ ಕಷ್ಟಗಳನ್ನು ಅವನಿಂದ ನೋಡಲಾಗುವುದಿಲ್ಲ. ಬ್ರಹ್ಮಾ, ವಿಷ್ಣು ಮಹೇಶ – ಈ ಮೂರು ದೇವತೆಗಳೂ ಶಿವನ ಅಂಗದಿಂದಲೇ ಉತ್ಪನ್ನರಾದವರು. ಅವರ ಪ್ರಾಕಟ್ಯದ ಕಥೆ ಹಾಗೂ ಅವರ ವಿಶೇಷ ಚರಿತ್ರೆಗಳನ್ನು ವರ್ಣಿಸಿರಿ. ಸ್ವಾಮಿ! ತಾವು ಉಮಾದೇವಿಯ ಆವಿರ್ಭಾವ ಮತ್ತು ವಿವಾಹದ ಕಥೆಯನ್ನು ತಿಳಿಸಿರಿ. ವಿಶೇಷವಾಗಿ ಅವರ ಗಾರ್ಹಸ್ಥ್ಯ ಧರ್ಮವನ್ನು ಹಾಗೂ ಇತರ ಲೀಲೆಗಳನ್ನೂ ವರ್ಣಿಸಿರಿ. ಪುಣ್ಯಾತ್ಮರಾದ ಸೂತಪುರಾಣಿಕರೇ! ತಾವು ಇದೆಲ್ಲವನ್ನು ಮತ್ತು ಬೇರೆ ವಿಷಯಗಳನ್ನು ಅವಶ್ಯವಾಗಿ ತಿಳಿಸೋಣವಾಗಲಿ.

ಸೂತಪುರಾಣಿಕರು ಹೇಳುತ್ತಾರೆ - ಮುನೀಶ್ವರರೇ! ನೀವೆಲ್ಲರೂ ಅತ್ಯಂತ ಉತ್ತಮವಾದ ಮಾತನ್ನು ಕೇಳಿರುವಿರಿ. ಭಗವಾನ್ ಸದಾಶಿವನ ಕಥೆಯಲ್ಲಿ ನಿಮಗೆಲ್ಲರಿಗೂ ಅಂತರಿಕ ನಿಷ್ಠೆಯು ಉಂಟಾಗಿದೆ. ಆದ್ದರಿಂದ ನೀವು ಧನ್ಯವಾದಕ್ಕೆ ಪಾತ್ರರಾಗಿರುವಿರಿ. ಬ್ರಾಹ್ಮಣರೇ! ಭಗವಾನ್ ಶಂಕರನ ಗುಣಾನುವಾದವು ಸಾತ್ತ್ವಿಕ, ರಾಜಸ, ತಾಮಸ – ಹೀಗೆ ಮೂರೂ ಪ್ರಕೃತಿಯ ಮನುಷ್ಯರಿಗೆ ಸದಾ ಆನಂದವನ್ನು ಕೊಡುವುದು. ಪಶುಗಳನ್ನು ಹಿಂಸಿಸುವ ನಿಷ್ಠುರ ಕೊಲೆಗಡುಕರನ್ನು ಬಿಟ್ಟು ಯಾವ ಪುರುಷನು ಈ ಗುಣಾನುವಾದದಿಂದ ಬೇಸರ ಪಟ್ಟುಕೊಳ್ಳುವನು? ಮನಸ್ಸಿನಲ್ಲಿ ಯಾವುದೇ ತೃಷ್ಣೆಯಿಲ್ಲದ ಮಹಾತ್ಮರು ಭಗವಾನ್ ಶಿವನ ಆ ಗುಣಗಳನ್ನು ಕೀರ್ತಿಸುತ್ತಾರೆ; ಏಕೆಂದರೆ, ಆ ಗುಣಗಾನವು ಸಂಸಾರರೂಪೀ ರೋಗದ ಪರಮೌಷಧವಾಗಿದೆ. ಮನಸ್ಸು-ಕಿವಿಗಳಿಗೆ ಪ್ರಿಯವಾಗಿರುವ ಅದು ಸಮಸ್ತ ಮನೋರಥಗಳನ್ನು ಈಡೇರಿಸುವುದು.*

ಬ್ರಾಹ್ಮಣರೇ! ನಿಮ್ಮಗಳ ಪ್ರಶ್ನೆಗನುಸಾರವಾಗಿ ನಾನು ಯಥಾಬುದ್ಧಿ ಪ್ರಯತ್ನಪೂರ್ವಕ ಶಿವ-ಲೀಲೆಯನ್ನು ವರ್ಣಿಸುವೆನು; ತಾವು ಆದರದಿಂದ ಶ್ರವಣಿಸಿರಿ. ನೀವುಗಳು ಕೇಳಿದಂತೆಯೇ ದೇವರ್ಷಿ ನಾರದರು ಶಿವರೂಪೀ ಭಗವಾನ್ ವಿಷ್ಣುವಿನಿಂದ ಪ್ರೇರಿತರಾಗಿ ತಮ್ಮ ತಂದೆಯ ಬಳಿಯಲ್ಲಿ ಕೇಳಿದ್ದರು. ತನ್ನ ಮಗನಾದ ನಾರದರ ಪ್ರಶ್ನೆಯನ್ನು ಕೇಳಿ ಶಿವಭಕ್ತ ಬ್ರಹ್ಮದೇವರ ಚಿತ್ತವು ಸಂತೋಷಗೊಂಡಿತು. ಅವರು ಆ ಮುನಿಶಿರೋಮಣಿಗೆ ಹರ್ಷವನ್ನುಂಟು ಮಾಡುತ್ತಾ ಪ್ರೇಮಪೂರ್ವಕ ಭಗವಾನ್ ಶಿವನ ಕೀರ್ತಿಯನ್ನು ಗಾನಮಾಡ ತೊಡಗಿದರು.

ಬ್ರಹ್ಮಮಾನಸ ಪುತ್ರರಾದ ಮುನಿಶಿರೋಮಣಿ ವಿಪ್ರವರ ನಾರದರು ಒಮ್ಮೆ ವಿನೀತಚಿತ್ತರಾಗಿ ತಪಸ್ಸಿನಲ್ಲಿ ಮನಸ್ಸನ್ನು ತೊಡಗಿಸಿದರು. ಹಿಮಾಲಯ ಪರ್ವತದಲ್ಲಿ ಅತ್ಯಂತ ಶೋಭಾಸಂಪನ್ನವಾದ ಒಂದು ಗುಹೆಯಿತ್ತು. ಅದರ ಸನಿಹದಲ್ಲೇ ದೇವನದೀ ಗಂಗೆಯು ನಿರಂತರವಾಗಿ ವೇಗದಿಂದ ಹರಿಯುತ್ತಿದ್ದಳು. ಅಲ್ಲಿ ಅನೇಕ ಪ್ರಕಾರದ ಶೋಭೆಗಳಿಂದ ಸುಶೋಭಿತವಾದ ಒಂದು ದಿವ್ಯ ಆಶ್ರಮವಿತ್ತು. ದಿವ್ಯದರ್ಶಿ ನಾರದರು ತಪಸ್ಸಿಗಾಗಿ ಅದೇ ಆಶ್ರಮಕ್ಕೆ ತೆರಳಿದರು. ಆ ಗುಹೆಯನ್ನು ಕಂಡು ಮುನಿಶ್ರೇಷ್ಠ ನಾರದರಿಗೆ ಬಹಳ ಸಂತೋಷವಾಯಿತು. ಅವರು ಸುದೀರ್ಘಕಾಲದವರೆಗೆ ಅಲ್ಲೇ ತಪಸ್ಸು ಮಾಡುತ್ತಾ ಇದ್ದರು. ಅವರ ಅಂತಃಕರಣವು ಶುದ್ಧವಾಗಿತ್ತು, ಅವರು ದೃಢವಾದ ಆಸನದಲ್ಲಿ ಕುಳಿತು ಮೌನವಾಗಿದ್ದು, ಪ್ರಾಣಾಯಾಮ ದೊಂದಿಗೆ ಸಮಾಧಿಯಲ್ಲಿ ಸ್ಥಿತರಾದರು. ಬ್ರಾಹ್ಮಣರೇ! ಬ್ರಹ್ಮನ ಸಾಕ್ಷಾತ್ಕಾರವಾಗಿಸುವ '**ಅಹಂ ಬ್ರಹ್ಮಾಸ್ಮಿ**' (ನಾನು ಬ್ರಹ್ಮನೇ ಆಗಿದ್ದೇನೆ) ಈ ವಿಜ್ಞಾನವನ್ನು ಪ್ರಕಟವಾಗುವ ಸಮಾಧಿಯಲ್ಲಿ ಅವರು ನೆಲೆಸಿದರು. ಮುನಿವರ್ಯ ನಾರದರು ಹೀಗೆ ತಪಸ್ಸಿನಲ್ಲಿ ತೊಡಗಿದಾಗ ಇದನ್ನು ತಿಳಿದ ಇಂದ್ರನು ನಡುಗಿಹೋದನು. ಅವನು ಮಾನಸಿಕ ಸಂತಾಪದಿಂದ ವಿಹ್ವಲನಾದನು. 'ಈ ನಾರದ ಮುನಿಯು ನನ್ನ ರಾಜ್ಯವನ್ನು ಪಡೆಯಲು ಬಯಸುವರು' ಎಂದು ಮನಸ್ಸಿನಲ್ಲೇ ಯೋಚಿಸಿ, ದೇವೇಂದ್ರನು ಅವರ ತಪಸ್ಸಿನಲ್ಲಿ ವಿಘ್ನವನ್ನೊಡ್ಡಲು ಪ್ರಯತ್ನಿಸಿದನು. ಆಗ ದೇವರಾಜನು ತನ್ನ ಮನಸ್ಸಿನಿಂದ ಕಾಮದೇವನನ್ನು ಸ್ಮರಿಸಿದನು. ಸ್ಮರಿಸಿದಾಗಲೇ ಕಾಮದೇವನು ಬಂದು ನಿಂತನು. ಮಹೇಂದ್ರನು ಅವನಿಗೆ ನಾರದರ ತಪಸ್ಸಿನಲ್ಲಿ ವಿಘ್ನವನ್ನೊಡ್ಡಲು ಆದೇಶಿಸಿದನು. ಹೀಗೆ ಆಪತ್ಪಣೆಯನ್ನು ಪಡೆದ ಕಾಮದೇವನು ವಸಂತನನ್ನು ಜೊತೆಗೂಡಿ, ಗರ್ವದಿಂದ ನಾರದರು ತಪಸ್ಸು ಮಾಡುವಲ್ಲಿಗೆ ಬಂದು ತನ್ನ ಉಪಾಯ ಮಾಡತೊಡಗಿದನು. ಅವನು ಬಹು ಬೇಗನೆ ಅಲ್ಲಿ ತನ್ನ ಸಕಲ ಕಲೆಗಳನ್ನು ರಚಿಸಿದನು. ವಸಂತನೂ ಮದಮತ್ತನಾಗಿ ತನ್ನ ಪ್ರಭಾವವನ್ನು ಅನೇಕ ರೀತಿಯಿಂದ ಪ್ರಕಟಿಸಿದನು. ಮುನಿಶ್ರೇಷ್ಠರೇ! ಕಾಮದೇವ ಮತ್ತು ವಸಂತ ಇವರು ಅವಿರತ ಪ್ರಯತ್ನ ಮಾಡಿದರೂ ನಾರದ ಮುನಿಯ

---

* **ಶಂಭೋರ್ಗುಣಾನುವಾದಾತ್ ಕೋ ವಿರಜ್ಯೇತ ಪುಮಾನ್ ದ್ವಿಜಾಃ। ವಿನಾ ಪಶುಘ್ನಂ ತ್ರಿವಿಧ ಜನಾನಂದಕರಾತ್ಸದಾ ॥**
ಗೀಯಮಾನೋ ವಿತೃಷ್ಣೈಶ್ಚ ಭವರೋಗೌಷಧೋಽಪಿ ಹಿ। ಮನಃ ಶ್ರೋತ್ರಾದಿರಾಮಶ್ಚಯತಃ ಸರ್ವಾರ್ಥದಃ ಸ ವೈ ॥
(ಶಿ - ಪು - ರುದ್ರ - ಸೃ - ೧/೨೩-೨೪)

ಚಿತ್ತದಲ್ಲಿ ವಿಕಾರವು ಉಂಟಾಗಲಿಲ್ಲ. ಮಹಾದೇವನ ಅನುಗ್ರಹದಿಂದ ಅವರಿಬ್ಬರ ಗರ್ವವು ನುಚ್ಚುನೂರಾಯಿತು.

ಶೌನಕಾದಿ ಮಹರ್ಷಿಗಳೇ! ಹೀಗೆ ಆಗುವುದರಲ್ಲಿ ಒಂದು ಕಾರಣವಿತ್ತು; ಅದನ್ನು ಆದರದಿಂದ ಕೇಳಿರಿ. ಮಹಾದೇವನ ಕೃಪೆಯಿಂದಲೇ ನಾರದ ಮುನಿಗಳ ಮೇಲೆ ಕಾಮದೇವನ ಯಾವ ಪ್ರಭಾವವು ಬೀಳಲಿಲ್ಲ. ಹಿಂದೆ ಅದೇ ಆಶ್ರಮದಲ್ಲಿ ಕಾಮಶತ್ರು ಭಗವಾನ್ ಶಿವನು ಉತ್ತಮವಾದ ತಪಸ್ಸನ್ನು ಮಾಡಿದ್ದನು. ಹಾಗೂ ಅಲ್ಲೇ ಶಿವನು ಮುನಿಗಳ ತಪಸ್ಸನ್ನು ಕೆಡಿಸುವಂತಹ ಕಾಮದೇವನನ್ನು ಸುಟ್ಟು ಭಸ್ಮಮಾಡಿ ಬಿಟ್ಟಿದ್ದನು. ಆಗ ರತಿಯು ಕಾಮನನ್ನು ಪುನಃ ಜೀವಂತವಾಗಿಸಲು ದೇವತೆಗಳಲ್ಲಿ ಪ್ರಾರ್ಥಿಸಿದಳು. ಆ ಸಮಯದಲ್ಲಿ ದೇವತೆಗಳು ಸಮಸ್ತಲೋಕಗಳ ಕಲ್ಯಾಣವನ್ನು ಮಾಡುವ ಭಗವಾನ್ ಶಂಕರನಲ್ಲಿ ಪ್ರಾರ್ಥಿಸಿ ಕೊಂಡಿದ್ದರು. ಅವರು ಬೇಡಿಕೊಂಡಾಗ ಶಿವನು ಹೇಳಿದನು – ದೇವತೆಗಳಿರಾ! ಸ್ವಲ್ಪ ಸಮಯ ಕಳೆದಮೇಲೆ ಕಾಮದೇವನು ಜೀವಿತನಾಗುವನು. ಆದರೆ ಇಲ್ಲಿ ಅವನ ಯಾವುದೇ ಉಪಾಯ ನಡೆಯಲಾರದು. ಅಮರರೇ! ಇಲ್ಲಿ ನಿಂತುಕೊಂಡು ನಾಲ್ಕೂ ಕಡೆಗೆ ಕಣ್ಣುಹಾಯಿಸುವಷ್ಟು ದೂರದವರೆಗೆ ಕಾಮದೇವನ ಪುಷ್ಪ ಬಾಣಗಳ ಪ್ರಭಾವ ನಡೆಯಲಾರದು; ಇದರಲ್ಲಿ ಸಂಶಯವೇ ಇಲ್ಲ. ಭಗವಾನ್ ಶಂಕರನ ಈ ಮಾತಿಗನುಗುಣವಾಗಿ ಆಗ ಅಲ್ಲಿ ನಾರದರ ಕುರಿತು ಕಾಮದೇವನ ಪ್ರಭಾವವು ಮಿಥ್ಯೆಯಾಯಿತು. ಅವನು ಶೀಘ್ರವಾಗಿಯೇ ಸ್ವರ್ಗಲೋಕಕ್ಕೆ ಇಂದ್ರನ ಬಳಿಗೆ ಮರಳಿ ಹೋದನು. ಅಲ್ಲಿ ಕಾಮದೇವನು ಎಲ್ಲ ವೃತ್ತಾಂತವನ್ನೂ, ಮುನಿಯ ಪ್ರಭಾವವನ್ನು ಹೇಳಿ, ಇಂದ್ರನ ಅಪ್ಪಣೆಯಂತೆ ಅವನು ವಸಂತನೊಂದಿಗೆ ತನ್ನ ಸ್ಥಾನಕ್ಕೆ ಹೊರಟು ಹೋದನು. ಆಗ ದೇವೇಂದ್ರನಿಗೆ ಭಾರೀ ಅಚ್ಚರಿ ಉಂಟಾಯಿತು. ಅವನು ನಾರದರನ್ನು ತುಂಬಾ ಕೊಂಡಾಡಿದನು. ಆದರೆ ಶಿವನ ಮಾಯೆಯಿಂದ ಮೋಹಿತನಾದ್ದರಿಂದ ಅವನು ಆ ಹಿಂದಿನ ವೃತ್ತಾಂತವನ್ನು ಸ್ಮರಿಸದೇ ಹೋದನು. ನಿಜವಾಗಿಯೂ ಈ ಜಗತ್ತಿನಲ್ಲಿ ಎಲ್ಲ ಜನರೊಂದಿಗೆ ಶಂಭುವಿನ ಮಾಯೆಯನ್ನು ತಿಳಿಯುವುದು ಅತ್ಯಂತ ಕಠಿಣವಾಗಿದೆ. ಭಗವಾನ್ ಶಿವನ ಚರಣಗಳಲ್ಲಿ ತನ್ನನ್ನು ಅರ್ಪಿಸಿಕೊಂಡಿರುವ ಭಕ್ತನನ್ನು ಬಿಟ್ಟು, ಉಳಿದಿರುವ ಇಡೀ ಜಗತ್ತು ಅವನ ಮಾಯೆಯಿಂದ ಮೋಹಿತವಾಗಿರುತ್ತದೆ.*

ನಾರದರೂ ಕೂಡ ಭಗವಾನ್ ಶಂಕರನ ಕೃಪೆಯಿಂದ ಅಲ್ಲಿ ದೀರ್ಘಕಾಲದವರೆಗೆ ತಪಸ್ಸಿನಲ್ಲಿ ತೊಡಗಿದ್ದರು. ಅವರು ತನ್ನ ತಪಸ್ಸು ಪೂರ್ಣವಾಯಿತೆಂದು ತಿಳಿದಾಗ ಆ ಮುನಿಯು ತಪಸ್ಸಿನಿಂದ ವಿರತರಾದರು. 'ಕಾಮದೇವನ ಮೇಲೆ ನಾನು ವಿಜಯ ಸಾಧಿಸಿದೆ' ಎಂದು ತಿಳಿದು ಮುನೀಶ್ವರನ ಮನಸ್ಸಿನಲ್ಲಿ ವ್ಯರ್ಥವಾದ ಗರ್ವವು ಉಂಟಾಯಿತು. ಭಗವಾನ್ ಶಿವನ ಮಾಯೆಯಿಂದ ಮೋಹಿತನಾದ್ದರಿಂದ ಅವರಿಗೆ ಯಥಾರ್ಥವೇನೆಂಬುದರ ಜ್ಞಾನ ಉಳಿಯಲಿಲ್ಲ. (ಕಾಮದೇವನು ಪರಾಜಿತನಾಗುವುದರಲ್ಲಿ ಭಗವಾನ್ ಶಂಕರನ ಪ್ರಭಾವವೇ ಕಾರಣವೆಂಬುದನ್ನು ಅವರು ತಿಳಿಯದೇ ಹೋದರು). ಆ ಮಾಯೆಯಿಂದ ಅತ್ಯಂತ ಮೋಹಿತರಾದ ಮುನಿಶಿರೋಮಣಿ ನಾರದರು ತಮ್ಮ ಕಾಮವಿಜಯದ ವೃತ್ತಾಂತವನ್ನು ತಿಳಿಸಲಿಕ್ಕಾಗಿ ಲಗುಬಗೆಯಿಂದ ಕೈಲಾಸಕ್ಕೆ ಹೋದರು. ಆಗ ಅವರು ವಿಜಯದ ಮದದಿಂದ ಉನ್ಮತ್ತರಾಗಿದ್ದರು. ಅಲ್ಲಿ ರುದ್ರದೇವರಿಗೆ ನಮಸ್ಕಾರ ಮಾಡಿ ಗರ್ವದಿಂದ ಬೀಗಿದ ಮುನಿಯು ತನ್ನನ್ನು ಮಹಾತ್ಮನೆಂದು ತಿಳಿದು, ತನ್ನ ಪ್ರಭಾವದಿಂದಲೇ ಕಾಮದೇವನನ್ನು ಜಯಿಸಿದನೆಂದು ತಿಳಿದು ಶಿವನಲ್ಲಿ ಎಲ್ಲ ವೃತ್ತಾಂತವನ್ನು ಹೇಳಿಬಿಟ್ಟರು.

ಅದೆಲ್ಲವನ್ನು ಕೇಳಿದ ಭಕ್ತವತ್ಸಲ ಭಗವಾನ್ ಶಂಕರನು – ತನ್ನ ಮಾಯೆಯಿಂದಲೇ ಮೋಹಿತನಾದ್ದರಿಂದ ಕಾಮ ವಿಜಯದ ಯಥಾರ್ಥ ಕಾರಣವನ್ನು ತಿಳಿಯದೆ, ತಮ್ಮ ವಿವೇಕವನ್ನು ಕಳೆದುಕೊಂಡಿದ್ದ ನಾರದರ ಬಳಿ ಹೇಳಿದನು–

ರುದ್ರದೇವನು ಹೇಳಿದನು – ಅಯ್ಯಾ ನಾರದನೇ! ನೀನು ದೊಡ್ಡ ವಿದ್ವಾಂಸನಾಗಿದ್ದು, ಧನ್ಯವಾದಕ್ಕೆ ಅರ್ಹನಾಗಿರುವೆ. ಆದರೆ ನನ್ನ ಮಾತನ್ನು ಗಮನವಿಟ್ಟು ಕೇಳು. ಇನ್ನು ಮುಂದೆ ಎಂದಿಗೂ ಇಂತಹ ಮಾತನ್ನು ಹೇಳಬೇಡ. ವಿಶೇಷವಾಗಿ ಭಗವಾನ್ ವಿಷ್ಣುವಿನ ಮುಂದೆ ಇದನ್ನು ಎಂದಿಗೂ ಚರ್ಚಿಸಬೇಡ. ನೀನು ನನ್ನ ಬಳಿಹೇಳಿದ ವೃತ್ತಾಂತವನ್ನು ಯಾರಾದರೂ ಕೇಳಿದರೂ ಅವರ ಮುಂದೆ ಹೇಳಬೇಡ. ಈ ಸಿದ್ಧಿ ಸಂಬಂಧವಾದ ವೃತ್ತಾಂತವನ್ನು ಸರ್ವಥಾ ಗುಪ್ತವಾಗಿಡಲು ಯೋಗ್ಯವಾಗಿದೆ. ಎಂದಿಗೂ ಯಾರ ಮುಂದೆಯೂ ಪ್ರಕಟಿಸಬಾರದು. ನೀನು ನನಗೆ ವಿಶೇಷವಾಗಿ ಪ್ರಿಯನಾಗಿರುವೆ. ಅದಕ್ಕಾಗಿ ಹೆಚ್ಚು ಒತ್ತುಕೊಟ್ಟು ನಾನು ಇದನ್ನು ನಿನಗೆ ಹೇಳುತ್ತಿದ್ದೇನೆ. ಹಾಗೂ ಇದನ್ನು ಹೇಳದಿರಲು ಆಜ್ಞಾಪಿಸುತ್ತಿದ್ದೇನೆ; ಏಕೆಂದರೆ, ನೀನು

* ದುರ್ಜ್ಞೇಯಾ ಶಾಂಭವೀ ಮಾಯಾ ಸರ್ವೇಷಾಂ ಪ್ರಾಣಿನಾ ಮಿಹ। ಭಕ್ತಂ ವಿನಾರ್ಪಿತಾತ್ಮಾನಂ ತಯಾ ಸಮ್ಮೋಹ್ಯತೇ ಜಗತ್ ॥
(ಶಿ - ಪು - ರು - ಸೃ - ೨/೨೫)

ಭಗವಾನ್ ವಿಷ್ಣುವಿನ ಭಕ್ತನಾಗಿದ್ದರೂ ನನ್ನ ಹೆಚ್ಚಿನ ಅನುಗಾಮಿಯಾಗಿರುವೆ.

ಈ ಪ್ರಕಾರವಾಗಿ ಅನೇಕ ವಿಧವಾಗಿ ತಿಳಿಸಿಹೇಳಿ, ಜಗತ್ತನ್ನು ಸೃಷ್ಟಿಸುವ ಭಗವಾನ್ ರುದ್ರನು ನಾರದರಿಗೆ ಉಪದೇಶಿಸಿ, ತನ್ನ ವೃತ್ತಾಂತವನ್ನು ಗುಪ್ತವಾಗಿಡಲು ಅವನಿಗೆ ಎಚ್ಚರಿಕೆ ನೀಡಿದನು. ಆದರೆ ನಾರದರಾದರೋ ಮಾಯೆಯಿಂದ ಮೋಹಿತರಾಗಿದ್ದರು. ಆದರಿಂದ ಅವರು ಶಿವನ ಉಪದೇಶವನ್ನು ತನಗೆ ಹಿತಕರವೆಂದು ತಿಳಿಯಲಿಲ್ಲ. ಅನಂತರ ಮುನಿಶಿರೋಮಣಿ ನಾರದರು ಬ್ರಹ್ಮಲೋಕಕ್ಕೆ ಹೋದರು. ಅಲ್ಲಿ ಬ್ರಹ್ಮದೇವರಿಗೆ ನಮಸ್ಕರಿಸಿ ತಿಳಿಸಿದರು – 'ತಂದೆಯೇ! ನಾನು ನನ್ನ ತಪೋಬಲದಿಂದ ಕಾಮದೇವನನ್ನು ಜಯಿಸಿ ಬಿಟ್ಟೆ ಅವನ ಮಾತನ್ನು ಕೇಳಿ ಬ್ರಹ್ಮದೇವರು ಭಗವಾನ್ ಶಿವನ ಚರಣಾರವಿಂದಗಳನ್ನು ಚಿಂತಿಸಿ, ಎಲ್ಲ ಕಾರಣಗಳನ್ನು ಅರಿತುಕೊಂಡು ತನ್ನ ಮಗನಿಗೆ ಇದೆಲ್ಲವನ್ನು ಹೇಳಲು ತಡೆದರು. ಆದರೆ ನಾರದರು ಮಾಯೆಯಿಂದ ಮೋಹಿತರಾದ್ದರಿಂದ ಅವರ ಮನಸ್ಸಿನಲ್ಲಿ ಮದದಿಂದ ಅಹಂಕಾರ ತುಂಬಿ ಹೋಗಿತ್ತು. ಅವರ ಬುದ್ಧಿಯು ನಷ್ಟವಾಗಿ ಹೋಗಿತ್ತು. ಆದ್ದರಿಂದ ನಾರದರು ತನ್ನ ಎಲ್ಲ ವೃತ್ತಾಂತವನ್ನು ಭಗವಾನ್ ವಿಷ್ಣುವಿನ ಮುಂದೆ ಹೇಳಲು ಶೀಘ್ರವಾಗಿ ಅಲ್ಲಿಂದ ವಿಷ್ಣುಲೋಕಕ್ಕೆ ಹೋದರು. ನಾರದಮುನಿಗಳು ಬರುತ್ತಿರುವುದನ್ನು ನೋಡಿ ಭಗವಾನ್ ವಿಷ್ಣುವು ಅತ್ಯಾದರದಿಂದ ಎದ್ದು, ಬೇಗನೇ ಮುಂದೆ ಬಂದು ಮುನಿಯನ್ನು ಬಿಗಿದಪ್ಪಿಕೊಂಡನು. ಮುನಿಯ ಆಗಮನದ ಕಾರಣವು ಅವನಿಗೆ ಮೊದಲೇ ತಿಳಿದಿತ್ತು. ನಾರದರನ್ನು ತನ್ನ ಆಸನದಲ್ಲಿ ಕುಳಿರಿಸಿ, ಭಗವಾನ್ ಶಿವನ ಚರಣಾರವಿಂದಗಳನ್ನು ನೆನೆದು ಶ್ರೀಹರಿಯು ನಾರದರಲ್ಲಿ ಕೇಳಿದನು–

ಭಗವಾನ್ ವಿಷ್ಣುವು ಹೇಳಿದನು–ಅಯ್ಯಾ ನಾರದ! ಯಾವ ಕಡೆಯಿಂದ ಬರೋಣವಾಯಿತು. ಇಲ್ಲಿಗೆ ಯಾವುದಕ್ಕಾಗಿ ಆಗಮಿಸಿದಿರಿ? ಮುನಿಶ್ರೇಷ್ಠನೇ! ನೀನು ಧನ್ಯನಾಗಿರುವೆ, ನಿನ್ನ ಶುಭಾಗಮನದಿಂದ ನಾನು ಪವಿತ್ರನಾಗಿ ಹೋದೆ.

ಭಗವಾನ್ ವಿಷ್ಣುವಿನ ಈ ಮಾತನ್ನು ಕೇಳಿ, ಗರ್ವತುಂಬಿರುವ ನಾರದ ಮುನಿಗಳು ಮದದಿಂದ ಮೋಹಿತನಾಗಿ ತನ್ನ ಸಕಲ ವೃತ್ತಾಂತವನ್ನು ತುಂಬು ಅಭಿಮಾನದಿಂದ ಹೇಳಿದರು. ನಾರದ ಮುನಿಯ ಈ ಅಹಂಕಾರಯುಕ್ತ ಮಾತನ್ನು ಕೇಳಿ, ಭಗವಾನ್ ಮಹಾವಿಷ್ಣವು ಮನಸ್ಸಿನಲ್ಲೇ ಅವನ ಕಾಮವಿಜಯದ ನಿಜವಾದ ಕಾರಣವನ್ನು ಪೂರ್ಣವಾಗಿ ಅರಿತುಕೊಂಡನು.

ಶ್ರೀವಿಷ್ಣು ಹೇಳಿದನು – ಮುನಿಶ್ರೇಷ್ಠರೇ! ನೀವು ಧನ್ಯರಾಗಿರುವಿರಿ. ನೀವಾದರೋ ತಪಸ್ಸಿನ ಭಂಡಾರವೇ ಆಗಿರುವಿರಿ. ನಿಮ್ಮ ಹೃದಯ ತುಂಬಾ ಉದಾರವಾಗಿದೆ. ಮುನಿಗಳೇ! ಯಾರೊಳಗೆ ಭಕ್ತಿ, ಜ್ಞಾನ, ವೈರಾಗ್ಯಗಳು ಇರುವುದಿಲ್ಲವೋ, ಅವರ ಮನಸ್ಸಿನಲ್ಲಿ ಸಮಸ್ತ ದುಃಖಿಗಳನ್ನು ಕೊಡುವಂತಹ ಕಾಮ, ಮೋಹ ಮುಂತಾದ ವಿಕಾರಗಳು ಬೇಗನೇ ಉಂಟಾಗುತ್ತವೆ. ನೀವಾದರೋ ನೈಷ್ಠಿಕ ಬ್ರಹ್ಮಚಾರಿಗಳಾಗಿರುವಿರಿ. ಸದಾಕಾಲ ಜ್ಞಾನ-ವೈರಾಗ್ಯಗಳಿಂದ ಕೂಡಿ ಕೊಂಡಿರುತ್ತೀರಿ. ಹಾಗಿರುವಾಗ ನಿಮ್ಮಲ್ಲಿ ಕಾಮವಿಕಾರವು ಹೇಗೆ ಬರಬಲ್ಲದು? ನೀವಾದರೋ ಹುಟ್ಟಿನಿಂದಲೇ ನಿರ್ವಿಕಾರ ಹಾಗೂ ಶುದ್ಧ ಬುದ್ಧಿಯವರಾಗಿರುವಿರಿ.

ಶ್ರೀಹರಿಯು ಹೇಳಿದ ಇಂತಹ ಅನೇಕ ಮಾತುಗಳನ್ನು ಕೇಳಿ ಮುನಿಶಿರೋಮಣಿ ನಾರದರು ಜೋರಾಗಿ ನಗತೊಡಗಿದರು. ಮನಸ್ಸಿನಲ್ಲೇ ಭಗವಂತನನ್ನು ವಂದಿಸಿ ಹೀಗೆ ಹೇಳತೊಡಗಿದರು.

ನಾರದರು ಹೇಳುತ್ತಾರೆ – ಸ್ವಾಮಿ! ನನ್ನ ಮೇಲೆ ನಿನ್ನ ಕೃಪೆ ಇರುವಾಗ ಆ ಕಾಮದೇವನು ತನ್ನ ಯಾವ ಪ್ರಭಾವವನ್ನು ತೋರಬಲ್ಲನು? ಹೀಗೆ ಹೇಳಿ ಭಗವಂತನ ಚರಣಗಳಲ್ಲಿ ಮಸ್ತಕವನ್ನು ಚಾಚಿ ಇಚ್ಛಾನುಸಾರವಾಗಿ ಸಂಚರಿಸುವ ನಾರದರು ಅಲ್ಲಿಂದ ಹೊರಟುಹೋದರು.

(ಅಧ್ಯಾಯ ೧-೨)

❑ ❑ ❑

ಶೀಲನಿಧಿಯ ಕನ್ಯೆಯಲ್ಲಿ ಮೋಹಿತರಾದ ನಾರದರು ಭಗವಾನ್ ವಿಷ್ಣುವಿನಲ್ಲಿ ಅವನ ರೂಪವನ್ನು ಬೇಡುವುದು, ಭಗವಂತನು ಅವರಿಗೆ ಕೋತಿಯ ಮುಖವನ್ನು ಕೊಡುವುದು, ವಂಚಿತರಾದ ನಾರದರು ಶಿವಗಣಗಳಿಗೆ ಶಾಪವನ್ನು ಕೊಡುವುದು

ಸೂತಪುರಾಣಿಕರು ಹೇಳುತ್ತಾರೆ – ಮಹರ್ಷಿಗಳೇ! ನಾರದ ಮುನಿಯು ಇಚ್ಛಾನುಸಾರವಾಗಿ ಅಲ್ಲಿಂದ ಹೊರಟು ಹೋದಾಗ ಭಗವಾನ್ ಶಿವನ ಇಚ್ಛೆಯಿಂದ ಮಾಯಾವಿಶಾರದ ಶ್ರೀಹರಿಯು ತತ್‌ಕ್ಷಣ ತನ್ನ ಮಾಯೆಯನ್ನು ಪ್ರಕಟಿಸಿದನು. ಅವನು ಮುನಿಯ ಮಾರ್ಗದಲ್ಲಿ ಒಂದು ವಿಶಾಲ ನಗರಿಯನ್ನು ರಚಿಸಿದನು. ಅದು ನೂರು ಯೋಜನ ವಿಸ್ತಾರವಾಗಿತ್ತು. ಆ ಅದ್ಭುತ ನಗರವು ಬಹಳ ಮನೋಹರವಾಗಿದ್ದು, ಭಗವಂತನು ಅದನ್ನು ತನ್ನ ವೈಕುಂಠಕ್ಕಿಂತಲೂ ಹೆಚ್ಚು ರಮಣೀಯವಾಗಿಸಿದ್ದನು. ಅನೇಕ ಪ್ರಕಾರದ ವಸ್ತುಗಳು ಆ ನಗರಿಯ ಶೋಭೆಯನ್ನು ಹೆಚ್ಚಿಸಿದ್ದವು. ಸ್ತ್ರೀ-ಪುರುಷರಿಗಾಗಿ ಬಹಳಷ್ಟು ವಿಹಾರ ಸ್ಥಳಗಳಿದ್ದವು. ಆ ನಗರವು ನಾಲ್ಕು ವರ್ಣದವರಿಂದ ತುಂಬಿದ್ದು, ಅಲ್ಲಿ ಶೀಲನಿಧಿ ಎಂಬ ರಾಜನು ರಾಜ್ಯವನ್ನಾಳುತ್ತಿದ್ದನು. ಅವನು ತನ್ನ ಪುತ್ರಿಯ ಸ್ವಯಂವರವನ್ನು ಮಾಡಲು ಯೋಚಿಸಿದ್ದನು. ಆದ್ದರಿಂದ ಅವನು ಮಹೋತ್ಸವವನ್ನು ಆಯೋಜಿಸಿದ್ದನು. ಅವನ ಕನ್ಯೆಯನ್ನು ವರಿಸಲು ಉತ್ಸುಕರಾದ ಅನೇಕ ರಾಜಕುಮಾರನು ಎಲ್ಲೆಡೆಗಳಿಂದ ಆಗಮಿಸಿದ್ದರು. ಅವರೆಲ್ಲರೂ ನಾನಾ ರೀತಿಯ ವೇಷಭೂಷಣಗಳಿಂದ ಸುಂದರವಾಗಿ ಶೋಭಿಸುತ್ತಿದ್ದರು. ಆ ರಾಜ ಕುಮಾರರಿಂದ ತುಂಬಿ ಹೋದ ಸುಂದರ ನಗರವನ್ನು ನೋಡಿದ ನಾರದರು ಮೋಹಿತರಾದರು. ಅವರು ನೇರವಾಗಿ ಶೀಲನಿಧಿ ರಾಜನ ಬಳಿಗೆ ತೆರಳಿದರು. ನಾರದರು ಬಂದಿರುವುದನ್ನು ನೋಡಿದ ಮಹಾರಾಜನು ಅವರನ್ನು ಸ್ವಾಗತಿಸಿ, ಶ್ರೇಷ್ಠ ಸಿಂಹಾಸನದಲ್ಲಿ ಕುಳ್ಳಿರಿಸಿ ಪೂಜಿಸಿದನು. ಬಳಿಕ ತನ್ನ ಸುಂದರ ಮಗಳಾದ ಶ್ರೀಮತಿಯನ್ನು ಕರೆಸಿದನು. ಅವಳು ನಾರದರ ಚರಣಗಳಲ್ಲಿ ವಂದಿಸಿಕೊಂಡಳು. ಆ ಕನ್ಯೆಯನ್ನು ನೋಡಿ ನಾರದರು ಚಕಿತರಾದರು. ರಾಜನ ಬಳಿ ಕೇಳುತ್ತಾರೆ- ಮಹಾರಾಜನೇ! ಈ ದೇವಕನ್ಯೆಯಂತಿರುವ ಮಹಾ ಭಾಗ್ಯಶಾಲಿಯಾದ ಸುಂದರ ಕನ್ಯೆಯು ಯಾರು? ಅವರ ಮಾತನ್ನು ಕೇಳಿ ಶೀಲನಿಧಿಯು ಕೈಗಳನ್ನು ಜೋಡಿಸಿಕೊಂಡು – ಮುನಿಗಳೇ! ಇವಳು ನನ್ನ ಪುತ್ರಿ ಶ್ರೀಮತಿಯಾಗಿದ್ದಾಳೆ. ಈಗ ಈಕೆಯ ವಿವಾಹದ ಸಮಯ ಬಂದಿದೆ. ಇವಳು ತನಗಾಗಿ ಸುಂದರವರನನ್ನು ವರಿಸಲು ಸ್ವಯಂವರಕ್ಕೆ ಹೋಗುವವಳಿದ್ದಾಳೆ. ಈಕೆಯಲ್ಲಿ ಎಲ್ಲ ವಿಧದ ಶುಭ ಲಕ್ಷಣಗಳು ಕಂಡು ಬರುತ್ತಿವೆ. ಮಹರ್ಷಿಗಳೇ! ತಾವು ಇವಳ ಭಾಗ್ಯವನ್ನು ತಿಳಿಸಬೇಕೆಂದು ಕೇಳಿಕೊಂಡನು.

ರಾಜನು ಹೀಗೆ ಕೇಳಿದಾಗ ಕಾಮವಿಹ್ವಲರಾದ ಮುನಿಶ್ರೇಷ್ಠ ನಾರದರು ಆ ಕನ್ಯೆಯನ್ನು ಪಡೆದುಕೊಳ್ಳಲು ಮನಸ್ಸಿನಲ್ಲಿ ಇಚ್ಛಿಸಿ, ರಾಜನನ್ನು ಸಂಬೋಧಿಸುತ್ತಾ ಹೀಗೆ ನುಡಿದರು. 'ಭೂಪಾಲನೇ! ನಿನ್ನ ಈ ಪುತ್ರಿಯು ಸಮಸ್ತ ಶುಭಲಕ್ಷಣಗಳಿಂದ ಸಂಪನ್ನಳಾಗಿರುವಳು. ಪರಮ ಸೌಭಾಗ್ಯವತಿಯಾಗಿದ್ದಾಳೆ. ತನ್ನ ಮಹಾಭಾಗ್ಯದಿಂದ ಈಕೆಯು ಧನ್ಯಳಾಗಿರುವಳು. ಸಾಕ್ಷಾತ್ ಶ್ರೀಲಕ್ಷ್ಮಿಯಂತೆ ಸಮಸ್ತ ಗುಣಗಳ ಆಗರವಾಗಿರುವಳು. ಇವಳ ಭಾವೀ ಪತಿಯು ನಿಶ್ಚಯವಾಗಿಯೂ ಭಗವಾನ್ ಶಂಕರನಂತೆಯೇ ವೈಭವಶಾಲಿಯೂ, ಸರ್ವೇಶ್ವರನೂ, ಯಾರಿಂದಲೂ ಜಯಿಸಲ್ಪಡದವನೂ, ವೀರನೂ, ಕಾಮವಿಜಯಿಯೂ ಹಾಗೂ ಸಮಸ್ತ ದೇವತೆಗಳಲ್ಲಿ ಶ್ರೇಷ್ಠನೂ ಆಗುವನು.'

ಹೀಗೆ ಹೇಳಿ ರಾಜನಿಂದ ಬೀಳ್ಕೊಂಡು, ಸ್ವೇಚ್ಛೆಯಿಂದ ವಿಹರಿಸುವ ನಾರದಮುನಿಗಳು ಅಲ್ಲಿಂದ ಹೊರಟುಹೋದರು. ಅವರು ಕಾಮಕ್ಕೆ ವಶೀಭೂತರಾಗಿದ್ದರು, ಶಿವನ ಮಾಯೆಯು ಅವರನ್ನು ವಿಶೇಷವಾದ ಮೋಹದಲ್ಲಿ ಕೆಡವಿ ಬಿಟ್ಟಿತ್ತು. ನಾನು ಈ ರಾಜಕುಮಾರಿಯನ್ನು ಹೇಗೆ ಪಡೆದುಕೊಂಡೇನು? ಎಂದು ಮನಸ್ಸಿನಲ್ಲೇ ಯೋಚಿಸತೊಡಗಿದರು. ಸ್ವಯಂವರಕ್ಕೆ ಬಂದಿರುವ ರಾಜಕುಮಾರರೆಲ್ಲರನ್ನು ಬಿಟ್ಟು ಈಕೆಯು ನನ್ನನ್ನೇ ವರಿಸುವಂತೆ ಹೇಗೆ ಸಂಭವಿಸಬಹುದು? ಸಮಸ್ತ ನಾರಿಯರಿಗೆ ಸೌಂದರ್ಯವು ಹೆಚ್ಚು ಪ್ರಿಯವಾಗಿರುತ್ತದೆ. ಸೌಂದರ್ಯವನ್ನು ನೋಡಿಯೇ ಅವಳು ಸಂತೋಷದಿಂದ ನನಗೆ ಅಧೀನಳಾಗುವಳು, ಇದರಲ್ಲಿ ಸಂಶಯವೇ ಇಲ್ಲ.

ಹೀಗೆ ಯೋಚಿಸಿ ಕಾಮದಿಂದ ವಿಹ್ವಲರಾದ ಮುನಿವರ ನಾರದರು ಭಗವಾನ್ ವಿಷ್ಣುವಿನ ರೂಪವನ್ನು ಪಡೆಯಲಿಕ್ಕಾಗಿ ತತ್‌ಕ್ಷಣ ವೈಕುಂಠಕ್ಕೆ ತಲುಪಿದರು. ಅಲ್ಲಿ ಭಗವಾನ್ ವಿಷ್ಣುವಿಗೆ ನಮಸ್ಕರಿಸಿ ಅವರು ಇಂತೆಂದರು- ಓ ಭಗವಂತನೇ! ನಾನು ವಿಕಾಂತದಲ್ಲಿ ಎಲ್ಲ ವೃತ್ತಾಂತವನ್ನು ಹೇಳುವೆನು. ಆಗ ಸರಿ, ಎಂದು ಹೇಳಿ ಲಕ್ಷ್ಮೀಪತಿ ಶ್ರೀಹರಿಯು ನಾರದರೊಂದಿಗೆ ವಿಕಾಂತದಲ್ಲಿ ಹೋಗಿ ಕುಳಿತು ಹೇಳಿದನು

– ಮುನಿಗಳೇ ! ಈಗ ತಾವು ತಮ್ಮ ಮಾತನ್ನು ತಿಳಿಸಿರಿ.

ಆಗ ನಾರದರು ಹೇಳುತ್ತಾರೆ – ಭಗವಂತನೇ ! ನಿನ್ನ ಭಕ್ತನಾದ ಶೀಲನಿಧಿರಾಜನು ಸದಾ ಧರ್ಮ– ಪಾಲನೆಯಲ್ಲಿ ತತ್ಪರನಾಗಿರುವನು. ಅವನಿಗೆ ವಿಶಾಲ ಲೋಚನೆಯಾದ ಬಹಳ ಸುಂದರಿಯಾದ ಓರ್ವ ಕನ್ಯೆಯಿರುವಳು. ಆಕೆಯ ಹೆಸರು ಶ್ರೀಮತಿ ಎಂದಿದೆ. ಅವಳು ವಿಶ್ವಮೋಹಿನಿಯ ರೂಪದಿಂದ ಖ್ಯಾತಳಾಗಿರುವಳು. ಪ್ರಭುವೇ ! ಇಂದು ನಾನು ಶೀಘ್ರವಾಗಿ ಆ ಕನ್ಯೆಯನ್ನು ವಿವಾಹವಾಗಲು ಬಯಸುತ್ತಿದ್ದೇನೆ. ಶೀಲನಿಧಿರಾಜನು ತನ್ನ ಮಗಳ ಇಚ್ಛೆಯಿಂದ ಸ್ವಯಂವರವನ್ನು ಏರ್ಪಡಿಸಿರುವನು. ಅದಕ್ಕಾಗಿ ಎಲ್ಲೆಡೆಗಳಿಂದ ಸಾವಿರಾರು ರಾಜಕುಮಾರರು ಅಲ್ಲಿಗೆ ಆಗಮಿಸಿರುವರು. ಸ್ವಾಮಿ ! ನಾನು ನಿನ್ನ ಪ್ರಿಯ ಸೇವಕನಾಗಿರುವೆನು. ಆದ್ದರಿಂದ ನೀನು ನನಗೆ ನಿನ್ನ ಸ್ವರೂಪವನ್ನು ಕೊಡಬೇಕು. ಅದರಿಂದ ರಾಜಕುಮಾರಿ ಶ್ರೀಮತಿಯು ನಿಶ್ಚಯವಾಗಿ ನನ್ನನ್ನೇ ವರಿಸುವಳು.

ಸೂತಪುರಾಣಿಕರು ಹೇಳುತ್ತಾರೆ – ಮಹರ್ಷಿಗಳೇ ! ನಾರದ ಮುನಿಯ ಇಂತಹ ಮಾತನ್ನು ಕೇಳಿ ಭಗವಾನ್ ಮಧುಸೂದನನು ನಕ್ಕು, ಭಗವಾನ್ ಶಂಕರನ ಪ್ರಭಾವವನ್ನು ಅನುಭವಿಸುತ್ತಾ ಆ ದಯಾಳು ಪ್ರಭುವು ನಾರದರಲ್ಲಿ ಹೀಗೆ ನುಡಿದನು.

ಭಗವಾನ್ ವಿಷ್ಣು ಹೇಳುತ್ತಾನೆ – ಮುನಿಯೇ ! ನೀನು ತನಗೆ ಬೇಕಾದ ಸ್ಥಾನಕ್ಕೆ ಹೋಗಿರಿ ಶ್ರೇಷ್ಠ ವೈದ್ಯನು ಅತ್ಯಂತ ಪೀಡಿತ ರೋಗಿಯ ಹಿತವನ್ನು ಸಾಧಿಸುವಂತೆ, ನಾನು ನಿನ್ನ ಹಿತವನ್ನು ಮಾಡುವೆನು. ಏಕೆಂದರೆ, ನೀನು ನನಗೆ ವಿಶೇಷವಾಗಿ ಪ್ರಿಯನಾಗಿರುವೆ.

ಹೀಗೆ ಹೇಳಿ ಭಗವಾನ್ ವಿಷ್ಣುವು ನಾರದಮುನಿಯ ಮುಖವಾದರೋ ಕೋತಿಯಂತಾಗಿಸಿ, ಉಳಿದ ಶರೀರವನ್ನು ತನ್ನಂತೆಯೇ ಮಾಡಿ, ಅವನು ಅಲ್ಲೇ ಅಂತರ್ಧಾನನಾದನು. ಭಗವಂತನ ಮಾತನ್ನು ಕೇಳಿ ಅವನ ಮನೋಹರ ರೂಪವು ಪ್ರಾಪ್ತವಾಯಿತೆಂದು ಬಗೆದು ನಾರದರಿಗೆ ಬಹಳ ಹರ್ಷವುಂಟಾಯಿತು. ಅವರು ತನ್ನನ್ನು ಕೃತಕೃತ್ಯನಾಗಿ ತಿಳಿದರು. ಭಗವಂತನು ಯಾವ ಯುಕ್ತಿಯನ್ನು ಮಾಡಿರುವನೆಂದು ಅವರು ತಿಳಿಯದೇ ಹೋದರು. ಅನಂತರ ಮುನಿಶ್ರೇಷ್ಠ ನಾರದರು ಬೇಗನೇ ಶೀಲನಿಧಿ ರಾಜನು ಏರ್ಪಡಿಸಿದ ರಾಜಕುಮಾರರಿಂದ ತುಂಬಿದ ಸ್ವಯಂವರ ಮಂಟಪಕ್ಕೆ ಬಂದು ತಲುಪಿಸಿದರು. ವಿಪ್ರವರ್ಯರೇ ! ರಾಜಕುಮಾರರಿಂದ ಕೂಡಿದ ಆ ದಿವ್ಯ ಸ್ವಯಂವರ ಸಭೆಯು ಇನ್ನೊಂದು ಇಂದ್ರನ ಸಭೆಯಂತೆ ಅತ್ಯಂತ ಶೋಭಿಸುತ್ತಿತ್ತು. ನಾರದರು ಆ ರಾಜಸಭೆಯಲ್ಲಿ ಕುಳಿತು, ಪ್ರಸನ್ನ ಮನಸ್ಸಿನಿಂದ ನಾನು ಭಗವಾನ್ ವಿಷ್ಣುವಿನಂತೆ ರೂಪವನ್ನು ಧರಿಸಿರುವೆನು; ಆದ್ದರಿಂದ ರಾಜಕುಮಾರಿಯು ಅವಶ್ಯವಾಗಿ ನನ್ನನ್ನೇ ವರಿಸುವಳು. ಬೇರೆಯಾರನ್ನು ವರಿಸಲಾರಳು ಎಂದು ಮತ್ತೆ-ಮತ್ತೆ ಯೋಚಿಸತೊಡಗಿದರು. ಮುನಿಶ್ರೇಷ್ಠ ನಾರದರಿಗೆ ತನ್ನ ಮುಖವು ಎಷ್ಟು ಕುರೂಪವಾಗಿದೆ ಎಂಬುದು ತಿಳಿಯಲೇ ಇಲ್ಲ. ಆ ಸಭೆಯಲ್ಲಿ ಕುಳಿತವರೆಲ್ಲರೂ ಮುನಿಯ ಹಿಂದಿನ ರೂಪದಲ್ಲೇ ನೋಡಿದರು. ರಾಜಕುಮಾರರೇ ಆದಿಯಾಗಿ ಯಾರೂ ಅವರ ರೂಪಪರಿವರ್ತನೆಯ ರಹಸ್ಯವನ್ನು ತಿಳಿಯದೇ ಹೋದರು. ಅಲ್ಲಿ ನಾರದರ ರಕ್ಷಣೆಗಾಗಿ ಭಗವಾನ್ ರುದ್ರನ ಇಬ್ಬರು ಪಾರ್ಷದರು ಬ್ರಾಹ್ಮಣರ ರೂಪವನ್ನು ಧರಿಸಿ ಗೂಢಭಾವದಿಂದ ಅಲ್ಲಿ ಕುಳಿತಿದ್ದರು. ಅವರು ನಾರದರ ರೂಪಪರಿವರ್ತನೆಯ ರಹಸ್ಯವನ್ನು ಚೆನ್ನಾಗಿ ತಿಳಿದಿದ್ದರು. ಮುನಿಯು ಕಾಮಾವೇಶದಿಂದ ಮೂಢರಾಗಿದ್ದುದನ್ನು ತಿಳಿದು ಅವರಿಬ್ಬರೂ ಪಾರ್ಷದರು ನಾರದರ ಬಳಿಗೆ ಹೋಗಿ ಪರಸ್ಪರ ಮಾತನಾಡಿಕೊಳ್ಳುತ್ತಾ ನಾರದರನ್ನು ಹಾಸ್ಯ ಮಾಡುತ್ತಿದ್ದರು. ಆದರೆ ಮುನಿಯು ಕಾಮದಿಂದ ವಿಹ್ವಲನಾದ್ದರಿಂದ ಅವರ ಯಥಾರ್ಥ ಮಾತಿನ ಕಡೆಗೆ ಗಮನವೇ ಕೊಡಲಿಲ್ಲ. ಅವರು ಮೋಹಿತರಾಗಿ ಶ್ರೀಮತಿಯನ್ನು ಪಡೆಯುವ ಇಚ್ಛೆಯಿಂದ ಆಕೆಯ ಆಗಮನವನ್ನೇ ಪ್ರತೀಕ್ಷೆ ಮಾಡುತ್ತಿದ್ದರು.

ಇಷ್ಟರಲ್ಲಿ ಆ ಪರಮ ಸುಂದರಿಯಾದ ರಾಜಕುಮಾರಿಯು ಸ್ತ್ರೀಯರಿಂದ ಸುತ್ತುವರೆದುಕೊಂಡು ಅಂತಃಪುರದಿಂದ ಅಲ್ಲಿಗೆ ಬಂದಳು. ಆಕೆಯು ತನ್ನ ಕೈಯಲ್ಲಿ ಸುಂದರವಾದ ಒಂದು ಸ್ವರ್ಣಮಾಲಿಕೆಯನ್ನು ಹಿಡಿದುಕೊಂಡಿದ್ದಳು. ಆ ಶುಭಲಕ್ಷಣವುಳ್ಳ ರಾಜಕುಮಾರಿಯು ಸ್ವಯಂವರ ಸಭೆಯ ಮಧ್ಯದಲ್ಲಿ ಲಕ್ಷ್ಮಿಯಂತೆ ನಿಂತುಕೊಂಡು ಅಪೂರ್ವವಾಗಿ ಶೋಭಿಸುತ್ತಿದ್ದಳು. ಉತ್ತಮ ವ್ರತಗಳನ್ನು ಪಾಲನೆ ಮಾಡುವ ಆ ಭೂಪ ಕನ್ಯೆಯು ಮಾಲೆಯನ್ನು ಕೈಯಲ್ಲಿ ಎತ್ತಿಕೊಂಡು ತನ್ನ ಮನಸ್ವಿಗನುರೂಪನಾದ ವರನನ್ನು ಅನ್ವೇಷಣೆ ಮಾಡುತ್ತಾ ಇಡೀ ಸಭೆಯಲ್ಲಿ ಸಂಚರಿಸುತ್ತಿದ್ದಳು. ನಾರದಮುನಿಯ ಭಗವಾನ್ ವಿಷ್ಣುವಿನಂತೆ ಶರೀರ ಮತ್ತು ವಾನರದಂತೆ ಇರುವ ಮುಖವನ್ನು ನೋಡಿ ಅವಳು ಕುಪಿತಳಾಗಿ ಅವರನ್ನು ನೋಡದೆ ಬೇರೆಡೆಗೆ ಹೊರಟುಹೋದಳು. ಸ್ವಯಂವರ ಸಭೆಯಲ್ಲಿ ತನ್ನ ಮನೋವಾಂಛಿತ ವರವನ್ನು ಕಾಣದೆ ಆಕೆಯು ಭಯಗೊಂಡಳು. ರಾಜಕುಮಾರಿಯು ಆ

ಸಭೆಯಲ್ಲಿ ಸುಮ್ಮನೇ ನಿಂತುಬಿಟ್ಟಳು. ಅವಳು ಯಾರ ಕೊರಳಿಗೂ ಜಯಮಾಲೆಯನ್ನು ತೊಡಿಸಲಿಲ್ಲ. ಅಷ್ಟರಲ್ಲಿ ರಾಜರಂತೆ ವೇಷಭೂಷಣಗಳನ್ನು ಧರಿಸಿದ ಭಗವಾನ್ ವಿಷ್ಣುವು ಅಲ್ಲಿಗೆ ಬಂದನು. ಬೇರೆಯಾರೂ ಅವನನ್ನು ಅಲ್ಲಿ ನೋಡಲಿಲ್ಲ. ಕೇವಲ ಆ ರಾಜ ಕನ್ಯೆಯ ದೃಷ್ಟಿಯು ಅವನ ಮೇಲೆ ಬಿತ್ತು. ಭಗವಂತನನ್ನು ನೋಡುತ್ತಲೇ ಆ ಪರಮಸುಂದರಿಯಾದ ರಾಜಕುಮಾರಿಯ ಮುಖ ಪ್ರಸನ್ನತೆಯಿಂದ ಅರಳಿತು. ಆಕೆಯು ತತ್‌ಕ್ಷಣ ಅವನ ಕೊರಳಿಗೆ ಜಯಮಾಲೆಯನ್ನು ತೊಡಿಸಿದಳು. ರಾಜನ ರೂಪವನ್ನು ಧರಿಸಿದ ಭಗವಾನ್ ವಿಷ್ಣುವು ಆ ರಾಜಕುಮಾರಿಯೊಂದಿಗೆ ಅಲ್ಲೇ ಅದೃಶ್ಯನಾಗಿ ತನ್ನ ಧಾಮವನ್ನು ಸೇರಿದನು. ಇತ್ತ ಎಲ್ಲ ರಾಜಕುಮಾರರು ಶ್ರೀಮತಿಯಿಂದ ನಿರಾಶರಾದರು. ನಾರದಮುನಿಗಳಾದರೋ ಕಾಮನ ವೇದನೆಯಿಂದ ಆತುರರಾಗಿದ್ದರು. ಇದರಿಂದ ಅವರು ಅತ್ಯಂತ ವಿಹ್ವಲರಾದರು. ಆಗ ಆ ಇಬ್ಬರು ವಿಪ್ರವೇಶಧಾರಿ ಜ್ಞಾನವಿಶಾರದ ರುದ್ರಗಣರು ಕಾಮವಿಹ್ವಲರಾದ ನಾರದರಲ್ಲಿ ಮಾತನಾಡ ತೊಡಗಿದರು.

ರುದ್ರಗಣರು ಹೇಳಿದರು – ಎಲೈ ನಾರದ ಮುನಿಯೇ ! ನೀನು ವ್ಯರ್ಥವಾಗಿ ಕಾಮದಿಂದ ಮೋಹಿತನಾಗಿರುವೆ. ತನ್ನ ಸೌಂದರ್ಯಬಲದಿಂದ ರಾಜಕುಮಾರಿಯನ್ನು ಪಡೆಯಲು ಬಯಸುತ್ತಿರುವೆ. ವಾನರದಂತಿರುವ ನಿನ್ನ ಕೆಟ್ಟ ಮುಖವನ್ನು ಒಮ್ಮೆ ನೋಡಿಕೋ.

ಸೂತಪುರಾಣಿಕರು ಹೇಳುತ್ತಾರೆ – ಮಹರ್ಷಿಗಳೇ ! ಆ ರುದ್ರಗಣರ ಈ ಮಾತನ್ನು ಕೇಳಿ ನಾರದರಿಗೆ ಭಾರೀ ವಿಸ್ಮಯವಾಯಿತು. ಶಿವನ ಮಾಯೆಯಿಂದ ಮೋಹಿತರಾಗಿದ್ದ ಅವರು ಕನ್ನಡಿಯಲ್ಲಿ ತನ್ನ ಮುಖವನ್ನು ನೋಡಿಕೊಂಡರು. ಕೋತಿಯಂತಿರುವ ತನ್ನ ಮುಖವನ್ನು ನೋಡಿ ಅವರು ಕ್ರೋಧದಿಂದ ಉರಿದೆದ್ದರು. ಮಾಯೆಯಿಂದ ಮೋಹಿತರಾದ್ದರಿಂದ ಆ ಇಬ್ಬರೂ ಶಿವಗಣಗಳಿಗೆ ಅಲ್ಲೇ ಶಾಪವನ್ನು ಕೊಡುತ್ತಾ ಹೇಳಿದರು – ಎಲವೋ! ನೀವಿಬ್ಬರೂ ಬ್ರಾಹ್ಮಣನಾದ ನನ್ನನ್ನು ಅಪಹಾಸ್ಯಮಾಡಿದಿರಿ. ಆದ್ದರಿಂದ ನೀವು ಬ್ರಾಹ್ಮಣನ ವೀರ್ಯದಿಂದ ಉತ್ಪನ್ನರಾದ ರಾಕ್ಷಸರಾಗಿರಿ. ಬ್ರಾಹ್ಮಣನ ಸಂತಾನವಾದರೂ ನಿಮ್ಮ ಆಕಾರ ರಾಕ್ಷಸರಂತೆ ಇರುವುದು. ತಮಗೆ ಬಂದ ಇಂತಹ ಶಾಪವನ್ನು ಕೇಳಿ ಆ ಇಬ್ಬರೂ ಜ್ಞಾನಶಿರೋಮಣಿ ಶಿವಗಣಗಳು ಮುನಿಯನ್ನು ಮೋಹಿತರೆಂದು ತಿಳಿದು ಏನೂ ಮಾತನಾಡಲಿಲ್ಲ. ಬ್ರಾಹ್ಮಣರೇ ! ಅವರು ಸದಾಕಾಲ ಎಲ್ಲ ಘಟನೆಗಳಲ್ಲಿ ಶಿವನ ಇಚ್ಛೆ ಎಂದೇ ತಿಳಿಯುತ್ತಿದ್ದರು. ಆದ್ದರಿಂದ ಉದಾಸೀನ ಭಾವದಿಂದ ತಮ್ಮ ಸ್ಥಾನಗಳಿಗೆ ಹೊರಟುಹೋಗಿ, ಭಗವಾನ್ ಶಿವನನ್ನು ಸ್ತುತಿಸ ತೊಡಗಿದರು.

(ಅಧ್ಯಾಯ ೩)

❐ ❐ ❐

ನಾರದರು ಸಿಟ್ಟಿನಿಂದ ವಿಷ್ಣುವಿಗೆ ಶಾಪವನ್ನು ಕೊಡುವುದು ಮತ್ತೆ ಪಶ್ಚಾತ್ತಾಪದಿಂದ ಭಗವಂತನಲ್ಲಿ ಶುದ್ಧಿಯ ಉಪಾಯವನ್ನು ಕೇಳುವುದು. ಭಗವಾನ್ ವಿಷ್ಣು ಶಿವನ ಮಾಹಾತ್ಮ್ಯವನ್ನು ತಿಳಿಯಲಿಕ್ಕಾಗಿ ಬ್ರಹ್ಮದೇವರ ಬಳಿಗೆ ಹೋಗಲು ಆದೇಶಿಸಿ, ಶಿವನ ಭಜನೆಯನ್ನು ಉಪದೇಶಿಸುವುದು

ಸೂತಪುರಾಣಿಕರು ಹೇಳುತ್ತಾರೆ - ಮಹರ್ಷಿಗಳೇ! ಮಾಯಾ ಮೋಹಿತರಾದ ನಾರದರು ಅವರಿಬ್ಬರೂ ಶಿವಗಣಗಳಿಗೆ ಯಥೋಚಿತ ಶಾಪವನ್ನು ಕೊಟ್ಟರೂ ಭಗವಾನ್ ಶಿವನ ಇಚ್ಛೆಗೆ ವಶರಾದ ಅವರು ಮೋಹನಿದ್ದೆಯಿಂದ ಎಚ್ಚರಗೊಳ್ಳಲಿಲ್ಲ. ಅವರು ಭಗವಾನ್ ವಿಷ್ಣುವು ಮಾಡಿದ ಕಪಟವನ್ನು ನೆನೆಯುತ್ತಾ ಮನಸ್ಸಿನಲ್ಲಿ ದುಸ್ಸಹವಾಗಿ ಕ್ರೋಧಗೊಂಡು ವಿಷ್ಣುಲೋಕಕ್ಕೆ ಹೋಗಿ, ಸಮಿಧೆಗಳನ್ನು ಪಡೆದ ಯಜ್ಞೇಶ್ವರನು ಪ್ರಜ್ವಲಿಸುವಂತೆ ಕ್ರೋಧದಿಂದ ಉರಿಯುತ್ತಾ ನುಡಿದರು. ಅವರ ಜ್ಞಾನ ನಷ್ಟವಾಗಿತ್ತಾದ್ದರಿಂದ ದುರ್ವಚನದಿಂದ ಕೂಡಿ ವ್ಯಂಗ್ಯವಾಗಿ ಮಾತನಾಡತೊಡಗಿದರು.

ನಾರದರು ಇಂತೆಂದರು - ಹರಿಯೇ! ನೀನು ಬಹಳ ದುಷ್ಟನಾಗಿರುವೆ. ಕಪಟಿಯಾಗಿದ್ದು, ಸಮಸ್ತ ವಿಶ್ವವನ್ನು ಮೋಹದಲ್ಲಿ ಕೆಡಹುವೆ. ಇತರರ ಉತ್ಸಾಹ ಅಥವಾ ಉತ್ಕರ್ಷವನ್ನು ನಿನ್ನಿಂದ ನೋಡಲಾಗುವುದಿಲ್ಲ. ನೀನು ಮಾಯಾವಿಯಾಗಿದ್ದು, ನಿನ್ನ ಅಂತಃಕರಣವು ಮಲಿನವಾಗಿದೆ. ಹಿಂದೆ ನೀನೇ ಮೋಹಿನೀ ರೂಪವನ್ನು ತಾಳಿ ಕಪಟವನ್ನೆಸಗಿದೆ. ಅಸುರರಿಗೆ ವಾರುಣೀ ಮದಿರೆಯನ್ನು ಕುಡಿಸಿ, ಅವರಿಗೆ ಅಮೃತವನ್ನು ಕುಡಿಯಲು ಬಿಡಲಿಲ್ಲ. ಛಲ-ಕಪಟದಲ್ಲೇ ಅನುರಾಗವುಳ್ಳ ಹರಿಯೇ! ಮಹೇಶ್ವರ ರುದ್ರನು ದಯೆಗೈದು ವಿಷವನ್ನು ಕುಡಿಯದಿದ್ದರೆ ನಿನ್ನ ಎಲ್ಲ ಮಾಯೆ ಅಂದೇ ಮುಗಿದು ಹೋಗುತ್ತಿತ್ತು. ಎಲೈ ವಿಷ್ಣುವೇ! ಕಪಟಪೂರ್ಣ ನಡತೆ ನಿನಗೆ ಹೆಚ್ಚು ಪ್ರಿಯವಾಗಿದೆ. ನಿನ್ನ ಈ ಸ್ವಭಾವವು ಚೆನ್ನಾಗಿಲ್ಲದಿದ್ದರೂ ಭಗವಾನ್ ಶಂಕರನು ನಿನ್ನನ್ನು ಸ್ವತಂತ್ರನಾಗಿಸಿರುವನು. ನಿನ್ನ ಈ ನಡತೆಯನ್ನು ತಿಳಿದು ಈಗ ಅವನೂ ಕೂಡ ಪಶ್ಚಾತ್ತಾಪ ಪಡಬಹುದು. ತನ್ನ ವಾಣೀರೂಪವಾದ ವೇದದ ಪ್ರಾಮಾಣಿಕತೆಯನ್ನು ಸ್ಥಾಪಿಸುವ ಮಹಾದೇವನು ಬ್ರಾಹ್ಮಣರನ್ನು ಸರ್ವಶ್ರೇಷ್ಠರೆಂದು ತಿಳಿಸಿರುವನು. ಹರಿಯೇ! ಈ ಮಾತನ್ನು ತಿಳಿದು ಇಂದು ನಾನು ಬಲವಂತವಾಗಿ ನಿನಗೆ ಪಾಠವನ್ನು ಕಲಿಸುವೆನು. ಅದರಿಂದ ನೀನು ಮತ್ತೆ ಎಂದೂ ಎಲ್ಲಿಯೂ ಇಂತಹ ಕರ್ಮವನ್ನು ಮಾಡಲಾರೆ. ಇಂದಿನತನಕ ನಿನಗೆ ಯಾರೇ ಶಕ್ತಿಶಾಲಿ ಅಥವಾ ತೇಜಸ್ವೀ ಪುರುಷನು ಗಂಟು ಬೀಳಲಿಲ್ಲ. ಅದಕ್ಕಾಗಿ ನೀನು ನಿರ್ಭಯನಾಗಿರುವೆ. ಆದರೆ ವಿಷ್ಣುವೇ! ಈಗ ನಿನಗೆ ತನ್ನ ಕಾರ್ಯದ ಪೂರ್ಣಫಲವು ದೊರೆಯುವುದು.

ಭಗವಾನ್ ವಿಷ್ಣುವಿನಲ್ಲಿ ಹೀಗೆ ಹೇಳಿ ಮಾಯಾಮೋಹಿತ ನಾರದಮುನಿಯು ತನ್ನ ಬ್ರಹ್ಮತೇಜವನ್ನು ಪ್ರದರ್ಶಿಸುತ್ತಾ ಕ್ರೋಧದಿಂದ ಖಿನ್ನರಾಗಿ ಶಾಪವನ್ನು ಕೊಡುತ್ತಾ ಇಂತೆಂದರು- 'ವಿಷ್ಣುವೇ! ಸ್ತ್ರೀಯಳಿಗಾಗಿ ನೀನು ನನ್ನನ್ನು ದುಃಖಿತನನ್ನಾಗಿಸಿದೆ. ನೀನು ಇದೇ ರೀತಿ ಎಲ್ಲರನ್ನು ಮೋಹದಲ್ಲಿ ಕೆಡವುತ್ತಿರುವೆ. ಇಂತಹ ಕಪಟಪೂರ್ಣ ಕಾರ್ಯವನ್ನು ಮಾಡುತ್ತಾ ನೀನು ಯಾವ ಸ್ವರೂಪದಿಂದ ನನ್ನನ್ನು ಮಾಡಿರುವೆಯೋ ಅದೇ ಸ್ವರೂಪದಿಂದ ನೀನು ಮನುಷ್ಯನಾಗು ಮತ್ತು ಸ್ತ್ರೀಯಳ ವಿಯೋಗದ ದುಃಖವನ್ನು ಅನುಭವಿಸು. ನೀನು ಯಾವ ವಾನರರಂತೆ ನನ್ನ ಮುಖವನ್ನು ಮಾಡಿದ್ದೀಯೋ ಆ ವಾನರರೇ ಆಗ ನಿನಗೆ ಸಹಾಯಕರಾಗಲಿ. ನೀನು ಬೇರೆಯವರಿಗೆ ಸ್ತ್ರೀ-ವಿರಹದ ದುಃಖವನ್ನು ಕೊಡುವವನು, ಅದ್ದರಿಂದ ನಿನಗೂ ಪತ್ನೀವಿಯೋಗದ ದುಃಖಪ್ರಾಪ್ತವಾಗಲಿ; ಅಜ್ಞಾನದಿಂದ ಮೋಹಿತನಾದ ಮನುಷ್ಯನಂತೆ ನಿನ್ನ ಸ್ಥಿತಿಯಾಗಲಿ'.

ಅಜ್ಞಾನದಿಂದ ಮೋಹಿತರಾದ ನಾರದರು ಮೋಹವಶದಿಂದ ಶ್ರೀಹರಿಗೆ ಹೀಗೆ ಶಾಪವನ್ನು ಕೊಟ್ಟಾಗ ಶ್ರೀಹರಿಯು ಶಂಭುವಿನ ಮಾಯೆಯನ್ನು ಪ್ರಶಂಸಿಸುತ್ತಾ ಆ ಶಾಪವನ್ನು ಸ್ವೀಕರಿಸಿದನು. ಅನಂತರ ಮಹಾಲೀಲೆಯನ್ನು ಗೈಯುವ ಶಂಭುವು ಜ್ಞಾನೀ ನಾರದ ಮುನಿಯೂ ಕೂಡ ಮೋಹಿತನಾದ ತನ್ನ ವಿಶ್ವಮೋಹಿನಿ ಮಾಯೆಯನ್ನು ಸೆಳೆದುಕೊಂಡನು. ಆ ಮಾಯೆಯು ತಿರೋಹಿತವಾದಾಗ ನಾರದರು ಹಿಂದಿನಂತೆ ಶುದ್ಧಬುದ್ಧಿಯಿಂದ ಒಡಗೊಂಡರು. ಅವರಿಗೆ ಹಿಂದಿನಂತೆ ಜ್ಞಾನವು ಪ್ರಾಪ್ತವಾಯಿತು. ಅವರ ವ್ಯಾಕುಲತೆಯೆಲ್ಲವೂ ಹೊರಟುಹೋಯಿತು. ಇದರಿಂದ ಅವರಿಗೆ ತುಂಬಾ ವಿಸ್ಮಯವಾಯಿತು. ಅವರು ಅತಿಯಾಗಿ ಪಶ್ಚಾತ್ತಾಪ ಪಡುತ್ತಾ ಪದೇ-ಪದೇ ತನ್ನನ್ನು ನಿಂದಿಸಿಕೊಂಡರು. ಆಗ ಅವರು ಜ್ಞಾನಿಗಳನ್ನು ಮೋಹದಲ್ಲಿ ಕೆಡುವಂತಹ ಶಂಭುವಿನ ಮಾಯೆಯನ್ನು ಹೊಗಳಿದರು. ಬಳಿಕ ಮಾಯೆಯ ಕಾರಣದಿಂದಲೇ ನಾನು ಭ್ರಮೆಯಲ್ಲಿ ಬಿದ್ದಿದ್ದೆ. ಇದೆಲ್ಲವೂ ಮಾಯಾಜನಿತ ಭ್ರಮವೇ ಆಗಿತ್ತು ಎಂದು ತಿಳಿದು, ವೈಷ್ಣವ ಶಿರೋಮಣಿ ನಾರದರು ಭಗವಾನ್

ಶ್ರೀವಿಷ್ಣುವಿನ ಚರಣಗಳಲ್ಲಿ ಕೆಡವಿಬಿದ್ದರು. ಭಗವಾನ್ ಶ್ರೀಹರಿಯು ಅವರನ್ನು ಎಬ್ಬಿಸಿದನು. ಆಗ ಅವರ ದುರ್ಬುದ್ಧಿಯು ನಾಶವಾದ ಕಾರಣ ಹೀಗೆ ನುಡಿದರು – ಓ ನಾಥನೇ ! ಮಾಯೆಯಿಂದ ಮೋಹಿತನಾದ್ದರಿಂದ ನನ್ನ ಬುದ್ಧಿಯು ಕೆಟ್ಟುಹೋಗಿತ್ತು. ಅದರಿಂದ ನಾನು ನಿನಗೆ ಬಹಳ ದುರ್ವಚನಗಳನ್ನು ಆಡಿದೆ. ನಿನಗೆ ಶಾಪವನ್ನು ಕೊಟ್ಟುಬಿಟ್ಟೆ. ಸ್ವಾಮಿ ! ಆ ಶಾಪವನ್ನು ನೀನು ಸುಳ್ಳಾಗಿಸಿಬಿಡು. ಅಯ್ಯೋ ! ನಾನು ಬಹಳ ದೊಡ್ಡ ಪಾಪವನ್ನು ಮಾಡಿದೆ, ನಾನು ಖಂಡಿತವಾಗಿ ನರಕದಲ್ಲೇ ಬೀಳುವೆನು. ಹರಿಯೇ ! ನಾನು ನಿನ್ನ ದಾಸನಾಗಿರುವೆನು. ನನ್ನ ಪಾಪಗಳೆಲ್ಲ ನಾಶವಾಗಿ, ನರಕದಲ್ಲಿ ನಾನು ಬೀಳದಂತಹ ಯಾವ ಉಪಾಯ – ಯಾವ ಪ್ರಾಯಶ್ಚಿತ್ತವನ್ನು ಮಾಡಲಿ ? ತಿಳಿಸು. ಹೀಗೆ ಹೇಳಿ ಶುದ್ಧ ಬುದ್ಧಿಯುಳ್ಳ ಮುನಿ ಶಿರೋಮಣಿ ನಾರದರು ಪುನಃ ಭಕ್ತಿ-ಭಾವದಿಂದ ಭಗವಾನ್ ವಿಷ್ಣುವಿನ ಚರಣಗಳಲ್ಲಿ ಬಿದ್ದರು. ಆಗ ಅವರಿಗೆ ಅತ್ಯಂತ ಪಶ್ಚಾತ್ತಾಪವಾಗಿತ್ತು. ಇದನ್ನು ತಿಳಿದ ಮಹಾವಿಷ್ಣುವು ಅವರನ್ನು ಎಬ್ಬಿಸಿ ಮಧುರವಾಗಿ ಇಂತೆಂದನು.

ಭಗವಾನ್ ವಿಷ್ಣು ಹೇಳಿದನು – ಅಯ್ಯಾ ! ದುಃಖಿಸ ಬೇಡ. ನೀನು ನನ್ನ ಭಕ್ತನಾಗಿರುವೆ ಇದರಲ್ಲಿ ಸಂದೇಹವೇ ಇಲ್ಲ. ನಾನೊಂದು ಮಾತನ್ನು ಹೇಳುವೆನು, ಕೇಳು. ಅದರಿಂದ ನಿಶ್ಚಿತವಾಗಿ ನಿನ್ನ ಪರಮ ಹಿತವಾಗುವುದು, ನಿನಗೆ ನರಕ ಪ್ರಾಪ್ತಿಯಾಗಲಾರದು. ಭಗವಾನ್ ಶಿವನು ನಿನ್ನ ಶ್ರೇಯಸ್ಸನ್ನು ಮಾಡುವನು. ನೀನು ಮದದಿಂದ ಮೋಹಿತನಾಗಿ ಭಗವಾನ್ ಶಿವನ ಮಾತನ್ನು ಮನ್ನಿಸಲಿಲ್ಲ, ಅದನ್ನು ಅಪಹೇಳನ ಮಾಡಿದೆ. ಅದೇ ಅಪರಾಧದ ಫಲವನ್ನು ಭಗವಾನ್ ಶಿವನು ನಿನಗೆ ಕೊಟ್ಟಿರುವನು; ಏಕೆಂದರೆ, ಅವನೇ ಕರ್ಮಫಲವನ್ನು ಕೊಡುವವನು. ಭಗವಾನ್ ಶಿವನ ಇಚ್ಛೆಯಿಂದಲೇ ಇದೆಲ್ಲವೂ ನಡೆದಿದೆ ಎಂದು ನೀನು ಮನಸ್ಸಿನಲ್ಲಿ ದೃಢವಾಗಿ ನಿಶ್ಚಯಿಸಿಕೋ. ಎಲ್ಲರ ಸ್ವಾಮಿಯಾದ ಪರಮೇಶ್ವರ ಶಂಕರನೇ ಗರ್ವವನ್ನು ದೂರ ಮಾಡುವವನು. ಅವನೇ ಪರಬ್ರಹ್ಮ ಪರಮಾತ್ಮನಾಗಿರುವನು. ಸಚ್ಚಿದಾನಂದ ರೂಪದಿಂದ ಅವನ ಬೊಧ ಉಂಟಾಗುತ್ತದೆ. ಅವನು ನಿರ್ಗುಣ ಮತ್ತು ನಿರಾಕಾರನಾಗಿರುವನು. ಸತ್ತ್ವ, ರಜ, ತಮ ಈ ತ್ರಿಗುಣಗಳಿಂದ ಅತೀತನಾಗಿರುವನು, ಅವನೇ ತನ್ನ ಮಾಯೆಯನ್ನು ಆಶ್ರಯಿಸಿ ಬ್ರಹ್ಮಾ-ವಿಷ್ಣು-ಮಹೇಶ್ವರ – ಈ ಮೂರೂ ರೂಪಗಳಿಂದ ಪ್ರಕಟನಾಗುವನು. ಸಗುಣ-ನಿರ್ಗುಣನು ಅವನೇ ಆಗಿರುವನು. ನಿರ್ಗುಣ ಸ್ಥಿತಿಯಲ್ಲಿ ಅವನ ಹೆಸರು ಶಿವ ಎಂದಿದೆ. ಅವನನ್ನೇ ಪರಮಾತ್ಮ, ಮಹೇಶ್ವರ, ಪರಬ್ರಹ್ಮ, ಅವಿನಾಶೀ, ಅನಂತ ಮತ್ತು ಮಹಾದೇವ ಮೊದಲಾದ ನಾಮಗಳಿಂದ ಕರೆಯುವರು, ಅವನ ಸೇವೆಯಿಂದಲೇ ಬ್ರಹ್ಮನು ಜಗತ್ತಿನ ಸೃಷ್ಟಿಕರ್ತನಾದನು, ನಾನು ಮೂರೂ ಲೋಕಗಳನ್ನು ಪಾಲಿಸುತ್ತಿರುವೆನು, ಅವನು ಸ್ವತಃ ರುದ್ರರೂಪದಿಂದ ಸದಾಕಾಲ ಎಲ್ಲರ ಸಂಹಾರಮಾಡುವನು. ಅವನು ಶಿವಸ್ವರೂಪದಿಂದ ಎಲ್ಲರ ಸಾಕ್ಷಿಯಾಗಿರುವನು, ಮಾಯೆಯಿಂದ ಭಿನ್ನನೂ, ನಿರ್ಗುಣನೂ ಆಗಿರುವನು. ಅವನು ಸ್ವತಂತ್ರನಾದ್ದರಿಂದ ತನ್ನ ಇಚ್ಛೆಯಂತೆ ನಡೆಯುವನು. ಅವನ ವಿಹಾರ-ಆಚಾರ- ವ್ಯವಹಾರಗಳು ಉತ್ತಮವಾಗಿದ್ದು, ಅವನು ಭಕ್ತರಮೇಲೆ ಸದಾ ದಯೆ ಮಾಡುವನು. ನಾನು ನಿನಗೆ ಒಂದು ಸುಂದರ ಉಪಾಯವನ್ನು ಹೇಳುವೆನು. ಅದು ಸುಖಮಯವೂ, ಸಮಸ್ತ ಪಾಪಗಳ ನಾಶಕವೂ, ಸದಾಕಾಲ ಭೋಗ-ಮೋಕ್ಷಗಳನ್ನು ಕರುಣಿಸುವಂತಹುದೂ ಆಗಿದೆ; ಅದನ್ನು ನೀನು ಕೇಳು. ತನ್ನ ಎಲ್ಲ ಸಂಶಯಗಳನ್ನು ತ್ಯಜಿಸಿ ನೀನು ಭಗವಾನ್ ಶಂಕರನ ಮಂಗಳ ಕೀರ್ತಿಯನ್ನು ಕೀರ್ತನೆಮಾಡು. ಸದಾಕಾಲ ಅನನ್ಯ ಭಾವದಿಂದ ಶಿವನ ಶತನಾಮ ಸ್ತೋತ್ರವನ್ನು ಪಾರಾಯಣಮಾಡು. ಮುನಿಯೇ ! ನೀನು ನಿರಂತರವಾಗಿ ಅವನದೇ ಉಪಾಸನೆಯನ್ನು, ಭಜನೆಯನ್ನು ಮಾಡು. ಅವನ ಕೀರ್ತಿಯನ್ನೇ ಕೇಳು ಮತ್ತು ಕೀರ್ತಿಸು. ಪ್ರತಿದಿನವೂ ಅವನ ಪೂಜೆ-ಅರ್ಚನೆ ಮಾಡುತ್ತಿರು. ನಾರದನೇ ! ಶರೀರ, ಮನಸ್ಸು ಮತ್ತು ವಾಣಿಯಿಂದ ಭಗವಾನ್ ಶಂಕರನ ಉಪಾಸನೆ ಮಾಡುವವನನ್ನು ಪಂಡಿತ ಅಥವಾ ಜ್ಞಾನೀ ಎಂದು ತಿಳಿಯಬೇಕು; ಅವನು ಜೀವನ್ಮುಕ್ತನೆನಿಸುವನು. 'ಶಿವ' ಎಂಬ ನಾಮರೂಪೀ ದಾವಾನಲದಿಂದ ದೊಡ್ಡ-ದೊಡ್ಡ ಪಾಪಗಳ ಅಸಂಖ್ಯ ಪರ್ವತಗಳೇ ಸುಲಭವಾಗಿ ಸುಟ್ಟು ಹೋಗುವುವು. ಇದು ತ್ರಿವಾರ ಸತ್ಯವಾಗಿದೆ. ಇದರಲ್ಲಿ ಸಂಶಯವೇ ಇಲ್ಲ.* ಭಗವಾನ್ ಶಿವನ ನಾಮರೂಪೀ ನೌಕೆಯನ್ನು ಆಶ್ರಯಿಸಿದವರು ಸಂಸಾರ ಸಾಗರದಿಂದ ಪಾರಾಗಿ ಹೋಗುತ್ತಾರೆ. ಅವನ ಸಂಸಾರದ ಮೂಲಭೂತ ಪಾಪಗಳು ನಿಃಸಂದೇಹವಾಗಿ ನಾಶವಾಗುವುವು. ಸಂಸಾರದ ಮೂಲಭೂತ ಪಾತಕರೂಪೀ

* ಶಿವೇತಿನಾಮದಾವಾಗ್ನೇರ್ಮಹಾಪಾತಕಪರ್ವತಾಃ । ಭಸ್ಮೀಭವಂತ್ಯನಾಯಾಸಾತ್ ಸತ್ಯಂ ಸತ್ಯಂ ನ ಸಂಶಯಃ ॥
(ಶಿ - ಪು - ರು -ಸೃ ೪/೪೫)

ವ್ಯಕ್ತವು ಶಿವನಾಮರೂಪೀ ಕುಠಾರದಿಂದ ನಿಶ್ಚಯವಾಗಿ ನಾಶವಾಗಿ ಹೋಗುತ್ತದೆ.*

ಪಾಪರೂಪವಾದ ದಾವಾನಲದಿಂದ ಪೀಡಿತ ರಾದವರು ಶಿವನಾಮರೂಪೀ ಅಮೃತವನ್ನು ಪಾನ ಮಾಡಬೇಕು. ಪಾಪದಾವಾಗ್ನಿಯಿಂದ ಬೆಂದು ಹೋಗುವ ಪ್ರಾಣಿಗಳಿಗೆ ಶಿವನಾಮಾಮೃತದ ಹೊರತು ಶಾಂತಿಯು ಸಿಗಲಾರದು. ಭಗವಾನ್ ಶಿವನ ಪೂಜೆಯೇ ಉತ್ತಮ ಸಾಧನವೆಂದೂ, ಜನ್ಮ-ಮರಣರೂಪೀ ಸಂಸಾರಬಂಧನ ನಾಶದ ಉಪಾಯ ವೆಂದೂ, ಹಿಂದಿನ ವಿದ್ವಾಂಸರು ಸಮಸ್ತ ವೇದಗಳನ್ನು ಅವಲೋಕನ ಮಾಡಿ ಹೀಗೆ ನಿಶ್ಚಯಿಸಿರುವರು. ಇಂದಿನಿಂದ ಪ್ರಯತ್ನಪೂರ್ವಕ ಎಚ್ಚರವಾಗಿದ್ದು ವಿಧಿ-ವಿಧಾನಗಳೊಂದಿಗೆ ಭಕ್ತಿಭಾವದಿಂದ ನಿತ್ಯ-ನಿರಂತರ ಜಗದಂಬೆಯ ಸಹಿತ ಮಹೇಶ್ವರ ಸದಾಶಿವನ ಭಜನೆಯನ್ನು ಮಾಡು. ನಿತ್ಯವೂ ಶಿವನ ಕಥೆಯನ್ನೇ ಕೇಳು ಹಾಗೂ ಹೇಳುತ್ತಾ ಇರು, ಅತ್ಯಂತ ಪ್ರಯತ್ನಿಸಿ ಪದೇ-ಪದೇ ಶಿವ ಭಕ್ತರನ್ನು ಪೂಜಿಸುತ್ತಾ ಇರು. ಮುನಿಶ್ರೇಷ್ಠನೇ ! ತನ್ನ ಹೃದಯದಲ್ಲಿ ಭಗವಾನ್ ಶಿವನ ಉಜ್ವಲ ಚರಣಾರವಿಂದಗಳನ್ನು ಸ್ಥಾಪಿಸಿಕೊಂಡು ಮೊದಲಿಗೆ ಶಿವಕ್ಷೇತ್ರಗಳನ್ನು ಸಂಚರಿಸು. ಮುನಿಯೇ ! ಹೀಗೆ ಪರಮಾತ್ಮಾ ಶಂಕರನ ಅನುಪಮ ಮಾಹಾತ್ಮ್ಯವನ್ನು ದರ್ಶಿಸುತ್ತಾ ಕೊನೆಗೆ ಆನಂದವನ (ಕಾಶೀ)ಕ್ಕೆ ಹೋಗು. ಆ ಸ್ಥಾನವು ಶಿವನಿಗೆ ಬಹಳ ಪ್ರಿಯವಾಗಿದೆ. ಅಲ್ಲಿ ಭಕ್ತಿಯಿಂದ ವಿಶ್ವನಾಥನ ದರ್ಶನ-ಪೂಜೆ ಮಾಡು. ವಿಶೇಷವಾಗಿ ಅವನ ಸ್ತುತಿ-ಪ್ರಾರ್ಥನೆ, ವಂದನೆ ಮಾಡುತ್ತಾ ನೀನು ನಿರ್ವಿಕಲ್ಪ (ಸಂಶಯರಹಿತ)ನಾಗು. ನಾರದನೇ ! ಇದಾದ ಬಳಿಕ ನನ್ನ ಆಜ್ಞೆಯಂತೆ ತನ್ನ ಮನೋರಥದ ಸಿದ್ಧಿಗಾಗಿ ನಿಶ್ಚಯವಾಗಿ ನೀನು ಭಕ್ತಿಪೂರ್ವಕ ಬ್ರಹ್ಮಲೋಕಕ್ಕೆ ಹೋಗಬೇಕು. ಅಲ್ಲಿ ನಿನ್ನ ತಂದೆಯಾದ ಬ್ರಹ್ಮದೇವರನ್ನು ವಿಶೇಷವಾಗಿ ಸ್ತುತಿಸಿ, ವಂದಿಸಿ, ನೀನು ಪ್ರಸನ್ನ ಮನಸ್ಸಿನಿಂದ ಪದೇ-ಪದೇ ಶಿವನ ಮಹಿಮೆಯ ಕುರಿತು ಪ್ರಶ್ನಿಸಬೇಕು. ಬ್ರಹ್ಮದೇವರು ಶಿವಭಕ್ತರಲ್ಲಿ ಶ್ರೇಷ್ಠರಾಗಿರುವರು. ಅವರು ನಿನಗೆ ಸಂತೋಷವಾಗಿ ಭಗವಾನ್ ಶಂಕರನ ಮಾಹಾತ್ಮ್ಯ ಮತ್ತು ಶತನಾಮ ಸ್ತೋತ್ರವನ್ನು ಹೇಳುವರು. ಮುನಿಯೇ ! ಇಂದಿನಿಂದ ನೀನು ಶಿವಾರಾಧನೆಯಲ್ಲಿ ತತ್ಪರನಾದ ಶಿವಭಕ್ತನಾಗು ಹಾಗೂ ಮೋಕ್ಷಕ್ಕೆ ಭಾಗಿಯಾಗು. ಭಗವಾನ್ ಶಿವನು ನಿನ್ನ ಮಂಗಳವನ್ನು ಮಾಡುವನು. ಹೀಗೆ ಪ್ರಸನ್ನ ಚಿತ್ತನಾದ ಭಗವಾನ್ ವಿಷ್ಣು ನಾರದಮುನಿಗಳಿಗೆ ಪ್ರೇಮಪೂರ್ವಕವಾಗಿ ಉಪದೇಶಿಸಿ, ಶ್ರೀಶಿವನನ್ನು ಸ್ಮರಿಸಿ, ವಂದಿಸಿ, ಸ್ತುತಿಸಿ ಅಲ್ಲೇ ಅಂತರ್ಧಾನನಾದನು.

(ಅಧ್ಯಾಯ ೪)

❐ ❐ ❐

ನಾರದರು ಶಿವನ ತೀರ್ಥಕ್ಷೇತ್ರಗಳಲ್ಲಿ ಸಂಚರಿಸಿದುದು, ಶಿವಗಣಗಳಿಗೆ ಶಾಪೋದ್ಧಾರದ ಮಾತು ತಿಳಿಸುವುದು ಹಾಗೂ ಬ್ರಹ್ಮಲೋಕಕ್ಕೆ ಹೋಗಿ ಬ್ರಹ್ಮದೇವರಲ್ಲಿ ಶಿವ ತತ್ತ್ವದ ಕುರಿತು ಪ್ರಶ್ನಿಸುವುದು

ಸೂತಪುರಾಣಿಕರು ಹೇಳುತ್ತಾರೆ - ಮಹರ್ಷಿಗಳೇ ! ಭಗವಾನ್ ಶ್ರೀಹರಿಯು ಅಂತರ್ಧಾನನಾದ ಮೇಲೆ ಮುನಿಶ್ರೇಷ್ಠರಾದ ನಾರದರು ಭಕ್ತಿಪೂರ್ವಕವಾಗಿ ಶಿವಲಿಂಗಗಳನ್ನು ದರ್ಶನ ಮಾಡುತ್ತಾ ಭೂಮಂಡಲದಲ್ಲಿ ಸಂಚರಿಸತೊಡಗಿದರು. ವಿಪ್ರೋತ್ತಮರೇ ! ಭೂಮಂಡಲ ದಲ್ಲಿ ಸಂಚರಿಸುತ್ತಾ ಅವರು ಭೋಗ-ಮೋಕ್ಷಗಳನ್ನು ಕರುಣಿಸುವ ಅನೇಕ ಶಿವಲಿಂಗಗಳನ್ನು ಪ್ರೇಮಪೂರ್ವಕ ದರ್ಶನ ಮಾಡಿದರು. ದಿವ್ಯದರ್ಶಿ ನಾರದರು ಪೃಥಿವಿಯಲ್ಲಿನ ತೀರ್ಥಗಳಲ್ಲಿ ಸಂಚರಿಸುತ್ತಿರುವರು ಹಾಗೂ ಈಗ ಅವರ ಚಿತ್ತವೂ ಶುದ್ಧವಾಗಿದೆ ಎಂದು ತಿಳಿದು ಆ ಶಿವಗಣರಿಬ್ಬರೂ ಅವರ ಬಳಿಗೆ ಹೋದರು. ಶಿವಗಣಗಳು ನಾರದರು ಕೊಟ್ಟ ಶಾಪದಿಂದ ಉದ್ಧಾರವಾಗುವ ಇಚ್ಛೆಯಿಂದ ಅವರ ಬಳಿಗೆ ಬಂದಿದ್ದರು. ಅವರು ಆದರದಿಂದ ಮುನಿಗಳ ಪಾದಗಳಲ್ಲಿ ಬಿದ್ದು ತಲೆಯನ್ನು ತಗ್ಗಿಸಿ, ಕೈಜೋಡಿಸಿಕೊಂಡು ಹೀಗೆ ವಿನಂತಿಸಿಕೊಂಡರು.

ಶಿವಗಣಗಳು ಹೇಳುತ್ತಾರೆ - ಬ್ರಾಹ್ಮಣ ಶ್ರೇಷ್ಠರೇ ! ನಾವಿಬ್ಬರೂ ಶಿವನ ಗಣಗಳಾಗಿದ್ದೇವೆ. ಮುನಿಗಳೇ ! ನಾವು ನಿಮಗೆ ಅಪರಾಧ ಮಾಡಿದ್ದೇವೆ. ರಾಜಕುಮಾರಿ ಶ್ರೀಮತಿಯ ಸ್ವಯಂವರದಲ್ಲಿ ತಮ್ಮ ಚಿತ್ತವೂ ಮಾಯೆಯಿಂದ ಮೋಹಿತವಾಗಿತ್ತು. ಆಗ ಪರಮೇಶ್ವನ ಪ್ರೇರಣೆಯಿಂದ ತಾವು

---

* ಶಿವನಾಮತರೀಂ ಪ್ರಾಪ್ಯ ಸಂಸಾರಾಬ್ಧಿಂ ತರಂತಿ ತೇ । ಸಂಸಾರ ಮೂಲಪಾಪಾನಿ ತೇಷಾಂ ನಶ್ಯಂತ್ಯ ಸಂಶಯಮ್ । ಸಂಸಾರಮೂಲ ಭೂತಾನಾಂ ಪಾತಕಾನಾಂ ಮಹಾಮುನೇ । ಶಿವನಾಮಕುಠಾರೇಣ ವಿನಾಶೋ ಜಾಯತೇ ಧ್ರುವಮ್ ॥
(ಶಿ - ಪು - ರು - ಸೃ - ೪/೫೧-೫೨)

ನಮಗಿಬ್ಬರಿಗೂ ಶಾಪವನ್ನು ಕೊಟ್ಟಿರುವಿರಿ. ಆ ಸಮಯವು ಸರಿಯಿಲ್ಲವೆಂದು ತಿಳಿದು, ನಾವು ಸುಮ್ಮನಿರುವುದೇ ನಮ್ಮ ಜೀವನದ ರಕ್ಷಣೆಯ ಉಪಾಯವೆಂದು ತಿಳಿದೆವು. ಇದರಲ್ಲಿ ಯಾರ ದೋಷವೂ ಇಲ್ಲ. ನಮಗೆ ನಮ್ಮ ಕರ್ಮದ ಫಲವೇ ಸಿಕ್ಕಿದಂತಾಯಿತು. ಸ್ವಾಮಿ! ಈಗ ತಾವು ಪ್ರಸನ್ನರಾಗಿ, ನಮ್ಮಿಬ್ಬರ ಮೇಲೆ ಅನುಗ್ರಹವನ್ನು ಮಾಡಿರಿ.

ನಾರದರು ಹೇಳಿದರು - ನೀವಿಬ್ಬರೂ ಮಹಾದೇವನ ಗಣಗಳಾಗಿದ್ದೀರಿ ಹಾಗೂ ಸತ್ಪುರುಷರಿಗೆ ಪರಮ ಸಮ್ಮಾನನೀಯರಾಗಿರುವಿರಿ. ಅದ್ದರಿಂದ ಮೋಹ ರಹಿತವಾದ ಮತ್ತು ಸುಖದಾಯಕ ಯಥಾರ್ಥವಾದ ನನ್ನ ವಚನವನ್ನು ಕೇಳಿರಿ. ಮೊದಲು ನನ್ನ ಬುದ್ಧಿಯು ನಿಶ್ಚಯವಾಗಿ ಭ್ರಷ್ಟವಾಗಿತ್ತು, ಕೆಟ್ಟು ಹೋಗಿತ್ತು ಹಾಗೂ ನಾನು ಪೂರ್ಣವಾಗಿ ಮೋಹಕ್ಕೆ ವಶೀಭೂತನಾಗಿದ್ದೆ. ಅದ್ದರಿಂದ ನಿಮ್ಮಿಬ್ಬರಿಗೂ ನಾನು ಶಾಪವನ್ನು ಕೊಟ್ಟಿದ್ದೆ. ಶಿವಗಣಗಳೇ! ನಾನು ಹೇಳಿದಂತೆಯೇ ಆಗುವುದು, ಆದರೂ ನನ್ನ ಮಾತನ್ನು ಕೇಳಿರಿ. ನಾನು ನಿಮ್ಮ ಶಾಪದಿಂದ ಉದ್ಧಾರದ ಮಾತನ್ನು ಹೇಳುತ್ತಿರುವೆನು. ಮುನಿವರ್ಯ ವಿಶ್ರವಸುವಿನ ವೀರ್ಯದಿಂದ ಹುಟ್ಟಿ ನೀವು ಸಮಸ್ತ ದಿಕ್ಕುಗಳಲ್ಲಿ ಪ್ರಸಿದ್ಧರಾದ (ರಾವಣ-ಕುಂಭಕರ್ಣ) ರಾಕ್ಷಸರಾಜರಾಗಿ ಪದವಿಯನ್ನು ಪಡೆಯುವಿರಿ. ಹಾಗೂ ಬಲಿಷ್ಠರೂ, ವೈಭವದಿಂದ ಕೂಡಿದವರೂ ಪರಮ ಪ್ರತಾಪಿಗಳಾಗುವಿರಿ. ಸಮಸ್ತ ಬ್ರಹ್ಮಾಂಡಗಳ ರಾಜರಾಗಿ ಶಿವಭಕ್ತರೂ, ಜಿತೇಂದ್ರಿಯರೂ ಆಗುವಿರಿ. ಶಿವನದೇ ಇನ್ನೊಂದು ಸ್ವರೂಪವಾದ ಶ್ರೀವಿಷ್ಣುವಿನ ಕೈಯಿಂದ ಹತರಾಗಿ ಮತ್ತೆ ತಮ್ಮ ಪದವಿಯಲ್ಲಿ ಪ್ರತಿಷ್ಠಿತರಾಗುವಿರಿ.

ಸೂತರು ಹೇಳುತ್ತಾರೆ - ಮಹರ್ಷಿಗಳೇ! ಮಹಾತ್ಮಾ ನಾರದರ ಮಾತನ್ನು ಕೇಳಿ ಶಿವಗಣರಿಬ್ಬರೂ ಸಂತೋಷಗೊಂಡು ಆನಂದದಿಂದ ತಮ್ಮ ಸ್ಥಾನಗಳಿಗೆ ಹೊರಟುಹೋದರು. ಶ್ರೀನಾರದರೂ ಕೂಡ ಅತ್ಯಂತ ಆನಂದಿತರಾಗಿ ಅನನ್ಯಭಾವದಿಂದ ಭಗವಾನ್ ಶಿವನ ಧ್ಯಾನ ಹಾಗೂ ಶಿವತೀರ್ಥಗಳನ್ನು ಸಂದರ್ಶಿಸುತ್ತಾ ಪುನಃ ಪುನಃ ಭೂಮಂಡಲದಲ್ಲಿ ಸಂಚರಿಸತೊಡಗಿದರು. ಕೊನೆಗೆ ಅವರು ಎಲ್ಲಕ್ಕಿಂತ ಮೇಲೆ ವಿರಾಜಮಾನ ಶಿವಪ್ರಿಯವಾದ ಕಾಶೀಪುರಿಗೆ ಹೋದರು. ಅದು ಶಿವಸ್ವರೂಪಿಯೂ, ಶಿವನಿಗೆ ಸುಖಕರವೂ ಆಗಿದೆ. ಕಾಶೀಪುರಿಯನ್ನು ದರ್ಶಿಸಿ ನಾರದರು ಕೃತಾರ್ಥರಾದರು. ಅವರು ಕಾಶೀನಾಥನ ದರ್ಶನ ಪಡೆದು, ಪರಮ ಪ್ರೇಮ ಹಾಗೂ ಪರಮಾನಂದದಿಂದ ಕೂಡಿ ಅವನನ್ನು ಪೂಜಿಸಿದರು. ಕಾಶೀಕ್ಷೇತ್ರವನ್ನು ಆನಂದದಿಂದ ಸೇವಿಸಿ, ಮುನಿಶ್ರೇಷ್ಠರು ಕೃತಾರ್ಥತೆಯನ್ನು ಅನುಭವಿಸುತ್ತಾ, ಪ್ರೇಮವಿಹ್ವಲರಾಗಿ ಅದರ ವಂದನೆ, ವರ್ಣನೆ, ಸ್ಮರಣೆ ಮಾಡುತ್ತಾ ಬ್ರಹ್ಮಲೋಕಕ್ಕೆ ತೆರಳಿದರು. ನಿರಂತರ ಶಿವನನ್ನು ಸ್ಮರಿಸಿದ್ದರಿಂದ ಅವರ ಬುದ್ಧಿಯು ಶುದ್ಧವಾಯಿತು. ಬ್ರಹ್ಮ ಲೋಕಕ್ಕೆ ತಲುಪಿ ವಿಶೇಷ ರೂಪರೂಪದಿಂದ ಶಿವತತ್ತ್ವದ ಜ್ಞಾನವನ್ನು ಪಡೆಯುವ ಇಚ್ಛೆಯಿಂದ ನಾರದರು ಬ್ರಹ್ಮ ದೇವರನ್ನು ಭಕ್ತಿಯಿಂದ ನಮಸ್ಕರಿಸಿ, ಅನೇಕ ಸ್ತೋತ್ರಗಳಿಂದ ಅವರನ್ನು ಸ್ತುತಿಸಿ, ಶಿವತತ್ತ್ವದ ಕುರಿತು ಅವರಲ್ಲಿ ವಿನಂತಿಸಿಕೊಂಡರು. ಆಗ ನಾರದರ ಹೃದಯ ಭಗವಾನ್ ಶಿವನ ಕುರಿತು ಭಕ್ತಿ-ಭಾವದಿಂದ ಪರಿಪೂರ್ಣವಾಗಿತ್ತು.

ನಾರದರು ಹೇಳಿದರು - ಬ್ರಹ್ಮದೇವಾ! ಪರಬ್ರಹ್ಮ ಪರಮಾತ್ಮನ ಸ್ವರೂಪವನ್ನು ಅರಿತಿರುವ ಪಿತಾಮಹನೇ! ಜಗತ್ಪ್ರಭುವೇ! ತಮ್ಮ ಕೃಪಾಪ್ರಸಾದದಿಂದ ಭಗವಾನ್ ವಿಷ್ಣುವಿನ ಮಹಿಮೆಯ ಪೂರ್ಣ ಜ್ಞಾನವನ್ನು ನಾನು ಪಡೆದುಕೊಂಡೆ. ಜ್ಞಾನಮಾರ್ಗ, ಭಕ್ತಿ-ಜ್ಞಾನ, ಅತ್ಯಂತ ದುಸ್ತರವಾದ ತಪೋಮಾರ್ಗ, ದಾನಮಾರ್ಗ ಮತ್ತು ತೀರ್ಥಮಾರ್ಗದ ವರ್ಣನೆಯನ್ನೂ ಕೂಡ ಕೇಳಿದೆ. ಆದರೆ ಶಿವತತ್ತ್ವದ ಜ್ಞಾನ ನನಗೆ ಇನ್ನೂ ಉಂಟಾಗಲಿಲ್ಲ. ನಾನು ಭಗವಾನ್ ಶಂಕರನ ಪೂಜಾ-ವಿಧಿಯನ್ನೂ ತಿಳಿಯುತ್ತಿಲ್ಲ. ಅದ್ದರಿಂದ ಪ್ರಭುವೇ! ಈ ವಿಷಯಗಳನ್ನು ಹಾಗೂ ಭಗವಾನ್ ಶಿವನ ವಿವಿಧ ಚರಿತ್ರೆಗಳನ್ನು, ಅವನ ಸ್ವರೂಪ, ತತ್ತ್ವ, ಪ್ರಾಕಟ್ಯ, ವಿವಾಹ, ಗೃಹಸ್ಥಧರ್ಮ ಇವುಗಳನ್ನು ಕ್ರಮವಾಗಿ ನನಗೆ ತಿಳಿಸಿರಿ. ಪಾಪರಹಿತರಾದ ಪಿತಾಮಹರೇ! ಇವೆಲ್ಲವನ್ನು ಹಾಗೂ ಅವಶ್ಯಕ ಮಾತುಗಳೆಲ್ಲವನ್ನು ವರ್ಣಿಸಿರಿ. ಪ್ರಜಾನಾಥರೇ! ಶಿವ ಮತ್ತು ಶಿವೆಯ ಆವಿರ್ಭಾವ ಹಾಗೂ ಅವರ ವಿವಾಹ ಪ್ರಸಂಗವನ್ನು ವಿಶೇಷವಾಗಿ ಹೇಳಿರಿ. ಜೊತೆಗೆ ಕಾರ್ತಿಕೇಯನ ಜನ್ಮದ ಕಥೆಯನ್ನೂ ನನಗೆ ತಿಳಿಸಿರಿ. ಪ್ರಭೋ! ಮೊದಲು ನಾನು ಅನೇಕ ಜನರಿಂದ ಇವೆಲ್ಲವನ್ನು ಕೇಳಿರುವೆನು. ಆದರೆ ತೃಪ್ತಿಯುಂಟಾಗಲಿಲ್ಲ. ಅದಕ್ಕಾಗಿ ನಿಮಗೆ ಶರಣು ಬಂದಿರುವೆನು. ತಾವು ನನ್ನ ಮೇಲೆ ಕೃಪೆದೋರಿರಿ.

ತನ್ನ ಪುತ್ರನಾದ ನಾರದರ ಈ ಮಾತನ್ನು ಕೇಳಿ ಲೋಕ ಪಿತಾಮಹ ಬ್ರಹ್ಮದೇವರು ಈ ರೀತಿಯಾಗಿ ನುಡಿದರು.

(ಅಧ್ಯಾಯ ೫)

❐ ❐ ❐

ಆ ನಿರ್ಗುಣ ನಿರಾಕಾರ ಬ್ರಹ್ಮನಿಂದ ಈಶ್ವರ ಮೂರ್ತಿಯ ಪ್ರಾಕಟ್ಯ, ಸದಾಶಿವನಿಂದ ಅಂಬಿಕೆಯ ಪ್ರಕಟೀಕರಣ, ಉತ್ತಮ ಕಾಶೀ ಕ್ಷೇತ್ರದ ಪ್ರಾದುರ್ಭಾವ, ಶಿವನ ವಾಮಾಂಗದಿಂದ ಪರಮ ಪುರುಷ ವಿಷ್ಣುವಿನ ಆವಿರ್ಭಾವ

ಬ್ರಹ್ಮದೇವರು ಹೇಳಿದರು - ದೇವಶಿರೋಮಣೇ ನಾರದನೇ ! ನೀನು ಸದಾಕಾಲ ಜಗತ್ತಿನ ಉಪಕಾರಕ್ಕಾಗಿಯೇ ತೊಡಗಿರುವೆ. ನೀನು ಜನರ ಹಿತದ ಕಾಮನೆಯಿಂದ ಈ ಬಹಳ ಉತ್ತಮವಾದ ಪ್ರಶ್ನೆಯನ್ನು ಮಾಡಿರುವೆ. ಇದನ್ನು ಕೇಳುವುದರಿಂದ ಸಮಸ್ತ ಲೋಕಗಳ ಎಲ್ಲ ಪಾಪಗಳು ಕ್ಷಯಿಸಿಹೋಗುತ್ತವೆ. ಅಂತಹ ಅನಾಮಯ ಶಿವತತ್ತ್ವವನ್ನು ನಾನು ನಿನಗೆ ವರ್ಣಿಸುವೆನು. ಶಿವತತ್ತ್ವದ ಸ್ವರೂಪವು ಅತ್ಯಂತ ಉತ್ಕೃಷ್ಟವೂ, ಅದ್ಭುತವೂ ಆಗಿದೆ. ಸಮಸ್ತ ಚರಾಚರ ಜಗತ್ತು ನಾಶವಾಗಿದ್ದಾಗ ಎಲ್ಲೆಡೆ ಕೇವಲ ಅಂಧಕಾರವೇ-ಅಂಧಕಾರವಿತ್ತು. ಸೂರ್ಯ-ಚಂದ್ರರೂ ಇರಲಿಲ್ಲ, ಬೇರೆ-ಬೇರೆ ಗ್ರಹ-ನಕ್ಷತ್ರಗಳೂ ಇರಲಿಲ್ಲ, ಹಗಲು-ರಾತ್ರೆ ಎಂಬುದೂ ಇರಲಿಲ್ಲ, ಪೃಥಿವೀ, ವಾಯು, ಅಗ್ನಿ, ಜಲಗಳ ಅಸ್ತಿತ್ವವೂ ಇರಲಿಲ್ಲ, ಪ್ರಧಾನ ತತ್ತ್ವ (ಅವ್ಯಾಕೃತ ಪ್ರಕೃತಿ)ದಿಂದ ರಹಿತವಾದ ಬರಿದಾದ ಆಕಾಶಮಾತ್ರ ಶೇಷವಾಗಿತ್ತು. ಬೇರೆ ಯಾವುದೇ ತೇಜದ ಉಪಲಬ್ಧಿ ಇರಲಿಲ್ಲ, ಅದೃಷ್ಟ ಮುಂತಾದವುಗಳ ಅಸ್ತಿತ್ವವೂ ಇರಲಿಲ್ಲ, ಶಬ್ದ ಮತ್ತು ಸ್ಪರ್ಶಗಳೂ ಅಗಲಿ ಹೋಗಿದ್ದವು, ಗಂಧ ಮತ್ತು ರೂಪದ ಅಭಿವ್ಯಕ್ತಿಯೂ ಇರಲಿಲ್ಲ, ರಸವೂ ಅಭಾವವಾಗಿತ್ತು, ದಿಕ್ಕುಗಳೂ ಕಾಣುತ್ತಿರಲಿಲ್ಲ, ಈ ಪ್ರಕಾರ ಎಲ್ಲೆಡೆ ನಿರಂತರ ಘೋರ ಅಂಧಕಾರ ಹರಡಿಕೊಂಡಿತ್ತು. ಆಗ 'ತತ್ಸದ್‌ಬ್ರಹ್ಮ' ಈ ಶ್ರುತಿಯಲ್ಲಿಕೇಳಿಬರುವ 'ಸತ್' ಎಂಬುದು ಏಕಮಾತ್ರ ಶೇಷವಾಗಿತ್ತು. ಯಾವಾಗ ಇದು, ಅದು, ಹೀಗೆ, ಹಾಗೆ ಮುಂತಾದ ರೂಪದಿಂದ ನಿರ್ದಿಷ್ಟವಾಗುವ ಭಾವಾಭಾವಾತ್ಮಕ ಜಗತ್ತು ಇರಲಿಲ್ಲ, ಆಗ ಏಕಮಾತ್ರ ಆ 'ಸತ್' ಒಂದೇ ಶೇಷವಾಗಿತ್ತು. ಅದನ್ನು ಯೋಗಿಗಳು ತಮ್ಮ ಹೃದಯಾಕಾಶದಲ್ಲಿ ನಿರಂತರವಾಗಿ ನೋಡುತ್ತಿರುತ್ತಾರೆ. ಆ ಸತ್ ತತ್ತ್ವವು ಮನಸ್ಸಿನ ವಿಷಯವಲ್ಲ, ವಾಣಿಯೂ ಅಲ್ಲಿಯವರೆಗೆ ಎಂದೂ ತಲುಪಲಾರದು. ಅದು ನಾಮ - ರೂಪ - ಬಣ್ಣದಿಂದಲೂ ಶೂನ್ಯವಾಗಿದೆ. ಅದು ಸ್ಥೂಲವೂ ಅಲ್ಲ, ಕೃಶವೂ ಅಲ್ಲ, ಹ್ರಸ್ವವಾಗಲೀ, ದೀರ್ಘವಾಗಲೀ, ಲಘುವಾಗಲೀ, ಗುರುವಾಗಲೀ ಯಾವುದೂ ಅಲ್ಲ, ಅದರಲ್ಲಿ ಹ್ರಾಸ, ವೃದ್ಧಿಗಳಿಲ್ಲ, ಶ್ರುತಿಯೂ ಕೂಡ ಅದರ ವಿಷಯದಲ್ಲಿ ಚಕಿತಭಾವದಿಂದ 'ಇದೆ' ಇಷ್ಟೇ ಹೇಳುತ್ತದೆ, ಅರ್ಥಾತ್ ಅದರ ಅಸ್ತಿತ್ವಮಾತ್ರವನ್ನೇ ನಿರೂಪಿಸಬಲ್ಲದು. ಆದರೆ ವಿಶೇಷ ವಿವರಣೆ ಕೊಡಲು ಅಸಮರ್ಥವಾಗಿದೆ. ಅದು ಸತ್ಯ, ಜ್ಞಾನ ಸ್ವರೂಪ, ಅನಂತ ಪರಮಾನಂದಮಯ, ಪರಮ ಜ್ಯೋತಿ ಸ್ವರೂಪ, ಅಪ್ರಮೇಯ, ಆಧಾರರಹಿತ, ನಿರ್ವಿಕಾರ, ನಿರಾಕಾರ, ನಿರ್ಗುಣ, ಯೋಗಿಗಮ್ಯ, ಸರ್ವವ್ಯಾಪಿ, ಎಲ್ಲದರ ಏಕಮಾತ್ರ ಕಾರಣ, ನಿರ್ವಿಕಲ್ಪ, ನಿರಾರಂಭ, ಮಾಯಾ ಶೂನ್ಯ, ಉಪದ್ರವರಹಿತ, ಅದ್ವಿತೀಯ, ಅನಾದಿ, ಅನಂತ, ಸಂಕೋಚವಿಕಾಸದಿಂದ ಶೂನ್ಯ ಹಾಗೂ ಚಿನ್ಮಯವಾಗಿದೆ.

ಆ ಪರಬ್ರಹ್ಮನ ವಿಷಯದಲ್ಲಿ ಜ್ಞಾನ ಮತ್ತು ಅಜ್ಞಾನದಿಂದ ಪೂರ್ಣ ಉಕ್ತಿಗಳ ಮೂಲಕ ಮೇಲೆ ಹೇಳಿದಂತೆ ವಿಕಲ್ಪಮಾಡಲಾಗುತ್ತದೆ. ಅವನು ಕೆಲ ಕಾಲದ ಬಳಿಕ (ಸೃಷ್ಟಿಯ ಸಮಯ ಬಂದಾಗ) ದ್ವಿತೀಯದ ಇಚ್ಛೆಯನ್ನು ಪ್ರಕಟಿಸಿದನು. ಅವನೊಳಗೆ ಒಂದರಿಂದ ಅನೇಕನಾಗುವ ಸಂಕಲ್ಪ ಉಂಟಾಯಿತು. ಆಗ ಆ ನಿರಾಕಾರ ಪರಮಾತ್ಮನು ತನ್ನ ಲೀಲಾಶಕ್ತಿಯಿಂದ ತನಗಾಗಿ ಮೂರ್ತಿ (ಆಕಾರ)ಯ ಕಲ್ಪನೆ ಮಾಡಿದನು. ಆ ಮೂರ್ತಿಯು ಸಮಸ್ತ ಐಶ್ವರ್ಯ-ಗುಣಗಳಿಂದ ಸಂಪನ್ನವೂ, ಸರ್ವಜ್ಞಾನ ಮಯವೂ, ಶುಭಸ್ವರೂಪವೂ, ಸರ್ವವ್ಯಾಪಿಯೂ, ಸರ್ವರೂಪವೂ, ಸರ್ವದರ್ಶಿಯೂ, ಸರ್ವಕಾರಣವೂ, ಎಲ್ಲರ ಏಕಮಾತ್ರವಂದನೀಯವೂ, ಎಲ್ಲರ ಆದಿಯೂ, ಎಲ್ಲವನ್ನು ಕೊಡುವವನು ಮತ್ತು ಸಮಸ್ತ ಸಂಸೃತಿಗಳ ಕೇಂದ್ರವೂ ಆಗಿತ್ತು. ಆ ಶುದ್ಧ ಸ್ವರೂಪವಾದ ಈಶ್ವರ ಮೂರ್ತಿಯ ಕಲ್ಪನೆಮಾಡಿ, ಆ ಅದ್ವಿತೀಯ, ಅನಾದಿ, ಅನಂತ, ಸರ್ವಪ್ರಕಾಶಕ, ಚಿನ್ಮಯ, ಸರ್ವವ್ಯಾಪೀ, ಅವಿನಾಶಿ ಪರಬ್ರಹ್ಮನು ಅಂತರ್ಹಿತನಾದನು. ಮೂರ್ತಿರಹಿತ ಪರಬ್ರಹ್ಮನ ಮೂರ್ತಿಯೇ (ಚಿನ್ಮಯ ಆಕಾರ) ಭಗವಾನ್ ಸದಾಶಿವನಾಗಿದ್ದಾನೆ. ಅರ್ವಾಚೀನ ಮತ್ತು ಪ್ರಾಚೀನ ವಿದ್ವಾಂಸರು ಅವನನ್ನೇ ಈಶ್ವರನೆಂದು ಹೇಳುವರು. ಆ ಸಮಯದಲ್ಲಿ ಒಬ್ಬಂಟಿಗನಾಗಿದ್ದು ಸ್ವೇಚ್ಛಾನುಸಾರ ವಿಹಾರಮಾಡುವ ಆ ಸದಾಶಿವನು ತನ್ನ ವಿಗ್ರಹದ ಶ್ರೀಅಂಗದಿಂದ ಎಂದೂ ಅಗಲದೇ ಇರುವ ಒಂದು ಸ್ವರೂಪಭೂತ ಶಕ್ತಿಯನ್ನು ಸೃಷ್ಟಿಸಿದನು. ಆ ಪರಾಶಕ್ತಿಯನ್ನು ಪ್ರಧಾನ, ಪ್ರಕೃತಿ, ಗುಣವತಿ, ಮಾಯೆ, ಬುದ್ಧಿತತ್ತ್ವದ ಜನನೀ

ಹಾಗೂ ವಿಕಾರರಹಿತಳೆಂದು ಹೇಳಲಾಗಿದೆ. ಆ ಶಕ್ತಿಯನ್ನು ಅಂಬಿಕಾ ಎಂದು ಹೇಳಲಾಗಿದೆ, ಅವಳನ್ನೇ ಪ್ರಕೃತಿ, ಸರ್ವೇಶ್ವರೀ, ತ್ರಿದೇವಜನನೀ, ನಿತ್ಯಾ ಮತ್ತು ಮೂಲಕಾರಣಳು ಎಂದೂ ಹೇಳುವರು. ಸದಾಶಿವನಿಂದ ಪ್ರಕಟಗೊಂಡ ಆ ಶಕ್ತಿಗೆ ಎಂಟು ಭುಜಗಳಿವೆ. ಆ ಶುಭಲಕ್ಷಣ ದೇವಿಯ ಮುಖದ ಶೋಭೆ ವಿಚಿತ್ರವಾಗಿದೆ. ಅವಳೊಬ್ಬಳೇ ತನ್ನ ಮುಖಮಂಡಲದಲ್ಲಿ ಸದಾಕಾಲ ಒಂದು ಸಾವಿರ ಚಂದ್ರಗಳ ಕಾಂತಿಯನ್ನು ಧರಿಸಿಕೊಂಡಿರುವಳು. ಅನೇಕ ಪ್ರಕಾರದ ಆಭೂಷಣಗಳು ಆಕೆಯ ಶ್ರೀಅಂಗಗಳ ಶೋಭೆಯನ್ನು ಹೆಚ್ಚಿಸಿವೆ. ಆ ದೇವಿಯು ನಾನಾ ರೀತಿಯ ಗತಿಗಳಿಂದ ಸಂಪನ್ನಳಾಗಿರುವಳು ಮತ್ತು ಅನೇಕ ಪ್ರಕಾರದ ಅಸ್ತ್ರ-ಶಸ್ತ್ರಗಳನ್ನು ಧರಿಸಿರುವಳು. ಆಕೆಯ ತೆರೆದ ಕಣ್ಣುಗಳು ಅರಳಿದ ಕಮಲದಂತೆ ಕಂಡುಬರುತ್ತವೆ. ಆಕೆಯು ಅಚಿಂತ್ಯ ತೇಜದಿಂದ ಬೆಳಗುತ್ತಿರುವಳು. ಅವಳು ಎಲ್ಲರ ಯೋನಿಯಾಗಿದ್ದು, ಸದಾಕಾಲ ಉದ್ಯಮ ಶೀಲಳಾಗಿರುವಳು. ವಿಕಾಕಿನಿಯಾಗಿದ್ದರೂ ಆ ಮಾಯೆ ಸಂಯೋಗವಶಾತ್ ಅನೇಕವಾಗುತ್ತಾಳೆ.

ಆ ಸದಾಶಿವನನ್ನು ಪರಮಪುರುಷ, ಈಶ್ವರ, ಶಿವ, ಶಂಭು ಮತ್ತು ಮಹೇಶ್ವರ ಎಂದು ಹೇಳುತ್ತಾರೆ. ಅವನು ತಲೆಯಲ್ಲಿ ಆಕಾಶಗಂಗೆಯನ್ನು ಧರಿಸಿರುವನು, ಭಾಲದಲ್ಲಿ ಚಂದ್ರನು ಶೋಭಿಸುತ್ತಿರುವನು. ಅವನಿಗೆ ಐದು ಮುಖಗಳಿದ್ದು, ಪ್ರತಿಯೊಂದು ಮುಖದಲ್ಲಿಯೂ ಮೂರು-ಮೂರು ಕಣ್ಣುಗಳಿವೆ. ಅವನ ಚಿತ್ತವು ಸದಾ ಪ್ರಸನ್ನವಾಗಿರುತ್ತದೆ. ದಶಭುಜಗಳಿಂದ ಕೂಡಿದ ಅವನು ತ್ರಿಶೂಲವನ್ನು ಧರಿಸಿರುವನು. ಶ್ರೀಅಂಗದ ಪ್ರಭೆಯು ಕರ್ಪೂರದಂತೆ ಶ್ವೇತ-ಗೌರವಾಗಿದೆ, ಸರ್ವಾಂಗದಲ್ಲಿ ಭಸ್ಮವನ್ನು ಲೇಪಿಸಿಕೊಂಡಿರುವನು. ಆ ಕಾಲರೂಪೀ ಶಕ್ತಿಯನಾಥ ಬ್ರಹ್ಮನು ಒಮ್ಮೆಗೆ 'ಶಿವಲೋಕ' ಎಂಬ ಕ್ಷೇತ್ರವನ್ನು ನಿರ್ಮಿಸಿದನು. ಆ ಉತ್ತಮ ಕ್ಷೇತ್ರವನ್ನು ಕಾಶೀ ಎಂದು ಹೇಳುತ್ತಾರೆ. ಅದು ಎಲ್ಲದರ ಮೇಲೆ ವಿರಾಜಮಾನವಾಗಿದ್ದು, ಪರಮನಿರ್ವಾಣ ಅಥವಾ ಮೋಕ್ಷದ ಸ್ಥಾನವಾಗಿದೆ. ಆ ಪರಮಾನಂದ ಸ್ವರೂಪನು ಪ್ರಿಯಾ-ಪ್ರಿಯತಮರೂಪ ಶಕ್ತಿ ಮತ್ತು ಶಿವ ಇವರು ಆ ಮನೋಹರ ಕ್ಷೇತ್ರದಲ್ಲಿ ನಿತ್ಯವಾಸಿಸುತ್ತಿರುವರು. ಶಿವ ಮತ್ತು ಶಿವೆಯರು ಪ್ರಳಯಕಾಲದಲ್ಲಿಯೂ ಆ ಕ್ಷೇತ್ರವನ್ನು ತನ್ನ ಸಾನ್ನಿಧ್ಯದಿಂದ ಮುಕ್ತವಾಗಿಸಲಿಲ್ಲ, ಆದ್ದರಿಂದ ವಿದ್ವಾಂಸರು ಅದನ್ನು 'ಅವಿಮುಕ್ತಕ್ಷೇತ್ರ' ಎಂದೂ ತಿಳಿಯುತ್ತಾರೆ. ಆ ಕ್ಷೇತ್ರವು ಆನಂದದ ಹೇತುವಾಗಿದೆ, ಆದುದರಿಂದ ಪಿನಾಕಧಾರೀ ಶಿವನು ಮೊದಲೇ ಅದರ ಹೆಸರು 'ಆನಂದವನ' ಎಂದು ಇಟ್ಟಿರುವನು. ಬಳಿಕ ಅದು ಅವಿಮುಕ್ತ ಎಂಬ ಹೆಸರಿನಿಂದ ಪ್ರಸಿದ್ಧವಾಯಿತು.

ದೇವಋಷಿಯೇ! ಒಮ್ಮೆ ಆ ಆನಂದವನದಲ್ಲಿ ರಮಿಸುತ್ತಿರುವಾಗ ಶಿವ ಮತ್ತು ಶಿವೆಯ ಮನಸ್ಸಿನಲ್ಲಿ - ಯಾರಾದರು ಇನ್ನೊಬ್ಬ ಪುರುಷನನ್ನು ಸೃಷ್ಟಿಸಿ, ಈ ಸೃಷ್ಟಿಯ ಸಂಚಾಲನೆಯ ಭಾರವನ್ನು ಅವನಿಗೆ ಒಪ್ಪಿಸಿ ನಾವಿಬ್ಬರೂ ಕೇವಲ ಕಾಶಿಯಲ್ಲೇ ಇದ್ದು ಇಚ್ಛಾನುಸಾರವಾಗಿ ವಿಚರಿಸುತ್ತಾ, ನಿರ್ವಾಣವನ್ನು, ಧರಿಸಬೇಕೆಂಬ ಇಚ್ಛೆ ಉಂಟಾಯಿತು. ಆ ಪುರುಷನು ನಮ್ಮ ಅನುಗ್ರಹದಿಂದ ಸದಾಕಾಲ ಸೃಷ್ಟಿಮಾಡಲೀ, ಅದನ್ನು ಪಾಲಿಸಲೀ, ಕೊನೆಗೆ ಸಂಹಾರವೂ ಮಾಡಲೀ. ಈ ಚಿತ್ತವು ಒಂದು ಸಮುದ್ರದಂತೆ ಇದೆ. ಆದರಲ್ಲಿ ಚಿಂತೆಯ ಉತ್ತಾಲ ತರಂಗಗಳು ಏಳುತ್ತಾ ಚಂಚಲವಾಗಿಸುತ್ತಾ ಇರುತ್ತದೆ. ಇದರಲ್ಲಿ ಸತ್ತ್ವಗುಣರೂಪೀ ರತ್ನಗಳು, ತಮೋಗುಣರೂಪೀ ಮೊಸಳೆಗಳು, ರಜೋಗುಣ ರೂಪೀ ಹವಳಗಳು ತುಂಬಿರುತ್ತವೆ. ಈ ವಿಶಾಲ ಚಿತ್ತ ಸಮುದ್ರವನ್ನು ಸಂಕುಚಿತಗೊಳಿಸಿ ನಾವಿಬ್ಬರೂ ಆ ಪುರುಷನ ಪ್ರಸಾದದಿಂದ ಆನಂದ- ಕಾನನ (ಕಾಶೀ) ದಲ್ಲಿ ಸುಖವಾಗಿ ವಾಸಿಸುವಾ. ಈ ಆನಂದವನ ಸ್ಥಾನದಲ್ಲಿ ನಮ್ಮ ಮನೋವೃತ್ತಿಗಳನ್ನು ಎಲ್ಲ ಕಡೆಗಳಿಂದ ಸಂಕುಚಿತಗೊಂಡು ಇದರಲ್ಲೇ ತೊಡಗಿರುತ್ತದೆ. ಇದರ ಹೊರಗಿನ ಜಗತ್ತು ಚಿಂತೆಯಿಂದ ಆತುರವಾಗಿದೆ. ಹೀಗೆ ನಿಶ್ಚಯಿಸಿ ಶಕ್ತಿಸಹಿತ ಸರ್ವವ್ಯಾಪಿ ಪರಮೇಶ್ವರ ಶಿವನು ತನ್ನ ವಾಮಭಾಗದ ಹತ್ತನೆಯ ಅಂಗವನ್ನು ಅಮೃತದಿಂದ ತಿಕ್ಕಿದನು. ಆಗ ಆ ಅಂಗದಿಂದ ಓರ್ವ ಪುರುಷನು ಪ್ರಕಟನಾದನು. ಅವನು ಮೂರು ಲೋಕಗಳಲ್ಲಿಯೂ ಎಲ್ಲರಿಗಿಂತಲೂ ಹೆಚ್ಚು ಸುಂದರನಾಗಿದ್ದು, ಶಾಂತನಾಗಿದ್ದನು. ಅವನಲ್ಲಿ ಸತ್ತ್ವಗುಣವು ಅಧಿಕವಾಗಿದ್ದು, ಗಂಭೀರತೆಯ ಆಳವಾದ ಸಮುದ್ರವೇ ಇತ್ತು. ಮುನಿಯೇ! ಕ್ಷಮೆ ಎಂಬ ಗುಣದಿಂದ ಕೂಡಿದ ಆ ಪುರುಷನ ಕುರಿತು ಹುಡುಕಿದರೂ ಎಲ್ಲಿಯೂ ಯಾವುದೇ ಉಪಮೆಯು ಸಿಗುತ್ತಿರಲಿಲ್ಲ. ಅವನ ಕಾಂತಿಯು ಇಂದ್ರನೀಲ ಮಣಿಯಂತೆ ಶ್ಯಾಮಲವಾಗಿತ್ತು. ಪ್ರತಿಯೊಂದು ಅಂಗದಿಂದಲೂ ದಿವ್ಯ ಶೋಭೆಯು ಒಸರುತ್ತಿತ್ತು ಹಾಗೂ ನೇತ್ರಗಳು ಅರಳಿದ ಕಮಲದಂತೆ ಶೋಭಿಸುತ್ತಿದ್ದವು. ಅವನ ಶ್ರೀಅಂಗದಲ್ಲಿ ಸುವರ್ಣದಂತಹ ಕಾಂತಿಯುಕ್ತ ಎರಡು ಸುಂದರ ರೇಶ್ಮೆ ಪೀತಾಂಬರಗಳು ಶೋಭಿಸುತ್ತಿದ್ದವು. ಯಾರಿಂದಲೂ ಪರಾಜಿತನಾಗದ ಆ ವೀರ ಪುರುಷನು ತನ್ನ ಪ್ರಚಂಡ ಭುಜದಂಡಗಳಿಂದ ಮೆರೆಯುತ್ತಿದ್ದನು. ಬಳಿಕ ಆ